ಲಕ್ಷ್ಮೀಶನ ಕಥೆಗಳು



PUBLISHERS:
THE M. T. A. Pvt. LTD., CAR STREET, MANGALORE-1
Rs. 1·50

ಲಕ್ಷ್ಮೀಶನ ಕಥೆಗಳು

ವಿದ್ವಾನ್

ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.

Publishers:

he Mangalore Trading Association (Pvt.) Ltd.,
Car Street, Mangalore-1.

Printed at Sharada Press, Mangalore-1.

ಶ್ರೀಕೃಷ್ಣನ ಬರವನ್ನು ದೂತನೊಬ್ಬನು ಬಂದು ಅರಸನೊಡನೆ ಬಿನ್ನೈಸಿದನು. ಆ ಸುವಾರ್ತೆಯನ್ನು ಕೇಳಿದ ಧರ್ಮಪುತ್ರನು, ತಾನು ಕೃತಾರ್ಥನಾದೆನೆಂದು ಎದ್ದುಹೋಗಿ ಶ್ರೀಕೃಷ್ಣನನ್ನು ಮಂಗಳ ಮಧುರ ವಾದ್ಯಘೋಷಗಳಿಂದಲೂ, ಸಾಲಕೈದೀವಿಗೆಯ ಸಂಭ್ರಮದಿಂದಲೂ ಇದಿರ್ಗೊಂಡನು. ಶ್ರೀಕೃಷ್ಣನನ್ನು ಅರಮನೆಗೆ ಕರೆತಂದು ಸಕಲಸಂಭ್ರಮದ ಸತ್ಕಾರಗಳು ನಡೆದುವು.

ಅಂದಿನ ಇರುಳು ಓಲಗ ನೆರವೇರಿತು. ಶ್ರೀಕೃಷ್ಣನಿಗೆ ಕೈಗೊಟ್ಟು ಯುಧಿಷ್ಠಿರನು ಆಸ್ಥಾನ ಮಂಟಪಕ್ಕೆ ಕರೆತಂದು ಆತನನ್ನು ಉಚಿತಾಸನದಲ್ಲಿ ಕುಳ್ಳಿರಿಸಿದನು. ಅನ್ಯೋನ್ಯ ಕುಶಲವಾರ್ತೆಗಳಾದುವು. ಬಳಿಕ ಯುಧಿಷ್ಠಿರನು, ವ್ಯಾಸರ್ಷಿಯು ಬಂದು, ಕರುಣೆಯಿಂದ, ಭರತಕುಲದ ಅರಸರ ಆಚಾರವೆಂದು ಅಶ್ವಮೇಧಯಾಗವನ್ನು ಮಾಡುವರೆ ತನಗೆ ಸೂಚಿಸಿದ ವಿಷಯವನ್ನೂ, ಭೀಮನು ಅದಕ್ಕೆ ಬೇಕಾದ ಕುದುರೆಯನ್ನು ತಂದು ಕೊಡುವರೆ ಒಪ್ಪಿದುದನ್ನೂ ಶ್ರೀಕೃಷ್ಣನೊಡನೆ ಅರಿಕೆ ಮಾಡಿದನು.

"ಕೃಷ್ಣ, ನಿನ್ನ ಪಾದಕಮಲದ ಆಶ್ರಯದಿಂದ ಹಿಂದೆ ನಾವು ನಾನಾ ವಿಪತ್ಪರಂಪರೆಗಳನ್ನು ದಾಟಿದೆವು. ಭೋಜಸಂಪತ್ಪದವನ್ನೂ ಪಡೆದೆವು. ಅದರ ಸೌಖ್ಯಾನುಭವಮಾತ್ರದಿಂದ ನಾವಿದ್ದೆವಾದರೆ, ಸಜ್ಜನರು ನಮ್ಮನ್ನು ಸನ್ಮಾನಿಸುವರೆ? ಹೆಸರಾಂತ ಭರತವಂಶದಲ್ಲಿ ನಾವು ಹುಟ್ಟಿದ್ದು, ಆ ವಂಶದ ಕೀರ್ತಿಗೆ ತಕ್ಕಂತೆ ನಡೆಯಬೇಡವೆ? ಹಾಗಾಗಿ ಲೋಕಪಾವನವಾದೀ ಅಶ್ವಮೇಧಯಾಗವನ್ನು ಹೇಗೆ ನಾವು ನಡೆಸಲಿ? ಸೂಕ್ತಸಲಹೆಯಿತ್ತು ಈ ಪುಣ್ಯಕಾರ್ಯವನ್ನು ನೀನೇ ನಿರ್ವಹಿಸಿಕೊಡಬೇಕು".

ಶ್ರೀಕೃಷ್ಣನಿಗೆ ಪರಮಭಕ್ತರಾದ ಪಾಂಡವರ ಸತ್ವಪರೀಕ್ಷೆ ಮಾಡಬೇಕೆಂದು ತೋರಿತು:

"ರಾಜನೇ, ಒಮ್ಮೆಗೇ ನೀನಿಂತು ಹುಚ್ಚುಗಟ್ಟುವುದೇ? ವೇದವ್ಯಾಸನು ಇಕ್ಕಿದ ಉರುಲಿನಲ್ಲಿ ನೀನು ಸಿಕ್ಕಿಬಿದ್ದೆಯಲ್ಲಾ! ಈ ಭೀಮನಾದರೋ ಕಡು ಧೂರ್ತನು. ಯೌವನಾಶ್ವ ಮೊದಲಾದವರು ಹಿಂದಿನಂತಹವರಲ್ಲ; ಅವರು ಬಹಳ ಪರಾಕ್ರಮಶಾಲಿಗಳು. ಅರಳಿದ ಮಲ್ಲಿಗೆಯ ಪೊದರಿನೊಳಗೆ ತಿರುಗಾಡಿದೆನೆಂದು, ಸಂಪಗೆಯ ವನಕ್ಕೆ ಮರಿದುಂಬಿಯು ತೆರಳಬಲ್ಲುದೆ? ಅಶ್ವಮೇಧಯಾಗವೇನು ಹುಡುಗಾಟವೆ? ನೀನಿದನ್ನು ತೊಡಗುವುದೆ? ಈ ಭೀಮನಿಗೆ ಬುದ್ಧಿಯಿದ್ದರೆ ರಾಕ್ಷಸನ ಬಲಿಗೆಂದು ತಯಾರಿಸಿದ ಆ ಕೂಳನ್ನು ತನ್ನ ಡೊಳ್ಳು ಹೊಟ್ಟೆಗೆ ತುಂಬಿಸಿಕೊಳ್ಳುತ್ತಿದ್ದನೆ? ನೀತಿಗಳನ್ನು ಬಲ್ಲವನಾಗಿದ್ದರೆ ಈತನು

ರಾಕ್ಷಸಿಯನ್ನು ರಾಣಿಯೆಂದು ಆಳುವನೆ? ಈ ವಿಚಿತ್ರ ವ್ಯಕ್ತಿಯಾದ ವೃಕೋದರನ ಅಭಿಪ್ರಾಯದಂತೆ ನೀನು ಅಶ್ವಮೇಧಕ್ಕೆ ತೊಡಗಿದೆಯಾದರೆ ಅದು ಸಾಂಗವಾಗುವುದೆ?"

ಶ್ರೀಕೃಷ್ಣನ ಜರೆದಾಟದಿಂದ ಭೀಮನೂ ಉತ್ಸಾಹಿತನಾದನು.

"ಶ್ರೀಕೃಷ್ಣ, ನಿನ್ನ ವಿಚಿತ್ರವಾದ ಮಾತುಗಳನ್ನು ಕೇಳಿದೆನು. ನಾನು ಬಂಡಿಯನ್ನವನ್ನು ಮಾತ್ರ ತಿಂದಿದ್ದರೆ, ನೀನು ಅಖಿಲ ಲೋಕವನ್ನೇ ಹೊಟ್ಟೆಯೊಳಗೆ ತುಂಬಿಸಿಕೊಂಡಿದ್ದಿಯಲ್ಲಾ ! ನರಕಾಸುರನ ಮನೆಯ ಬಾಲಿಕೆಯರು ರಾಕ್ಷಸಿಯರಲ್ಲವೇನೊ ! ಕರಡಿಯ ಮಗಳನ್ನು ಮದುವೆಯಾದ ನಿನ್ನ ಪ್ರಖ್ಯಾತಿ ಯಾರಿಗೂ ತಿಳಿದಿಲ್ಲವೆ? ಇಂತಿರಲು ವಿಚಿತ್ರ ವ್ಯಕ್ತಿಯೆಂದು ಯಾರನ್ನು ಹೇಳಬೇಕೊ? ನಿನ್ನ ಅಭಿಪ್ರಾಯವನ್ನು ನಾನು ತಿಳಿದಿರುವೆನು. ನಾನು ಕೊಟ್ಟ ಭಾಷೆಗೆ ಎಂದಿಗೂ ತಪ್ಪೆನು".

"ಓಹೋ ! ನೀನು ಭಾಷೆಯನ್ನು ಕೊಟ್ಟು ತಪ್ಪುವವನಲ್ಲ ! ಅಂತಹ ವಿಶೇಷ ಗುಣವನ್ನು ನಾನು ನೋಡಿಲ್ಲವೆ? [illegible]ದೆ, ಯುದ್ಧದಲ್ಲಿ ಪಿಶಾಚಿಗಳಂತೆ ರಕ್ತಪಾನಮಾಡಿ ಹೊಟ್ಟೆಯನ್ನು ಹೊರ[illegible]ೀಯೆ ! ಅದು ಕೇವಲ ಬಂಡತನವಲ್ಲದೆ, ನಿನ್ನ ಶೌರ್ಯಕ್ಕೆ ಅದು ಒಂದು ಭೂಷಣವೆ? ಹೋಗು, ನೀನೆಷ್ಟಾದರೂ ಬಾಣಸಿಗನು. ಎಂತಹ ಲೋಕನಿಂದೆಗೂ ನೀನು ಎಂದಿಗೂ ಅಂಜುವವನಲ್ಲ".

"ಶಿವಶಿವಾ, ನಿಂದೆಗೆ ಹೆದರಿಯೇ, ನೀನು ಕಪಟಜಾರವಿದ್ಯೆಗಳನ್ನು ಮಾಡಿದುದು; ಹೆಣ್ಣಿನ ರೂಪ ತಾಳಿದ್ದರೂ ನಿನಗೆ ಬಾಣಸದ ರೀತಿ ತಿಳಿದಿಲ್ಲವೆಂದು ತೋರುತ್ತದೆ; ರಾಕ್ಷಸಿಯನ್ನು ಜೀವಸಹಿತ ಊಂಟಿದವರು ಯಾರೊ? ಅರಸರೊಡನೆ ಗೋವಳರಿಗೆ ಸರಿಸಾಟಿಯೇ? ಇನ್ನು ಹೆಚ್ಚು ಹೇಳಲು ನಾನು ಅಂಜುತ್ತೇನೆ. ಅಂತೂ ನಾನು ಆ ಕುದುರೆಯನ್ನು ತಂದುಕೊಡುವುದು ನಿಶ್ಚಯ. ಅಶ್ವಮೇಧಯಾಗವನ್ನು ನೀವು ನಡೆಸಿ ಅಥವಾ ಉಳಿಸಿ; ಅದರ ಗೊಡವೆ ನನಗಿಲ್ಲ."

ಭೀಮನ ಪೌರುಷೋಕ್ತಿಗೆ ಶ್ರೀಕೃಷ್ಣನು ಹಿಗ್ಗಿ ಹೇಳಿದನು:

"ಭೀಮನೆ, ನೀನು ಜಗಳಕ್ಕೆ ಹೇಸುವವನಲ್ಲ. ಕುದುರೆಯನ್ನು ತಂದುಕೊಡುವ ಅಪೇಕ್ಷೆಯಿದ್ದರೆ ಹೋಗು; ವ್ಯರ್ಥಗಳಹಬೇಡ. ಆದರೆ ಸಾರಿ ಹೇಳುತ್ತೇನೆ; ಈ ಕೆಲಸ ಕಷ್ಟವಾದೀತು. ಭೂಮಿಯ ಮೇಲೆ ಅನೇಕ ಮಂದಿ ವೀರರಿದ್ದಾರೆ. ಈ ಯಾಗವನ್ನು ತೊಡಗಿ ಮಾಡಲಾಗದಿದ್ದರೆ ವಂಶಕ್ಕೆ ಕೊರತೆ ಬಂದೀತು; ಯೋಚಿಸಿ ಕೆಲಸಕ್ಕೆ ತೊಡಗುವುದು ವಿಹಿತ."

ಕಂಸಾರಿಯ ಕೃಪೆಯನ್ನು ಪಡೆದು ಮುಂದಿನ ರಾಜಕಾರ್ಯವನ್ನು ಮುಂದೊತ್ತಬೇಕೆಂದು ಯುಧಿಷ್ಠಿರನಿಗೆ ಅನ್ನಿಸಿತು.. ಅರಸನು, “ನಿಮ್ಮ ದಯೆಯೊಂದಿದ್ದರೆ ನಾವು ಎಂದೆಂದಿಗೂ ಜಯಶಾಲಿಗಳಾಗುವೆವು; ನಮ್ಮನ್ನು ನೀವೇ ಉದ್ಧರಿಸಬೇಕು” ಎಂದು ಶ್ರೀಕೃಷ್ಣನ ಪಾದಗಳಿಗೆರಗಿ ಬೇಡಿಕೊಂಡನು. ಆತನು ಅರಸನ ಕಿರೀಟವನ್ನು ಹಿಡಿದೆತ್ತಿ, ಅಯ್ಯಾ, ರಾಜವಂಶಾಳಿಯಲ್ಲಿ ನಿನ್ನಂತಹ ಯೋಗ್ಯರಾದವರು ಬೇರೆಯಾರಿದ್ದಾರೆ? ನಿನಗೆ ಈ ಅಶ್ವಮೇಧಯಾಗವು ಪ್ರಯಾಸಕರವೆ? ನೀನು ಯಾಗಕ್ಕೆ ತೊಡಗು, ನಾನಿದ್ದು ನಡೆಸುವೆನು” ಎಂದು ಭರವಸೆಯಿತ್ತನು.

ಶ್ರೀಕೃಷ್ಣನ ಭರವಸೆಯ ಮಾತಿನಿಂದ ಯುಧಿಷ್ಠಿರನು ತನ್ನ ಕಾರ್ಯಕ್ಕೆ ದೈವಬಲದೊರಕಿತೆಂದು ಸಂತಸಗೊಂಡನು. ಭೀಮ, ವೃಷಕೇತು, ಮೇಘನಾದರಿಗೆ, ಕುದುರೆಯನ್ನು ತರುವರೆ ಆಜ್ಞೆಯಿತ್ತನು. ಆ ರಾತ್ರಿ ಶ್ರೀಕೃಷ್ಣಸಹಿತ ಅರಮನೆಯಲ್ಲಿ ಷಡ್ರಸಾದಿಗಳಿಂದ ಕೂಡಿದ ಮಧುರ ಭಕ್ಷ್ಯಭೋಜ್ಯಗಳಿಂದ ಆರೋಗಣೆಯಾಯಿತು. ಹಂಸತೂಲತಲ್ಪದಲ್ಲಿ ಪವಡಿಸಿದ ಅರಸನು ಬೆಳಗಾಗಲು ಸುಖನಿದ್ರೆಯಿಂದೆಚ್ಚತ್ತನು. ಭೀಮಾದ್ಯರು ಯೌವನಾಶ್ವನ ರಾಜ್ಯವಾದ ಭದ್ರಾವತಿಗೆ ತೆರಳಿದರು.

ಹಸ್ತಿನಾವತಿಯಿಂದ ಹೊರಟ ಭೀಮ, ವೃಷಕೇತು, ಮೇಘನಾದರು ಹಲವು ದಿನಗಳ ಪ್ರಯಾಣಗಳ ಮೇಲೆ ಯೌವನಾಶ್ವರಾಜನಾಳುವ ಭದ್ರಾವತೀ ನಗರವನ್ನು ಪ್ರವೇಶಿಸಿದರು. ಭೀಮನು, ಆ ಸುಂದರವಾದ ನಗರವನ್ನು ಪ್ರವೇಶಿಸುತ್ತಿದ್ದಂತೆ, ಆ ಪಟ್ಟಣದ ನದಿ ಸರೋವರಗಳ ಸೌಂದರ್ಯಗಳನ್ನು, ಹೊಲಬೆಳೆಗಳ ಚೆಲುವನ್ನು, ಹೂಹಣ್ಣುಗಳ ಸೊಬಗನ್ನು, ನಾಗರಿಕರ ನಡೆನುಡಿಗಳ ಬೆಡಗನ್ನು, ಹೀಗೆ ನಾನಾ ವಿಧವಾದ ಸೌಂದರ್ಯರಾಶಿಯನ್ನು ಬೇರೆ ಬೇರಾಗಿ ಎಲ್ಲವನ್ನೂ ವೃಷಕೇತುವಿಗೆ ವರ್ಣಿಸಿ ತೋರಿಸಿದನು.

ಆ ಊರಲ್ಲಿ ಯಾವ ಕಡೆ ನೋಡಿದರೂ ಭೋರೆಂದು ಹರಿಯುವ ಮಹಾನದಿಗಳೂ, ಅಗಾಧವಾದ ಕೆರೆಗಳೂ, ಪದ್ಮಗಂಧಿಯಾದ ಸರೋವರ

ಗಳೂ, ರತ್ನಗರ್ಭಿತವಾದ ಭೂಪ್ರದೇಶಗಳೂ, ವಿಶಾಲವಾದ ಮೈದಾನುಗಳೂ, ಹಚ್ಚನೆ ಹಸುರುಹುಲ್ಲುಗಳನ್ನು ಆನಂದದಿಂದ ಮೇಯುವ ಗೋವುಗಳೂ, ವನವಿಹಾರಿಗಳಾದ ಆನೆಗಳೂ, ಪರಿಮಳವನ್ನು ಪಸರಿಸುತ್ತಿರುವ ಕಸ್ತೂರಿಯ ಮೃಗಗಳೂ, ಇಂಚರದಿಂದ ಹಾಡುವ ಹಕ್ಕಿಗಳೂ, ಉನ್ನತ ಪ್ರಾಸಾದಗಳೂ ಅವರಿಗೆ ನಯನಾನಂದವನ್ನುಂಟುಮಾಡಿದುವು; ಮತ್ತು ಮುಂದುವರಿಯು ತ್ತಿರಲು, ಜಲತರಂಗಗಳಿಂದ ನರ್ತಿಸುತ್ತಿರುವ ಕೊಳಗಳು ಕಾಣಸಿಕ್ಕಿದುವು; ಅವುಗಳಲ್ಲಿ ಹಂಸಪಕ್ಷಿಗಳು ಆಟವಾಡುತ್ತಿದ್ದುವು. ಮಂದಮಾರುತವು ಬೀಸು ತ್ತಿದ್ದುದರಿಂದ ಭೃಂಗಗಳು ಹಾರಾಡುತ್ತಿದ್ದುವು. ಎಲ್ಲೆಲ್ಲೂ ಸುಂದರ ಪುಷ್ಪಗಳು ಅರಳಿ ಪರಿಮಳಿಸುತ್ತಿದ್ದುವು. ತರುರಾಜಿ ರಂಜಿತವಾದ ಮನೋಹರೋದ್ಯಾನ ಗಳಿದ್ದುವು; ಚೆಂದಳಿರಿಂದ ಚೆಲುವಾಗಿ ಮಾವಿನ ಮರಗಳು ಶೋಭಿಸಿದುವು. ಆ ಊರಲ್ಲಿ ಬೆಳೆಯದ ಹೊಲಗಳೂ, ಬೆಳ್ದಾವರೆಯಲರದ ಕೊಳಗಳೂ, ರತ್ನ ಶಿಲಾರಂಜಿತವಲ್ಲದ ಪರ್ವತಗಳೂ ಇರಲಿಲ್ಲ. ಎತ್ತಲೂ ಸಂಗೀತಸ್ವರವೂ ಸರಸಸಂಭಾಷಣೆಯೂ ಕೇಳಿ ಬರುತ್ತಿತ್ತು. ಹೊಲಗಳಲ್ಲಿ ಹುಲುಸಾದ ಭತ್ತದ ಪೈರು ಮೆರೆಯುತ್ತಿತ್ತು. ಅಲ್ಲಲ್ಲಿ ಅರವಟ್ಟಿಗೆಗಳಿದ್ದುವು. ಮಾರ್ಗಸಂಚಾರ ಶ್ರಮವನ್ನು ಪರಿಹರಿಸಲು ಅಲ್ಲಿ ತಂಪಾದ ಪಾನೀಯಗಳು ಸಿಗುತ್ತಿದ್ದುವು.

ನಗರ ಸೌಂದರ್ಯವನ್ನು ಪರಿಶೀಲಿಸುತ್ತಾ ಮುನ್ನಡೆಯುತ್ತಿರಲು ಅವರಿಗೆ ಉನ್ನತಪರ್ವತವೊಂದು ಕಾಣಸಿಕ್ಕಿತು. ಆ ಮೂವರೂ ಅದರ ಶಿಖರ ವನ್ನೇರಿದರು. ಶಿಖರದ ತುದಿಯಿಂದ ಭದ್ರಾವತೀ ನಗರದ ಸೌಂದರ್ಯವು ಅತಿಶಯವಾಗಿ ಗೋಚರಿಸಿತು. ಅಷ್ಟರಲ್ಲಿ ಹೊತ್ತು ಮಧ್ಯಾಹ್ನವಾಯಿತು. ಬಿಸಿಲ ಝಳವು ಸಹಿಸಲಸಾಧ್ಯವಾಗಿತ್ತು. ನಗರದ ಹೊರವಲಯಕ್ಕೆ ಅನೇಕ ಕುದುರೆಗಳು ಬಂದುವು. ಅವುಗಳಲ್ಲಿ ವಿಶೇಷ ಲಕ್ಷಣವುಳ್ಳ ಆ ಅಶ್ವವು ಮಾತ್ರ ಇನ್ನೂ ಅವರ ಕಣ್ಣಿಗೆ ಗೋಚರಿಸಲೇ ಇಲ್ಲ. ಭೀಮಸೇನನು ಚಿಂತಾಪರವಶ ನಾದನು. ವೇದವ್ಯಾಸನೊಡನೆ ಆಡಿದ ಮಾತಿಗೆ ತಪ್ಪಿದರೆ ಗುರುದ್ರೋಹವೂ, ಶ್ರೀಕೃಷ್ಣನೊಡನೆಂದ ಮಾತಿನಂತೆ ನಡೆಯದಿದ್ದರೆ ದೈವ ದ್ರೋಹವೂ, ಅದು ಮಾತ್ರವಲ್ಲದೆ ಯಜ್ಞಾಶ್ವವನ್ನು ಕೊಂಡೊಯ್ಯದಿದ್ದರೆ ಧರ್ಮದ್ರೋಹವೂ ತನಗೆ ಉಂಟಾಗುವುದೆಂದು ಆತನು ಹಲವು ವಿಧವಾಗಿ ಹಂಬಲಿಸಿದನು.

ಇಷ್ಟರಲ್ಲಿಯೇ, ಅನೇಕ ಸೇನೆಗಳ ಸನ್ನಾಹದಿಂದಲೂ, ಘನವಾದ್ಯ ರಭಸ ದಿಂದಲೂ, ಸೂತರ ಹೊಗಳಿಕೆಯಿಂದಲೂ, ನಿರ್ಮಲವಸ್ತ್ರಾಭರಣ ಗಂಧ ಮಾಲ್ಯಾದಿ ಪೂಜೆಯಿಂದಲೂ, ಛತ್ರಚಾಮರಗಳಿಂದಲೂ, ಎಡಬಲದಲ್ಲಿ ಕುದುರೆ

ಯನ್ನು ಹಿಡಿದುನಿಂತ ನೃಪಪುತ್ರರಿಂದಲೂ ಪರಿವೃತವಾಗಿ ಒಂದು ದಿವ್ಯಾಶ್ವವು ಜಲಪಾನಕ್ಕಾಗಿ ಹೊರಟು ಬರುವುದು ಗೋಚರಿಸಿತು. ಇದನ್ನು ಕಂಡುದೇ ತಡ, ಭೀಮಸೇನನ ಸಂತೋಷಸಾಗರವುಕ್ಕಿತು. ಆ ಕುದುರೆಯ ಪದಗತಿ, ಸರಸಧ್ವನಿ, ವರ್ಣಶೋಭೆ, ಅಲಂಕಾರ, ಸುಲಕ್ಷಣ, ಲಾಲಿತ್ಯ, ವಿಸ್ತಾರಗಳನ್ನು ಕಂಡು ಬಹುವಾಗಿ ಮೆಚ್ಚಿದನು; ಆತನು, ಆ ಕುದುರೆಯ ಚೆಲುವನ್ನು ನಿಟ್ಟಿಸು ತ್ತಿದ್ದನು. ಮೇಘನಾದನು ಭೀಮಸೇನನ ಪಾದಕ್ಕೆರಗಿ, ತಾನೀ ಕುದುರೆಯ ನ್ನೀಗಲೇ ಕೊಂಡುಬರುವೆನೆಂದು ಅಪ್ಪಣೆ ಪಡೆದು, ಮುನ್ನಡೆದು, ತನ್ನ ವಿವಿಧ ಮಾಯಾಜಾಲವನ್ನು ಬೀಸಿ, ಅಶ್ವರಕ್ಷೆಯ ಬಲವನ್ನು ಕಂಗೆಡುವಂತೆ ಮಾಡಿ, ಸರೋವರದಿಂದ ಬೆಳ್ದಾವರೆಯನ್ನು ಹಂಸವು ಎತ್ತಿ ಆಕಾಶಕ್ಕೆ ಹಾರುವಂತೆ, ಕರ್ಣಜ ಭೀಮಸೇನರು ಬೆರಗಾಗಲು, ಆ ಕುದುರೆಯನ್ನು ಆತನು ಹಿಡಿದೆತ್ತಿ ತರುತ್ತಿದ್ದನು.

ಇದನ್ನು ಕಂಡು, ಕೋಪಗೊಂಡು, ಕುದುರೆಗಾಹಿನಭಟರು ಕಾಳಗಕ್ಕೆ ಸಿದ್ಧರಾದರು. ಅವರನ್ನುರುಳಿಸಿ ಮೇಘನಾದನು ಮುನ್ನಡೆಯುತ್ತಿರಲು, ಯೌವನಾಶ್ವನ ಸೈನ್ಯವು ಅಕ್ಷೌಹಿಣೀ ಸಂಖ್ಯೆಯಿಂದ, ಜೀವವನ್ನು ಕೊಂಡೊಯ್ಯುವ ಯಮನನ್ನು ಹೆಣಗಳು ಬೆನ್ನಟ್ಟುವಂತೆ, ಬಂದು ಮುತ್ತಿದುವು. ಆ ಸೈನ್ಯವನ್ನೂ ಸದೆಬಡಿದು, ಮುಂದೆ ಸಾಗುತ್ತಿರಲು, ಸ್ವತಃ ಯೌವನಾಶ್ವನೇ ಸಿಟ್ಟಿನಿಂದ ಕಿಡಿ ಗೊಂಡು ಕುದುರೆಗಳ್ಳನನ್ನು ಕೊಲ್ಲುವೆನೆಂದು ಕಾಳಗಕ್ಕೆ ಸನ್ನದ್ಧನಾದನು. ತಂದೆ ಯನ್ನು ಹಿಂಬಾಲಿಸಿ, ಶತ್ರುವಿನೊಡನೆ ಹೋರಾಡಲು ಯೌವನಾಶ್ವನ ವೀರ ಪುತ್ರನಾದ ಸುವೇಗನೆಂಬವನೂ ಬಂದು ತಾಗಿದನು. ಅಷ್ಟರಲ್ಲಿ ಮೇಘನಾದನು ಕುದುರೆಯನ್ನು ಭೀಮ–ವೃಷಕೇತುಗಳಿದ್ದಲ್ಲಿಗೆ ತಂದಿರಲು, ಅದನ್ನು ಒಂದು ಮರದ ಬುಡಕ್ಕೆ ಕಟ್ಟಿಹಾಕಿ, ಅದರ ಕಾವಲಿಗೆ ಮೇಘನಾದನನ್ನು ನಿಲ್ಲಿಸಿ, ವೃಷಕೇತುವಿನೊಡನೆ ಯೌವನಾಶ್ವನ ಬಲವನ್ನಿದಿರಿಸುವಂತೆ ಹೇಳಿ, ಭೀಮ ಸೇನನು, ಸುವೇಗನೊಡನೆ ಸಮರಸನ್ನದ್ಧನಾದನು. ಅವರೊಳಗೆ ಘೋರ ಸಂಗ್ರಾಮವು ಸಾಗಿತು.

"ಯಾರವನು ತುರಗ ಚೋರನು? ಎತ್ತ ಹೋಗುತ್ತಲಿರುವನು? ಅವ ನನ್ನು ಬೇಗನೇ ನನಗೆ ತೋರಿಸಿರಿ. ಈಗಲೇ ಆತನನ್ನು ಕೊಂದು ಅವನ ರಕ್ತವನ್ನು ಪಿಶಾಚಿಗಳಿಗೆ ಕುಡಿಸುವೆನು" ಇಂತು ಅರ್ಭಟಿಸುತ್ತಾ, ಸರಳ ಮಳೆ ಸುರಿಸುತ್ತಾ ಯೌವನಾಶ್ವನು ಬರುತ್ತಿದ್ದನು. ಆತನನ್ನು ವೃಷಕೇತು ತಡೆದನು! "ಎಲಾ ನೀನಾವನು? ಶೂರನಾದ ನಮ್ಮೊಡನೆ ಸಂಗ್ರಾಮವೆಂದರೆ ಹುಡುಗಾಟಿ

ಕೆಯೆಂ? ಅರಿಯದ ಬಾಲಕನಾದ ನಿನಗೆ ಯುದ್ಧವು ಸಲ್ಲದು; ಕುದುರೆಯನ್ನು ಬಿಟ್ಟು ನಡೆ" ಎಂದು ಯೌವನಾಶ್ವನು ಮೂದಲಿಸಿದನು. "ರಾಜನೇ, ಮದ ಗಜವು ಬೃಹದ್ಗಾತ್ರವುಳ್ಳದ್ದೆಂದು ಸಿಂಹದಮರಿ ಹಿಂದೋಡುವುದುಂಟೆ? ರಣ ರಂಗದಲ್ಲಿ ದೊಡ್ಡವರು ಸಣ್ಣವರೆಂದಿದೆಯೆ? ಸಾಧ್ಯವಿದ್ದರೆ ಯುದ್ಧಮಾಡು"; ಎನ್ನುತ್ತಾ ವೃಷಕೇತು ನಿಶಿತಶರವನ್ನೆಚ್ಚನು. ವೃಷಕೇತುವಿನ ವೀರತ್ವಕ್ಕೆ ಯೌವನಾಶ್ವನು ಮೆಚ್ಚಿದನು. ಆತನನ್ನು ಇದಿರಿಸಿ ಕಾದಾಡಿದನು. ನಾನಾ ವಿಧದ ಸಂಗ್ರಾಮ ಸಾಮರ್ಥ್ಯಗಳನ್ನು ಅವರಿಬ್ಬರೂ ಮೆರೆಸಿದರು. ಇಂತಹ ಅನುಪಮಸಾಹಸಿಯಾದ ಬಾಲಕನಾರೆಂದು ಯೌವನಾಶ್ವನು ದಿಗ್ಭ್ರಮಗೊಳ್ಳು ವಂತೆ ವೃಷಕೇತು ಸಮರಸಾಹಸವನ್ನು ತೋರಿಸಿದನು. ಕೊನೆಗೆ ವೃಷಕೇತುವಿನ ತೀಕ್ಷ್ಣಬಾಣಘಾತದಿಂದ ಯೌವನಾಶ್ವನು ಮೂರ್ಛಾಗತನಾಗಿ ಧರೆಗುರುಳಿದನು. ಇದಿರಾದ ಆತನ ಸೈನಿಕರು ವೃಶಕೇತುವಿನ ಮುಂದೆ ಉಜ್ಜ್ವಲದೀಪಕ್ಕೆ ಎರಗುವ ಪತಂಗಗಳಂತೆ ಪಟಪಟನೆ ನೆಲಕ್ಕುರುಳಿದರು. ಉಳಿದವರು ಜೀವವನ್ನು ಹಿಡಿದು ಕೊಂಡು ಪಲಾಯನ ಪಂಡಿತರಾದರು. ಇನ್ನು ತನಗಿದಿರಾಗಿ ಹೋರಾಡುವವ ರಾರೂ ಕಾಣದಿರಲು, ವೃಷಕೇತು, ಮೂರ್ಛೆಬಿದ್ದ ಯೌವನಾಶ್ವನ ಸಮೀಪಕ್ಕೆ ಬಂದನು. ಆತನ ಮೇಲೆ ಹಗೆತನವನ್ನು ಒಮ್ಮೆಗೆ ಮರೆತುಬಿಟ್ಟನು. ಅವನ ಬಳಲಿಕೆಗೆ ಉಚಿತವಾದ ಉಪಚಾರಗಳನ್ನು ಮಾಡಿದನು. ಇಂತಾಗಲು ಯುದ್ಧದ ಪರಿಶ್ರಮವು ಹಿಂಗಿ ಅರಸನು ಮೈಮುರಿದೆದ್ದನು. ಎಚ್ಚತ್ತು ಯೌವನಾಶ್ವನು ತನ್ನ ಬಲದ ಸೈನಿಕರಾರನ್ನೂ ಬಳಿಯಲ್ಲಿ ಕಾಣದೆ, ತಾನು ಇಂತು ಹಗೆಯ ಕರುಣೆಗೆ ಈಡಾದುದರಿಂದ ನಾಚಿದವನಾಗಿ, ಇನ್ನೀತನೊಡನೆ ಸಮರಸಲ್ಲದೆಂದು ನಿಶ್ಚೈಸಿದನು. ವೃಷಕೇತುವಿನ ವಂಶವೃತ್ತಾಂತವಿಚಾರವನ್ನೂ, ಕುದುರೆಯನ್ನು ಕೊಂಡೊಯ್ಯಲು ಬಂದ ಕಾರಣಗಳನ್ನೂ, ಅವನೊಡನೆ ಕೇಳಿದನು. ವೃಷಕೇತು, ತನ್ನ ಕುಲೇತಿಹಾಸವನ್ನೂ, ಯುಧಿಷ್ಠಿರನ ಅಶ್ವಮೇಧದ ನಿಶ್ಚಯವನ್ನೂ, ಬಂದ ಕಾರಣವನ್ನೂ ವಿವರಿಸಿದನು. ಧರ್ಮಸ್ವರೂಪಿಯಾದ ಯುಧಿಷ್ಠಿರನಿಂದ, ಶ್ರೀಕೃಷ್ಣನು ಇಂತಹ ಧಾರ್ಮಿಕ ಯಾಗವನ್ನು ಮಾಡಿಸುತ್ತಿರುವ ವಿಚಾರವನ್ನೂ ಯೌವನಾಶ್ವನು ತಿಳಿದು, ತನ್ನೊಡನೆ ಮುಂಚಿತವಾಗಿ ಈ ಸಂಗತಿಯನ್ನು ತಿಳಿಸಿ ದ್ದರೆ ಸತ್ಕಾರ್ಯಕ್ಕೆ ತಾನಾಗಿಯೇ ತುರಗವನ್ನು ತಂದುಕೊಡುತ್ತಿದ್ದುದು ಮಾತ್ರ ವಲ್ಲದೆ, ತನ್ನ ಸರ್ವಸ್ವವನ್ನೂ ಧರ್ಮಜನಿಗೆ ಅರ್ಪಿಸುತ್ತಿದ್ದೆನಲ್ಲಾ ಎಂದು ಹೇಳಿ ತನಗೆ ಭೀಮಸೇನನನ್ನು ತೋರಿಸೆಂದು ಕೇಳಿಕೊಂಡನು. ಅವರಿಬ್ಬರೂ ಮಣಿ ರಥವನ್ನೇರಿ ಭೀಮಸೇನನಿದ್ದೆಡೆಗೆ ಬರುತ್ತಿದ್ದರು.

ಇತ್ತ, ಭೀಮಸುವೇಗರೊಳಗೆ ಭಯಂಕರಯುದ್ಧ ನಡೆಯುತ್ತಿತ್ತು, ವೃಷಕೇತು. ಯೌವನಾಶ್ವನಿಗೆ ಭೀಮಸೇನನನ್ನು ತೋರಿಸಿದನು. ಆಗ ಯೌವನಾಶ್ವನು ರಥದಿಂದಿಳಿದು ನಡೆದು ಬಂದು. ಯುಧಿಷ್ಠಿರನ ಪುಣ್ಯ ಕಾರ್ಯಕ್ಕೆ ನಾವು ನೆರವಾಗಬೇಕೆಂದೂ, ಅದಕ್ಕಾಗಿ ನಮ್ಮ ಕುದುರೆ ಮಾತ್ರವಲ್ಲ ಸರ್ವಸ್ವವನ್ನೂ ಆತನಿಗೆ ಒಪ್ಪಿಸಬೇಕೆಂದೂ ಹೇಳಿ ಯುದ್ಧಪ್ರವೃತ್ತನಾದ ಪುತ್ರನನ್ನು ಸಮಾಧಾನಪಡಿಸಿದನು. ಸುವೇಗನೂ ತಂದೆಯಾಜ್ಞೆಯನ್ನು ಶಿರಸಾವಹಿಸಿ ಯುದ್ಧವನ್ನು ನಿಲ್ಲಿಸಿದನು. ಆ ಬಳಿಕ ತಂದೆ ಮಕ್ಕಳಿಬ್ಬರೂ ಬಂದು, ಭೀಮಸೇನನ ಪಾದಗಳಿಗೆರಗಿದರು. ವೃಷಕೇತು. ಅವರ ಪರಿಚಯವನ್ನು ಭೀಮಸೇನನಿಗೆ ಮಾಡಿಸಿ, ಯೌವನಾಶ್ವನನ್ನು ಪ್ರೀತಿಯಿಂದ ಹಿಡಿದೆತ್ತಿ ತಕ್ಕೈಸಿದನು. ವೃಷಕೇತುವನ್ನು ಬಿಗಿದಪ್ಪಿಕೊಂಡನು. ಆ ಮಹಾವೀರರು ವೈರವನ್ನು ಮರೆತು ಸನ್ಮಿತ್ರರಾದರು.

“ಎಲೈ ಭೀಮಸೇನನೇ, ಲೋಕದಲ್ಲಿ ಬಾಹುಬಲವುಳ್ಳ ವೀರರು ಹಲವರಿರುವರು. ಅವರೆಲ್ಲರನ್ನು ನಾನು ನೋಡಿ ಬಲ್ಲೆನು. ಯುದ್ಧದಲ್ಲಿ ಇದಿರಾದವನು ಮೈಮರೆತು ಬಿದ್ದಾಗ, ಇರಿದುಕೊಲ್ಲುವರಲ್ಲದೆ, ಮೈಮರೆತ ಶತ್ರುವಿನ ಬಳಿಗೆ ಬಂದು, 'ಅಯ್ಯೋ ಈತನಿಗೆ ತುಂಬಾ ಪರಿಶ್ರಮವಾಯಿತಲ್ಲಾ !' ಎಂದು ಮರುಕಗೊಂಡು ಉಪಚರಿಸಿ ಕಾಪಾಡುವ ಪರಾಕ್ರಮಿಗಳು ಲೋಕದಲ್ಲಿ ಯಾರಾದರೂ ಇರುವರೆ? ಅಂತಹ ಅಭೂತಪೂರ್ವ ಶೌರ್ಯಾನ್ವಿತನಾದ ನಿನ್ನ ಈ ವೃಷಕೇತುವಿನಂತಹ ವೀರರನ್ನು ದೇವದಾನವ ಮಾನವಕೋಟಿಯಲ್ಲಿ ಒಬ್ಬನನ್ನೂ ನಾನಿದುವರೆಗೆ ಕಂಡಿಲ್ಲ. ಆಹಾ ! ಸಮಸ್ತ ಲೋಕಗಳೂ ಯಾವನ ವಿನೋದ ಲೀಲಾನಾಟಕವೋ, ಅಂತಹ ಮಹಾಮಹಿಮನೇ ನಿಮ್ಮ ಸಾರಥಿಯಾಗಿ ಚಾಟಿ ಹಿಡಿದು ನಿಂತಿರಲು. ನಿಮ್ಮಂತಹ ಪುಣ್ಯಾತ್ಮರು ಬಂದು ಕೇಳಿದ್ದರೆ ನನ್ನಲ್ಲಿರುವ ಯಾವುದನ್ನಾದರೂ ನಾನು ಕೊಡದೆ ಇರುತ್ತಿದ್ದೆನೆ? ಹೀಗೆ ಯಾತಕ್ಕಾಗಿ ಮಾಡಿದಿರಿ? ಆದರೂ ಈ ವೃಷಕೇತು ಇಂದು ಮಾಡಿದ ಮಹೋಪಕಾರವನ್ನು ನಾನು ಮರೆಯಲುಂಟೆ? ಯುದ್ಧದಲ್ಲಿ ಮೈಮರೆತು ಒರಗಿದವನು ಅಲ್ಲಿಯೇ ಸತ್ತುಹೋಗಿದ್ದರೆ, ಶ್ರೀಕೃಷ್ಣಪರಮಾತ್ಮನನ್ನು ಸಂದರ್ಶಿಸುವ ಪುಣ್ಯವಿಲ್ಲದೆ ಹೋಗುತ್ತಿತ್ತಲ್ಲಾ ! ನಿಮ್ಮ ಕೃಪೆಯಿಂದ ನನಗಿಂದು ಆ ಭಾಗ್ಯ ದೊರಕುವುದು. ನನ್ನ ಸರ್ವಸ್ವವನ್ನೂ ಶ್ರೀಹರಿಗೆ ಅರ್ಪಿಸುವೆನು.”

“ಅರಸನೇ. ಚಿಂತಿಸಬೇಡ; ಇದುವರೆಗೆ ಯುಧಿಷ್ಠಿರನಿಗೆ ನಾವು ನಾಲ್ವರು ತಮ್ಮಂದಿರಿದ್ದೆವು; ಇಂದು ನೀನು ಸಹಿತ ಐವರಾದೆವು; ಶ್ರೀಕೃಷ್ಣ ಸಂದರ್ಶನವು ನಿನಗೆ ದೊರಕುವುದು.”

ಇಂತು ಯೌವನಾಶ್ವ ಭೀಮಸೇನರಿಗೆ ಪರಸ್ಪರ ಸ್ನೇಹ ಸಂಭಾಷಣೆಗಳು ನಡೆದುವು. ಬಳಿಕ ಆ ಮೂವರನ್ನೂ ಯೌವನಾಶ್ವನು ತನ್ನ ನಗರಕ್ಕೆ ವಿವಿಧ ಸಂಭ್ರಮಗಳಿಂದ ಕರೆದುಕೊಂಡು ಹೋಗಿ, ಅಲ್ಲಿ ಅವರಿಗೆ ನಾನಾ ವಿಧದ ಸತ್ಕಾರಗಳನ್ನು ಮಾಡಿ, ಮೂರುದಿನ ಅವರನ್ನು ತನ್ನ ನಗರದಲ್ಲಿ ನಿಲ್ಲಿಸಿ ಕೊಂಡನು, ನಾಲ್ಕನೆಯದಿನ ಅಖಿಲಭಂಡಾರದೊಡನೆ ಸಮಸ್ತ ವಸ್ತುಗಳೊಡನೆ. ಸಂಪೂರ್ಣ ಸೈನ್ಯದೊಡನೆ, ಪತ್ನೀಪುತ್ರಸೋದರ ಬಂಧುವರ್ಗ ಸಮೇತನಾಗಿ. ಯಜ್ಞಾಶ್ವವನ್ನು ಕರೆದುಕೊಂಡು ಹಸ್ತಿನಾವತಿಗೆ ಬಂದು ಯುಧಿಷ್ಠಿರನಿಗೆ ತನ್ನ ಸರ್ವಸ್ವವನ್ನೂ ಒಪ್ಪಿಸಿ ಕೃತಾರ್ಥನಾದನು; ಶ್ರೀಕೃಷ್ಣ ದರ್ಶನದಿಂದ ಆತನು ಜನ್ಮವನ್ನು ಸಾರ್ಥಕಗೊಳಿಸಿದನು. ಭೀಮಾದಿಗಳ ಈ ವಿಜಯ ವಾರ್ತೆಯು ಎಲ್ಲರಿಗೂ ವಿಶೇಷ ಸಂತೋಷವನ್ನುಂಟುಮಾಡಿತು.

ಶ್ರೀಕೃಷ್ಣ ಯೌವನಾಶ್ವರೊಡಗೂಡಿ ಯುಧಿಷ್ಠಿರನು ಎರಡು ಪಕ್ಷಗಳ ಕಾಲವನ್ನು ಪರಮಸಂತೋಷದಿಂದ ಕಳೆದನು.

"ಅಯ್ಯಾ, ಧರ್ಮಜನೇ, ಯಾಗವನ್ನು ಪ್ರಾರಂಭಿಸಲು ಇನ್ನೂ ಹನ್ನೊಂದು ತಿಂಗಳ ಅವಕಾಶವುಂಟು. ನಾನು ಈಗ ಊರಿಗೆ ಹೋಗಿ, ಯಜ್ಞ ಕಾಲಕ್ಕೆ ಬೇಕಾದ ಸಹಾಯಸಾಧನಸಾಮಗ್ರಿಗಳೊಡನೆ ಮರಳಿಬರುವೆನು. ನೀನು ಯೌವನಾಶ್ವನ ಸಹಾಯದಿಂದ ಅದು ವರೆಗೆ ಈ ಯಜ್ಞಾಶ್ವವನ್ನು ರಕ್ಷಿಸಿ ಕೊಂಡಿರುವುದು."

ಹೀಗೆ ತಿಳಿಯಹೇಳಿ, ಶ್ರೀಕೃಷ್ಣನು ದ್ವಾರಾವತಿಗೆ ಹೊರಟುಹೋದನು. ಯುಧಿಷ್ಠಿರನು ಪುನಃ ಚಿಂತಾಗ್ರಸ್ತನಾದನು. ಈ ಮಹಾಕಾರ್ಯವನ್ನು ಹೇಗೆ ತೊಡಗಲಿ? ಎಂತು ಪೂರ್ತಿಗೊಳಿಸಲಿ? ನಮಗೆ ಸಹಾಯಿಗಳಾರು? ಎಂಬೀ ಬಗೆಹರಿಯದ ಸಮಸ್ಯೆಗಳು ಆತನಿಗುಂಟಾದುವು. ಅವರ ಪರಿಹಾ ರೋಪಾಯವನ್ನು ಬಲ್ಲವರಾಗಲಿ, ಸಮಾಧಾನಪಡಿಸುವವರಾಗಲಿ ಯಾರೂ ಆತನ ಬಳಿಯಲ್ಲಿರಲಿಲ್ಲ, ಶ್ರೀಕೃಷ್ಣನ ಅಗಲಿಕೆ ಅರಸನಲ್ಲಿ ಇಂತು ಚಿಂತಾ ಸಂತಾನವನ್ನುಂಟುಮಾಡಿತು. ಯಾಗದ ಸಿದ್ಧತೆಗಳು ಯಾವುವೂ ಮುಂದು ವರಿಯದೆ ಉಳಿದುವು.

ಅಷ್ಟರಲ್ಲಿ, ಮರಳಿ ವೇದವ್ಯಾಸ ಋಷಿಯು ಹಸ್ತಿನಾವತಿಗೆ ಬಂದನು. ಯಜ್ಞಾಶ್ವವು ದೊರೆತ ವಾರ್ತೆಯಿಂದ ಸಂತೋಷಗೊಂಡನು. ಅರಸನ ಚಿಂತಾವ್ಯಾಕುಲತೆಗಳನ್ನು ಕಂಡನು. ಆತನ ಔದಾಸೀನ್ಯವನ್ನು ಪರಿಹರಿಸಿದನು. ಪುಣ್ಯಕಾರ್ಯವನ್ನು ಪ್ರಾರಂಭಿಸಲು ಪ್ರೋತ್ಸಾಹಿಸಿದನು. ಋಷಿಯ ಉಪದೇಶ

ದಂತೆ ನಿರ್ಮಲ ಮುಖಮಂಟಪವು ರಚಿತವಾಯಿತು. ಅಲ್ಲಿ ಆ ದಿವ್ಯಾಶ್ವವನ್ನು ಕಟ್ಟಿಹಾಕಿದರು. ಅದರ ಕಾವಲಿಗೆ ಗಜಹಯರಥ ಪದಾತಿಗಳನ್ನು ಸುತ್ತಲೂ ನಿಲ್ಲಿಸಿದರು. ಯುಧಿಷ್ಠಿರನಿಗೆ, ಇಂತಹ ಯಜ್ಞವನ್ನು ಮಾಡಿದ ಮಹಾನು ಭಾವರ ಪುಣ್ಯಕಥೆಯನ್ನು ಕೇಳುವ ಕುತೂಹಲವುಂಟಾಯಿತು. ಮಹರ್ಷಿಯು ಆತನ ಆಶಯವನ್ನು ಅರಿತು ರವಿಕುಲದ ಮರುತ ಮಹಾರಾಜನ ಕಥೆಯನ್ನು ವಿವರಿಸಿದನು:—

"ಧರ್ಮಪುತ್ರನೇ, ಕೃತಯುಗದಲ್ಲಿ, ಸೂರ್ಯವಂಶದಲ್ಲಿ ಇಕ್ಷ್ವಾಕು ಪರಂಪರೆಯ ಅನೇಕ ರಾಜರು ಧರ್ಮಕೀರ್ತಿಪ್ರತಾಪಗಳಿಂದ ರಾಜ್ಯವಾಳಿದರು. ಅವರಲ್ಲಿ ಕರಂಧಮನೆಂಬವನು ಅಂಗಿರಸನ ಸಹಾಯದಿಂದ ಶತಾಶ್ವಮೇಧ ಗಳನ್ನು ಮಾಡಿ ದೇವತ್ವವನ್ನು ಹೊಂದಿದನು. ಕರಂಧಮನ ವಂಶನಾದ ಅವಿಕ್ಷಿ ರಾಜನಿಗೆ ಮರುತನೆಂಬ ಸುಪುತ್ರನು ಜನಿಸಿದನು. ಆತನು ಪ್ರಬಲ ಪರಾಕ್ರಮಿಯಾಗಿ ಧರ್ಮನೀತಿಗಳಿಂದ ಈ ಭೂಮಿಯನ್ನು ಏಕಾಧಿಪತ್ಯದಲ್ಲಿ ಆಳಿದನು. ತಾನು ಮಹಾಸಾಮ್ರಾಜ್ಯವನ್ನು ಸ್ಥಾಪಿಸಿ ಸಂಪಾದಿಸಿದ ವಿಪುಲ ಐಶ್ವರ್ಯವು ಸಜ್ಜನರಿಗೆ ಸಲ್ಲಬೇಕೆಂದು ಬಗೆದು ಅವನು ಅಶ್ವಮೇಧಯಾಗ ವನ್ನು ಮಾಡಲು ನಿಶ್ಚೈಸಿದನು. ಯಾಗದ ಪೌರೋಹಿತ್ಯಕ್ಕೆ ಅಂಗಿರಸಪುತ್ರ ನಾದ ಬೃಹಸ್ಪತಿಯೇ ಯೋಗ್ಯನೆಂದು ಬಗೆದು, ಸುರಗುರುವಾದ ಆತನಲ್ಲಿ ಬಂದು ಪ್ರಾರ್ಥಿಸಿಕೊಂಡನು:

'ಗುರುವರ್ಯ, ನನ್ನ ಪಿತಾಮಹನು ನಿನ್ನ ತಂದೆಯಿಂದ ನೂರು ಯಾಗಗಳನ್ನು ಮಾಡಿಸಿ ಪುಣ್ಯಪದವಿಯನ್ನು ಗಳಿಸಿದನು. ನಾನೂ ಕುಲಧರ್ಮವನ್ನು ಬಿಡದೆ ನಿನ್ನ ಮೂಲಕ ಅಶ್ವಮೇಧ ಯಜ್ಞವನ್ನು ಮಾಡಿಸಬೇಕೆಂದು ಬಂದಿರುವೆನು. ದಯಮಾಡಿ ಬಂದು ಅದನ್ನು ನಿರ್ವಹಿಸಿ ಕೊಡಬೇಕು.'

ಅರಸನ ಅರಿಕೆಯನ್ನು ಬೃಹಸ್ಪತಿಯು ತಾನಾಗಿ ಅಲ್ಲಗಳೆಯಲಾರದಾದನು. ಪುಣ್ಯಕಾರ್ಯಕ್ಕೆ ತನ್ನಿಂದ ಆಗಬೇಕಾದ ಸಹಾಯವನ್ನು ಮಾಡಲು ಒಪ್ಪಿದನು. ಹಾಗೆ ಸುರಗುರುವು ಮಾನವನಾದ ಮರುತ್ತನ ಯಾಗಕ್ಕೆ ಪೌರೋಹಿತ್ಯವನ್ನು ಮಾಡಲು ಒಪ್ಪಿದ ವಿಷಯವು ಇಂದ್ರನಿಗೆ ತಿಳಿಯಿತು: ಆತನಿಗೆ ಸಹಿಸಲಾರದ ಸಿಟ್ಟುಬಂತು.

'ಏನು? ದೇವಗುರುವು ಮಾನವನು ಮಾಡುವ ಯಾಗಕ್ಕೆ ಪೌರೋಹಿತ್ಯ ವಹಿಸುವುದೆ? ಅದು ಸರ್ವಥಾಸಲ್ಲದು.'

—ದೇವೇಂದ್ರನ ಕಟ್ಟಪ್ಪಣೆಯಾಯಿತು. ಮುಖಭಂಗವಾಗಿ ಮರಳಿ ಬರುತ್ತಿರುವ ಮರುತನನ್ನು ದಾರಿಯಲ್ಲಿ ದೇವರ್ಷಿಯಾದ ನಾರದನು ಸಂಧಿಸಿದನು. ಮಹರ್ಷಿಗೆ ರಾಜನು ವಂದಿಸಿದನು.

'ರಾಜನೆ, ನಿನಗೆ ದುಮ್ಮಾನವೇನು? ನಿನ್ನ ಮುಖವು ಏಕಿಂತು ಬಾಡಿರುವುದು?

'ಅಯ್ಯೋ ಮಹರ್ಷಿಯೇ, ನಾನು ಮರಳಿ ನಗರಪ್ರವೇಶ ಮಾಡಲಾರೆನು; ನಿರ್ವಹಿಸಬೇಕೆಂದಿದ್ದ ಪುಣ್ಯಕಾರ್ಯಕ್ಕೆ ಬೃಹಸ್ಪತಿಯು ಪುರೋಹಿತನಾಗಲು ಒಪ್ಪಲಿಲ್ಲ. ನನ್ನ ಆ ಸತ್ಯಸಂಕಲ್ಪವು ನಿರಾಶೆಹೊಂದಿದ ಕಾರಣ ಅರಣ್ಯಪ್ರವೇಶಮಾಡಿ, ಉಗ್ರತಪಸ್ಸಿನಿಂದಾದರೂ ಉತ್ತಮಪದವಿಯನ್ನು ಪಡೆಯಬೇಕೆಂದಿರುವೆನು.'

—ಹೀಗೆಂದು ಮರುತನು ನಾರದನ ಅಡಿಗಳಿಗೆರಗಿ ಮನದ ದುಗುಡವನ್ನು ದೂರಿಕೊಂಡನು.

'ಎಲೈ ರಾಜನೇ, ನೀನು ಇದಕ್ಕಾಗಿ ವ್ಯಥೆಪಡಬೇಡ: ಅಂಗಿರಸನಿಗೆ ಬೃಹಸ್ಪತಿಯಲ್ಲದೆ ಸಂವರ್ತನೆಂಬ ಪುತ್ರನೊಬ್ಬನಿರುವನು. ಆ ಸೋದರರೊಳಗೆ ದಾಯಾದ ಮತ್ಸರವುಂಟಾಗಲು, ಬೃಹಸ್ಪತಿಯು ತಮ್ಮನಿಗೆ ಪಾಲು ಕೊಡದೆ ಹೊರಡಿಸಿದನು. ಆತನು ಕಾಶಿಗೆ ಹೋಗಿ ಅಲ್ಲಿ ಅವದೂತನಾಗಿರುವನು. ಅವನನ್ನು ಒಲಿಸಿಕೊಂಡರೆ ನಿನ್ನ ಯಜ್ಞವು ನೆರವೇರುವುದು. ನೀನು ಈಗಲೇ ಕಾಶಿಗೆ ಹೋಗು. ಅಲ್ಲಿ ಆತನನ್ನು ಹುಡುಕು. ನಿನಗೆಲ್ಲಿಯೂ ಕಾಣಸದಿದ್ದರೆ. ಪಟ್ಟಣದ ಹೆಬ್ಬಾಗಿಲಲ್ಲಿ ಒಂದು ಹೆಣವನ್ನು ತಂದಿರಿಸು: ಅಲ್ಲಿ ಎಲ್ಲರೂ ಹೆಣವನ್ನು ತುಳಿದು ತಿರುಗಾಡುವರು; ಅವದೂತನಾದಾತನು ಅದನ್ನು ತುಳಿಯದೆ ತೊಲಗಿಹೋಗುವನು. ಆ ರೀತಿಯಾಗಿ ಅವನನ್ನು ಗುರುತಿಸಿ. ಆತನ ಬೆನ್ನುಬಿಡದೆ ಹಿಂಬಾಲಿಸು. ಅವನು ಹೋದಲ್ಲಿ ಬೆಂಬಿಡದೆ ಹೋದಾಗ. ನಿನ್ನನ್ನು ಆತನು ಬೈಯುವನು: ನಿನಗೆ ಹೊಡೆಯುವನು: ಮುಕ್ಕಳಿಸಿ ನಿನ್ನ ಮೇಲೆ ಉಗುಳುವನು; ಏನೇನಾದರೂ ಮಾಡುವನು; ನೀನು ಯಾವುದಕ್ಕೂ ಹಿಮ್ಮೆಟ್ಟಬೇಡ. ಕೊನೆಗೆ ತಾನು ಇರುವ ವಿಷಯವನ್ನು ನಿನಗೆ ಯಾರು ಹೇಳಿದರೆಂದು ನಿನ್ನೊಡನೆ ಕೇಳಿದರೆ, ನಾರದನು ತಿಳಿಸಿದನೆಂದೂ. ತಿಳಿಸಿ ಬೆಂಕಿಯಲ್ಲಿ ಬಿದ್ದನೆಂದೂ ಹೇಳು.'

ದೇವರ್ಷಿಯ ಉಪದೇಶದಂತೆ, ಮರುತ್ತನು ಹೊರಟು ಕಾಶೀ ಪಟ್ಟಣವನ್ನು ಪ್ರವೇಶಿಸಿದನು; ಕಾಶಿಯಲ್ಲಿ ವಿಶ್ವನಾಥ ಸಂದರ್ಶನ ಮಾಡಿದನು.

ನಾರದನು ಹೇಳಿದ ಹಾಗೆ ಪಟ್ಟಣದ ಹೆಬ್ಬಾಗಿಲಲ್ಲಿ ಹೆಣವನ್ನು ತಂದಿರಿಸಲು, ಜನಜಂಗುಳಿ ಅದನ್ನು ತುಳಿದೇ ನಡೆದು ಹೋಗುತ್ತಿತ್ತು. ಆ ದಾರಿಯಾಗಿ ಬಂದ ಸಂವರ್ತನು ಅದನ್ನು ತುಳಿಯದೆ ತೊಲಗಿಹೋದನು. ಅದರಿಂದ ಗುರುತಿಸಿದ ಮರುತ್ತನು ಆತನನ್ನು ಬಿಡದೆ ಹಿಂಬಾಲಿಸಿದನು; ಅವನು ಹೋದಲ್ಲಿ ಹೋದನು. ಅವಧೂತನಾದಾತನು ಹಿಂಬಾಲಿಸುವ ಅರಸನನ್ನು ಬೈದನು; ಹೊಯ್ದನು; ಸಿಟ್ಟುಗೊಂಡನು; ಗುದ್ದಿದನು; ಓಕರಿಸಿದನು, ನೂಕಿದನು; ಇದಕ್ಕೆಲ್ಲಾ ಅಳುಕದೆ ಅರಸನು ಹಿಂಬಾಲಿಸುತ್ತಿದ್ದನು.

'ಅಯ್ಯಾ, ನಾನು ಯಾರೆಂದು ಭಾವಿಸಿ ನೀನು ಹಿಂಬಾಲಿಸುತ್ತಿದ್ದೀಯೆ?'

– ಮರುತನೊಡನೆ ಅವನು ಕೇಳಿದನು.

'ಮಹರ್ಷಿ, ನೀನು ದೇವಪುರೋಹಿತ ಅಂಗೀರಸನ ಮಗನಾದ ಸಂವರ್ತನೆಂದು ಅರಿತು ಬಂದಿರುವೆನು.'

'ನಾನು ಇಲ್ಲಿದ್ದ ಸಂಗತಿಯನ್ನು ನಿನಗೆ ಯಾರು ತಿಳಿಸಿದರು?'

'ಮುನಿಯೇ, ನಾನು ಅವಿಕ್ಷಿಯ ಮಗನಾದ ಮರುತನು. ನನಗೆ ಅಶ್ವಮೇಧಯಾಗವನ್ನು ಮಾಡಬೇಕೆಂದು 'ಅಪೇಕ್ಷೆಯಾಯಿತು. ನಿನ್ನ ಅಣ್ಣನಾದ ಬೃಹಸ್ಪತಿಯೊಡನೆ ನಾನು ಕೇಳಿಕೊಂಡೆನು. ಆತನು ನಿರಾಕರಿಸಿದನು. ನಾನು ಚಿಂತೆಯಿಂದಿರಲು, ದೇವರ್ಷಿಯಾದ ನಾರದನು ನಿನ್ನ ಇರವನ್ನು ಅರುಹಿದನು. ಜೀಯಾ. ನನ್ನಲ್ಲಿ ದಯೆದೋರಬೇಕು; ನೀನಲ್ಲದೆ ನನ್ನ ಯಾಗ ಕಾರ್ಯವನ್ನು ನೆರವೇರಿಸುವವರು ಬೇರಾರೂ ಇಲ್ಲ'.

'ಅರಸನೇ, ಚಿಂತಿಸಬೇಡ; ನಿನ್ನ ಯಾಗಕ್ಕೆ ಪುರೋಹಿತನಾಗಲು ನಾನು ಹಿಂಜರಿಯುವವನಲ್ಲ. ಆದರೆ ನನ್ನ ಅಣ್ಣನು ಇಂದ್ರನ ಮೂಲಕ. ತಾನೇ ಯಾಗಕ್ಕೆ ಅಧ್ಯಕ್ಷನಾಗುತ್ತೇನೆಂದು ಆಶೆಪಟ್ಟು ಕೇಳಿದರೆ ಆಗ ನೀನು ಏನು ಮಾಡುವಿಯೆ? ನನ್ನನ್ನು ಕೈಬಿಡುವೆಯಾ?'

'ಮಹರ್ಷಿ, ನಿನ್ನನ್ನು ಬಿಟ್ಟು ಬಿಟ್ಟಲ್ಲಿ ನನಗೆ ಬ್ರಹ್ಮಜ್ಞಾನಿಯನ್ನು ಕೊಂದ ಗತಿಯಾಗುವುದು.'

ಮರುತ್ತನು ಋಷಿಗೆ ಭಾಷೆಯಿತ್ತನು. ಸಂವರ್ತನ ಉಪದೇಶದಂತೆ ಮರುತ್ತನು ರಜತಾದ್ರಿಗೆ ಹೋಗಿ ಶಿವನನ್ನು ಮೆಚ್ಚಿಸಿ ಯಾಗದ ಸಲುವಾಗಿ ಕನಕ ರಾಶಿಯನ್ನು ತಂದನು. ಯಾಗಶಾಲೆಯು ನಿರ್ಮಾಣವಾಯಿತು. ಸಂವರ್ತನು ಮಹಾಪುರೋಹಿತನಾಗಿ ಯಾಗವನ್ನು ಪ್ರಾರಂಭಿಸಿದನು.

ಬೃಹಸ್ಪತಿಗೆ ಮರುತನ ಯಾಗದ ಸುದ್ದಿ ಸಿಕ್ಕಿತು. ದಾಯಾದ ಮತ್ಸರವು ಮರುಕೊಳಿಸಿತು. ಸಂವರ್ತನು ಧನವಂತನಾಗಿ ಸುಖಿಯಾಗುವನೆಂದು ಹೊಟ್ಟೆ ಕಿಚ್ಚು ಹೆಚ್ಚಾಯಿತು. ದೇವೇಂದ್ರನ ಬಳಿಗೆ ಹೋಗಿ ದೂರಿಡಲು. ಆತನು ಅಗ್ನಿಯನ್ನು ಕಳುಹಿಸಿದನು.

'ರಾಜನೇ, ಇಂದ್ರನು ಹೇಳಿದ ಮಾತನ್ನು ನಾನು ತಿಳಿಸುತ್ತಿದ್ದೇನೆ; ಈ ಯಜ್ಞವನ್ನು ಬೃಹಸ್ಪತಿಯ ಮೂಲಕವೇ ಮಾಡಿಸು; ಪ್ರಯಾಸಪಟ್ಟು ಸಂವರ್ತನಿಂದ ಮಾಡಿಸದಿರು; ನನ್ನ ಆಜ್ಞೆಯನ್ನು ಮೀರಿದಿಯಾದರೆ ನಿನ್ನ ಯಾಗವು ಕೆಡುವುದು; ನಿನಗೆ ಅಪಾಯವುಂಟಾಗುವುದು'.

ಮರುತ್ತನು ಇಂದ್ರನ ಆಜ್ಞೆಗೆ ವಿನಯಪೂರ್ವಕವೇ ವಿಜ್ಞಾಪಿಸಿ ಕೊಂಡನು. 'ಬೃಹಸ್ಪತಿಯೇ ನನ್ನ ಕುಲಗುರುವೆಂದು ಬಗೆದು, ನಾನು ಆತನಲ್ಲಿಗೆ ಹೋಗಿ ನನ್ನ ಯಾಗವನ್ನು ಮಾಡಿಸು ಎಂದು ಬೇಡಿಕೊಂಡೆನು. ಮಾನವರ ಯಾಗವನ್ನು ನಾನು ಮಾಡೆನೆಂದು ಆತನು ಅಲ್ಲಗಳೆದ ಮೇಲೆ ಸಂವರ್ತಋಷಿ ಯನ್ನು ಒಡಂಬಡಿಸಿ ನಾನು ಕಳೆತಂದಿದ್ದೇನೆ. ಹೀಗಿದ್ದರೂ, ಇಂದ್ರನು ನನ್ನ ಯಾಗವನ್ನು ತಡೆದನಾದರೆ ನಾನೇನು ಮಾಡಲಿ?'

ಇಂದ್ರನ ದರ್ಪವನ್ನೂ ಮರುತ್ತನ ವಿನಯವನ್ನೂ ಕಂಡು ಸಂವರ್ತನಿಗೆ ಸಿಟ್ಟು ನೆತ್ತಿಗೇರಿತು.

'ರಾಜನೆ, ಯಾಕಾಗಿ ಇವರೊಡನೆ ಇಷ್ಟೊಂದು ಉಪಚಾರದ ಮಾತು ಗಳನ್ನು ಆಡುತ್ತೀಯೆ? ಈತನನ್ನು ತೊಲಗಿಸು: ಇಂದ್ರನು ಯಾಗವನ್ನು ಕೆಡಿಸಿದ ನಾದರೆ, ಸ್ವರ್ಗಲೋಕವನ್ನೇ ಸುಡುವೆನು. ಈ ಅಗ್ನಿಯನ್ನು ಭಸ್ಮ ಮಾಡು ವೆನು. ಇವನು ಇಂದ್ರನನ್ನು ಕರೆದುಕೊಂಡು ಬರಲಿ. ಈತನನ್ನು ಈಗಲೇ ಹೊರತಳ್ಳು.'

ಅಗ್ನಿಯು ಓಡಿಹೋಗಿ, ನಡೆದ ವೃತ್ತಾಂತವನ್ನು ಇಂದ್ರನಿಗೆ ತಿಳಿಸಿದನು. ಇಂದ್ರನು ಇನ್ನೊಂದು ಬಾರಿ ಸಾರಿ ಹೇಳೆಂದು ಅಗ್ನಿಗೆ ಅರುಹಲು, ಆತನು ಮುನಿಯ ತಪೋಬಲಕ್ಕಂಜಿ ಹಿಮ್ಮೆಟ್ಟಿದನು. ಆಗ ಇಂದ್ರನು ಧೃತರಾಷ್ಟ್ರನೆಂಬ ಗಂಧರ್ವನೊಡನೆ ಮರುತ್ತನಿಗೆ ಪುನಃ ಹೇಳಿ ಕಳುಹಿಸಿದನು. ಧೃತರಾಷ್ಟ್ರನು ಬಂದು ಮರಳಿ ಇಂದ್ರನ ಅಪ್ಪಣೆಯನ್ನು ತಿಳಿಸಲು, ಸಂವರ್ತನು ಸಿಟ್ಟುಗೊಂಡು ಆತನನ್ನೂ ಅಟ್ಟಿಸಿದನು. ಇಂದ್ರನಲ್ಲಿಗೆ ಮರಳಿಬಂದು ಧೃತರಾಷ್ಟ್ರನು ಇವನ್ನು ತಿಳಿಸಿದನು. ಆಗ ಇಂದ್ರನು ಬಹುವಾಗಿ ಕನಲಿದನು. ವಜ್ರಹಸ್ತನಾಗಿ ಹೊರ ಟನು. ಕುಪಿತನಾದ ಇಂದ್ರನನ್ನು ಕಂಡು ಮರುತ್ತನು ನಡುಗಿದನು. ಆತ

ನನ್ನು ಮುನಿಯು ಸಂತೈಸಿ, ತನ್ನ ತಪೋಬಲದಿಂದ ಇಂದ್ರಾಗ್ನಿ ಮೊದಲಾದ ಅಮರಗಣವನ್ನು ಕೆತ್ತಿದ ಚಿತ್ರಪಟದಂತೆ ನಿಲ್ಲಿಸಲು. ದೇವತೆಗಳು ಕಂಗಾಲಾದರು. ಅವರ ದುರ್ದಶೆಯನ್ನು ಕಂಡು. ಕರುಣೆಗೊಂಡು, ದೇವತೆಗಳ ಬಂಧನವನ್ನು ಬಿಡಿಸುವಂತೆ ಮರುತ್ತನು ಸಂವರ್ತನೊಡನೆ ಪ್ರಾರ್ಥಿಸಿಕೊಂಡನು:

"ಮುನಿವರ್ಯ. ಹವಿರ್ಭಾಗವನ್ನು ಕೈಕೊಳ್ಳುವ ದೇವತೆಗಳೇ ಪ್ರತ್ಯಕ್ಷರಾಗಿ ಒಲಿದು ಬಂದಿರಲು, ಅವರಿಗೆ ಸಲ್ಲತಕ್ಕ ಹವಿರ್ಭಾಗವನ್ನು ನಾವು ಸಲ್ಲಿಸಬೇಡವೆ? ಇಂದ್ರನಲ್ಲಿ ನಮಗೆ ಕಲಹವೇಕೆ?"

ಇಂದ್ರಾದಿಗಳ ಗರ್ವಭಂಗ ಮಾಡಿದ ಮೇಲೆ ಅವರನ್ನು ಮುನಿಯು ಬಿಡುಗಡೆಮಾಡಿದನು. ಆ ಮೇಲೆ ಎಲ್ಲಾ ದೇವತೆಗಳೂ ಸಶರೀರರಾಗಿ ಆ ಮಹಾ ಯಜ್ಞದಲ್ಲಿ ಸಹಭಾಗಿಗಳಾದರು. ಹವಿರ್ಭಾಗವನ್ನು ಸಂತೋಷದಿಂದ ಸ್ವೀಕರಿಸಿ ತುಷ್ಟರಾದರು. ಮರುತ್ತನ ಯಾಗವು ಸಂಭ್ರಮಾನ್ವಿತವಾಗಿ ನೆರವೇರಿತು. ಮರ್ತ್ಯಲೋಕವು ಸುವರ್ಣಮಯವಾಯಿತು. ಬ್ರಾಹ್ಮಣರು ದಕ್ಷಿಣೆಯ ದ್ರವ್ಯವನ್ನು ಹೊರಲಾರದೆ ಓಮಗಿರಿಯಲ್ಲಿ ಬಿಟ್ಟುಹೋದರು. ಇಂದ್ರಾದಿದೇವತೆಗಳು ಮರುತ್ತನ ಇಷ್ಟಾರ್ಥಗಳನ್ನು ಸಲ್ಲಿಸಿದರು. ಸಂವರ್ತನಿಗೆ ತನ್ನ ಸರ್ವಸ್ವವನ್ನೂ ರಾಜನು ಅರ್ಪಿಸಿದನು. ಮರುತ್ತನು ಬಹುಕಾಲ ಭೂಮಿಯಲ್ಲಿ ಧರ್ಮಸಾಮ್ರಾಜ್ಯವಾಳಿದನು."

ಮರುತ್ತನ ಯಾಗದ ವಿವರವನ್ನು ಕೇಳಿ ಧರ್ಮಪುತ್ರನು ಸಂತುಷ್ಟನಾದನು. ಆ ಮೇಲೆ, ಅರಸನಿಗೆ ವ್ಯಾಸಋಷಿಯ ಮುಖದಿಂದ ಉತ್ತಮ ಧರ್ಮಸಾರವನ್ನು ಕೇಳಿತಿಳಿವ ಕುತೂಹಲವಾಯಿತು:

"ಮಹರ್ಷಿಯೇ, ದಯಮಾಡಿ ನನಗೆ ಸದ್ಧರ್ಮಸಾರವನ್ನು ತಿಳಿಸಿರಿ; ಯಾವ ಮನುಷ್ಯನು ಯಾವ ಕೃತ್ಯಗಳನ್ನು ಮಾಡಿದರೆ ಕೀರ್ತಿವಂತನೆನಿಸಿ, ಪರಮ ಪದವಿಯನ್ನು ಪಡೆಯುವವನು ಎಂದು ತಿಳಿಸಿ ಕೃತಾರ್ಥನನ್ನಾಗಿ ಮಾಡಿರಿ"

ಧರ್ಮಪುತ್ರನಿಗೆ ವ್ಯಾಸಮಹರ್ಷಿಯು ಇಂತು ಧರ್ಮಸಾರವನ್ನರುಹಿದನು:

"ಧರ್ಮಪುತ್ರನೇ, ಸರ್ವವೇದಗಳ ಬೋಧೆಯನ್ನು ತಿಳಿದು, ಎಲ್ಲಾ ಕಾಲಕ್ಕೂ ಸತ್ಕರ್ಮವನ್ನು ಮಾಡುತ್ತಿದ್ದು, ವಿಷಯಸುಖವಿಮುಖನಾಗಿ, ಲೋಕಾಪವಾದರಹಿತನಾಗಿ, ಪರದ್ರವ್ಯಲಾಲಸೆಯಿಲ್ಲದೆ, ಸದಾಚಾರದಿಂದ ನಡೆಯುವವನೇ ಬ್ರಾಹ್ಮಣನು. ವರ್ಣಾಶ್ರಮಧರ್ಮಗಳನ್ನು ತಿಳಿದು, ಅವರವರ ಯೋಗ್ಯತೆ ಪ್ರಕಾರ ಪರಿಪಾಲಿಸಿಕೊಂಡು, ಯುದ್ಧದಲ್ಲಿ ಓಮ್ಮೆಟ್ಟದೆ, ತನ್ನನ್ನು

ತಾನು ತಿಳಿದವನಾಗಿ. ಪ್ರಜೆಗಳನ್ನು ಪ್ರೀತಿಯಿಂದ ಪಾಲಿಸುವವನನ್ನು ಕ್ಷತ್ರಿಯ ಶ್ರೇಷ್ಠನೆನ್ನುವರು. ಕೆಟ್ಟಮಾತುಗಳನ್ನಾಡದೆ, ಅತಿಥಿಅಭ್ಯಾಗತರನ್ನು ಆದರದಿಂದ ಸತ್ಕರಿಸುವವನೂ, ಅತುಲೈಶ್ವರ್ಯದಿಂದೊಡಗೂಡಿ, ಕೃಷಿವಾಣಿಜ್ಯಗಳನ್ನು ಮಾಡಿ ಸ್ವಧರ್ಮನಿರತನಾಗಿರುವವನೂ ವೈಶ್ಯೋತ್ತಮನೆನಿಸುವನು. ಸರ್ವವರ್ಣದವರನ್ನೂ ಸಮಭಾವದಿಂದ ಗೌರವಿಸಿ, ದೈವ ಭಕ್ತಿಯಿಂದ ನಡೆಯುವ ಸತ್ಪುರುಷನು ಶೂದ್ರನೆನಿಸಿ ಕೀರ್ತಿ ಹೊಂದುವನು. ಇವರೆಲ್ಲರೂ ಇಹಪರಗಳಲ್ಲಿ ಉನ್ನತಿಯನ್ನು ಪಡೆಯುವರು.

"ಸ್ತ್ರೀಯಾದವಳು ಸತ್ಕುಲಜೆಯಾಗಿ, ಪತಿಪರಾಯಣೆಯಾಗಿ, ಸಚ್ಚರಿತ್ರೆಯಾಗಿ, ಸದ್ಗುಣಸಂಪನ್ನೆಯಾಗಿ, ಅಪವಾದರಹಿತೆಯಾಗಿ, ಮಂದಗಮನೆಯಾಗಿ, ಶಾಂತಸ್ವಭಾವದವಳಾಗಿ ಸೌಮಂಗಲ್ಯದಿಂದ ಶೋಭಿಸಬೇಕು. ಅತ್ತೆ ಮಾವಂದಿರನ್ನು ಗೌರವಬುದ್ಧಿಯಿಂದ ಕಾಣಬೇಕು. ಸನ್ಮಾರ್ಗ ಸೌಶೀಲ್ಯದಿಂದ ಮೆರೆವ ಮಾನಿನಿಯು ಸದ್ಗತಿಯನ್ನು ಹೊಂದುವಳು. ದುರ್ಜನರನ್ನು ಸರ್ವರೂ ದೂರವಿಡಬೇಕು. ಅಕೃತ್ಯಗಳನ್ನು ಮಾಡುತ್ತಾ ದುರ್ಮಾರ್ಗ ಪ್ರವರ್ತಕನಾದ ಬ್ರಾಹ್ಮಣನು ಚಂಡಾಲನಿಗಿಂತ ಕ್ಷುಲ್ಲಕನೆನಿಸುವನು. ಪ್ರಾಣಿದಯೆಯಿಂದ ಕೂಡಿ, ಸತ್ಯವನ್ನು ಬಿಡದೆ, ನಿತ್ಯಕರ್ಮಾನುಷ್ಠಾನದಿಂದ ಶುಚಿಯಾಗಿರುವವರಿಗೆ ಸೌಭಾಗ್ಯ ಹೆಚ್ಚುವುದು. ಲೋಕದಲ್ಲಿ ಅನ್ನದಾನಕ್ಕಿಂತ ಮಿಗಿಲಾದ ದಾನವಿಲ್ಲ. ಎಲ್ಲರಲ್ಲಿಯೂ ಮಧುರವಾದ ಮಾತನಾಡುತ್ತಾ, ಉಪಕಾರಸ್ಮರಣೆಮಾಡುತ್ತಾ, ದಾನಿಯಾಗಿರುತ್ತಾ, ಅಭಿಮಾನಿಯೆನಿಸುತ್ತಾ, ಧರ್ಮಪ್ರವರ್ತಕನಾಗಿ ನಡೆಯುವವನು ಉತ್ತಮನು. ದುರ್ಮಾರ್ಗಿಗಳಾದವರು ಪಾತಕಿಗಳೆನಿಸುವರು. ಅವರಿಗೆ ಇಹ ಪರಗಳಲ್ಲಿ ಸಂಖಗಳು ದೊರೆಯಲಾರವು."

ವೇದವ್ಯಾಸಋಷಿಯ ಧರ್ಮಭೋಧೆಯಿಂದ ಧರ್ಮಪುತ್ರನ ಅಂತರಂಗವು ನಿರ್ಮಲವಾಯಿತು. ಆ ಮೇಲೆ ಮುನಿಯು, ಯಾಗ ಕಾಲವು ಸಮೀಪಿಸಿದುದರಿಂದ, ಹಿಮಗಿರಿಯಲ್ಲಿರುವ ಧನಕನಕರಾಶಿಯನ್ನು ತರಿಸಬೇಕೆಂದೆನಲು, ಧರ್ಮಪುತ್ರನು ವೇದವ್ಯಾಸರೊಡಗೂಡಿ, ತಮ್ಮಂದಿರೊಂದಿಗೆ, ಸೈನ್ಯಸಮೇತನಾಗಿ ಹೊರಟು, ಹಿಮಾಲಯದ ದಿವ್ಯಸ್ಥಳವನ್ನು ಸಂದರ್ಶಿಸಿ ಅಲ್ಲಿರುವ ದ್ರವ್ಯರಾಶಿಯನ್ನೆಲ್ಲಾ ಹೊರೆಹೊರೆಯಾಗಿ ಹೊರಿಸಿ ತಂದನು. ಯಾಗವನ್ನು ಪ್ರಾರಂಭಿಸುವರೆ ಶ್ರೀಕೃಷ್ಣನ ಸಲಹೆಯನ್ನು ಪಡೆಯಬೇಕೆಂದು ಭೀಮಸೇನನನ್ನು ದ್ವಾರಾವತಿಗೆ ಕಳುಹಿಸಿ ಆತನನ್ನು ಬರಮಾಡಿಸಿಕೊಂಡನು. ದ್ವಾರಾವತಿಯಿಂದ ದೇವಕೀವಸುದೇವರೂ, ರುಕ್ಮಿಣಿ ಮೊದಲಾದ ಅಷ್ಟಮಾಂಗನೆಯರೂ, ಬಲರಾಮಸಾತ್ಯಕಿ

ಸಮೇತ ಸಮಸ್ತಯಾದವರೂ ಯುಧಿಷ್ಠಿರನ ಅಶ್ವಮೇಧ ಯಾಗಾರಂಭದ ಸಂಭ್ರಮವಲ್ಲಿ ಸಹಭಾಗಿಗಳಾಗಲು ಗಂಗಾನದಿಯ ತಟದಲ್ಲಿ ಬಂದು ಬೀಡು ಬಿಟ್ಟಿದ್ದರು. ಯುಧಿಷ್ಠಿರನು ಯಜ್ಞಾಶ್ವದೊಡನೆ. ಸೋದರ ಸಮೇತನಾಗಿ, ಮಂಗಳವಾದ್ಯವು ಮೊಳಗುತ್ತಿರಲು. ನೃತ್ಯಗೀತಗಳ ವಿಲಾಸದಿಂದ ಅವರನ್ನು ಇದಿರ್ಗೊಂಡನು. ವಿಶೇಷ ಲಕ್ಷಣ ಸಮನ್ವಿತವಾದಾದ್ವಿವ್ಯಾಶ್ವನ್ನು ದ್ವಾರಾವತಿಯ ಜನಜಂಗುಳಿ ಕೌತುಕದಿಂದ ನೋಡುತ್ತಿತ್ತು. ಸ್ತ್ರೀಯರುಂ ಅದನ್ನು ಪುಷ್ಪಾಭರಣಗಂಧಾಕ್ಷತೆಗಳಿಂದ ಪೂಜಿಸುತ್ತಿದ್ದರು.

ಅಷ್ಟರಲ್ಲಿ ಒಂದು ವಿಚಿತ್ರವು ನಡೆಯಿತು. ಸಾಲ್ವನ ತಮ್ಮನಾದ ಅನುಸಾಲ್ವನೆಂಬವನು. ಶ್ರೀಕೃಷ್ಣನ ಮೇಲಿನ ಪೂರ್ವವೈರಕ್ಕಾಗಿ, ಮೋಸದಿಂದ ಆ ಯಜ್ಞಾಶ್ವವನ್ನು ಎತ್ತಿಕೊಂಡು ಹೋದನು. ಆತನೊಡನೆ ಯಾದವ ಪಾಂಡವ ಸೈನ್ಯಕ್ಕೆ ಘೋರ ಸಂಗ್ರಾಮವಾಯಿತು. ಮಹಾಮಾಯಾವಿಯೂ, ಪ್ರಬಲಪರಾಕ್ರಮಶಾಲಿಯೂ, ಆದ ಅನುಸಾಲ್ವನನ್ನು ಸೋಲಿಸಿ, ಯಜ್ಞಾಶ್ವವನ್ನು ಬಿಡಿಸಿತರಲು, ವೀರಾಧಿವೀರರನೇಕರು ಆತನೊಡನೆ ಇದಿರಾಗಿ ವಿಫಲರಾದರು. ಕೊನೆಗೆ ವೃಷಕೇತುವಿನ ಹರಿತವಾದ ಶರಘಾತಕ್ಕೆ ಅನುಸಾಲ್ವನು ಸೋತುಹೋದನು. ಸೋತ ಮೇಲಾತನಿಗೆ ಬುದ್ಧಿ ಬಂದಿತು. ಶ್ರೀಕೃಷ್ಣನನ್ನು ಅನುಸಾಲ್ವನು ಮರೆಹೊಕ್ಕನುಂ. ಅವನಿಗೆ ಶ್ರೀಕೃಷ್ಣನು ದೈವ ದ್ರೋಹ ಬುದ್ಧಿಯನ್ನು ಬಿಟ್ಟು, ಯುಧಿಷ್ಠಿರನ ಯಾಗಕ್ಕೆ ನೆರವಾಗಬೇಕೆಂದು ಆಜ್ಞಾಪಿಸಲು, ಅದಕ್ಕಾತನು ಒಪ್ಪಿದನು. ಅನಂತರ ಯಾದವಸೇನಾಸಮೇತನಾಗಿ ಯುಧಿಷ್ಠಿರನು ಸಸಂಭ್ರಮದಿಂದ ಹಸ್ತಿನಾವತಿಯನ್ನು ಪ್ರವೇಶಿಸಿದನು.

ಅಶ್ವಮೇಧಯಾಗವನ್ನು ಪ್ರಾರಂಭಿಸುವ ಶುಭಮುಹೂರ್ತವು ಸನ್ನಿಹಿತವಾಯಿತು. ಆ ಯಜ್ಞಕ್ಕೆ ಅನುಕೂಲವಾದ ವಸಂತರ್ತು ಸಂಭವಿಸಿತು. ಪಾವನೆಯಾದ ಗಂಗಾನದಿಯ ತಟದಲ್ಲಿ ಶಾಸ್ತ್ರಪ್ರಮಾಣದಂತೆ ಸಮಸ್ತಋಷಿಗೋತ್ರದ ಮುನಿಗಳೆಲ್ಲರನ್ನೂ ಬರಮಾಡಿಸಿ, ಅವರ ಅನುಜ್ಞೆ ಪಡೆದು, ಆ ಯಾಗದ ಸೂತ್ರವಿಧಿಪ್ರಕಾರ ಶೋಭಿಸುವ ಬಹಿಃಕ್ಷೇತ್ರದ ಯಾಗಶಾಲೆಯಲ್ಲಿ ಯುಧಿಷ್ಠಿರನು ದೀಕ್ಷೆಯನ್ನು ತಳೆದನು; ಚೈತ್ರಶುಕ್ಲಪೌರ್ಣಮಾಸಿಯ ದಿನದಂದು ಯಜ್ಞಾಶ್ವವನ್ನು ಪೂಜಿಸಿದ ಮೇಲೆ, "ಚಂದ್ರವಂಶದಲ್ಲಿ ಶ್ರೇಷ್ಠನಾದ ಪಾಂಡುರಾಜಪುತ್ರನಾದ ಯುಧಿಷ್ಠಿರ ಮಹಾರಾಜನ ಯಾಗದ ಕುದುರೆಯಿದು; ಇದನ್ನು ಭೂಮಿಯಲ್ಲಿ ಪರಾಕ್ರಮಿಗಳಾರಾದರೂ ಇದ್ದರೆ ಕಟ್ಟಿ ಹಾಕಲಿ" ಎಂದು ಲಿಪಿಯನ್ನು ಬರೆದು ಬಂಗಾರದ ಪಟ್ಟವನ್ನು ಅದರ ಹಣೆಗೆ ಕಟ್ಟಿ, ನಿರ್ಮಲವಾದ

ವಸ್ತ್ರಾಭರಣಗಳಿಂದಲೂ, ದಿವ್ಯಗಂಧಮಾಲ್ಯಾಕ್ಷತೆಗಳಿಂದಲೂ ಆ ದಿವ್ಯಾಶ್ವವನ್ನು ಅಲಂಕರಿಸಿ ಶುಭಮುಹೂರ್ತದಲ್ಲಿ ಅದನ್ನು ಭೂಸಂಚಾರಕ್ಕಾಗಿ ಬಿಟ್ಟರು.

ಯಾಗದೀಕ್ಷಿತನಾದ ಯುಧಿಷ್ಠಿರನು ಕಠಿಣವಾದ ಅಸಿಧಾರಾ ವ್ರತವನ್ನು ಕೈಕೊಂಡನು. ಆ ಯಾಗವು ಮುಗಿವ ಒಂದು ವರ್ಷದ ಅವಧಿಯ ತನಕ ಆತನು ಯಜಮಾನದೀಕ್ಷೆಯನ್ನು ವಹಿಸಿದನು. ಶ್ರೀಕೃಷ್ಣನ ಆಜ್ಞೆಯಂತೆ, ಆ ಯಜ್ಞಾಶ್ವದ ರಕ್ಷಣೆಗಾಗಿ, ಅರ್ಜುನನೊಂದಿಗೆ ಪರಾಕ್ರಮಿಯಾದ ಅನುಸಾಲ್ವ, ಸಾತ್ಯಕಿ, ಪ್ರದ್ಯುಮ್ನ, ಕೃತವರ್ಮ, ಯೌವನಾಶ್ವ, ವೃಷಕೇತು ಮೊದಲಾದ ವೀರರು ಚತುರಂಗಸೇನಾಸಮೇತರಾಗಿ ಹೊರಡಲನುವಾದರು. ಅರ್ಜುನನು, ದೇವತಾರ್ಚನೆಗೈದು, ಹಿರಿಯರಿಗೆ ವಂದಿಸಿ, ಮುನಿಗಳ ಹರಕೆ ಪಡೆದು, ಶ್ರೀಕೃಷ್ಣನ ಪಾದಕ್ಕೆರಗಿ, ಸುವಾಸಿನಿಯರ ಸೇಸೆವೆತ್ತು, ವಂದಿಮಾಗಧರ ಜಯರವದೊಡನೆ, ಮಂಗಳವಾದ್ಯ ಮೊಳಗುತ್ತಿರಲು, ಯಜ್ಞಾಶ್ವದ ರಕ್ಷಣೆಗಾಗಿ ಸೇನಾಪರಿವಾರ ಸಮೇತನಾಗಿ ಹೊರಟನು. ಯಜ್ಞತುರಗವು ಮುಂದೆ ಸಾಗಿತು; ಅರ್ಜುನಾದಿ ಮಹಾವೀರರು ಹಿಂಬಾಲಿಸಿ ಹೋದರು.

೬

ಮೇರೆತಪ್ಪಿದ ಮಹಾಸಮುದ್ರದಂತೆಯೂ, ನಿಬಿಡತರುಗುಲ್ಮರಾಜಿಯಿಂದ ರಾರಾಜಿಸುವ ವಿಶಾಲಾರಣ್ಯವೇ ನಡೆದು ಬರುವಂತೆಯೂ, ಇಡೀ ಭೂಮಂಡಲವನ್ನೆ ಆವರಿಸಿಕೊಂಡಿರುವ ಅರ್ಜುನನ ಸೇನಾಸನ್ನಾಹವು ಯಜ್ಞಾಶ್ವದ ಬೆಂಗಾವಲಿಗೆ ಹೊರಟು ಬರುತ್ತಿತ್ತು. ಆ ಕುದುರೆಯು ತನ್ನಿಚ್ಛೆಯಂತೆ ನಡೆಯುತ್ತಾ ದಕ್ಷಿಣ ದಿಙ್ಮುಖವಾಗಿ ಸಾಗಿ ಮಾಹಿಷ್ಮತೀ ಪಟ್ಟಣದ ಬಹಿರ್ಭಾಗದ ಒಂದು ಸುಂದರೋದ್ಯಾನವನ್ನು ಪ್ರವೇಶಿಸಿತು.

ಆ ನಗರದ ಒಡೆಯನು ನೀಲಧ್ವಜನೆಂಬವನು. ಅವನ ಪುತ್ರನಾದ ಪ್ರವೀರನು ತನ್ನ ಪ್ರಿಯಪತ್ನಿ ಮದನಮಂಜರಿಯೊಡಗೂಡಿ ಸಖೀಜನ ಸಮೇತ ಉದ್ಯಾನಕೇಳಿಗೆ ಬಂದಿದ್ದನು. ಹೂಗಳನ್ನು ಕೊಯ್ಯುತ್ತಾ ಗೆಳತಿಯರೊಡನೆ ವಿಹರಿಸುತ್ತಿದ್ದ ಮದನಮಂಜರಿಯು ಆ ಉಪವನದಲ್ಲಿ ಬಂದು ನಿಂತಿದ್ದ ಒಂದು ವಿಶೇಷಾಶ್ವವನ್ನು ಕಂಡಳು. ಆಕೆ ಹಯದ ಹತ್ತಿರ ಹೋಗಿ, ಅದರ

ಹಣೆಗೆ ಕಟ್ಟಿದ ಲಿಖಿತವನ್ನೋದಿ ನೋಡಿದಳು. ಅದರಲ್ಲಿ ಬರೆದಿದ್ದ ಯುಧಿಷ್ಠಿರನ ಅಗ್ಗಳಿಕೆಗಾಗಿ ನಸುನಕ್ಕಳು. ತನ್ನ ಪತಿಯೆಡೆಗೆ ಬಂದು ಆ ಕುದುರೆಯ ಮತ್ತು ಅದರ ಹಣೆಯ ವಿಶೇಷ ಲಿಖಿತದ ವಿಷಯಗಳನ್ನು ವಿಸ್ತರಿಸಿ ಹೇಳಿದಳು. ಆತನೂ ಆ ಒಕ್ಕಣೆಯನ್ನೋದಿ ಸಿಟ್ಟುಗೊಂಡನು. ಕುದುರೆಯನ್ನು ಕಟ್ಟಿ ಹಾಕಿದನು. ಸ್ತ್ರೀಯರನ್ನೆಲ್ಲಾ ಅರಮನೆಗೆ ಕಳುಹಿಸಿ ತನ್ನ ಪರಿವಾರವನ್ನು ಕರೆಯಿಸಿ ಅರ್ಜುನನೊಡನೆ ಕಾದಲು ಅನುವಾದನು.

ನೀಲಧ್ವಜನಿಗೆ ಅಗ್ನಿಯೇ ಮನೆಯಳಿಯನು. ಅರಸನ ಮಗಳು ಮೂರು ಲೋಕದಲ್ಲಿಯೂ ತನ್ನನ್ನು ಕೈಹಿಡಿವ ಯೋಗ್ಯತೆಯುಳ್ಳ ಸೌಂದರ್ಯಶಾಲಿ ಯೋವನನ್ನೂ ಕಾಣದೆ, ಅಗ್ನಿಯನ್ನು ಪೂಜಿಸಿ ಮೆಚ್ಚಿಸಿ ಆತನನ್ನೆ ಮದುವೆ ಯಾಗಿದ್ದಳು. ಅಂದು ಮೊದಲ್ಗೊಂಡು, ಅಗ್ನಿಯು ಅರಮನೆಯಲ್ಲಿಯೇ ಬಂದು ವಾಸವಾಗಿದ್ದನು. ಹಾಗಾಗಿ, ಅಗ್ನಿಯ ಸಹಾಯದ ಬಲವೂ ಅವನಿ ಗಿದ್ದಿತು. ಇಂತು ಧೈರ್ಯವುಳ್ಳ ಪ್ರವೀರನು ಅರ್ಜುನನ ಕುದುರೆಯನ್ನು ಹಿಡಿದು ಕಟ್ಟಿ ಕಾದಲನುವಾಗಿದ್ದನು. ತನ್ನ ಪುತ್ರನು ಅರ್ಜುನನೊಡನೆ ಕಾದಲು ನಿಂತ ಸುದ್ದಿಯನ್ನು ಕೇಳಿ ನೀಲಧ್ವಜನೂ ಆತನ ಸಹಾಯಕ್ಕಾಗಿ ಬಂದನು.

ಭೀಷಣಯುದ್ಧವು ಪ್ರಾರಂಭವಾಯಿತು. ನೀಲಧ್ವಜನೊಡನೆ ಅರ್ಜುನನೂ, ಪ್ರವೀರನೊಡನೆ ವೃಷಕೇತುವೂ ಇದಿರಿದಿರಾಗಿ ಸೆಣಸಿದರು. ಅರ್ಜುನನ ನಿಶಿತ ಶರಹತಿಗೆ ನೀಲಧ್ವಜನು ಕಂಗೆಡಲು ಆತನ ಸಹಾಯಕ್ಕೆ ಅಗ್ನಿಯು ಬಂದನು. ಸುಡುವ ಅಗ್ನಿಯೇ ಕಿಡಿಗೊಂಡು ಕಾದಾಡಿದರೆ ಕೇಳಬೇಕೆ? ಅರ್ಜುನನ ಸೇನಾರಣ್ಯವು ಸುಟ್ಟುಸೀಕರಿಹೋಯ್ತು. ಬೆಂಕಿಯ ಬಾಧೆಯನ್ನು ಸಹಿಸ ಲಾರದೆ, ಅರ್ಜುನನು ಅನಲಸೂಕ್ತವನ್ನು ಪಠಿಸಿ ಅಗ್ನಿಯನ್ನು ಮೆಚ್ಚಿಸಲು, ಮಾವನಾದ ನೀಲಧ್ವಜನೊಡನೆ, ಅಗ್ನಿಯು, ಅರ್ಜುನನೊಡನೆ ಯುದ್ಧಬೇಡ ವೆಂದೂ ಆತನ ಕುದುರೆಯನ್ನು ಬಿಟ್ಟುಕೊಡುವುದೆಂದೂ ಹೇಳಿ ಹೊರಟು ಹೋದನು.

ಅಗ್ನಿಯ ಆದೇಶದಂತೆ ನೀಲಧ್ವಜನು ತನ್ನ ಪಟ್ಟಣಕ್ಕೆ ಮರಳಿಬಂದು ಅರ್ಜುನನ ಕುದುರೆಯನ್ನು ಬಿಟ್ಟುಕೊಡುವ ಸಿದ್ಧತೆ ಮಾಡುತ್ತಿದ್ದನು. ಇದನ್ನು ಕಂಡು ಆತನ ಹೆಂಡತಿ ಜ್ವಾಲೆಯೆಂಬವಳು ಬಂದು, ಅರ್ಜುನನಿಗೆ ಹೆದರಿ ಕುದುರೆಯನ್ನು ಬಿಟ್ಟುಕೊಡಕೂಡದೆಂದು ಪತಿಯನ್ನು ತಡೆದಳು. ನೀಲಧ್ವಜನು ಪತ್ನಿಯ ಮಾತನ್ನು ಮೀರಲಾರದವನಾಗಿ, ಯುದ್ಧಮಾಡದೆ ಕುದುರೆಯನ್ನು ಬಿಡಲಾಗುವುದಿಲ್ಲವೆಂದು ಅರ್ಜುನನಿಗೆ ಹೇಳಿಕಳುಹಿಸಿದನು. ಹೀಗಾಗಿ ಅರ್ಜುನ

ನೀಲಧ್ವಜರಿಗೆ ಪುನಃ ಸಂಗ್ರಾಮ ನಡೆಯಿತು. ಆ ಯುದ್ಧದಲ್ಲಿ ನೀಲಧ್ವಜನ ಸುತನೂ ಸತ್ತುಹೋದನು; ಮಂತ್ರಿಬಾಂಧವರೂ ಹಲವರು ಮಡಿದರು. ನೀಲಧ್ವಜನೂ ಕಾದಿ ಮೂರ್ಛಿತನಾದನು.

ಮೂರ್ಛಿತನಾದ ರಾಜನನ್ನು ರಥದ ಮೇಲಿರಿಸಿಕೊಂಡು ಸಾರಥಿ ಪಟ್ಟಣಕ್ಕೆ ಮರಳಿತಂದನು. ಅಷ್ಟರಲ್ಲಿ ಹೊಳಲಿನ ಹೊರಬಾಗಿಲುಗಳು ಭದ್ರವಾಗಿ ಬಿಗಿದಿದ್ದವು. ಕೋಟೆಕೊತ್ತಳಗಳ ಕಾವಲು ಬಲಿದಿದ್ದಿತು. ಮೂರ್ಛೆ ತಿಳಿದೆದ್ದ ಅರಸನು, ಜ್ವಾಲೆಯ ಹಠದಿಂದಾಗಿ ತನಗೊದಗಿದ ಪರಾಭವಕ್ಕೆ ಪರಿತಪಿಸಿ. ಅವಳ ದೆಸೆಯಿಂದ ತನ್ನ ಸುತಸಹೋದರಾದಿಗಳು ಅಳಿದರೆಂದು ಆಕೆಯನ್ನು ಬಗೆಬಗೆಯಾಗಿ ಶಪಿಸಿದನು. ತನ್ನ ವಂಶವನ್ನು ಕೆಡಿಸುವ ದುರ್ಬೋಧನೆಯಿತ್ತ ಪ್ರತಿಕೂಲೆಯಾದ ಪತ್ನಿಯನ್ನು ಅರಮನೆಯಲ್ಲಿರಿಸಬಾರದೆಂದು ಆಕೆಯನ್ನು ಅಲ್ಲಿಂದ ಹೊರವಡಿಸಿ ನೀಲಧ್ವಜನು ಯಜ್ಞಾಶ್ವವನ್ನು ಅರ್ಜುನನಿಗೆ ತಂದು ಒಪ್ಪಿಸಿದನು. ಮುಂದೆ ಕುದುರೆಯು ತೆಂಕುಮುಖವಾಗಿ ಸಾಗಿತು, ನೀಲಧ್ವಜನು ಅರ್ಜುನನಿಗೆ ಬೆಂಬಲಿಗನಾಗಿ ಹೊರಟನು.

ಅರ್ಜುನನು ತನ್ನ ಸುತರನ್ನು ಕೊಂದ ಕೋಪ ಒಂದು ಕಡೆ; ತನ್ನವರಿಗೆ ಯುದ್ಧದಲ್ಲಿ ಪರಾಭವವಾದ ಪಶ್ಚಾತ್ತಾಪ ಇನ್ನೊಂದೆಡೆ; ತನ್ನನ್ನು ಪತಿಯು ಅರಮನೆಯಿಂದ ಹೊರಡಿಸಿದ ಅವಮಾನ ಬೇರೊಂದೆಡೆ. ಇದರಿಂದ ಕ್ರುದ್ಧೆಯೂ, ದ್ವೇಷಬದ್ಧೆಯೂ ಆದ ಜ್ವಾಲೆಯು ಅರಮನೆಯಿಂದ ಹೊರಹೊರಟು ಹೋದಳು. ಉನ್ಮುಖನೆಂಬ ತನ್ನ ತಮ್ಮನಿದ್ದಲ್ಲಿಗೆ ಬಂದಳು. ಅವನೊಡನೆ, ಅರ್ಜುನನು ತನ್ನ ಮಕ್ಕಳನ್ನು ಕೊಂದನೆಂದೂ, ಪತಿಯನ್ನು ಗೆದ್ದನೆಂದೂ, ತನಗೀಪಾಡು ಒದಗಿಸಿದನೆಂದೂ, ರೋದಿಸಿ ತಿಳಿಸಿ, ಈ ಪ್ರತೀಕಾರಕ್ಕಾಗಿ ಅರ್ಜುನನನ್ನು ಕೊಲ್ಲಬೇಕೆಂದು ಹಠಹಿಡಿದು ಹೇಳಿದಳು. ಆತನು ಕೃಷ್ಣನೇ ಬೆಂಬಲಿಗನಾಗಿರುವ ಅರ್ಜುನನೊಡನೆ ತಾನು ಹಗೆಗೊಂಡು ಸರ್ವಥಾ ಹಾಳಾಗಲಾರೆನೆಂದೂ, ರಾವಣನಿಗೆ ದುರ್ಬೋಧನೆಯಿತ್ತು ಆತನನ್ನು ನಿರ್ಮೂಲಗೊಳಿಸಿದ ಮಾಯಕಾತಿಯಾದ ಶೂರ್ಪಣಖೆಯಂತೆ ತನಗೂ ನೀನೂ ದುರುಪದೇಶವೀಯಲು ಬಂದಿದ್ದೀಯೇ ಎಂದೂ ಆಕೆಯನ್ನು ದೂಷಿಸಿ ತನ್ನ ಅರಮನೆಯಿಂದ ಹೊರಹೊರಡಿಸಿದನು.

ಎಲ್ಲಿ ಹೋದರೂ ಜ್ವಾಲೆಗೆ ಅರ್ಜುನನ ಮೇಲಿನ ಪ್ರತೀಕಾರವು ಸಾಧಿಸಲು ಸಾಧ್ಯವಾಗದಾಯಿತು. ತನ್ನ ಪ್ರಯತ್ನಗಳಿಗೆ ಪರಾಭವವೇ ಬಂದೊದಗಿತು. ಹೀಗಾಗಲು, ಜ್ವಾಲೆ ಕೋಪಾವಮಾನಗಳಿಂದ ಕಿಡಿಕಿಡಿಗೊಂಡವಳಾಗಿ ಮುಂದೆ

ಮುಂದಕ್ಕೆ ಸಾಗುತ್ತಿರಲು, ಪರಮಪಾವನೆಯಾದ ಗಂಗಾನದಿಯ ದಡವನ್ನು ಬಂದು ಸೇರಿದಳು. ಅಲ್ಲಿರುವ ನಾವಿಕರೊಡನೆ ಆಕೆ ಕೇಳಿದಳು—

"ನನ್ನನ್ನು ದಯಮಾಡಿ ಈ ಗಂಗೆಯ ನೀರು ಮುಟ್ಟದಂತೆ ದಾಟಿಸುವ ನಾವಿಕರು ನಿಮ್ಮಲ್ಲಿ ಯಾರಾದರೂ ಇದ್ದಾರೆಯೇ?"

ನಾವಿಕರು ಆಕೆಯ ಮಾತಿಗೆ ಅಚ್ಚರಿಗೊಂಡರು.

"ಗಂಗಾಜಲದ ಬಿಂದುಮಾತ್ರಸ್ಪರ್ಶನದಿಂದ ಎಂತಹ ಮಹಾಪಾಪಗಳೂ ಪರಿಹಾರವಾಗುತ್ತಿರಲು. ಇದರಲ್ಲಿ ಮಿಂದವರಿಗೆ ಸದ್ಗತಿಯು ದೊರಕುತ್ತಿರಲು. ನೀನು ಗಂಗಾನದಿಯ ನೀರನ್ನು ಮುಟ್ಟದೆ ದಾಟಿಹೋಗಲು ಏಕೆ ಅಪೇಕ್ಷೆ ಪಡುತ್ತಿಯೇ?"

ಅವರು ಜ್ವಾಲೆಯೊಡನೆ ಕುತೂಹಲದಿಂದ ಕೇಳಿದರು.

"ಗಂಗೆಗೆ ಈಗ ದೋಷತಟ್ಟಿರುವುದು: ಆ ಸಂಗತಿಯನ್ನು ನಾನು ನಿಮ್ಮೊಡನೆ ಹೇಳಲಾರೆನು, ಆಕೆಯೇ ನನಗೆ ಕಾಣಸಿಕ್ಕಿದರೆ ಅವಳೊಡನೆ ತಿಳಿಸುವೆನು."

—ಎಂದು ಜ್ವಾಲೆ ಹೇಳಿದಳು.

ಲೋಕದಲ್ಲಿ ಪಾಪಕ್ಕೆ ಅಂಜದವರುಂಟೆ? ತನಗೆ ದೋಷ ಉಂಟಾಗಿದೆಯೆಂದು ಜ್ವಾಲೆಯು ಹೇಳಿದ ಮಾತನ್ನು ಕೇಳಿ, ಗಂಗೆ ಬೆಚ್ಚಿದಳು, ಬೆದರಿದಳು. ಜ್ವಾಲೆಯು ಮುಂದೆ ಬಂದು ನಿಂತು ಕೇಳಿದಳು—

"ನಾನು ದೋಷಹರೆಯೆಂದು ವೇದಶಾಸ್ತ್ರಗಳೇ ಘೋಷಿಸುತ್ತಿವೆ: ನನ್ನನ್ನು ಮುಟ್ಟಲಾಗದೆಂದು ನೀನು ಹೇಳಲು ಕಾರಣವಾದರೂ ಏನು?"

"ನಾನು ತಪ್ಪು ನುಡಿಯುವವಳಲ್ಲ; ಲೋಕದಲ್ಲಿ ಪುತ್ರರಿಲ್ಲದವರ ಮೈ ಮುಟ್ಟಲಾಗದೆಂದು ಸುಭಾಷಿತವಿದೆ; ಹಾಗಾಗಿ ನಿನ್ನನ್ನು ಮುಟ್ಟಿದರೆ ಪಾಪಸ್ಪರ್ಶವಾಗುವುದೆಂದು ಬೆದರಿದೆನು."

ಇದನ್ನು ಕೇಳಿದ ಗಂಗಾದೇವಿಗೆ ಅಚ್ಚರಿ ಅಧಿಕವಾಯಿತು.

"ಲೋಕದ ಸಮಸ್ತ ಭೂಪಾಲಕರಲ್ಲಿ ಖ್ಯಾತನೂ, ಇಚ್ಛಾಮರಣಿಯೂ, ದೈವಭಕ್ತನೂ, ದೇವತಾಸಮಾನನೂ, ಸತ್ಯಸಂಧನೂ ಆದ ಭೀಷ್ಮನೆಂಬ ಮಗನು ನನಗಿರಲು ನೀನು ನನಗೆ ಪುತ್ರರಿಲ್ಲವೆಂಬುದು ಹೇಳಬಹುದೇ?"

– ಗಂಗೆ ಕನಲಿ ಕೇಳಿದಳು.

"ಅಹುದು, ನೀನು ಇಷ್ಟೊಂದು ಹೇಳಿದುದೆಲ್ಲವೂ ನಿಜ; ಪಾಪ! ನಿನಗೆ ಎಂಟು ಮಕ್ಕಳಾಗಿ, ಅವರಲ್ಲಿ ಒಬ್ಬನು ಮಾತ್ರ ಉಳಿದುದನ್ನೂ ನಾನು ಬಲ್ಲೆನು. ಅವನಿಂದಾಗಿಯೇ ಇದುವರೆಗೂ ನಿನ್ನ ಪಾವನಕೀರ್ತಿ ದಿಗ್ದಿಗಂತಗಳನ್ನು ವ್ಯಾಪಿಸಿ

ಬಂದೂ ಸರಿಯೆ. ಆದರೆ ಕೌರವಪಾಂಡವರೆಂಬ ದಾಯಾದ್ಯರೊಳಗೆ ಯುದ್ಧ ಮಸಗಲು ಆ ಕಾಳಗದಲ್ಲಿ ನಿನ್ನ ಮಗನನ್ನು ಅರ್ಜುನನು ಕೊಂದುಹಾಕಿಬಿಟ್ಟನು. ಅದಲ್ಲವಾಗಿದ್ದರೆ ನಿನ್ನ ಪುತ್ರನ ಏಳಿಗೆಗೆ ಒಂದಿಷ್ಟಾದರೂ ಕೊರತೆಯಿತ್ತೇ? ನಿನಗೆ ದೂಷಣತಟ್ಟುತ್ತಿತ್ತೇ?"

ಜ್ವಾಲೆಯು, ಪಿಸುಣಿನ ನಂಜನ್ನು ಗಂಗೆಯ ಹೃದಯಪಾತ್ರದಲ್ಲಿ ಎರೆದು ಅಲ್ಲಿಂದ ಕೂಡಲೇ ಕಾಲ್ಕಿತ್ತಳು !

ಒಣಗಿದ ಮರದ ಕಾಳ್ಗಿಚ್ಚು ಹಸುರೆಲೆಯ ಮರವನ್ನು ಉರಿಸಿದಂತಾಯಿತು. ಜ್ವಾಲೆಯ ಕೋಪದೊಡನೆ ಗಂಗಾದೇವಿಯ ಮುನಿಸು ಮಸಗಿತು.

"ನನ್ನ ಮಗನಾದ ಭೀಷ್ಮನನ್ನು ಕೊಂದ ಅರ್ಜುನನ ತಲೆಯನ್ನು ತಿಂಗಳ ಅವಧಿಯೊಳಗೆ ಆತನ ಮಗನೇ ಕೊಚ್ಚಿ ಕೆಡಹಲಿ."

ಗಂಗೆ ಕ್ರುದ್ಧಳಾಗಿ ಅರ್ಜುನನಿಗೆ ಶಾಪವಿತ್ತು ಅಂತರ್ಧಾನ ಹೊಂದಿದಳು. ಹೃದಯದಲ್ಲಿ ಪ್ರತೀಕಾರದ ವಿಷಕುಂಭವನ್ನು ಹುದುಗಿಸಿಟ್ಟುಕೊಂಡ ಜ್ವಾಲೆ ಇಷ್ಟನ್ನು ಸಾಧಿಸಿದ ನಂತರವೂ ಸುಮ್ಮಗಿರಲಿಲ್ಲ. ಅರ್ಜುನನ ತಲೆಯನ್ನು ತುಂಡರಿಸುವ ನಿಶಿತಾಸ್ತ್ರವಾಗುವೆನೆಂದು ನಿಶ್ಚಯಿಸಿ ಗಂಗಾನದಿಯ ತೀರದಲ್ಲಿ ತನಗಾಗಿ ತಾನೇಗೈದ ಚಿಂತೆಯ ರಾಶಿಯ ಧಗಧಗಿಸುವ ಜ್ವಾಲೆಗೆ ತನ್ನನ್ನೇ ಆಹುತಿಮಾಡಿಕೊಂಡು ಬಭ್ರುವಾಹನನ ಬತ್ತಳಿಕೆಯಲ್ಲಿ ಬಾಣವಾಗಿ ಇಂಬುಗೊಂಡಳು.

ಯಜ್ಞಾಶ್ವವು ದಕ್ಷಿಣಾಭಿಮುಖವಾದ ತನ್ನ ಸಂಚಾರವನ್ನು ಮುಂದೆ ಸಾಗಿಸುತ್ತಿರಲು ಅರ್ಜುನನು ನೀಲಧ್ವಜಾದಿಗಳೊಡನೆ ಸೇನಾಜಲಧಿಸಮೇತ ಅದರ ಬೆಂಬಳಿಯೆ ಹೊರಟನು. ಮಖತುರಗವು ಮಹಿಮೋನ್ನತವಾದ ವಿಂಧ್ಯಘನಗಿರಿಯನ್ನು ಪ್ರವೇಶಿಸಲು, ಅಲ್ಲಿ ಯೋಜನದಗಲದಿಂದ ಶೋಭಿಸುವ ಶಿಲಾರಾಶಿಯೊಂದನ್ನು ಕಂಡು, ಅದರಲ್ಲಿ ಹೊರಳಾಡಬೇಕೆಂದು ಹಾರಿ ಬರುತ್ತಿರಲು ಆ ಘೋರ್ಗಲ್ಲಿನ ಮೇಲೆ ಕಾಲಿಟ್ಟೊಡನೆ ಅದರ ಗೊರಸು ಕಲ್ಲಿನೆಡೆಯಲ್ಲಿ ಕೀಲಿಸಿತು ! ಕೆತ್ತಿದ ಪ್ರತಿಮೆಯಂತೆ ಕುದುರೆ ಅಲುಗಾಡದೆ ನಿಂತುಬಿಟ್ಟಿತು ! ಆ ಮಹಾಶ್ಚರ್ಯವನ್ನು ಚರರು ಬಂದು ಅರ್ಜುನನಿಗರುಹಿದರು. ಅರ್ಜುನನೂ ಅಚ್ಚರಿಗೊಂಡು ಬಂದು, ವಜ್ರಲೇಪವಾದಂತೆ ಕಲ್ಲೆಡೆಯಲ್ಲಿ ಕೀಲಿಸಿದ ಕುದುರೆಯ ನಿಸ್ಸಹಾಯಕಸ್ಥಿತಿಯನ್ನು ಕಂಡು ಕಳವಳಗೊಂಡನು.

ಅರ್ಜುನನು ಚಿಂತಿಸಿದನು: ಇದು ಯಾವನಾದರೂ ಮುನಿಯ ಶಾಪವಿರಬೇಕೆಂದು ಆತನು ನಿಶ್ಚಯಿಸಿ, ಹತ್ತಿರದಲ್ಲಿಯೇ ಯಾವುದಾದರೂ ಆಶ್ರಮವಿರು

ವುದೇ ಎಂದು ಹಂಬಲಿಸುತ್ತಿರಲು ದಾರಿಯಲ್ಲಿ ಸೌಭರಿಋಷಿಯ ಪುಣ್ಯಾಶ್ರಮವೊಂದು ಗೋಚರಿಸಿತು. ಅರ್ಜುನನು ಆಶ್ರಮವನ್ನು ಹೊಕ್ಕು ಋಷಿಯ ಪಾವನಪಾದಗಳಿಗೆ ವಂದಿಸಿ ಯುಧಿಷ್ಠಿರನು ಗೋತ್ರಹತ್ಯಾದೋಷ ಪರಿಹಾರಕ್ಕಾಗಿ ಅಶ್ವಮೇಧಯಾಗವನ್ನು ಕೈಗೊಂಡಿರಲು, ತಾನು ಯಜ್ಞಾಶ್ವವನ್ನು ಹಿಂಬಾಲಿಸಿಕೊಂಡು ಬಂದ ಸಂಗತಿಯನ್ನೂ, ಆ ಕುದುರೆಯ ಕಾಲು ಕಲ್ಲಲ್ಲಿ ಕೀಲಿಸಿದ ಸೋಜಿಗದ ಸುದ್ದಿಯನ್ನೂ ಮುನಿಗೆ ಅರಿಕೆ ಮಾಡಿದನು.

"ಎಲೈ ಮುನೀಶ್ವರ, ನನ್ನ ಮೇಲೆ ಅನುಗ್ರಹಿಸಿ ಶಿಲೆಯಲ್ಲಿ ಸಿಲುಕಿದ ಹಯವನ್ನು ಬಿಡಿಸಿ ನಮ್ಮನ್ನು ರಕ್ಷಿಸಬೇಕು."

— ಇಂತು ಅರ್ಜುನನು ಬಿನ್ನವಿಸಿದನು.

ಅವಕ್ಕೆ ಮುನಿಪತಿಯು, ಕರುಣೆಯಿಂದ ಶ್ರೀಕೃಷ್ಣ ಸ್ಮರಣೆಮಾಡಿ ಕುದುರೆಯನ್ನು ನೀನು ಮುಟ್ಟಿದಿಯಾದರೆ ಅದು ಮುನ್ನಡೆವುದೆಂದು ಹೇಳಿ ಅರ್ಜುನನ ಸಂಕಷ್ಟವನ್ನು ಸಾಂತ್ವನಗೊಳಿಸುವನು. ಇಂತು ಸಂಭವಿಸಿದ ಆಶ್ಚರಿಯ ಘಟನೆಯ ಕಾರಣವೇನೆಂದು ಪುನಃ ಸೌಭರಿಯೊಡನೆ ಅರ್ಜುನನು ಪ್ರಾರ್ಥಿಸಿಕೊಳ್ಳಲು. ಋಷಿಯು ಚಂಡಿ–ಉದ್ದಾಲಕರ ಕೌತುಕದ ಕಥೆಯನ್ನು ಅರ್ಜುನನಿಗೆ ತಿಳಿಸಿದನು

"ಎಲೈ ಅರ್ಜುನನೆ, ಹಿಂದೆ ಅಖಿಲವೇದಶಾಸ್ತ್ರಪಾರಂಗತನಾದ ಉದ್ದಾಲಕನೆಂಬ ಬ್ರಾಹ್ಮಣನೊಬ್ಬನಿದ್ದನು. ಆತನಿಗೆ ಚಂಡಿ ಎಂಬಾಕೆಯು ಪತ್ನಿಯಾಗಿದ್ದಳು.

'ಎಲೆಗೆ, ನೀನು ಕಾಲಕಾಲದಲ್ಲಿ ನಡೆವ ನನ್ನ ಜಪಾನುಷ್ಠಾನ ಪೂಜೆಗಳ ಪರಿಚರ್ಯೆಗೆ ಆಲಸ್ಯವನ್ನು ಮಾಡದೆ ಅನುಕೂಲೆಯಾಗಿದ್ದುಕೊಂಡು ಮನೆವಾಳ್ತೆಯನ್ನು ಸಾಗಿಸಿಕೊಂಡು ಬರತಕ್ಕದ್ದು."

ಹೀಗೆ ಸ್ತ್ರೀಧರ್ಮರಹಸ್ಯವನ್ನು ತನ್ನ ಧರ್ಮಪತ್ನಿಗೆ ಒಮ್ಮೆ ಉದ್ದಾಲಕನು ತಿಳಿಯಹೇಳಿದನು.

'ಎಳ್ಳಷ್ಟೂ ನಿನ್ನ ಮಾತನ್ನು ನಾನು ಕೇಳುವವಳೆಂದು ಎಣಿಸಬೇಡ. ಪರಿಚರ್ಯೆ ಮನೆವಾಳ್ತೆಗಳೆಂಬ ಈ ತಳ್ಳಿಯವಳು ನಾನಲ್ಲ: ನೀನು ಹೇಳಿದುದನ್ನು ಯಾವುದನ್ನೂ ನಾನು ಮಾಡೆನು'

—ಇಂತು ಚಂಡಿಯು ಚಂಡಿಹಿಡಿದು ನಿಷ್ಠುರವಾಗಿ ಹೇಳಿದಳು.

'ಈಕೆಯನ್ನು ನಾನು ಮದುವೆಯಾದದ್ದು, ಮುಳ್ಳು ತುಂಬಿದ ಮರವನ್ನೇರಿದಂತಾಯಿತಲ್ಲಾ'

ಹೀಗೆಂದು ಉದ್ದಾಲಕನು ನಿತ್ಯಚಿಂತೆಯಿಂದ ಕಾಲಕಳೆಯುತ್ತಿದ್ದನು.

ಇಂತಿರಲು ಒಮ್ಮೆ ಕೌಂಡಿನ್ಯನೆಂಬ ಮುನಿಯೋರ್ವನು ಉದ್ದಾಲಕನಲ್ಲಿಗೆ ಬರಲು ಆತನನ್ನು ಉದ್ದಾಲಕನು ಸತ್ಕರಿಸಿದನು. ಪ್ರತಿಕೂಲೆಯಾಗಿರುವ ಪತ್ನಿಯ ಪ್ರವೃತ್ತಿಯಿಂದ ಚಿಂತೆಗಳೊಳಗಾಗಿದ್ದ ಉದ್ದಾಲಕನ ಸುದ್ದಿಯನ್ನು ಕೇಳಿ ಕೌಂಡಿನ್ಯನು ಒಂದು ಉಪಾಯವನ್ನು ಸೂಚಿಸಿದನು—

'ಇನ್ನುಮುಂದೆ ನಿನಗೆ ಆಗಬೇಕಾದುದರ ವಿಪರೀತವನ್ನೇ ಆಕೆಯೊಡನೆ ಹೇಳು. ನಿನ್ನ ಮಾತಿಗೆ ವಿರುದ್ಧವೆಸಗುವ ಆಕೆಯ ಪ್ರವೃತ್ತಿಯ ಕಾರಣದಿಂದ ನಿನಗೆ ಆಗ ಅನುಕೂಲವಾದ ಕಾರ್ಯವನ್ನೇ ಅವಳಿಂದ ಮಾಡಿಸಿದಂತಾಗುವುದಿಲ್ಲವೇ? ನೀನು ಚಿಂತಿಸುವುದೇಕೆ?'

—ಮುನಿಯ ಸೂಚನೆ ಉದ್ದಾಲಕನಿಗೆ ಸರಿಯೆಂದು ತೋರಿತು. ಹಾಗಾಗಿ, ಮುಂದೆ ಆವನು ಅಂತೆಗೈಯುತ್ತಿದ್ದನು.

ಒಮ್ಮೆ ಉದ್ದಾಲಕನ ಪಿತೃಶ್ರಾದ್ಧ ದಿನ ಬಂತು. ಆತನು ಪತ್ನಿಯನ್ನು ಕರೆದು ಹೀಗೆಂದನು—

'ಎಲೆಗೆ. ನಾಳೆ ಪಿತೃಶ್ರಾದ್ಧ ದಿನ: ಅದನ್ನು ನಾನು ನಾಳದು ಅಲ್ಲದೆ ಮಾಡೆನು. ಶ್ರಾದ್ಧದ ಸಲುವಾಗಿ ಕೆಟ್ಟಧಾನ್ಯ. ಅಕ್ಕಿ, ತರಕಾರಿ ಮೊದಲಾದವುಗಳನ್ನು ನಾನು ಕದ್ದು ತರುವೆನು. ಶುದ್ಧ ವಸ್ತುಗಳೊಂದನ್ನು ಇಲ್ಲಿಗೆ ತರಲು ಸರ್ವಥಾ ಬಿಡೆನು. ಶ್ರಾದ್ಧದ ದಿನದ ಮರುದಿನ ಅಪಾತ್ರನಾದವನಿಗೆ ಹೇಳಿಕೆ ಕೊಟ್ಟು ಬರುವೆನು.'

ಗಂಡನು ಹೇಳಿದ್ದಕ್ಕೆ ಪ್ರತಿಕೂಲ ಮಾಡಬೇಕೆಂದು ಚಂಡಿಯ ಸಾಧನೆಯಲ್ಲವೇ? ಚಂಡಿ ಒಡನೆ ಉತ್ತರವಿತ್ತಳು.

'ನಾಳೆಯೇ ನಿಮ್ಮಿಂದ ನಾನು ಶ್ರಾದ್ಧವನ್ನು ಮಾಡಿಸುವೆನು. ಉತ್ತಮವಾದ ಧಾನ್ಯ ಅಕ್ಕಿ ತರಕಾರಿಗಳನ್ನೇ ನಾನು ಕೊಂಡುಬರುವೆನು. ಮನೆಯನ್ನು ಅತಿಶುದ್ಧವಸ್ತುಗಳಿಂದಲೇ ತುಂಬಿಸುವೆನು. ಶ್ರಾದ್ಧದ ಮೊದಲದಿನದ ರಾತ್ರಿಯೇ ವಿಶಾಲ ಗುಣಸಂಪನ್ನರೂ. ವೇದಪಾರಂಗತರೂ. ಸುಶೀಲರೂ. ಸತ್ಪಾತ್ರರೂ ಆದ ಬ್ರಾಹ್ಮಣರಿಗೆ ಹೇಳಿಕೆಕೊಡುವೆನು.'

ಬಿಟ್ಟ ಬಾಣವು ಲಕ್ಷ್ಯದ ಕಡೆಗೆ ನೇರಾಗಿ ಹೋಗುತ್ತಿರುವುದನ್ನು ನೋಡಿ ಉದ್ದಾಲಕನಿಗೆ ಮನದಲ್ಲಿಯೇ ಸಂತೋಷವಾಯಿತು. ಅವರೂ ಪತ್ನಿಯ ಮಾತಿಗೆ ಒಪ್ಪದವನಂತೆ ನಟಿಸುತ್ತಾ ಹೀಗೆಂದನು—

'ಹಾಗಾದರೆ. ನಾನು ಶ್ರಾದ್ಧಮಾಡಲು ಯೋಗ್ಯವಾದ ಕುತುಪಕಾಲವನ್ನು ಮೀರಿಯೇ ಶ್ರಾದ್ಧಮಾಡುವೆನು. ನೀನು ಅಂತಹ ಬ್ರಾಹ್ಮಣರನ್ನು ಬರ

ಮಾಡಿಸಿದರೂ, ನಾನು ಅವರನ್ನು ಸತ್ಕಾರಗಳಿಂದ ಆದರಿಸಲಾರೆನು. ಅವರಿಗೆ ಒಳ್ಳೆಯ ಪಾಕಮಾಡಿದ ಅನ್ನ, ಪಾಯಸ, ಬೆಲ್ಲ, ತುಪ್ಪ, ಜೇನು, ಭಕ್ಷ್ಯಭೋಜ್ಯಗಳನ್ನೂ, ರುಚಿಕರವಾದ ಹಣ್ಣು, ಹಾಲು, ಬೆಣ್ಣೆ, ಮೊಸರು, ತರಕಾರಿ ಮೊದಲಾದುವುಗಳನ್ನು ಯಾವೊಂದೂ ಕೊರತೆಯಿಲ್ಲದೆ ತಯಾರಿಸೆನು. ಪಿತೃ ಶ್ರಾದ್ಧಮಾಡಿ ಆ ಬ್ರಾಹ್ಮಣರಿಗೆ ವಸ್ತ್ರ ದಕ್ಷಿಣೆ ಮೊದಲಾದುವುಗಳನ್ನು ಖಂಡಿತ ಕೊಡಲಾರೆನು.'

ಗಂಡನ ಮಾತನ್ನು ಚಂಡಿ ಕೇಳುವುದುಂಟೆ? ಒಡನೆ ಹೇಳಿದಳು—

'ಹಾಗೋ! ಆದರೆ, ಕುತುಪಕಾಲವನ್ನು ನಾನು ಸರ್ವಥಾ ಮೀರಲು ಬಿಡಲಾರೆನು. ಬಂದ ಬ್ರಾಹ್ಮಣರನ್ನೆಲ್ಲಾ ಆದರಿಸಿ ಪೂಜೆಗೈಸದೆ ಕೇಳುವವಳಲ್ಲ. ನೀವು ಹೇಳಿದ ಅಷ್ಟೆಲ್ಲವನ್ನೂ ನಾನು ಸಂಪಾದಿಸದೆ ಇರಲಾರೆನು. ನಿರ್ಮಲ ವಸ್ತ್ರ ತಾಂಬೂಲಾದಿಗಳಿಂದಲೂ, ಶ್ರೇಷ್ಠರೀತಿಯ ದಕ್ಷಿಣೆಗಳಿಂದಲೂ ವಿಪ್ರರನ್ನು ಸತ್ಕರಿಸಿ ಕಳುಹಿಸದಿರೆನು.'

– ಹೀಗೆ ಹೇಳಿದವಳೇ ಚಂಡಿಯು, ವಿಳಂಬಮಾಡದೆ, ಶ್ರಾದ್ಧಕ್ಕೆ ಬೇಕಾದ ಸದ್ದ್ರವ್ಯಗಳನ್ನೆಲ್ಲಾ ತರಿಸಿ ಪಾಕಕ್ಕೆ ಸಿದ್ಧತೆ ಗೈಯುತ್ತಿದ್ದಳು.

ಚಂಡಿಯ ಈ ಬಗೆಯ ರೀತಿನೀತಿಗಳನ್ನು ಉದ್ದಾಲಕನು ಕಂಡನು. ತಾನು ಬಯಸಿದ ಕಾರ್ಯವು ಇಂತು ಪ್ರತಿಕೂಲೋಕ್ತಿಯ ದೆಸೆಯಿಂದಲಾದರೂ ಸರಿಯಾಗಿಯೇ ಆಗುತ್ತಿರುವುದನ್ನು ನೋಡಿ ಮನಸ್ಸಿನಲ್ಲಿ ಹಿರಿಹಿಗ್ಗಿದನು. ಆದರೂ ಬಹಳ ಎಚ್ಚರಿಕೆಯಿಂದ ಹೊರಗೆ ತಾನು ಆಕೆಯ ಯಾವ ಕೆಲಸಕ್ಕೂ ಒಪ್ಪದವನಂತೆ ನಟಿಸುತ್ತಾ ಇದ್ದನು. ಇಂತು ಚಂಡಿ ಹೇಳಿದ ಹಾಗೆ ಶ್ರಾದ್ಧವನ್ನು ನೆರವೇರಿಸಿದನು. ಪತ್ನಿಯು, ಮಾತಿಗೆ ಪ್ರತಿಕೂಲಳಾದರೂ, ಮನಸ್ಸಿಗೆ ಅನುಕೂಲಳಾಗಿಯೇ ನಡೆಯುತ್ತಿರುವುದರಿಂದ, ಆತನಿಗೆ ಅಂತರಂಗದಲ್ಲಿ ಹಿಡಿಸಲಾರದ ಸಂತೋಷವಾಯಿತು. ಸಂತೋಷದ ಭರದಲ್ಲಿ, ವಿಪರೀತವಾಗಿ ಹೇಳಬೇಕಾದ ಮಾತಿನ ಧಾಟಿ ತಪ್ಪಿಹೋಯಿತು! ಕರ್ಮಾಂಗವಾದ ಪಿಂಡವನ್ನು ತೆಗೆದು ಮಡುವಿನಲ್ಲಿ ಹಾಕೆಂದು ಆತನು ಹೇಳಲು, ಚಂಡಿಯು ಅದನ್ನು ಉದ್ಧಟತನದಿಂದೆತ್ತಿ ಬೀದಿಗೆ ಬಿಸುಟುಬಿಟ್ಟಳು!

ತಾಳ್ಮೆಯ ಕಟ್ಟೆ ಒಡೆಯಿತು! ರೋಷದ ಹೊನಲು ದಡಮೀರಿ ಹರಿಯಿತು!!

'ಎಲೈ ನೀಚಳೆ! ನಿನ್ನೊಡನೆ ನಾನು ಎಷ್ಟೊಂದು ಹೋರಾಟ ಮಾಡಲಿ! ನೀನು ನನ್ನಲ್ಲಿ ಹಠವನ್ನೇ ಸಾಧಿಸಿದೆಯಲ್ಲಾ! ನೀನು ಕಠಿಣ ಶಿಲೆಯಾಗಿಹೋಗು.'

ಸಿಟ್ಟಿನಿಂದ ಕಿಡಿಕಿಡಿಯಾಗಿ ಉದ್ದಾಲಕನು ಇಂತು ಪತ್ನಿಗೆ ಶಾಪವಿತ್ತನು !

ಎಷ್ಟಾದರೂ ಆಕೆ ಅಬಲೆಯಲ್ಲವೇ? ಕೈಹಿಡಿದ ಪತ್ನಿಯಷ್ಟೆ? ಉದ್ದಾಲಕನ ಹೃದಯವು ಮರುಕ್ಷಣವೇ ಕರುಣೆಯಿಂದ ಕರಗಿತು !

'ಕೆಲಕಾಲದಲ್ಲಿ ಶಿಲೆಯಾಗಿ ಬಿದ್ದಿದ್ದ ನಿನ್ನ ಮೇಲೆ, ಯಜ್ಞಾಶ್ವವು ಬಂದು ನಿಲ್ಲಲು, ಅರ್ಜುನನು ಅದನ್ನು ಬಿಡಿಸಿದಾಗ ನಿನಗೆ ಬಿಡುಗಡೆಯಾಗುವುದು.'

-- ಇಂತು ಉದ್ದಾಲಕನು ಮರುಶಾಪವಿತ್ತು ಸನ್ಯಾಸಕ್ಕೆ ನಡೆದನು; ಚಂಡಿ ಶಿಲೆಯಾಗಿ ಬಿದ್ದಳು !

'ಈಗ ಚಂಡಿಗೆ ಮೋಕ್ಷವಾಗುವ ಕಾಲ ಬಂದಿದೆ. ನೀನು ಮುಟ್ಟಿದ ಕೂಡಲೇ ಕುದುರೆಯು ಎದ್ದು ನಡೆಯುವುದು; ಹೋಗು. ಶ್ರೀಕೃಷ್ಣನ ಕೃಪೆಯಿಂದ ಎಲ್ಲವೂ ನಿನಗೆ ಒಳ್ಳೆಯದಾಗುವುದು.'

ಹೀಗೆಂದು ಸೌಭರಿಯು ಚಂಡಿ ಉದ್ದಾಲಕರ ಕಥೆಯನ್ನು ತಿಳಿಸಿದನು. ಆ ಮೇಲೆ ಅರ್ಜುನನು ಹೋಗಿ ಶ್ರೀಕೃಷ್ಣ ಸ್ಮರಣೆಮಾಡಿ ಕುದುರೆಯನ್ನು ಸ್ಪರ್ಶಿಸಲು ಅದು ಮುಂದಕ್ಕೆ ಕಾಲ್ತೆಗೆಯಿತು. ಚಂಡಿ ಹೊಸ ಹುಟ್ಟು ಪಡೆದಳು. ಅರ್ಜುನನ ಉಪಕಾರಗಳನ್ನು ಸ್ಮರಿಸಿ ಆಕೆ ತಪಸ್ಸಿಗೆ ಹೊರಟು ಹೋದಳು. ಇದನ್ನು ನೋಡಿದ ಸಮಸ್ತ ಜನರೂ ವಿಸ್ಮಿತರಾದರು ! ಆಗಸದಿಂದ ಅರಲಮಳೆ ಸುರಿಯಿತು.

೨೫

ಅರ್ಜುನನ ಸೇನಾಸಮೂಹವು ಬೆಂಗಾವಲಿಗಿರಲು, ಯಜ್ಞದ ಕುದುರೆಯು, ದಕ್ಷಿಣದಿಕ್ಕು ಹಿಡಿದು ಸಾಗುತ್ತಾ ಚಂಪಕಾಪುರವನ್ನು ಪ್ರವೇಶಿಸಿತು. ಆ ನಗರಕ್ಕೆ ಹಂಸಧ್ವಜನೆಂಬವನು ಅರಸನಾಗಿದ್ದನು. ಅವನಿಗೆ ಧನುಬಲ, ಚಂದ್ರಸೇನ, ಚಂದ್ರಕೇತು, ವಿಡೂರಥ, ಧರ್ಮವಾಹ, ನ್ಯಾಯಮೂರ್ತಿ ಎಂಬ ಏಳು ಜನ ತಮ್ಮಂದಿರೂ, ಸುದರ್ಶನ, ಸುಧನ್ವ, ಸುಮನ, ಸುರಥರೆಂಬ ನಾಲ್ವರು ಶೂರರಾದ ಪುತ್ರರೂ, ಶಂಖ, ಲಿಖಿತರೆಂಬ ಇಬ್ಬರು ಪುರೋಹಿತರೂ ಇದ್ದರು. ಅರಸನು ಪರಮ ದೈವಭಕ್ತನಾಗಿದ್ದು, ಪ್ರಜೆಗಳೆಲ್ಲರೂ ಪಾಪಭೀರುಗಳೂ, ಸದ್ಗುಣವಿಭೂಷಿತರೂ ಎನಿಸಿದ್ದರು. ಯಜ್ಞಾಶ್ವದ ರಕ್ಷಣೆಗೆ ಅರ್ಜುನನು

ಸೇನಾಸಮೇತನಾಗಿ ಸೀಮೆಯನ್ನು ದಾಟಿದ ಸುದ್ದಿಯನ್ನು ದೂತರ ಮುಖದಿಂದ ಕೇಳಿದ ಹಂಸಧ್ವಜನು. ತನ್ನ ಮನಸ್ಸಿನಲ್ಲಿಯೇ ಒಂದೆರಡುಗಳಿಗೆ ದೇವರನ್ನು ಧ್ಯಾನಿಸಿಕೊಂಡನು. ತನ್ನ ಪ್ರಧಾನಿಗಳಾದ ಶ್ರದ್ಧಾಳು. ಸುಮತಿ. ಪ್ರಮತಿಯರೆಂಬ ಮಂತ್ರಿಗಳನ್ನು ಬರಮಾಡಿಸಿ ಹೀಗೆಂದನು

"ಅರ್ಜುನನ ತುರಗವನ್ನು ನಾವೀಗ ಕಟ್ಟಿದೆವಾದರೆ. ಶ್ರೀಕೃಷ್ಣನು ತಾನಾಗಿಯೇ ನಮಗೆ ಪ್ರತ್ಯಕ್ಷನಾಗುವನು. ಶ್ರೀಕೃಷ್ಣನು ಈ ಭೂಮಿಯಲ್ಲಿ ಅವತರಿಸಿ ಬಂದಿದ್ದರೂ. ನಾವು ಇದುವರೆಗೆ ಆತನ ಮೂರ್ತಿಯನ್ನು ಕಂಡಿಲ್ಲ: ನಮ್ಮ ಶರೀರಕ್ಕೆ ಮುದಿತನ ಬಂದಡಸಿದೆ. ಇನ್ನಾಗತಕ್ಕುದೇನಿದೆ? ಶ್ರೀಕೃಷ್ಣನ ದಿವ್ಯ ದರ್ಶನಮಾಡಿ ಆತನ ಕೈಯಿಂದ ಅಳಿದರೂ ಉಳಿದರೂ ಅದು ನಮಗೆ ಪುಣ್ಯಕರವಲ್ಲವೆ?"

ಅರಸನ ಮಾತಿಗೆ ಮಂತ್ರಿಗಳೂ ಸಮ್ಮತಿಸಿದರು.

ಹಂಸಧ್ವಜನ ಮಹಾಸೇನೆಯು. ಒಬ್ಬೊಬ್ಬ ಸೇನಾಪತಿಯ ಕೈಕೆಳಗೆ ಎಪ್ಪತ್ತೊಂದು ಸಾವಿರ ಮಣಿಮಯ ರಥಗಳೂ. ಎಪ್ಪತ್ತೊಂದು ಸಾವಿರ ಆನೆಗಳೂ. ಲಕ್ಷಸಂಖ್ಯೆಯ ಕುದುರೆಗಳೂ, ಲಕ್ಷಸಂಖ್ಯೆಯ ಕಾಲಾಳುಗಳೂ ಇದ್ದ ಎಪ್ಪತ್ತು ಮಂದಿ ದಳಪತಿಗಳಿಂದ ಕೂಡಿದ್ದಿತು.

ಅಂತಹ ಮಹಾಸೈನ್ಯವನ್ನು ಕೂಡಿಸಿಕೊಂಡು ಹಂಸಧ್ವಜನು ಅರ್ಜುನನೊಡನೆ ಇದಿರಾಗಲು ಸಿದ್ಧನಾದನು.

ಹಂಸಧ್ವಜನು ತನ್ನ ಸಹಾಯಕರಾದ ಶೂರಸೋದರರನ್ನೂ. ವೀರ ಪುತ್ರರನ್ನೂ. ಕುಲಪುರೋಹಿತರನ್ನೂ. ಸಮಸ್ತ ದಳಪತಿಗಳನ್ನೂ ಬರಮಾಡಿಸಿ. ಅರ್ಜುನನ ಕುದುರೆಯನ್ನು ಹಿಡಿದುತಂದು. ಪಟ್ಟಣದಲ್ಲಿ ಕಟ್ಟಿಹಾಕಬೇಕೆಂದು ಸಾರಿಸಿ. ಡಂಗುರಹೊಯ್ಸಿದನು. ನಿಸ್ಸಾಳಗಳು ಮೊಳಗಿದುವು.

"ಸಂಗ್ರಾಮ ಸೂಚನೆಯನ್ನು ಸಾರುವ ರಣದುಂದುಭಿಯ ಮಹಾಶಬ್ದವನ್ನು ಕೇಳಿದೊಡನೆ. ಯಾವಾತನು ಯುದ್ಧಕ್ಕೆ ಹೊರಡದೆ ಹಿಂದುಳಿಯುವನೋ. ಅಂತಹವನನ್ನು ಬೆಂಕಿಯ ಜ್ವಾಲೆಯಿಂದ ಕುದಿಯುವ. ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕುವುದು !"

ಇಂತು ರಾಜನ ಕಟ್ಟಪ್ಪಣೆಯಾಯಿತು. ಅಖಿಲಸೈನ್ಯವೂ. ಸಂಗ್ರಾಮಕ್ಕೆ ಸಜ್ಜಾಯಿತು. ಚಂಪಕಾಪುರದ ಸಮಸ್ತಭಟರೂ ಯುದ್ಧಕ್ಕೆ ಹೊರಡುತ್ತಿರಲು. ಹಂಸಧ್ವಜನ ಮೋಹದ ಕುಮಾರನಾದ ಸುಧನ್ವನೆಂಬವನು ತನ್ನ ತಾಯಿಯ ಬಳಿಗೆ ಬಂದು, ಆಕೆಯಡಿಗಳಿಗೆ ಸಾಷ್ಟಾಂಗವೆರಗಿ. ಬಿನ್ನೈಸಿಕೊಂಡನು

"ಅಮ್ಮಾ, ಅರ್ಜುನನ ಕುದುರೆಯನ್ನು ಹಿಡಿದು ಕಟ್ಟುವೆನು. ಮುಂದಾಗಲಿರುವ ಮಹಾಯುದ್ಧದಲ್ಲಿ ನನ್ನ ಸಾಹಸವನ್ನು ತೋರಿಸುವೆನು. ತನ್ನನ್ನು ಹರಸಿ ಕಳುಹು."

"ಕಂದ! ಅರ್ಜುನನಾದರೊ ನಾಲ್ಕುಕಾಲಿನ ಒಂದು ಹರಿಯನ್ನು ಪಾಲಿಸುತಿದ್ದಾನೆ. ನಿನಗೆ ಅದರ ಚಿಂತೆ ಬೇಡ; ನೀನು ಅರ್ಜುನನನ್ನು ಪ್ರೀತಿಯಿಂದ ರಕ್ಷಿಸುತ್ತಿರುವ ಆ ಹರಿಯನ್ನೇ ಹಿಡಿಯುವ ಬುದ್ಧಿ ಮಾಡು. ಹಿಂದೆ ನಾರದ ಮುನಿಯ ಮೂಲಕ ಆತನ ವಿಶಾಲ ಲೀಲೆಗಳನ್ನು ಕೇಳಿರುವೆನು. ಅಂತಹವನು ಇಂದು ಮೈದೋರಿದನಾದರೆ ಒಮ್ಮೆ ಕಣ್ಣಾರೆ ಕಂಡು ಜನ್ಮವನ್ನು ಪಾವನಗೊಳಿಸಬಹುದು."

"ತಾಯೇ! ನಿನ್ನೀ ಅಭೀಷ್ಟವನ್ನು ಪೂರ್ತಿಗೊಳಿಸಲು ನಾನು ಒಂದು ಹಂಚಿಕೆಯನ್ನು ಮಾಡುವೆನು; ಕಯ್ಯನ್ನು ಹಿಡಿದರೆ ಮೈ ತಾನಾಗಿಯೇ ಬರುತ್ತದಷ್ಟೆ? ಅರ್ಜುನನನ್ನು ರಣಮುಖದಲ್ಲಿ ನೋಯಿಸಲು ಶ್ರೀಕೃಷ್ಣನು ಆತನ ಸಹಾಯಕ್ಕೆ ಬರದಿರನು ತನ್ನ ಭಕ್ತರಿಗೆ ಒದಗಿದ ವಿಪತ್ತನ್ನು ಆತನು ಸೈರಿಸನು. ಆ ಮೇಲೆ ಶ್ರೀಕೃಷ್ಣನ ಮುಂದೆ ನನ್ನ ಪರಾಕ್ರಮವನ್ನು ತೋರುವೆನು."

ಪುತ್ರನ ಪೌರುಷವನ್ನು ಕಂಡು ವೀರಮಾತೆ ಹಿಗ್ಗಿದಳು.

"ಮಗೂ, ದನವು ಕರುವನ್ನು ಹುಡುಕಿಕೊಂಡು ಬರುವಂತೆ ಶ್ರೀಕೃಷ್ಣನು ಅರ್ಜುನನಿಗೆ ಸಹಾಯಕನಾಗಿ ಬರುವುದೇನೋ ನಿಶ್ಚಯ. ನೀನು ಹರಿಯನ್ನು ಕಂಡು ಹಿಮ್ಮೆಟ್ಟಿದೆಯಾದರೆ ಉಭಯಕುಲದ ಬಂಧುಗಳೂ ನನ್ನನ್ನು ಜರೆಯುವರು. ಯುದ್ಧದಲ್ಲಿ ಶ್ರೀಕೃಷ್ಣನನ್ನು ಗೆಲ್ಲುವವರೂ ಇದ್ದಾರೆಯೆ? ಆದರೂ ಕಂದ, ನನ್ನ ಪುತ್ರಮೋಹವನ್ನು ಮರೆತೆನು; ಶ್ರೀಕೃಷ್ಣನನ್ನು ಕಂಡಬಳಿಕ. ಹಿಮ್ಮೆಟ್ಟದಿರು,"

ಮಾತೆಯ ಸ್ಫೂರ್ತಿಮಯವಾಣಿ ಪುತ್ರನಲ್ಲಿ ವೀರತ್ವವನ್ನು ಉಜ್ಜ್ವಲಿಸಿತು!

ಹಾಗಾದರೆ ಮಾತೆ, ನನ್ನ ಪ್ರತಿಜ್ಞೆಯನ್ನು ಕೇಳು—"ಶ್ರೀಕೃಷ್ಣನಿಗೆ ವಿಮುಖನಾಗಿ ಬಂದೆನಾದರೆ ನಿನ್ನ ಗರ್ಭದಿಂದ ಉದಯಿಸಿದವನೆ? ಹಂಸಧ್ವಜನ ಕುಮಾರನೆ? ನನ್ನನ್ನು ಹರಿಕಿಂಕರನೆಂಬರೆ? ವೀರನೆಂಬರೆ? ಅರ್ಜುನನ ಸೇನಾಸಮೂಹವನ್ನಿಂದು ನಿರ್ನಾಮಗೊಳಿಸುವೆನು. ಪಟುಭಟರ ಪೌರುಷವನ್ನು ಹುರುಳುಗೆಡಿಸುವೆನು. ಶ್ರೀಕೃಷ್ಣನ ಮುಂದೆ ನನ್ನ ಪರಾಕ್ರಮವನ್ನು ತೋರಿಸುವೆನು. ಇಷ್ಟು ಮಾಡಿದ ಮೇಲೆ ಸೋಲುಗೆಲುವು ದೈವಾಧೀನ."

ವೀರಪುತ್ರನನ್ನು ವೀರಮಾತೆ ಹರಸಿ ಕಳುಹಿಸಿದಳು. ಅಷ್ಟರಲ್ಲಿ ಸುಧನ್ವನ ಸೋದರಿ ಕುವಲೆಯೆಂಬವಳು ಬಂದು ಆತನಿಗೆ ಆರತಿಯೆತ್ತಿ, "ತಮ್ಮಾ, ಯುದ್ಧದಲ್ಲಿ ನೀನಿಂದು ಶ್ರೀಕೃಷ್ಣನಿಗೆ ವಿಮುಖನಾಗಿ ಬಂದೆಯಾದರೆ ಮಾವನ ಮನೆಯಲ್ಲಿ ನಾನು ಎಂತು ತಲೆಯೆತ್ತಿ ನಡೆಯಲಿ? ಸಂಗ್ರಾಮದಲ್ಲಿ ಶೌರಿಯನ್ನು ಮೆಚ್ಚಿಸು" ಎಂದು ಹೇಳಿ, ಚಂದನದ ಲೇಪಹಚ್ಚಿ, ಕಪ್ಪುರವೀಳೆಯವನ್ನು ಕೊಟ್ಟು ಸೇಸೆ ತಳಿದು, ತಮ್ಮನನ್ನು ಯುದ್ಧಕ್ಕೆ ಕಳುಹಿಸಿಕೊಟ್ಟಳು.

ಸುಧನ್ವನು ಜನನಿ ಸೋದರಿಯನ್ನು ಬೀಳ್ಕೊಂಡು ಹೊರಟು ತನ್ನ ಮಂದಿರದ ಬಳಿಗೆ ಬಂದನು. ಪರಮಸುಂದರಿಯಾದ, ನವಯುವತಿಯಾದ ಪ್ರಭಾವತಿಯೆಂಬಾತನ ರಾಣಿ ಮುಂಬಂದು ಇದಿರ್ಗೊಂಡಳು. ನಲ್ಲೆಯನ್ನು ನಲ್ಮೆಯಿಂದ ನೋಡಿ, ಅವಳ ಕೈಯ್ಯ ಹೊಂದಟ್ಟೆಯಿಂದ ಹೊಸ ಹೂಗಳನ್ನು ಆಯ್ದು ಆಘ್ರಾಣಿಸಿಕೊಂಡು ಅವಳೊಡನೆ ಹೇಳಿದನು—

"ಪ್ರಿಯೆ, ಇಂದು ಯುದ್ಧದಲ್ಲಿ ಅರ್ಜುನನಿಗಿದಿರಾಗಿ ಹೋರಾಡಿ ಅವನ ಬಿಂಕವನ್ನು ಮುರಿವೆನು. ಶ್ರೀಕೃಷ್ಣನೇ ಅರ್ಜುನನಿಗೆ ಬೆಂಬಲಿಗನಾಗಿ ಬಂದರೂ, ನನ್ನ ಭುಜಬಲವನ್ನು ಆತನಿಗೂ ತೋರಿಸುವೆನು. ಇಂತು ಗೈದು ವಿಜಯವನ್ನು ಪಡೆದು, ಮರಳಿ ಬರುವೆನು; ಅದಾಗದಿದ್ದಲ್ಲಿ, ಪುನರ್ಜನ್ಮವಿಲ್ಲದ ಮುಕ್ತಿಯನ್ನಾದರೂ ಹೊಂದುವೆನು. ನೀನು ಕಳವಳಪಡದಿರು."

ಪತ್ನಿಯನ್ನು ಸಂತೈಸಿ ಸುಧನ್ವನು ರಣಭೂಮಿಗೆ ಹೊರಡಲು ಸಿದ್ಧನಾಗುತ್ತಿರುವುದನ್ನು ನೋಡಿ, ಪ್ರಭಾವತಿ ಪತಿಯನ್ನು ತಡೆದು ಹೇಳಿದಳು—

"ಪ್ರಿಯ, ಈ ಕಾರ್ಯವು ನಿನಗೆ ಯೋಗ್ಯವಲ್ಲ; ಹೋರಾಡುವ ಅಪೇಕ್ಷೆಯಿಂದ, ಶ್ರೀಕೃಷ್ಣನಿಗೆ ಇದಿರಾದನಂತರ, ಅದರಲ್ಲಿ ಮುಕ್ತಿಯಲ್ಲದೆ ಜಯವೆಂಬುದುಂಟೆ? ನಿನಗೆ ಇನ್ನೂ ವಿವೇಕ ಸಂತಾನವುಂಟಾಗಿಲ್ಲ. ನನ್ನ ಗರ್ಭದಲ್ಲಿ ನಿನಗೆ ಸಂತತಿಯಾದುದೂ ಇಲ್ಲ. ಮಕ್ಕಳಾದವರಿಗೆ ಮಾತ್ರ ಸದ್ಗತಿ ದೊರಕುವುದೆಂದು ಶಾಸ್ತ್ರಸಮ್ಮತವು. ಯುದ್ಧಕ್ಕೆ ಹೊರಡಲುದ್ಯುಕ್ತನಾದವನಿಗೆ ಸಂತಾನವಿಲ್ಲದಿರಲು ಯೋಗ್ಯವೆನಿಸುವುದೆ?"

ಪತ್ನಿಯ ಮಾತು ಸಂಪೂರ್ಣ ತಿರಸ್ಕರಣೀಯವಲ್ಲವೆಂದು ಸುಧನ್ವನು ಬಲ್ಲನು; ಪತ್ನಿಯ ಮನೋಭೀಷ್ಟವನ್ನು ನೆರವೇರಿಸಬೇಕಾದ ಪತಿಯ ಕರ್ತವ್ಯ ಪೊಂದೆಡೆ; ರಣಭೇರಿಯು ಮೊಳಗುತ್ತಿರಲು, ತಂದೆಯು ಯುದ್ಧಕ್ಕೆ ಹೊರಟಿರಲು, ತಾನು ಹಿಂದುಳಿಯಬಾರದೆಂಬ ರಣೋತ್ಸಾಹ ಇನ್ನೊಂದೆಡೆ: ಇಂತು ಸುಧನ್ವನು ಧರ್ಮಸಂಕಟಕ್ಕೊಳಗಾದನು. ಧರ್ಮಶಾಸ್ತ್ರಗಳನ್ನು ಬಲ್ಲ ಆತನು ಅಂತಹ

ಸಂದರ್ಭದಲ್ಲಿ, ಪತ್ನಿಯು ಅಭೀಷ್ಟವನ್ನು ನೆರವೇರಿಸದೆ ಯುದ್ಧಕ್ಕೆ ಹೋಗುವುದು ಸರಿಯಲ್ಲವೆಂದು ತಿಳಿದು ತನ್ನ ಪ್ರಿಯರಮಣಿಯನ್ನು ಸಂತೈಸಿದನು: ಸಂತಸಗೊಳಿಸಿದನು !

ಅರ್ಜುನನ ಕುದುರೆಯನ್ನು ಕಟ್ಟಿ ಹೋರಾಟಕ್ಕಾಗಿ ಹೊರಟ ಹಂಸಧ್ವಜನು ತನ್ನ ಸೇನಾಸಮೂಹದಲ್ಲಿ ತನ್ನ ಪ್ರಿಯಪುತ್ರನೂ ಅತಿ ಬಲಶಾಲಿಯೂ ಆದ ಸುಕುಮಾರ ಸುಧನ್ವನನ್ನು ಕಾಣದೆ ರೋಷಾವಿಷ್ಟನಾದನು. ತನ್ನ ಬಳಿಯಿದ್ದ ಮಂತ್ರಿ ಸುಮತಿಯೆಂಬವನಿಗೆ ಅಪ್ಪಣೆಯಾಯಿತು. ಆತನು ಕಡುಗಡಿಗರಾದ ಚರರನ್ನಟ್ಟಲು, ರಾಜಾಜ್ಞೆಯಂತೆ ಅವರು ಸುಧನ್ವನನ್ನು ಹಿಡಿದು ಕೈಗಳೆರಡನ್ನೂ ಹಗ್ಗದಿಂದ ಕಟ್ಟಿ ಕಳ್ಳನನ್ನು ಬಿಗಿದುತರುವಂತೆ ಅರಸನಿದ್ದಲ್ಲಿಗೆ ತಂದರು. ಇದನ್ನು ನೋಡಿದ ಪೌರಜನರೂ ಪರಿಜನರೂ ಬೆರಗಾದರು !

ಬಿಗಿದ ಬಂಧನ ಸಮೇತನಾಗಿ ಸುಧನ್ವನು ತಂದೆಯ ಪಾದಗಳಿಗೆ ಸಾಷ್ಟಾಂಗವೆರಗಿದನು. ಹಂಸಧ್ವಜನಿಗೆ ರೋಷವೇರಿತ್ತು.

"ಮೂಢಾತ್ಮನೇ, ನನ್ನ ಕಟ್ಟಳೆಯನ್ನು ತಿಳಿದಿದ್ದು, ಕೃಷ್ಣದರ್ಶನದ ದೀಕ್ಷೆಯನ್ನು ಮರೆತು, ಯುದ್ಧೋತ್ಸಾಹವನ್ನು ತೊರೆದು ಹೀಗೆ ಪಟ್ಟಣದಲ್ಲಿ ವಿಳಂಬಿಸಿದೆಯೇಕೆ?"

ತಂದೆಯೊಡನೆ ಸತ್ಯಸಂಗತಿಯನ್ನು ಹೇಳಲು ಅಂಜಿಕೆ: ನಾಚಿಕೆಯಿಂದ ತಲೆ ತಗ್ಗಿಸಿದವನಾಗಿ ಸುಧನ್ವನು ವಿಳಂಬದ ಕಾರಣವನ್ನು ಮೆಲ್ಲ ಮೆಲ್ಲನೆ ಬಿನ್ನೈಸಿದನು.

ಸುಧನ್ವನ ನಡತೆಯು ಧರ್ಮಸಮ್ಮತವೇ ಎಂಬ ಸಮಾಚಾರವನ್ನು ನಿಷ್ಕರ್ಷಿಸಬೇಕಾಗಿ ಬಂತು. ಕುಲಪುರೋಹಿತರಾದ ಶಂಖಲಿಖಿತರನ್ನು ಅರಸನು ಬರಮಾಡಿದನು ಅವರ ಅಭಿಮತವನ್ನು ಕೇಳಿದನು.

"ಎಲೆ ಹಂಸಕೇತು, ನೀನೀಗ ಯಾವುದೇ ಆಲೋಚನೆಯನ್ನು ಮಾಡು: ಪುತ್ರಮೋಹದಿಂದ ಭಾಷೆತಪ್ಪಿ ನಡೆವೆಯಾದರೆ ನಾವಿನ್ನು ಮುಂದೆ ಚಂಪಕಾಪುರದಲ್ಲಿ ಇರಲು ಇಷ್ಟಪಡುವುದಿಲ್ಲ. ಸತ್ಯಾಚರಣೆಗಾಗಿ ಹಿಂದಣ ರುಕ್ಮಾಂಗದ, ಹರಿಶ್ಚಂದ್ರ ಭೂನಾಥರು ತಮ್ಮ ಮಕ್ಕಳ ಮೇಲಣ ಆಸೆಯನ್ನು ಬಿಡಲಿಲ್ಲವೇ ಹೇಳು?"

ಪುರೋಹಿತರ ಉಪದೇಶದಂತೆ ಮುಂದಣ ಕಾರ್ಯವು ನಿಶ್ಚಯವಾಯಿತು. ಅರಸನು ಸುಮತಿಯನ್ನು ಕರೆದು ಆಜ್ಞೆಯಿತ್ತನು.

"ಈ ಧೂರ್ತನನ್ನು ಸುಡುವ ಎಣ್ಣೆ ತುಂಬಿದ ಕೊಪ್ಪರಿಗೆಯಲ್ಲಿ ಮುಳುಗಿಸಿರಿ !"

ರಾಜಾಜ್ಞೆಯನ್ನು ನೆರವೇರಿಸದೆ ನಿರ್ವಾಹವುಂಟೆ? ಸುಧನ್ವನ ಕೈಗಳನ್ನು ಕಟ್ಟಿಸಿ ತಳಪಳನೆ ಕುದಿಯುವ ಕೊಪ್ಪರಿಗೆಯಿರುವಲ್ಲಿಗೆ ಎಳೆತಂದು. ಆ ಕೊಪ್ಪರಿಗೆಯು ಎಣ್ಣೆ ಮತ್ತಷ್ಟು ಕುದಿಯುವಂತೆ ದೊಡ್ಡ ಕೊರಡುಗಳನ್ನು ಒಲೆಗೆ ಹಾಕಿ ಉರಿಸಿ. ತಾನು ಮಾಡತಕ್ಕ ಘೋರ ಕಾರ್ಯಕ್ಕಾಗಿಯೂ, ಸುಧನ್ವನಿಗುಂಟಾಗಬಹುದಾದ ಸಂಕಟಕ್ಕಾಗಿಯೂ ಮರುಗುತ್ತ ಮಂತ್ರಿ ಆತನೊಡನೆ ಹೀಗೆಂದು ಹೇಳಿದನು–

"ಸುಧನ್ವ. ನಿನ್ನಂತಹವನಿಗೂ ಹೀಗಾಗಬಹುದೆ? ನೀನು ಲೋಕೈಕ ವಿಖ್ಯಾತನು-ಅಭಿಮಾನಿಯು; ಹರಿಸೇವಕನು; ಸುಂದರನು; ಮಾತಾಪಿತೃಗಳ ಮೋಹದ ಸುಕುಮಾರನು; ತಿಳಿದವನು; ಸುಖಿಯು; ಸಕಲ ಸಜ್ಜನರಿಗೂ ಸಖನು: ನೀತಿವಿದನು; ಸದಾಚಾರ ಸಂಪನ್ನನು: ಉತ್ತಮನು. ಇಂತಹ ಗುಣಶಾಲಿಯಾದ ನಿನ್ನನ್ನು ಈ ತಪ್ತತೈಲದೊಳಗೆ ಹೇಗೆ ಬೀಳಿಸುವೆನೊ?"

ಸುಧನ್ವನು ತಂದೆಯು ಕಠಿಣಾಜ್ಞೆಗಾಗಿ ನೊಂದುಕೊಳ್ಳಲಿಲ್ಲ. ಪುರೋಹಿತರ ಪರುಷೋಪದೇಶಕ್ಕೆ ಎರಡು ನುಡಿಯಲಿಲ್ಲ. ಸುಮತಿಯು ಕಾರ್ಯಕ್ಕಾಗಿ ಕಳವಳಪಡಲಿಲ್ಲ, ಧೀರನಾದಾತನು ದೇವರೇ ಗತಿಯೆಂದು ದೃಢವಾಗಿ ನಂಬಿದನು. ಮಂತ್ರಿಯೊಡನೆ ಇಂತೆಂದನು—

"ಮಂತ್ರಿಶ್ರೇಷ್ಠ, ನೀನು ಅಂಜಬೇಡ. ನಾನಿದಕ್ಕಾಗಿ ಕಂಗಾಲಾಗುವವನಲ್ಲ. ನಾನಿದುವರೆಗೂ ಧರ್ಮವನ್ನು ಮೀರಿ ನಡೆದವನಲ್ಲ. ರಣರಂಗದಲ್ಲಿ ಹೊಯ್ದಾಡಿ ಮಡಿವ ಈ ಒಡಲು ಹೀಗೆ ಜಂಜಡದಲ್ಲಿ ಬಿದ್ದು ಸಾಯುವಂತಾಯಿತಲ್ಲಾ ಎಂಬೊಂದು ವ್ಯಸನವು ಮಾತ್ರ ನನಗುಂಟು. ಆದರೆ ಮಾಡುವುದೇನು? ನೀನು ಅಂಜದೆ ಅಳುಕದೆ ತಂದೆಯ ಆಜ್ಞೆಯನ್ನು ನೆರವೇರಿಸು."

ಸುಧನ್ವನನ್ನು ಎತ್ತಿ ತಪ್ತತೈಲದ ಕೊಪ್ಪರಿಗೆಗೆ ಹಾಕಿದರು! ಅಖಿಲ ಪರಿವಾರವೂ 'ಘೋ' ಎಂದಿತು; ಜನರು ಹಾಹಾರವದಿಂದ ಮರುಗಿದರು. 'ಅಯ್ಯೋ! ಸತ್ತು ಹೋದನಲ್ಲಾ' ಎಂದು ಮಂದಿ ಮೂರ್ಛೆಗೊಂಡಿತು! 'ಇಂತಹ ಅಲ್ಪ ಕಾರಣಕ್ಕಾಗಿ ಕೋಮಲ ಸುಕುಮಾರನನ್ನು ಕೊಂದ ಈ ರಾಜನ ಧರ್ಮನೀತಿಗೆ ಮಣ್ಣು ಬೀಳಲಿ! ಯಮಸದೃಶರಾದ ಈ ಶಂಖಲಿಖಿತರು ಬ್ರಾಹ್ಮಣರಾಗಿ ಹೇಗೆ ಹುಟ್ಟಿದರೋ?' ಎಂದು ಪರಿವಾರ ಮೊರೆಯಿಟ್ಟಿತು! ಸುಧನ್ವನು ಧ್ಯಾನಮಗ್ನನಾಗಿದ್ದನು.

"ದೇವ, ನಿನ್ನ ಹೆಸರುಚ್ಚರಿಸಿದೊಡನೆ ಹಿಂದೆ ಪ್ರಹ್ಲಾದನನ್ನು ಪಾಲಿಸಿದೆಯಂತೆ; ದ್ರೌಪದಿಯ ಮಾನವನ್ನು ಕಾದೆಯಂತೆ: ಭಕ್ತರಿಗೆ ಬಂದ ತೊಂದರೆ

ಗಳನ್ನು ಎಂದೆಂದಿಗೂ ಪರಿಹರಿಸುವಿಯಂತೆ; ಇಂದು ನಿನ್ನನ್ನಲ್ಲದೆ ಇನ್ನಾರನ್ನು ಮರೆಹೋಗಲಿ? ಶ್ರೀಕೃಷ್ಣ, ನೀನಲ್ಲದೆ ನನ್ನನ್ನು ಕಾಯುವವರಿಲ್ಲ: ಭಕ್ತವತ್ಸಲ, ಭಯನಿವಾರಣ, ಕಾಪಾಡು, ಕಾಪಾಡು."

ಹೃದಯದಲ್ಲಿ ಹರಿಧ್ಯಾನ ಮಾಡುತ್ತಾ ಸುಧನ್ವನು ನಿರ್ಭಯನಾಗಿದ್ದನು! ಭಕ್ತರ ಮೇಲೆ ದೇವರ ದಯೆಯೆಂತಹುದೊ? ಕಂಡರೆ ಕಣ್ಣೆವೆಯೇ ಸೀದು ಹೋಗುವಂತೆ ಉರಿಯುವ, ಕಾಯ್ದುಕಾಯ್ದು ತಳಪಳನೆ ಕುದಿಕುದಿದು ಉಕ್ಕಿ ಮೊರೆಯುತ್ತಿರುವ ಕೊಪ್ಪರಿಗೆಯ ತಪ್ತತೈಲವು ಸುಧನ್ವನಿಗೆ ಚಂದನದ ತಂಪಾಯಿತು! ಮೈನವಿರು ಕೊರಗಿರಲಿಲ್ಲ. ಶರೀರದ ಸೊಂಪು ಅಡಗಿರಲಿಲ್ಲ. ಕೊರಳಿನ ತುಳಸಿಯ ದಂಡೆ ಬಾಡಿರಲಿಲ್ಲ. ಸೂಡಿದ ಹೂ ಕಂದಿಹೋಗಿರಲಿಲ್ಲ. ಸುಧನ್ವನ ಮುಖವು ಸೂರ್ಯೋದಯ ಕಾಲದ ಕಮಲದಂತೆ ಅರಳಿಕೊಂಡಿತ್ತು.

ಇದನ್ನು ಕಂಡು ಎಲ್ಲರೂ ಬೆರಗಾದರು. ಶ್ರೀಕೃಷ್ಣನ ಮಹಿಮೆಯನ್ನು ಸಮಸ್ತರೂ ಕೊಂಡಾಡಿದರು. ಸರ್ವರಿಗೂ ಸಂತೋಷವಾಯಿತು! ಆದರೆ ಪಾಪ! ಪುರೋಹಿತರಾದ ಶಂಖಲಿಖಿತರಿಗೆ ಮಾತ್ರ ಸಹಿಸಲಾರದ ಸಂಕಟವೆನಿಸಿತು. "ಇವನು ಅಗ್ನಿಸ್ತಂಭ ವಿದ್ಯೆಯನ್ನು ಬಲ್ಲನು; ತೆಂಗಿನಕಾಯನ್ನು ತರಿಸಿ" ಎಂದು ಲಿಖಿತನು ಹೇಳಿದನು. ತೆಂಗಿನಕಾಯಿಯ ನೀರನ್ನು ಲಿಖಿತನು ಅಗ್ನಿಸ್ತಂಭ ವಿದ್ಯೆಯ ಪರೀಕ್ಷೆಗಾಗಿ ಕೊಪ್ಪರಿಗೆಗೆ ಸುರಿದನು! ಕೊಪ್ಪರಿಗೆಯಿಂದ ಒಮ್ಮೆಗೇ ಉರಿಯೆದ್ದು ಆಕಾಶವನ್ನು ಅಪ್ಪಳಿಸಿತು. ಪುರೋಹಿತರಿಬ್ಬರ ಕೆನ್ನೆಗೂ ಸಿಡಿಲಂತೆ ಹೊಡೆಯಿತು! ಸುಧನ್ವನು ಸುಡುವ ಕೊಪ್ಪರಿಗೆಯಲ್ಲಿ ಸಂತೋಷದಿಂದಿದ್ದನು.

"ಅಯ್ಯೋ! ಹರಿಕಿಂಕರನಿಗೆ ದ್ರೋಹವನ್ನು ಬಗೆದೆನಲ್ಲಾ: ಭಾನುರಶ್ಮಿಗೆ ಕಂದೆರೆಯದ ಗೂಗೆಯಂತೆ, ಸುಧನ್ವನಿಗೆ ಅನ್ಯಾಯವೆಸಗಿದ ನನ್ನೀ ಪಾಪಕ್ಕೆ ಏನು ನಿವೃತ್ತಿ? ನಿರ್ಮಲ ಧರ್ಮಬುದ್ಧಿಯನ್ನು ತಿಳಿಯಲಾರದ ಅಜ್ಞಾನಿ ದ್ವಿಜಾಧಮನು ತಾನಾದೆನಲ್ಲಾ; ಮರಣವೇ ಇದಕ್ಕೆ ಪ್ರಾಯಶ್ಚಿತ್ತ."

ಪಶ್ಚಾತ್ತಾಪದಿಂದ ಬೆಂದ ಲಿಖಿತನೂ ಕುದಿವೆಣ್ಣೆಯ ಕೊಪ್ಪರಿಗೆಯಲ್ಲಿ ಬಿದ್ದನು. ಸುಧನ್ವನ ಸತ್ಯಸಹವಾಸವು ಎಂತಹ ಪುಣ್ಯಕರವೋ? ತಪ್ತ ತೈಲದಲ್ಲಿ ಲಿಖಿತನೂ ಸುಧನ್ವನೊಡನೆ ಸುಖವಾಗಿದ್ದನು. ಇದೆಲ್ಲವನ್ನೂ ಕಂಡು ಹಂಸಧ್ವಜನು ವಿಸ್ಮಯಗೊಂಡು ಮಂತ್ರಿಸಮೇತನಾಗಿ ಬಂದು ಅವರಿಬ್ಬರನ್ನೂ ಕೊಪ್ಪರಿಗೆಯಿಂದ ಇಳಿಸಿ ಆಲಿಂಗಿಸಿ ಸಂತೈಸಿದನು.

ಸುಧನ್ವನಿಗೆ ಪನ್ನೀರಿನ ಸ್ನಾನಮಾಡಿಸಿದರು: ದಿವ್ಯಾಂಬರವನ್ನುಡಿಸಿದರು: ಚಂದನವನ್ನು ಹಚ್ಚಿದರು; ಪರಿಮಳದ ಪುಷ್ಪಗಳನ್ನು ಸೂಡಿದರು: ಸುಗಂಧ

ದ್ರವ್ಯಗಳನ್ನು ಲೇಪಿಸಿದರು; ಹಣೆಗೆ ತಿಲಕವನ್ನಿಟ್ಟರು; ರತ್ನಾಭರಣಗಳನ್ನು ತೊಡಿಸಿದರು; ಬೆಂಕಿಗೆ ಹಾಕಿದ ಭಂಗಾರದಂತೆ ಸುಧನ್ವನ ತೇಜಸ್ಸು ಊರ್ಜಸ್ವಿಯಾಯಿತು.

೬

ಪುತ್ರನ ಪುಣ್ಯಜೀವನದ ಏಳಿಗೆಯನ್ನು ಕಂಡು, ಹಂಸಧ್ವಜನು ಹಿಗ್ಗಿದನು; ಪುನಃ ಯುದ್ಧಸನ್ನಾಹ ನಡೆಯಿತು. ತಂಬಟೆ, ಭೇರಿ, ನಿಸ್ಸಾಳ, ಕಹಳಾದಿವಾದ್ಯಗಳು, ಉದ್ಘೋಷಿಸಿದುವು. ಪಟುಭಟರು ರಣೋತ್ಸಾಹದಿಂದ ಕುದಿಯುತ್ತಿದ್ದರು. ಅರ್ಧಯೋಜನದ ವಿಸ್ತೀರ್ಣದಲ್ಲಿ ಗಜತುರಗ ಪದಾತಿಗಳು ಕಿಕ್ಕಿರಿದು ಅರ್ಜುನನ ಮೇಲ್ಬೀಳಲು ಮುನ್ನಡೆದುವು. ಸುಧನ್ವನು ಹಿರಿಯರ ಹರಕೆ ಪಡೆದು, ಜಯಘೋಷ ಮಾಡುತ್ತಾ ದಿವ್ಯಮಣಿ ರಥವನ್ನೇರಿದನು. ಸೈನ್ಯ ಪದಹತಿಯ ಕೆಂಧೂಳಿ ಆಗಸವನ್ನು ಆವರಿಸಿತು. ಇಂತು ಸಂಗ್ರಾಮ ಸಂಭ್ರಮದಿಂದ, ಮುನ್ನಡೆದ ಹಂಸಧ್ವಜನ ಮಹಾ ಸೇನೆಯು ಅರ್ಜುನನ ಕುದುರೆಯನ್ನು ಹಿಡಿದು ಕಟ್ಟಿ, ಪದ್ಮವ್ಯೂಹವಾಗಿ ಅದನ್ನು ಬಳಸಿನಿಂತಿತು.

ಕುದುರೆಯನ್ನು ಕಟ್ಟಿ ಹಾಕಿದ ಸುದ್ದಿಯನ್ನು ಚರರು ಸವ್ಯಸಾಚಿಗೆ ಅರುಹಿದರು. ಯಜ್ಞಾಶ್ವವನ್ನು ಬಿಡಿಸಿತರುವಂತೆ. ಪ್ರದ್ಯುಮ್ನನು ಅರ್ಜುನನಿಂದ ಅಪ್ಪಣೆ ಪಡೆದು, ಶತ್ರುಸೇನೆಯನ್ನಿದಿರಿಸಿದನು. ಸಾತ್ಯಕಿ, ಸಾಂಬ, ಕೃತವರ್ಮ, ಶಠ, ನಿಶಠ, ಅನಿರುದ್ಧ, ಗದ ಮುಖ್ಯರಾದ ಪಟುಭಟರು, ಅಖಿಲ ಯಾದವಬಲಸಹಿತ ಸಮರಸನ್ನಾಹದಿಂದ ಪ್ರದ್ಯುಮ್ನನಿಗೆ ಸಹಾಯಕರಾಗಿ ಸೇರಿದರು. ಒಂದು ಕಡೆಯಿಂದ ಅನುಸಾಲ್ವಕನ ಸೇನೆಯೂ, ಇನ್ನೊಂದೆಡೆಯಿಂದ ಯೌವನಾಶ್ವನ ಬಲವೂ; ಬೇರೊಂದು ಕಡೆಯಿಂದ ನೀಲಧ್ವಜನ ಪಡೆಯೂ. ಹಂಸಧ್ವಜನ ಪದ್ಮವ್ಯೂಹದ ಸೇನಾಮಂಡಲವನ್ನು ಸುತ್ತುಗಟ್ಟಿ ಮುತ್ತಿತು. ಶತ್ರುವು ಮಹಾ ಪರಾಕ್ರಮಶಾಲಿಯೆಂಬುದನ್ನು ತಿಳಿದು ಅರ್ಜುನನ ಅನುಮತಿ ಪಡೆದು, ವೀರನಾದ ವೃಷಕೇತುವೂ ರಣರಂಗಕ್ಕೆ ಮುನ್ನುಗ್ಗಿದನು.

ಸುಧನ್ವ ವೃಷಧ್ವಜರೊಳಗೆ ಘೋರಸಂಗ್ರಾಮ ಸಾಗಿತು: ಹೊಸ ಹರೆಯದ ಹೊಸ ಹುರುಪಿನ ತರುಣವೀರರಿಬ್ಬರು ಅತ್ಯದ್ಭುತವಾಗಿ ಕಾದಾಡಿದರು. ಕೊನೆಗೆ

ಸುಧನ್ವನು ಕರ್ಣಪುತ್ರನನ್ನು ಯುದ್ಧರಂಗದಲ್ಲಿ ಉರುಳಿಸಿದನು. ವೃಷಕೇತು ವಿಫಲನಾದುದನ್ನು ಕಂಡು ಪ್ರದ್ಯುಮ್ನನು ಸುಧನ್ವನಿಗಿದಿರಾದನು. ಕಲಿತನದಿಂದ ಕಾದಾಡಿ ಆತನೂ ಮೈಮರೆದನು. ಅಷ್ಟರಲ್ಲಿ ಕೃತವರ್ಮನು ಬಂದು ತಾಗಿದನು. ಅವನೂ ಕೃತಕಾರ್ಯನಾಗದೆ ಕಂಗೆಟ್ಟನು. ಅನಂತರ ಸಾಲ್ವನೂ ಆ ಮೇಲೆ ಸಾತ್ಯಕಿಯೂ, ಸತ್ಯವಿಕ್ರಮನಾದ ಸುಧನ್ವನೊಡನೆ ಸೆಣಸಾಡಲು, ಆತನು ಅವರನ್ನೂ ಸೋಲಿಸಿದನು.

ತನ್ನ ಪಕ್ಷದ ಪ್ರತಾಪಾಗ್ರೇಸರರ ಪರಾಭವವನ್ನೂ ಸುಧನ್ವನ ಸಮರ ಸಾಹಸವನ್ನೂ ಕಂಡು ಕಿಡಿಗೊಂಡ ಕಿರೀಟಿಯು ದೇವದತ್ತವನ್ನು ಮೊಳಗಿಸುತ್ತಾ ತನ್ನ ಮಣಿಮಯರಥವನ್ನು ಸುಧನ್ವನ ಸಮ್ಮುಖಕ್ಕೆ ಮುನ್ನುಗ್ಗಿಸಿದನು. ಮಹಾಭಾರತ ಯುದ್ಧದ ಗಂಡುಗಲಿಯೂ ದ್ವಾಪರಯುಗದ ವೀರಾಗ್ರಗಣ್ಯನೂ ಆದ ಧನಂಜಯನೇ ಇದಿರಾದುದನ್ನು ನೋಡಿ ಸುಧನ್ವನಿಗೆ ಸಮರಸಂತೋಷವುಕ್ಕಿತು.

"ಅರ್ಜುನಾ, ತ್ರಿಭುವನ ವೀರನೆಂದು ನಿನ್ನ ಕೀರ್ತಿಯನ್ನು ಕೇಳಿದ್ದೇನೆ: ನಿನ್ನನ್ನೇ ಹುಡುಕಿ ಬಂದಿರುವೆನು."

ಹೀಗೆಂದನು ಸುಧನ್ವನು ಪಾರ್ಥನಿಗೆ ಬಾಣವನ್ನೆಚ್ಚನು. ಈ ತೀವ್ರ ಶರಹತಿಗೆ ನರನು ಕೆರಳಿದನು.

"ಶಿವಾಶಿವಾ, ನನಗಿದಿರಾಗಿ ಯುದ್ಧಮಾಡಬೇಕೆಂದಿದ್ದೆಯಾ? ನೀನು ಅಪ್ರಬುದ್ಧನು. ದೇವ. ದಾನವ. ಮಾನವರಲ್ಲಿ ನನ್ನೊಡನೆ ವೈರಮಾಡಿ ಬದುಕಿದವರಿಲ್ಲ. ಹಿಂದೆ ನನ್ನೊಂದಿಗೆ ಹೋರಾಡಿದ ಕರ್ಣ. ದ್ರೋಣ. ಭೀಷ್ಮಾದಿಗಳು ಪ್ರಸಿದ್ಧ ಭಟರಲ್ಲವೆ? ನಿನಗೆ ಮರುಳು: ಹೋಗು"

—ಹೀಗೆಂದು ಅರ್ಜುನನು ಸುಧನ್ವನಿಗೆ ಪ್ರತ್ಯಸ್ತ್ರವೆಚ್ಚು ಮೂದಲಿಸಿದನು.

"ಸಾರಥಿಯ ಸಾಮರ್ಥ್ಯದಿಂದ ಕೌರವಕುಲದ ಸಮಸ್ತವೀರರನ್ನೂ ನೀನು ಗೆದ್ದಿದ್ದೀಯೋ: ನಿನ್ನ ಪರಾಕ್ರಮವನ್ನು ಅರಿಯದವರಾರು? ಇಂದಾದರೂ ಶ್ರೀಕೃಷ್ಣನನ್ನು ಬರಮಾಡಿಕೊಂಡು ನನ್ನೊಡನೆ ಹೋರಾಡು; ಅಲ್ಲದೆ ಸುಮ್ಮಗೆ ಕಷ್ಟಪಡಬೇಡ. ಜಯ ದೊರಕದು. ಹಿಂತೆರಳು".

ಸುಧನ್ವನು ಎಸೆದ ಬಾಣದ ಶಕ್ತಿಗೆ ಅರ್ಜುನನ ರಥ ತಿಗರಿಯಂತೆ ತಿರ್ರನೆ ತಿರುಗಿತು! ಶತ್ರುವಾದರೇನು? ಸುಧನ್ವನ ಶೌರ್ಯಾತಿಶಯವನ್ನು ಕಂಡು ಅರ್ಜುನನು ತಲೆದೂಗಿದನು!

"ಸುಧನ್ವ. ನಿನ್ನ ಘನಪರಾಕ್ರಮಕ್ಕೆ ನಾನು ಮೆಚ್ಚಿದೆನು. ನೀನು ಪೌರುಷವುಳ್ಳವನೇನೊ ಹೌದು. ನನ್ನ ರಥವನ್ನು ಈ ರೀತಿ ಮಾಡಬಲ್ಲವರನ್ನು ನಾನು

ಪಾತಾಳ, ಭೂತಳ, ನಾಕಲೋಕಗಳಲ್ಲಿರುವ ಯಾವ ಪಟುಭಟರಲ್ಲಿಯೂ ಕಂಡು ದಿಲ್ಲ. ಆದರೂ ನೀನಿನ್ನೂ ತರಳನು; ನನ್ನ ಕೈಯಿಂದ ಸುಮ್ಮನೆ ಸಾಯಬೇಡ; ನಿನ್ನ ತಂದೆಯನ್ನು ಬರಹೇಳು. ಬಾಲಕರನ್ನು ನಾವು ಕೊಲ್ಲುವವರಲ್ಲ. ನನ್ನ ಕುದುರೆಯನ್ನು ಬಿಟ್ಟುಬಿಡು; ಹಾಳಾಗಬೇಡ."

"ನಮ್ಮ ತಂದೆಯು ಕುದುರೆಯನ್ನು ಸರ್ವಥಾ ಬಿಡುವವನಲ್ಲ. ಶ್ರೀಕೃಷ್ಣನ ಸಹಾಯವಿಲ್ಲದೆ ನೀನು ನನ್ನನ್ನು ಹೆದರಿಸಲಾರೆ; ನಿನಗೆ ಯಜ್ಞಾಶ್ವದ ಆಸೆ ಬೇಡ: ನೀನು ಹಸ್ತಿನಾವತಿಗೆ ಹಿಂತಿರುಗು: ಅಶ್ವಮೇಧ ಯಾಗವನ್ನು ನಮ್ಮ ತಂದೆಯೇ ನೆರವೇರಿಸುವನು: ಆ ಮೇಲೆ ನೀನು ದಿಗ್ವಿಜಯಕ್ಕೆ ಹೊರಡ ಬಹುದು."

ಸುಧನ್ವನ ಮೂದಲಿಕೆಯಿಂದ ಕಿರೀಟಿಯ ಕೋಪವು ಪ್ರಜ್ವಲಿಸಿತು. ಬಾಲಕನು ತನ್ನನ್ನು ಕೆಣಕಿಸುತ್ತಿರಲು ಮಹಾವೀರನಾದ ಅರ್ಜುನನು ಸುಮ್ಮ ಗಿರುವನೆ? ಗಾಂಢೀವ ಧನುಸ್ಸು, ನಿಶಿತಾಸ್ತ್ರಗಳು, ದಿವ್ಯರಥ, ಕಪಿಧ್ವಜ, ಮಹಾಸ್ತ್ರ ಗಳು, ಸವ್ಯಸಾಚಿತ್ವ, ದೇವದತ್ತ ಇವೆಲ್ಲಾ ತನ್ನಲ್ಲಿರಲು ಅರ್ಜುನನು ಅಂಜುವನೆ? ದಿಗ್ದಿಗಂತಗಳು ಕಂಪಿಸುತ್ತಿರಲು, ಅರ್ಜುನನು ಸುಧನ್ವನ ಮೇಲೆ ಬಾಣಗಳ ಸುರಿಮಳೆ ಸುರಿಸಿದನು. ಸುಧನ್ವನು ಆತನ ಬಾಣಗಳನ್ನೂ ಮಧ್ಯಮಾರ್ಗದಲ್ಲಿ ಖಂಡಿಸುತ್ತಿದ್ದನು. ದಿವ್ಯಾಸ್ತ್ರಗಳ ಪ್ರಯೋಗದಿಂದ ಒಬ್ಬರನ್ನೊಬ್ಬರು ಗೆಲ್ಲ ಬೇಕೆಂದು ಬಹಳ ಪರಾಕ್ರಮದಿಂದ ಹೋರಾಡಿದರು; ಅಜಾಂಡಮಂಡಲವೇ ನಡುಗತೊಡಗಿತು. ಅರ್ಜುನನ ಬತ್ತಳಿಕೆಯ ಬಾಣಗಳು ಬರಿದಾಗುತ್ತ ಹೋದವು: ಸುಧನ್ವನ ಶೌರ್ಯಕ್ಕೆ ಕಳೆಯೇರುತ್ತಿತ್ತು. ಸುಧನ್ವನೆಚ್ಚ ದಿವ್ಯಮಹಾಸ್ತ್ರದಿಂದ ಅರ್ಜುನನ ರಥವು ಕುಲಾಲ ಚಕ್ರದಂತೆ ತಿರುಗತೊಡಗಿತು.

ಧ್ವಜದ ಮೇಲಿದ್ದ ಕಪೀಶ್ವರನು ಹಲ್ಗಿರಿದನು. ಕುದುರೆಗಳ ಕಾಲಾಟ ನಿಂತಿತು. ಸೂತನು ಕಾಲವಶನಾದನು. ಅರ್ಜುನನ ಒಡಲಲ್ಲಿ ಬಾಣಗಳು ಕೀಲಿಸಿದುವು. ಆತನು ದುಃಖಿಸಿದನು. ಧರ್ಮಜನ ಪುಣ್ಯಕಾರ್ಯಕ್ಕೆ ವಿಘ್ನ ಬಂದೊದಗುವುದೇ ಎಂದು ಪರಿತಪಿಸಿದನು. ಶ್ರೀ ಕೃಷ್ಣನೇ ಗತಿಯೆಂದು ಆತನನ್ನು ಧ್ಯಾನಿಸಿದನು.

ಶ್ರೀ ಕೃಷ್ಣನು ಪಾಂಡವ ಪಕ್ಷಪಾತಿಯಲ್ಲವೆ? ಭಕ್ತವತ್ಸಲನಾದಾತನು, ಅರ್ಜುನನ ಧ್ಯಾನಕ್ಕೆ ಮೆಚ್ಚಿ ಪ್ರೈದೋರಿದನು. ಮಣಿದ ಪಾರ್ಥನನ್ನು ಬರ ಸೆಳೆದು ಬಿಗಿಯಪ್ಪಿ, ಸಂತೈಸಿ, ಶ್ರೀ ಕೃಷ್ಣನು ರಥವನ್ನೇರಿ ಕುದುರೆಗಳ ವಾಘೆ ಯನ್ನು ಹಿಡಿದುಕೊಂಡನು.

ಈ ದಿವ್ಯದರ್ಶನವನ್ನು ಸುಧನ್ವನು ಕಂಡನು; ಅನವರತವೂ ಅಂತರಂಗದಲ್ಲಿ ಧ್ಯಾನಿಸುವ ಪುಣ್ಯಮೂರ್ತಿಯನ್ನು ಅರ್ಜುನನ ರಥಾಗ್ರದಲ್ಲಿ ಪ್ರತೀಕ್ಷಿಸಿ ರೋಮಾಂಚಿತನಾದನು. ಶ್ರೀ ಕೃಷ್ಣನ ನಾಮಸ್ಮರಣೆ ಮಾಡಿದನು. ಆತನಿಗೆ ಸಾಷ್ಟಾಂಗ ಪ್ರಣಾಮಮಾಡಿ. "ನನ್ನ ಕಾರ್ಯವು ಸಾರ್ಥಕವಾಯಿತು; ನನ್ನ ಅಂತರಂಗದ ಅಪೇಕ್ಷೆ ಫಲಿಸಿತು." ಎಂದು ಹಿರಿಹಿಗ್ಗಿದನು. ಭಯಭರಿತ ಭಕ್ತಿಯಿಂದ ಕೈಮುಗಿದು ಹೇಳಿದನು—

"ಸ್ವಾಮಿ. ನೀನು ಸರ್ವಜ್ಞನೆಂಬುದನ್ನು ನನಗೆ ತಿಳಿಸಿದೆ: ನಿನ್ನೀ ಕಾರ್ಯವು ಸಮುಚಿತವಾಯಿತು. ನಿನ್ನ ಕೃಪೆಯಿಲ್ಲದಿರಲು ಪಾಂಡವರಿಗೆ ಜಯವೆಲ್ಲಿಂದ? ಅದು ಹಾಗಿರಲಿ. ವ್ಯರ್ಥವಾಗಿ ಯುದ್ಧಬೇಡ. ಅರ್ಜುನನು ನಿನ್ನೆದುರಲ್ಲಿ. ನನ್ನ ಕುರಿತು ಯಾವುದಾವರೊಂದು ಪ್ರತಿಜ್ಞೆಯನ್ನು ಮಾಡಿ ಸೆಣಸಾಡಲಿ."

ಶ್ರೀ ಕೃಷ್ಣನ ಸಾರಥ್ಯದ ಸಹಾಯ ದೊರಕಿದುದರಿಂದ ಅರ್ಜುನನ ಧೈರ್ಯ ಇಮ್ಮಡಿಸಿತ್ತು. ಸುಧನ್ವನ ಮೇಲಿನ ಪ್ರತೀಕಾರಭಾವದಿಂದ ಮಾತು ಮುಂಚಿಹೋಯಿತು—

"ಎಲೈ ಅವಿವೇಕಿಯೆ! ನೀನು ಹೇಳಿದಂತೆಯೇ ಆಗಲಿ: ದೇವತೆಗಳು ಕೊಂಡಾಡುವಂತೆ. ನಿನ್ನ ತಲೆಯನ್ನು ಮೂರು ಬಾಣಗಳಿಂದ ತುಂಡರಿಸದಿದ್ದರೆ ಈ ಲೋಕದಲ್ಲಿ ಎಳ್ಳಿನಷ್ಟೂ ಪುಣ್ಯಮಾಡದವನ ಗತಿ ನನಗಾಗಲಿ!"

ದುರ್ಜಯನಾದ ಸುಧನ್ವನನ್ನು ಗೆಲ್ಲುವುದು ಸುಲಭವಲ್ಲವೆಂದು ಶ್ರೀ ಕೃಷ್ಣನಿಗೆ ಗೊತ್ತಿತ್ತು. ಹಾಗಾಗಿ ಅರ್ಜುನನ ಪಂಥದ ಪ್ರತಿಜ್ಞೆಯು ದುಡುಕಿನದಾಯಿತೆಂದು ಆತನು ಎಚ್ಚರಿಸಿದನು. ನರನ ವೀರವಾಕ್ಕುಗಳನ್ನು ಕೇಳಿ ಸುಧನ್ವನು ಸುಮ್ಮನಿರುವನೆ?

"ಅರ್ಜುನ, ಕೃಷ್ಣನ ಮುಂದೆ ನೀನೀ ಮಾತನ್ನು ಗರ್ವದಿಂದ ಹೇಳಿದೆ: ದೇವತೆಗಳೆಲ್ಲರೂ ಈಗ ನೋಡುತ್ತಿರಲಿ. ನೀನು ಸರ್ವಶಕ್ತಿಯಿಂದ ಪ್ರಯೋಗಿಸುವ ಮೂರು ಬಾಣಗಳನ್ನೂ ಮಧ್ಯಮಾರ್ಗದಲ್ಲೇ ಖಂಡಿಸದಿದ್ದರೆ ಭೂಮಿಯಲ್ಲಿ ಪಾತಕಿಗಳಾಗಿದ್ದವರ ಗತಿ ನನಗಾಗಲಿ."

ಸುಧನ್ವನು ಮೇದಿನಿ ಅದುರುವಂತೆ ಬಾಣವನ್ನು ಪ್ರಯೋಗಿಸಿದನು. ಅರ್ಜುನನ ತೇರು ನಾಲ್ನೂರು ಗಜ ದೂರಕ್ಕೆ ಹಾರಿಬಿದ್ದಿತು. ಈ ಘನ ಸಾಹಸದ ಕಾರ್ಯವನ್ನು ಕಂಡು ಶ್ರೀಕೃಷ್ಣನು ಸುಧನ್ವನನ್ನು ಜಯಘೋಷದಿಂದ ಕೊಂಡಾಡಿದನು.

"ಎಲೈ ಅರ್ಜುನನೇ, ಹಿಂದಿನ ಜಯದ್ರಥನ ಕಥೆಯಾಯಿತಲ್ಲಾ ! ಯಾರು ಮುಳಿದರೂ ಈತನು ಮಣಿಯುವವನಲ್ಲ; ಇವನೊಡನೆ ಮಾರ್ಮಲೆವವರೂ ಇಲ್ಲ; ನೀನು ಆಲೋಚನೆ ಮಾಡದೆ ಪ್ರತಿಜ್ಞೆ ಮಾಡಿದಿ; ಇವನು ಏಕಪತ್ನೀ ವ್ರತದವನು. ತಾತನ ಆಜ್ಞೆಯನ್ನು ಪಾಲಿಸುವವನು; ನನ್ನನ್ನು ಏಕಧ್ಯಾನದಿಂದ ಅರ್ಚಿಸುತ್ತಿರುವ ಭಕ್ತನು, ಬ್ರಹ್ಮಶಿವಸುರಪತಿಗಳಿಗೂ ಯುದ್ಧದಲ್ಲಿ ಬಾಗುವವನಲ್ಲ. ನಮ್ಮನ್ನು ರಥಸಹಿತ ಹಿಂದೂಡಿದ ಆತನ ಧೈರ್ಯವನ್ನೂ, ಹೆದರಿಕೆ ಹುಟ್ಟುವಂತೆ ಹೋರಾಡುವ ಆತನ ವೀರ್ಯವನ್ನೂ ಕಂಡೆಯಲ್ಲಾ?"

ಪಾರ್ಥನಿಗೆ, ಶ್ರೀ ಕೃಷ್ಣನ ಸಾರಥ್ಯದ ಸಹಾಯ ದೊರಕಿದ ಮೇಲೆ ತನಗೆ ಅಪಜಯ ನಿಶ್ಚಯವೆಂದು ಸುಧನ್ವನು ತಿಳಿದಿದ್ದನು. ಆದರೆ ಕಲಿಯಂತೆ ಕಾದಾಡಿ ವೀರಸ್ವರ್ಗವನ್ನು ಪಡೆಯುವುದು ಕ್ಷತ್ರಿಯನಾದ ತನ್ನ ಕರ್ತವ್ಯವಲ್ಲವೆ?

"ಸ್ವಾಮಿ, ಬೆಟ್ಟವನ್ನು ಕೊಡೆಹಿಡಿದು ಪಟ್ಟಿಯನ್ನು ನೆನೆಯಲು ಬಿಡದಂತೆ ನೀನು ಅರ್ಜುನನನ್ನು ಕಾಪಾಡುತ್ತಿದ್ದೀಯೆ; ನಾವು ಎಷ್ಟು ಹೋರಾಡಿದರೂ ಫಲವೇನು? ಈ ಶರೀರವನ್ನು ನಿನ್ನ ಪಾದಮೂಲದಲ್ಲಿ ಅರ್ಪಿಸದಿರೆನು. ಅದು ಹಾಗಿರಲಿ, ನೀನೇ ಸಿಟ್ಟುಗೊಂಡು ಒಮ್ಮೆ ಸಮರ ಸಮ್ಮುಖನಾಗು; ನಿನಗೆ ಅಂಜಿದೆನಾದರೆ ನಿನ್ನ ಕಿಂಕರನಲ್ಲವೆಂದು ತಿಳಿ."

ಪುನಃ ಸುಧನ್ವನು ಅರ್ಜುನನ ರಥವನ್ನು ಬಿಡದೆ ಎಚ್ಚನು. ಆ ಹೊಡೆತದ ರಭಸಕ್ಕೆ ರಥವು ಸುರ್ರನೆ ಸುಳಿದು, ಕುದುರೆಗಳು ಬೆಂಡಾದುವು. ಧ್ವಜದಲ್ಲಿದ್ದ ಕಪೀಶ್ವರನೂ ಕಿರ್ರನೆ ಹಲ್ಗಿರಿದು ಚೀರಿದನು, ಕೃಷ್ಣಾರ್ಜುನರಿಗೆ ಶಿರೋಭ್ರಮಣೆಯುಂಟಾಗಿ ಕಣ್ಣುಗಳಿಗೆ ಕರ್ರನೆ ಕತ್ತಲುಕವಿಯಿತು. ಘರ್ರನೆ ಬೀಸುವ ಸುಂಟರಗಾಳಿಗೆ ತರಗೆಲೆ ತಿರ್ರನೆ ತಿರುಗುವಂತೆ ರಥವು ಸರ್ರನೆ ಹಿಂದಕ್ಕೆ ಸರಿಯಿತು. ಶೌರಿಯು ಸುಧನ್ವನ ಶೌರ್ಯವನ್ನು ಪ್ರಶಂಸಿಸಿದನು.

ತನಗಾದ ಪರಿಭವವನ್ನೂ, ಸುಧನ್ವನ ಸಾಹಸವನ್ನೂ ಕಂಡ ಅರ್ಜುನನು ಕಾಲಾಗ್ನಿಯಂತೆ ಕೋಪದಿಂದ ಕಿಡಿಕಿಡಿಯಾದನು. ಆತನ ಕಣ್ಣುಗಳು ಕೆಂಡವನ್ನು ಕಾರಿದುವು; ಕುಡಿಹುಬ್ಬು ಹೊಗೆಯಂತೆ ಮೇಲೆದ್ದಿತು ಹುಂಕಾರದೊಡನೆ ಹೊರಡುವ ನಿಶ್ವಾಸವನ್ನು ಬಿಡುವ ಮೂಗಿನ ಸೊಳ್ಳೆಗಳು, ಜ್ವಾಲೆಗಳನ್ನು ಕಾರಿದುವು. ಅರ್ಜುನನು ಮಹಾಸ್ತ್ರವೊಂದನ್ನು ಸುಧನ್ವನ ಮೇಲೆ ಎಸೆಯಲು ಸಿದ್ಧನಾದನು. ತನ್ನ ಭಕ್ತನ ಮಾತು ಹೊಳ್ಳಾಗಬಾರದೆಂದು, ಶ್ರೀಕೃಷ್ಣನು ಆ ಅಸ್ತ್ರಕ್ಕೆ, ತಾನು ಒಂದೆ ಗೋವರ್ಧನ ಗಿರಿಯನ್ನೆತ್ತಿ ಗೋಕುಲವನ್ನುದ್ಧರಿಸಿದ ಸುಕೃತಫಲವನ್ನು ಕೊಟ್ಟು, ಹೆಚ್ಚಾದ ಶಕ್ತಿಯನ್ನು ಅದರಲ್ಲಿ ನೆಲೆಗೊಳಿಸಿ.

'ಬೇಗನೇ ಶತ್ರುವಿನ ಶಿರಸ್ಸನ್ನು ಉರುಳಿಸು' ಎಂದು ಹೇಳಲು, ಅರ್ಜುನನು ಕರ್ಣಪರ್ಯಂತ ಸೆಳೆದು ಆ ಶರವನ್ನೆಚ್ಚನು.

"ಹಾ ಮುರಾರಿಯೇ, ಪಾರ್ಥನು ಎಸೆವ ಬಾಣಕ್ಕೆ ನಿನ್ನ ಬಹಳ ಸುಕೃತ ವನ್ನು ಇತ್ತೆಯಲ್ಲಾ; ಒಳ್ಳೆಯದಾಯಿತು; ಈ ಬಾಣವನ್ನು ಖಂಡಿಸಿದ್ದಾದರೆ ನಿನ್ನ ಮನಸ್ಸಿಗೆ ನೋವಿಲ್ಲವಷ್ಟೆ?"

ಹೀಗೆಂದು ಹೇಳಿದವನೇ, ಸುಧನ್ವನು ಕುತ್ತಿಗೆಗೆ ಹತ್ತಿರವಾಗಿ ಆಕಾಶ ಮಾರ್ಗದಲ್ಲಿ ಬರುತ್ತಿದ್ದ ನರನ ದಿವ್ಯಾಸ್ತ್ರವನ್ನು ನಿಮಿಷಾರ್ಧದಲ್ಲಿ ಬಾಣಗಳಿಂದ ತುಂಡರಿಸಿದನು. ಸುಧನ್ವನ ಸೇನೆಯಲ್ಲಿ ಕಹಳೆಗಳು ಮೊಳಗಿದುವು. ಆತನ ಶೌರ್ಯವನ್ನು ಕಂಡು ದೇವತೆಗಳು ಕೊಂಡಾಡಿದರು. ಅಚ್ಯುತನೂ ಅಚ್ಚರಿ ಗೊಂಡನು !

ಮೂರು ಬಾಣಗಳಲ್ಲಿ ಸುಧನ್ವನ ಶಿರವನ್ನು ಉರುಳಿಸುವುದಾಗಿ ಮಾಡಿದ ಅರ್ಜುನನ ಪ್ರತಿಜ್ಞೆಯಲ್ಲಿ ಒಂದು ಬರಿದಾಯಿತು. ಉಳಿದೆರಡು ಅಸ್ತ್ರಗಳಲ್ಲಿ ಕಂಡಿತ ತುಂಡರಿಸುವೆನೆಂದು ನರನು ಇನ್ನೊಂದು ದಿವ್ಯಾಸ್ತ್ರವನ್ನು ಬಿಲ್ಲಿಗೆ ಏರಿಸಿ ದನು. ಆ ಅಸ್ತ್ರಕ್ಕೆ ಶ್ರೀಕೃಷ್ಣನು, ಕೃಷ್ಣಾವತಾರದಲ್ಲಿ ಪೃಥ್ವಿಯನ್ನು ಪಾಲಿಸಿದ ಪುಣ್ಯವನ್ನು ಕೊಡಲು, ಅದನ್ನು ಸುಧನ್ವನ ಮೇಲೆ ಅರ್ಜುನನು ಎಸೆದನು.

"ದೇವ, ಅರ್ಜುನನ ಬಾಣಕ್ಕಾಗಿ ನಿನ್ನ ಬಹಳ ಪುಣ್ಯವನ್ನೇ ಕಳೆದು ಕೊಂಡಿದ್ದಿಯೇ; ನೀನೆ ನೋಡುತ್ತಿರು; ಈ ಕಣೆಯನ್ನು ಕತ್ತರಿಸದಿದ್ದರೆ ಅರುಂಧತಿಯೊಡನೆ ಸುಖದಿಂದಿದ್ದ ವಸಿಷ್ಠನನ್ನು ಕೊಂದಗತಿ ನನಗಾಗಲಿ !"

ಇಂತು ಶಪಥವನ್ನು ಮಾಡಿದ ಸುಧನ್ವನು, ಆಕಾಶದಲ್ಲಿ ಸುಡುವ ಸೂರ್ಯ ನಂತೆ ಬರುತ್ತಿರುವ ನರನ ಸರಳನ್ನು ಇಕ್ಕಡಿ ಮಾಡಿದನು. ಒಡನೆಯೆ ನಿಸ್ಸಾಳ ಗಳು ಮೊಳಗಿದುವು. ನಭೋಮಂಡಲದಲ್ಲಿ ದೇವತೆಗಳು ಸುಧನ್ವನ ಶೌರ್ಯ ವನ್ನು ಪ್ರಶಂಸಿಸಿದರು !

ಅರ್ಜುನನು ರೋಷವಿಷಾದಗಳಿಂದ ಉದ್ವೇಗಗೊಂಡನು; ಶ್ರೀಕೃಷ್ಣನ ಮುಖವನ್ನು ನೋಡಿ ಹೇಳಿದನು—

"ಕೃಷ್ಣ, ನನ್ನ ಎರಡು ಬಾಣಗಳೂ ವಿಫಲವಾದವು. ಉಳಿದ ಇನ್ನೊಂದು ಶರದಿಂದ ಇವನ ಶಿರವನ್ನು ಅರಿಯದಿದ್ದರೆ, ಹರಿಹರರಲ್ಲಿ ಭೇದ ಮಾಡಿದವನ ಗತಿ ನನಗಾಗಲಿ !"

ಅರ್ಜುನನು ತನ್ನ ಕೋದಂಡಕ್ಕೆ ದಿವ್ಯಾಸ್ತ್ರವನ್ನು ಹೂಡಿದನು. ಆ ಮಹಾಸ್ತ್ರದ ಮೊದಲಿಗೆ ಬ್ರಹ್ಮನನ್ನೂ, ತುದಿಗೆ ಶಿವನನ್ನೂ, ಆಹ್ವಾನಿಸಿ ನಿಲ್ಲಿಸಿ,

ಮಧ್ಯದಲ್ಲಿ ತಾನೇ ವ್ಯಾಪಿಸಿಕೊಂಡು, ಶ್ರೀಕೃಷ್ಣನು, ರಾಮಾವತಾರದಲ್ಲಿ ದೇಹವಿದ್ದಷ್ಟು ಕಾಲ, ಸಂಪಾದಿಸಿದ ಪುಣ್ಯವೆಲ್ಲವನ್ನು ಅದಕ್ಕೆ ಕೊಟ್ಟು ಅದರಲ್ಲಿ ಅಮೃತಶಕ್ತಿಯನ್ನು ನೆಲೆಗೊಳಿಸಿ, ಭುಜಹೊಯ್ದು ಅರ್ಜುನನನ್ನು ಉತ್ತೇಜಿಸಿದನು. ಕೋಟಿಸಿಡಿಲು ಒಮ್ಮೆಗೇ ಗರ್ಜಿಸುವಂತೆ ರಾಕ್ಷಸಾರಿಯು ಪಾಂಚಜನ್ಯವನ್ನು ಮೊಳಗಿಸಿದನು. ಧನಂಜಯನು ಸಪ್ತಸಾಗರಗಳ ರಭಸವು ಒಟ್ಟುಗೂಡುವಂತೆ ತನ್ನ ದೇವದತ್ತವನ್ನೂದಿದನು. ಭೂಮಿ ಕಂಪಿಸಿತು. ಮೇರು ಶೈಲವು ಅಲ್ಲಾಡಿತು. ರಾಶಿ ರಾಶಿ ಗ್ರಹಗಳು ಸಂಘಟ್ಟಣೆಗೊಂಡವು. ಹನುಮನು ಅಬ್ಬರಿಸಿದನು. ರಣಭೇರಿ ಮೊಳಗಿತು.

ಅರ್ಜುನನ ಕೊನೆಯ ಪ್ರಯತ್ನವನ್ನೂ ಆತನಿಗೆ ಶ್ರೀಕೃಷ್ಣನ ಪರಮಾವಧಿ ಸಹಾಯ ಶಕ್ತಿಯನ್ನು ಸುಧನ್ವನು ಕಂಡನು; ಕುಗ್ಗದೆ ಜಗ್ಗದೆ ನಿಂತನು.

"ಎಲೆ ದೇವ. ನಿನ್ನ ಪುಣ್ಯವನ್ನೆಲ್ಲಾ ಸೂರೆಗೊಂಡವನು ನಾನೊ? ಅರ್ಜುನನೊ? ಸತ್ಯವಾಗಿ ಹೇಳು; ಇನ್ನು ಆತನನ್ನು ವ್ಯರ್ಥವಾಗಿ ಹುರಿ ದುಂಬಿಸಬೇಡ; ಈ ಬರುವ ಬಾಣವನ್ನು ಮಧ್ಯದಲ್ಲೇ ತುಂಡರಿಸದಿದ್ದರೆ, ತಾಯಿ ನನ್ನನ್ನು ಮಗನೆನ್ನುವಳೆ? ಪತ್ನಿ ನನ್ನನ್ನು ಪತಿಯೆನ್ನುವಳೆ? ಇದರಲ್ಲಿ ನಾನು ಹಿಂಜರಿದರೆ. ಉತ್ತಮಬ್ರಾಹ್ಮಣರು ಕಾಶಿಗೆ ಹೋಗಿ. ಅಲ್ಲಿ ಶ್ರೇಷ್ಠವಾದ ಮಣಿಕರ್ಣಿಕಾಸಲಿಲದಲ್ಲಿ ಮಿಂದು, ಶಾಸ್ತ್ರವಿಧಿಯಿಂದ ಉಪವಾಸ ಮಾಡಿ. ಶಿವರಾತ್ರಿಯಲ್ಲಿ ರಚಿಸಿದ ವಿಶ್ವನಾಥನ ಪೂಜೆಗಳನ್ನು ಅಂಜದೆ ಎಡಗಾಲಿನಿಂದ ನೂಕಿದವನ ದೋಷವು ನನಗುಂಟಾಗಲಿ—ನನ್ನೀ ಪ್ರತಿಜ್ಞೆಯನ್ನು ಪರೀಕ್ಷಿಸು."

ಶೂರನಾದ ಸುಧನ್ವನು ಬರುವ ಬಾಣಕ್ಕೆ ಇದಿರಾಗಿ ತನ್ನ ಧನುಸ್ಸನ್ನು ಸಜ್ಜುಗೊಳಿಸಿ ಜಯಘೋಷ ಮಾಡಿ ನಿಂತಿದ್ದನು. ಅಷ್ಟರಲ್ಲಿ ತ್ರಿಮೂರ್ತಿಗಳ ದಿವ್ಯಶಕ್ತಿಯಿಂದಲೂ, ರಾಮಾವತಾರದ ಪುಣ್ಯಶಕ್ತಿಯಿಂದಲೂ, ಧನುರ್ವೇದದ ಮಂತ್ರಶಕ್ತಿಯಿಂದಲೂ, ತುಂಬಿದ ಆ ಮಹಾಶರವನ್ನು ಅರ್ಜುನನು ತನಗೆ ಭುಜಬಲವಿರುವಷ್ಟು, ಶೌರ್ಯದಿಂದ ಕೋಪಾವೇಶಗೊಂಡು ಕಿವಿವರೆಗೆ ಸೆಳೆದು ಬೊಬ್ಬಿರಿದು ಬಿಟ್ಟನು. ಉಭಯ ಸೇನೆಯೂ ಹೆದರಿತು. ಸುರಸಮೂಹವು ಕೆದರಿತು. ಸೂರ್ಯಮಂಡಲವು ಒದರಿತು. ಜಗತ್ತ್ರಯವು ಬೆದರಿತು. ಕುಲಾದ್ರಿ ಸಮೂಹವು ಬಿರಿಯಿತು. ನಕ್ಷತ್ರಸಂದೋಹವು ಉದುರಿತು. ಭೂಮಿ ಅದಿರಿತು. ಸಮುದ್ರ ಕದಡಿತು. ಕೂರ್ಮನು ಕದಲಿದನು. ಅಷ್ಟದಿಗ್ಗಜಗಳು ಜಗ್ಗಿದುವು, ಮಹಾಶೇಷನು ಬಗ್ಗಿದನು. ಅರ್ಜುನನ ಆ ಮಹಾಸ್ತ್ರದ ವೇಗಗೆ ಬ್ರಹ್ಮಾಂಡವೇ ಗದಗದಿಸಿತು.

ಇಂತಹ ಮಹಾದ್ಭುತವನ್ನು ಕಂಡು ಸುಧನ್ವನು ಬೆಚ್ಚಿದನಿಲ್ಲ; ಬೆದರಿದನಿಲ್ಲ; ಅವನ ಚಿತ್ತದಲ್ಲಿ ಕಲಿತನದ ಕೆಚ್ಚು ಕೊರಗಲಿಲ್ಲ. ಇದಿರಾಗಿ ಬರುತ್ತಿರುವ ಮಹಾಶರವನ್ನು ಸ್ಥಿರಪರಾಕ್ರಮದಿಂದೆಚ್ಚನು. ಅರ್ಜುನನ ದಿವ್ಯಾಸ್ತ್ರವು ಇಕ್ಕಡಿಯಾಯಿತು! ಹಿಂದಣ ಅರ್ಧವು ಭೂಮಿಗೆ ಬಿತ್ತು, ಮುಂದಣ ಅರ್ಧವು ಸುಧನ್ವನ ಕಂಠವನ್ನು ಕೊಚ್ಚಿ ಹಾರಿತು! ಅದನ್ನು ಕಂಡು ಸಕಲರೂ ಮರುಗಿದರು. ಆ ಶಿರವು ಆಕಾಶಕ್ಕೆ ಚಿಗಿದು, ಅಲ್ಲಿ ದೇವರ ನಾಮಸ್ಮರಣೆ ಮಾಡುತ್ತಿತ್ತು. ಆ ಮೇಲೆ ಶಿರವು ಗಗನದಿಂದ ಕೆಳಗಿಳಿದು. ಶ್ರೀಕೃಷ್ಣನ ಪಾದಪದ್ಮಗಳಿಗೆ ಬಿದ್ದಿತು. ತನ್ನ ಪರಮಭಕ್ತನ ಶಿರವನ್ನು ಕೃಷ್ಣನು ಕರಕಮಲಗಳಿಂದೆತ್ತಿ ಆಘ್ರಾಣಿಸಲು. ಆ ಮುಖದಿಂದ ದಿವ್ಯತೇಜವೊಂದು ಹೊರಟು ಶ್ರೀಕೃಷ್ಣನ ಮುಖವನ್ನು ಸೇರಿತು! ಅದನ್ನು ಪುನಃ ಶ್ರೀಕೃಷ್ಣನು ನಭೋಮಂಡಲಕ್ಕೆಸೆಯಲು ಅದು ಶಿವನ ರುಂಡಮಾಲೆಯಲ್ಲಿ ಸೇರಿ ಅಲ್ಲಿ ಶಾಶ್ವತವಾಗಿ ಶೋಭಿಸಿತು.

ಹಂಸಧ್ವಜನು ಸುಧನ್ವನ ಸಾವಿಗಾಗಿ ಬಹಳ ಶೋಕಿಸಿದನು. ಪುತ್ರಶೋಕವು ಆತನಿಗೆ ಸಹಿಸಲಸಾಧ್ಯವಾಗಿತ್ತು. ಮೋಹದ ಸುಕುಮಾರನ ಗುಣಗಣಗಳನ್ನು ನೆನೆನೆನೆದು ದುಃಖಿಸಿದನು.

“ಅಣ್ಣದೇವನು ಜಯಿಸಿಬರುವನೆಂದು ಆರತಿಹಿಡಿದು ಕಾದಿರುವ ನಿನ್ನ ಸೋದರಿಯನ್ನೂ. ಹುಣ್ಣಿಮೆಯ ಶಶಿಯಂತೆ ಮುಖದ ಮಂದಹಾಸದಿಂದ ಇದಿರ್ಗೊಳ್ಳಲು ಸಿದ್ಧಳಾದ ನಿನ್ನ ವಲ್ಲಭೆಯನ್ನೂ, ವಿಜಯ ವಾರ್ತೆಯನ್ನು ತಿಳಿದು ಹೆತ್ತ ಹೊಟ್ಟೆಗೆ ತಂಪನ್ನು ತಂದುಕೊಳ್ಳುವೆನೆಂದಿದ್ದ ನಿನ್ನ ಜನನಿಯನ್ನು ಎಂತು ತಾನು ಸಂತೈಸಲಿ.”

—ಹಂಸಧ್ವಜನು ಇಂತು ಮಮ್ಮಲಮರುಗಿದನು!

ಶೋಕಿಸುತ್ತಿರುವ ತನ್ನ ತಂದೆಯ ಬಳಿಗೆ ಸುಧನ್ವನ ಸಹೋದರನಾದ ಸುರಥನೆಂಬವನು ಬಂದು ಆತನನ್ನು ಸಂತೈಸಿದನು. ಸೋದರನ ಸಾವಿಗೆ ಪ್ರತೀಕಾರವನ್ನು ಸಾಧಿಸುವೆನೆಂದು ಕೃಷ್ಣಾರ್ಜುನರೊಡನೆ ಕಾಳಗ ಹೂಡಲು ಹೊರಟು ಮಣಿರಥವನ್ನೇರಿ ಬಂದನು. ಸುರಥಾರ್ಜುನರೊಳಗೆ ಘನಭೀಷಣ ಸಂಗ್ರಾಮವಾಯಿತು. ಶ್ರೀಕೃಷ್ಣನ ನೆರವಿನಿಂದ ನರನು ಆತನ ಶಿರವನ್ನೂ ತುಂಡರಿಸಿದನು. ಪರಮಭಾಗವತನಾದಾತನ ರುಂಡವೂ ಶ್ರೀಕೃಷ್ಣನ ಪಾದಮೂಲವನ್ನು ಸೇರಿತು. ಪರಮಪಾವನವಾದ ಪ್ರಯಾಗದಲ್ಲಿ ಆ ಕಪಾಲವನ್ನು ಹಾಕೆಂದು ಶ್ರೀಕೃಷ್ಣನು ಗರುಡನಿಗಾಜ್ಞಾಪಿಸಲು. ಆತನು ಅಂತೆಸಗಿದನು. ಅಲ್ಲಿಂದ ಅದನ್ನು ವೃಷನು ಎತ್ತಿಕೊಂಡು ಹೋಗಿ ಶಿವನಿಗಿತ್ತನು. ಆ ಶಿರವೂ

ಶಿವನ ರುಂಡಮಾಲೆಯನ್ನಲಂಕರಿಸಿತು. ವೀರ ಪುತ್ರರಿಬ್ಬರು ಅಕಾಲ ಮರಣವನ್ನು ಹೊಂದಿದ ದುಃಖವಾರ್ತೆಯಿಂದ ಹಂಸಧ್ವಜನು ತನ್ನ ಜೀವಿತದ ಕುರಿತಂ ನಿರಾಶೆಗೊಂಡನು. ತನಗೆ ಮರಣವೇ ಮಹಾಪ್ರಸಾದವೆಂದು ನಿಶ್ಚಯಿಸಿ ರೋಷಾವಿಷ್ಟನಾಗಿ ಅರ್ಜುನನೊಡನೆ ಕಾಳಗಕ್ಕೆದಿರಾಗಲು ಭಕ್ತಶಿರೋಮಣಿಯೆನಿಸಿದ ಹಂಸಧ್ವಜನ ಬರವನ್ನು ಕಂಡು ಕಂಸಾರಿಯು ಅರ್ಜುನನ ರಥದಿಂದಿಳಿದು ಆತನ ಬಳಿಗೆ ನಡೆದು ಹೋದನು. ಯುಗಪುರುಷನಾದ ಪರಮಾತ್ಮನು ತನ್ನ ಬಳಿಗೆ ನಡೆದು ಬರುತ್ತಿರುವುದನ್ನು ನೋಡಿ ಹಂಸಕೇತು ರಥದಿಂದ ಭೂಮಿಗೆ ದುಮ್ಮಿಕ್ಕಿ ಹರಿಚರಣಕಮಲಕ್ಕೆ ಸಾಷ್ಟಾಂಗವೆರಗಿದನು. ಆ ಮೇಲೆ ಶ್ರೀಕೃಷ್ಣನು ಹಂಸಧ್ವಜನನ್ನು ಸಂತೈಸಿ, ಆತನ ಮನೋವ್ಯಥೆಯನ್ನು ಬಿಡಿಸಿ, ಅರ್ಜುನನೊಡನೆ ಮಿತ್ರಭಾವದಿಂದಿರುವಂತೆ ಹೇಳಿದನು. ಪರಮಾತ್ಮನ ವಚನವನ್ನು ಪರಮಾನುಗ್ರಹವೆಂದು ಶಿರಸಾವಹಿಸಿದ ಹಂಸಕೇತು, ಶ್ರೀಕೃಷ್ಣನ ಸಮ್ಮುಖದಲ್ಲಿ ಅರ್ಜುನನಿಗೆ ಸಕಲವನ್ನೂ ಸಮರ್ಪಿಸಿ ಆತನ ಅಶ್ವರಕ್ಷಣೆಗೆ ಬೆಂಬಲಿಗನಾಗಿ ನಿಂತನು.

ಇದುವರೆಗೆ ದಕ್ಷಿಣ ದಿಙ್ಮುಖವಾಗಿ ಹೊರಟ ಹಯವು ಈಗ ಬಡಗು ಮುಖವಾಗಿ ತಿರುಗಿತು. ಅರ್ಜುನನು ತನ್ನ ಅಪರಿಮಿತ ಸೇನಾಸಮೇತ ಅದನ್ನು ಹಿಂಬಾಲಿಸಿದನು. ಆಗ ಗ್ರೀಷ್ಮಕಾಲವು ಸಮೀಪಿಸಿತು. ಕೆರೆ ತೊರೆಗಳ ಒರತೆ ಬರೆತುವು. ಇಂತಹ ಬೇಸಗೆಯ ದಿನಗಳಲ್ಲಿ ಯಜ್ಞಾಶ್ವದೊಡನೆ ಅನುಸಾಲ್ವ, ಪ್ರದ್ಯುಮ್ನ, ವೃಷಕೇತು, ಸುವೇಗ, ನೀಲಧ್ವಜ ಹಂಸಧ್ವಜ ಮೊದಲಾದವರು ಚತುರ್ಬಲ ಸಹಿತ, ಗಿರಿ, ಪುರ, ದೇಶ, ವನ, ಹಳ್ಳ, ಕೊಳ್ಳಗಳನ್ನು ಕಳೆದು ಮುಂದೊತ್ತಿದರು. ಹೀಗಿರಲು, ತುರಗವು ಪಾರಿಪ್ಲವ ದೇಶವನ್ನು ಪ್ರವೇಶಿಸಿತು.

ಹಿಂದೆ, ಆ ನೆಲದಲ್ಲಿ ಶಿವನನ್ನು ಮೆಚ್ಚಿಸಲು ಪಾರ್ವತಿ ತಪಸ್ಸು ಮಾಡುತ್ತಿದ್ದಾಗ, ಒಬ್ಬ ದುಷ್ಟರಾಕ್ಷಸನು ಆಕೆಯ ತಪೋವನವನ್ನು ಪ್ರವೇಶಿಸಿ; ಅವಳನ್ನು ಪೀಡಿಸತೊಡಗಿದನು. ರುದ್ರಾಣಿಯು ಕೋಪೋದ್ರೇಕಗೊಂಡು ಆತನನ್ನು ದೃಷ್ಟಿಸಿದಳು. ಆಕೆಯ ಸಿಟ್ಟಿನ ಉರಿಯಿಂದ ಆ ರಾಕ್ಷಸನು ಸುಟ್ಟು

ಬೂದಿಯಾದನು. ಪುರುಷಪ್ರಾಣಿಗಳು ಈ ತಪೋವನ ಪ್ರದೇಶವನ್ನು ಹೊಕ್ಕಲ್ಲಿ ಸ್ತ್ರೀತ್ವವನ್ನು ಪಡೆಯಲಿ ಎಂದಾಕೆ ವಿಧಿಸಿದ ಕಟ್ಟಾಜ್ಞೆಯಂತೆ ಆ ಸ್ಥಳಕ್ಕೆ ಕಾಲಿಟ್ಟಾಗ ಯಜ್ಞದ ಕುದುರೆಯು ಹೆಣ್ಣು ರೂಪು ತಾಳಿತು.

ಅದರಂತೆ, ಕೃತಯುಗದ ಮೊದಲ ಕಾಲದಲ್ಲಿ ಭೂಮಿಯ ಸಕಲ ತೀರ್ಥಗಳನ್ನು ಸುತ್ತಾಡಿ ಬಂದ ಕೃತವ್ರಣನೆಂಬ ಬ್ರಾಹ್ಮಣನು, ಅಲ್ಲಿನ ಸರೋವರಕ್ಕೆ ಇಳಿದು, ಜಪಮಾಡುತ್ತಿದ್ದಾಗ, ಒಂದು ಮೊಸಳೆಯು ಆತನ ಕಾಲನ್ನು ಹಿಡಿದು ಸೆಳೆಯುತ್ತಿರಲು, ಹೇಗಾದರೂ ಅದರ ಬಾಯಿಂದ ಬಿಡಿಸಿಕೊಂಡು, ಕೊಳದ ತಡಿಗಡರಿಬಂದು, ಕಡುಮುಳಿದ ಆ ವಿಪ್ರನು, 'ಈ ಕೆಟ್ಟ ನೀರನ್ನು ಇನ್ನು ಮುಂದೆ ಯಾವನಾದರೂ ಕುಡಿದರೆ ಹುಲಿಯಾಗಲಿ' ಎಂದು ಶಪಿಸಿದಂತೆ, ಯಜ್ಞಾಶ್ವವು ಆ ಕೊಳದ ನೀರ್ಗುಡಿದು ಹುಲಿಯಾಯಿತು; ಹುಲಿಯಾಗಿ ಅರ್ಜುನನನ್ನು ಹೆದರಿಸಿತು, ಇಂತು, ಬಂದೊದಗಿದ ದುರ್ಘಟನೆಗಳೆಲ್ಲವೂ ಪರಮಾತ್ಮನ ಕೃಪೆಯಿಂದ ಪರಿಹಾರವಾದುವು.

ಪಾರಿಪ್ಲವ ದೇಶದಿಂದ ಹೊರಟ ಕುದುರೆಯು ಬಹಳ ದೇಶಗಳನ್ನು ಕಳೆಕಳೆದು, ಸ್ತ್ರೀರಾಜ್ಯವನ್ನು ಪ್ರವೇಶಿಸಿತು. ಅರ್ಜುನನ ಸೇನೆಯೂ ಅದನ್ನು ಹಿಂಬಾಲಿಸಿ ಆ ವನಿತಾಮಯ ರಾಷ್ಟ್ರದ ಸೀಮೆಯನ್ನು ಸೇರಿತು. ಹೆಸರಿಗೆ ತಕ್ಕಂತೆ ಆ ರಾಜ್ಯ ಸ್ತ್ರೀಯರದೇ ಆಗಿತ್ತು. ಅಲ್ಲಿನ ಸ್ತ್ರೀಯರು ಮಧುಪಾನ ಮತ್ತೆಯರೂ, ಮಾನವತಿಯರೂ, ಸುಂದರಿಯರೂ, ಗಾನ, ನರ್ತನ, ವೇಣು, ವೀಣಾ ವಿನೋದ ಪ್ರವೀಣೆಯರೆನಿಸಿದ್ದರು. ಅವರಿಗೆಲ್ಲಾ ಒಬ್ಬಾಕೆ ರಾಣಿಯಾಗಿದ್ದಳು. ಉಳಿದವರೆಲ್ಲರೂ ಆಕೆಯ ಕೈಕೆಳಗೆ ಸಂತೋಷದಿಂದ ಬಾಳುತ್ತಿದ್ದರು. ಅಲ್ಲಿನ ತರುಣಿಯರು ವಿಷಕನ್ಯೆಯರಾಗಿದ್ದುದರಿಂದ, ಆ ರಾಜ್ಯವನ್ನು ಪ್ರವೇಶಿಸಿದ ಪುರುಷರು ಬಹುಕಾಲ ಬಾಳುತ್ತಿರಲಿಲ್ಲ. ಆ ಸ್ತ್ರೀಯರು ಹೆಣ್ಣು ಮಕ್ಕಳನ್ನು ಮಾತ್ರ ಹೆರುತ್ತಿದ್ದರು. ಇಂತಹ ಆಶ್ಚರ್ಯಕರವಾದ ಸ್ತ್ರೀರಾಜ್ಯದ ಸುದ್ದಿಯನ್ನು ತಿಳಿದ ಅರ್ಜುನನು ತನ್ನ ಪಡೆಯವರೆಲ್ಲಾ ಅಲ್ಲಿ ಬಹಳ ಎಚ್ಚರಿಗೆಯಿಂದಿರಬೇಕೆಂದು ಡಂಗುರ ಸಾರಿಸಿದನು.

ತನ್ನಿಚ್ಛೆಯಿಂದ ತುರಗವು ಸ್ತ್ರೀರಾಜ್ಯವನ್ನು ಪ್ರವೇಶಿಸಲು, ಅದರ ಹಣೆಯ ಪಟ್ಟದ ಲೇಖನವನ್ನೋದಿದ ಸ್ತ್ರೀ ಪಡೆಯು ಬಂದು ಸಮಾಚಾರವನ್ನು ಅವರ ರಾಣಿಯಾದ ಪ್ರಮೀಳೆಯೆಂಬವಳಿಗೆ ತಿಳಿಸಿತು–

"ಅಮ್ಮಾ, ಇದು, ಚಂದ್ರವಂಶದ ಅರಸು ಯುಧಿಷ್ಠಿರನ ಕುದುರೆಯಂತೆ; ಭೂಮಿಯಲ್ಲಿ ಸಾಮರ್ಥ್ಯವಿದ್ದವರು ಯಾರಾದರೂ ಇದ್ದರೆ ಈ ಕುದುರೆಯನ್ನು

ಕಟ್ಟಿಹಾಕಬೇಕಂತೆ; ಇದರ ರಕ್ಷಣೆಗೆ ಅರ್ಜುನನು ಬಂದಿರುವನಂತೆ; ನಾವು ಕಟ್ಟಿದರೆ ಆತನು ಬಿಡಿಸುವನಂತೆ; ಇದೆಲ್ಲಾ ಹೊಸ ಸುದ್ದಿಯಲ್ಲವೆ?

ಪ್ರಮೀಳೆ ಎಲ್ಲವನ್ನು ಕುತೂಹಲದಿಂದ ಕೇಳಿದಳು; ನಸುನಕ್ಕಳು. ತನ್ನ ಲಾಯದಲ್ಲಿ ಕುದುರೆಯನ್ನು ಕಟ್ಟಿಹಾಕಿಸಿದಳು. ಸಿಂಹಾಸನದಿಂದ ಇಳಿದು ಸಂಗ್ರಾಮಕ್ಕೆ ಹೊರಟಳು.

ಪ್ರಮೀಳೆಯೊಡನೆ ಆಕೆಯ ಸ್ತ್ರೀಸೈನ್ಯವೂ ಹೊರಡಲನುವಾಯಿತು. ಹೊಳೆಹೊಳೆವ ಕಣ್ಣುಗಳ ಚಪಲೆಯರ ಸೈನ್ಯದಿಂದೊಡಗೂಡಿದ ಲಕ್ಷ ಕುದುರೆಗಳೂ, ಸ್ತನಭಾರಧೀರಮಂದಗತಿಯ ಪದಬಲದಿಂದ ಕೂಡಿದ ಮದಗಜಗಮನೆಯರೊಡಗೂಡಿದ ಲಕ್ಷ ಆನೆಗಳೂ, ಹುಣ್ಣಿಮೆಯ ಚಂದ್ರನಂತೆ ದುಂಡುಮೊಗದ ರಮಣಿಯರಿಂದ ಸೇರಿದ ಲಕ್ಷ ರಥಗಳೂ, ಕೃಶಾಂಗಿಯರೂ, ನವಯುವತಿಯರೂ. ಪೊಸಹೊನ್ನಿನ ಬಣ್ಣದ ಶರೀರ ಕಾಂತಿಯುಳ್ಳವರೂ ಆದ ಸುಂದರಿಯರನ್ನೊಳಗೊಂಡಿರುವ ಮೂರು ಲಕ್ಷ ಪದಾತಿಬಲದೊಡಗೂಡಿ ಪ್ರಮೀಳೆ ಅರ್ಜುನನೊಡನೆ ಹೋರಾಡಲು ಸಿದ್ಧಳಾದಳು. ಬಿಗಿದಚಲ್ಲಣಗಳನ್ನುಟ್ಟು, ಹೊಳೆವ ಹೆರಳುಗಳನ್ನು ಬಿಟ್ಟು, ಹಣೆಗೆ ತಿಲಕವನ್ನಿಟ್ಟು, ಮೈಗೆ ಆಭರಣಗಳನ್ನು ತೊಟ್ಟು, ನಗೆಮೊಗದ ಮಿಂಚುಗಳನ್ನು ಬೀಸಿ, ಪರಿಮಳಾನುಲೇಪನಗಳನ್ನು ಪೂಸಿ, ಚಾಪಲತೆಗಳನ್ನು ಬೀಸಿ ಸ್ತ್ರೀಸೈನ್ಯವು ಕಾಳಗಕ್ಕೆ ಮುಂದೊತ್ತಿತು. ಕೆಲವರು ಆನೆಗಳ ಮೇಲೇರಿ. ಇತರರು ಕುದುರೆಗಳನ್ನು ಬಂಗಾರದ ತೇರುಗಳಿಗೆ ಕಟ್ಟಿ. ಬೇರೆಯವರು ಸಾಲುಗಟ್ಟಿ ಹೀಗೆ ಪ್ರೇಕ್ಷಕರಿಗೆ ವಿಚಿತ್ರವೆನಿಸುವಂತೆ ಸುಂದರಿಯರು ಸಂಗ್ರಾಮಕ್ಕೆ ಸಿದ್ಧರಾಗಿ ಬಂದರು.

ಇಂತು ಪ್ರಮೀಳೆಯ ಹೆಣ್ಣುಪಡೆ ಅರ್ಜುನನ ಪುರುಷಸೈನ್ಯದ ಮೇಲೆ ಮುತ್ತಿಗೆ ಹಾಕಿತು. ಬಾಲಭಾಸ್ಕರನ ಬಿಂಬವೂ, ಶಶಿಮಂಡಲವೂ ಏಕಕಾಲದಲ್ಲಿ ಮೂಡಿಬರುವಂತೆ ಹೊನ್ನಿನ ತೇರನ್ನೇರಿ ಮುಖಕಾಂತಿ ಶೋಭಿಸುತ್ತಿರಲು. ಪ್ರಮೀಳೆಯು ಮುಂದೊತ್ತಿ ಬಂದಳು. ಅರಿಬಲದ ಮಧ್ಯೆ ಉನ್ನತಕಪಿಕೇತನದಿಂದೊಪ್ಪುವ ಕಿರೀಟಿಯನ್ನು ಕಂಡು ನಸುನಗುತ್ತ ಮಾತನಾಡಿಸಿದಳು—

"ಓಹೋ ! ಫಲುಗುಣನೆಂಬವನು ನೀನೆಯೋ? ನಿನ್ನ ಕುದುರೆಯನ್ನು ನಾನು ಕಟ್ಟಿದ್ದೇನೆ. ಅದನ್ನು ಬಿಡಿಸುವರೆ ನೀನು ಹಠಹಿಡಿಯುವೆಯಾ? ಅಥವಾ ವಿನಯವುಳ್ಳವನಾಗುವೆಯಾ?"

ಪ್ರಮೀಳೆ ಬಿಲ್ಲನ್ನು ಹೆದೆಯೇರಿಸಿ ಜೇಗೆಯ್ದಳು,

"ಅಕಟಾ, ಹಿಂದೆ ಮದನಾರಿಯೊಡನೆ ಕಾದಿದ ನನಗೆ ನಾರಿಯೊಡನೆ ಕಾಳಗವೆ? ನಾರಿಯ ಮೇಲೆ ಎಂತು ಬಾಣಗಳನ್ನು ಬಿಡಲಿ? ಎಲೈ ಸ್ತ್ರೀಯೇ, ನಿನ್ನೊಡನೆ ಈ ತೆರನ ಕಾಳಗ ಕೊಡುವುದು ಸರಿಯೆ? ಇಂತಹ ಸಂಗ್ರಾಮದಲ್ಲಿ ಏನು ಸ್ವಾರಸ್ಯವಿದೆ?"

ಅರ್ಜುನನ ಸರಸೋಕ್ತಿ ಪ್ರಮೀಳೆಯ ಮನಸ್ಸಿಗೆ ನಾಟಿತು. ದಿಟ್ಟೆಯಾದ ಆಕೆ ಉತ್ತರವಿತ್ತಳು—

"ಹಾಗಾದರೆ ನೀನು ನನ್ನನ್ನು ವರಿಸು; ಯುದ್ಧವನ್ನು ನಿಲ್ಲಿಸುವೆನು; ಕುದುರೆಯನ್ನು ಬಿಟ್ಟುಕೊಡುವೆನು. ಅಥವಾ ಕಾದುವ ಆತುರವಿದ್ದರೆ ಇದಿರಾಗು."

ಪ್ರಮೀಳೆ ತನ್ನ ಶಕ್ತಿಯನ್ನು ತೋರಿಸುವಂತೆ ಅರ್ಜುನನಿಗೆ ಎಚ್ಚಳು. ಅರ್ಜುನನು ಇನ್ನೂ ಸಿಟ್ಟಿಗೇಳಲಿಲ್ಲ; ಎಷ್ಟಾದರೂ ಆಕೆ ಹೆಣ್ಣಲ್ಲವೆ? ನಗುತ್ತಾ ನುಡಿದನು—

"ಹೆಣ್ಣೆ, ನಿನ್ನಂತಹ ವಿಷಕನ್ಯೆಯರನ್ನು ವರಿಸುವರೆ ನಾನೇನು ಮರುಳನೆ? ನಾವು ಇತರ ಗಂಡುಸರಂತಲ್ಲ; ನನ್ನೊಡನೆ ಪರಾಕ್ರಮದ ಮಾತನಾಡುವರೆ ಜಾಗರೂಕಳಾಗಿರು; ಕುದುರೆಯನ್ನು ಬೇಗನೇ ಬಿಟ್ಟುಬಿಡು; ಹೆಂಗೊಲೆಗೆ ನಾವು ಅಳುಕುವೆವು."

"ವೀರನೇ, ನಿನಗೆ ಕಾದಲು ಮನಸ್ಸಿದೆಯೇ ಬಾಣವನ್ನು ತೊಡು; ಕಾದಲನಾಗುವೆಯಾ ಕೈಹಿಡಿ; ಇದರಲ್ಲಿ ಯಾವುದಕ್ಕೂ ನಾನು ತಪ್ಪುವಳಲ್ಲ; ಯಾವ ವಿಷಯದಲ್ಲಿಯೂ ನಿನ್ನೊಡನೆ ನಾನು ಸೋಲುವವಳೂ ಅಲ್ಲ."

ಪ್ರಮೀಳೆ ತನ್ನ ಸಾಮರ್ಥ್ಯವನ್ನು ತೋರಿಸುವಂತೆ ಅರ್ಜುನನ ಮೇಲೆ ಸರಳಮಳೆಗರೆದಳು. ಪ್ರಮೀಳೆಯ ದಿಟ್ಟತನವು ಅರ್ಜುನನನ್ನು ಕೆರಳಿಸಿತು. ಹೆಂಗುಸೊಬ್ಬಳು ಇಂತು ಮುಂದೆ ಬಂದು ಕಾದುವೆಯಾ ಇಲ್ಲವೇ ಕಾದಲನಾಗುವೆಯಾ ಎಂದು ಮೂದಲಿಸಿದರೆ ಯಾವ ಗಂಡುಸು ತಾನೇ ಸುಮ್ಮನಿರುವನು? ಅರ್ಜುನನೂ ಆಕೆಯ ಮೇಲೆ ಅಸ್ತ್ರಗಳನ್ನು ಹೂಡಿದನು. ಇಬ್ಬರಿಗೂ ಭೀಷಣ ಯುದ್ಧ ನಡೆಯಿತು. ಇಷ್ಟಾದರೂ ಪ್ರಮೀಳೆ ಜಗ್ಗದಿರುವುದನ್ನು ಕಂಡು ಕನಲಿದ ಕಿರೀಟಿಯು ಒಂದು ದಿವ್ಯಾಸ್ತ್ರವನ್ನು ಧನುಸ್ಸಿಗೇರಿಸಿದನು.

"ಅರ್ಜುನಾ, ತಡೆ. ಹೆಂಗೊಲೆಗೆ ಹೇಸದೆ ಮಹಾಸ್ತ್ರವನ್ನು ಹೂಡುವೆಯಾ? ಸಿಟ್ಟುಗೊಳ್ಳದಿರು; ಅಯುತವರ್ಷಗಳ ಕಾಲ ಈಕೆಯೊಡನೆ ಕಾದಿದರೂ ಗೆಲವಾಗದು. ಪಂಥವನ್ನು ತೊರೆದು ಇವಳನ್ನು ವರಿಸು; ಈಕೆ ಪತ್ನಿಯಾಗಿ ಅನುಕೂಲೆಯಾದರೆ ನಿನಗೆ ಒಳ್ಳೆಯದಾಗುವುದು."

ಇಂತು ಸಕಲಜನರೂ ಕೇಳುವಂತೆ ಆಕಾಶವಾಣಿಯಾಯಿತು. ಅಶರೀರ ವಾಕ್ಕನ್ನು ಅರ್ಜುನನು ಆಲಿಸಿದನು. ಹೂಡಿದ ದಿವ್ಯಾಸ್ತ್ರವನ್ನು ಧನುಸ್ಸಿನಿಂದ ಇಳಿಸಿದನು. ಮುಂದಿನ ವಿಚಾರವನ್ನು ಆಪ್ತರೊಡನೆ ಆಲೋಚಿಸಿದನು. ಅವರೆಲ್ಲರ ಒಪ್ಪಿಗೆಯಂತೆ, ಪ್ರಮೀಳೆಯನ್ನು ಬರಮಾಡಿ ಆಕೆಯ ಕೈಹಿಡಿದನು. ಆತನಿಗೆ ಅನುಕೂಲೆಯಾದ ಪತ್ನಿಯಾಗಿರಲು ಆಕೆ ಒಪ್ಪಿದಳು. ಯುಧಿಷ್ಠಿರನು ದೀಕ್ಷೆಗೊಂಡಿರುವುದರಿಂದ, ಅಶ್ವರಕ್ಷಣೆಗೆ ಹೋಗಬೇಕಾಗಿರುವ ತಾನು ಆಕೆಯೊಡ ಗೂಡಿ ಆ ರಾಜ್ಯದಲ್ಲಿ ಸುಖವಾಗಿರಲು ಇದು ಕಾಲವಲ್ಲೆಂದು ಅವಳನ್ನು ಸಂತೈಸಿ, ಮುಂದೆ ಹಸ್ತಿನಾವತಿಯಲ್ಲಿ ನಡೆಯಲಿರುವ ಅಶ್ವಮೇಧಕ್ಕೆ ಆಕೆಯನ್ನು ಬರ ಮಾಡಿಸಿಕೊಂಡು, ಅಲ್ಲಿ ಶ್ರೀಕೃಷ್ಣಸಂದರ್ಶನ ಮಾಡಿಸಿ ಅವಳ ವಿಷವಧುತ್ವವನ್ನು ಹೋಗಲಾಡಿಸಿ ಸುಖವಾಗಿರಬಹುದೆಂದು ಸಮಾಧಾನಪಡಿಸಿದನು. ಪ್ರಮೀಳೆಯು ಅಂದೇ ತನ್ನ ಸಮಸ್ತವಸ್ತು ಭಂಡಾರಗಳನ್ನೂ. ಸರ್ವಸ್ವವನ್ನೂ ಅರ್ಜುನನ ಪಾದತಲವಲ್ಲಿ ಸಮರ್ಪಿಸಿ, ವನಿತೆಯರ ದಲಸಹಿತ ಯುಧಿಷ್ಠಿರನನ್ನು ನೋಡುವ ಕುತೂಹಲದಿಂದ ಹಸ್ತಿನಾವತಿಗೆ ಹೊರಟು ಹೋದಳು.

ಪ್ರಮೀಳೆಯನ್ನು ಹಸ್ತಿನಾವತಿಗೆ ಕಳುಹಿಸಿ ಅರ್ಜುನನು ಕುದುರೆಯ ಕೂಡೆ ಮುನ್ನಡೆದನು. ಆತನು ಮುಂದೆ ಪ್ರವೇಶಿಸಿದ ದೇಶಗಳು ಆಡು, ಆನೆ, ಗೋವು, ಕುದುರೆ, ಕೋಣ ಮುಂತಾದ ಪ್ರಾಣಿಗಳಿಂದ ಪೂರಿತವಾಗಿದ್ದುವು. ಆ ದೇಶವನ್ನು ದಾಟಿ ಮುಂದೆ ಬರಲು, ಗಿಡಗಿಡಗಳ ಪೊದರುಗಳಲ್ಲಿ, ಅತಿ ಸೂಕ್ಷ್ಮವಾದ ಜೀವರಾಶಿಗಳು ಸೂರ್ಯೋದಯ ಕಾಲದಲ್ಲಿ ಉದ್ಭವಿಸಿ, ಮಧ್ಯಾಹ್ನಕ್ಕೆ ಯೌವನವನ್ನು ತಾಳಿ, ಅಸ್ತಮಾನದಲ್ಲಿ ಸಾಯುತ್ತಿರಲು, ಆ ವಿಚಿತ್ರವನ್ನು ಕಂಡು ಆಶ್ಚರ್ಯಗೊಂಡು ಮುನ್ನಡೆದನು. ಯಜ್ಞಾಶ್ವದ ಬೆಂಬಲ ನಡೆಯುತ್ತಾ ಮುಂದಿನ ದೇಶಕ್ಕೆ ಬರಲು, ಅಲ್ಲಿ ಚರ್ಮದ ಉಡುಗೆ ಯವರೂ, ವಕ್ರಾಂಗಿಯರೂ, ಒಂದು ಕೈಯುಳ್ಳವರೂ ಒಂದು ಕಾಲುಳ್ಳವರೂ, ಒಂದು ಕಣ್ಣಿನವರೂ, ಮೂರು ಪಾದಗಳುಳ್ಳವರೂ, ಎತ್ತರ ಮೂಗಿನವರೂ, ಮೂರು ಕಣ್ಣಿನವರೂ, ಎರಡು ಕೋಡುಗಳುಳ್ಳವರೂ, ಒಂದೇ ಕೋಡುಳ್ಳ ವರೂ, ಕತ್ತೆ ಕುದುರೆ ಮೊಗದವರೂ ಇರುವ ದೇಶಗಳನ್ನೆಲ್ಲಾ ನೋಡುತ್ತಾ ಸಾಶ್ಚರ್ಯದಿಂದ ಮುಂದೆ ಸಾಗಿದನು.

ಇಂತಹ ವಿಶೇಷ ದೇಶಗಳನ್ನೂ, ವಿಚಿತ್ರ ಪ್ರಾಣಿಗಳನ್ನೂ ಸಂದರ್ಶಿಸುತ್ತಾ ಕುದುರೆಯೊಡನೆ ಅರ್ಜುನನು ಸಾಗುತ್ತಿರಲು, ಯಜ್ಞಾಶ್ವವು ಭೀಷಣನೆಂಬ ರಾಕ್ಷಸನ ರಾಜ್ಯವನ್ನು ಪ್ರವೇಶಿಸಿತು. ದೀರ್ಘದೇಹಿಗಳೂ, ಮಹಾಕೋಪಿ

ಗಳೂ, ನರಭಕ್ಷಕರೂ, ಸೊಟ್ಟ ಮುಸುಡಿನವರೂ. ಬಹು ಮಾಯಾವಿಗಳೂ, ಕಠಿಣ ಹೃದಯರೂ, ಕೊಲೆಗಡಿಕರೂ, ಸಮರಶೂರರೂ ಆದ ಮೂರು ಕೋಟಿ ರಕ್ಷಸರ ಪಡೆಯೊಡನೆ ಭೀಷಣಾಸುರನು ಆ ರಾಜ್ಯವನ್ನು ಆಳುತ್ತಿದ್ದನು. ಆತನು ಬಕಾಸುರನ ಮಗನಾಗಿದ್ದನು. ಹಿಂದೆ ತನ್ನ ತಂದೆಯನ್ನು ಅರ್ಜುನನ ಅಣ್ಣ ನಾದ ಭೀಮಸೇನನು ಕೊಂದ ಪ್ರತೀಕಾರವನ್ನು ಸಾಧಿಸಲು, ಮೇದೋಪೂತ ನೆಂಬ ರಾಕ್ಷಸ ಪುರೋಹಿತನ ಸೂಚನೆಯಂತೆ, ಅರ್ಜುನನನ್ನೇ ವಧ್ಯಪ್ರಾಣಿ ಯನ್ನಾಗಿ ಮಾಡಿ ನರಮೇಧವನ್ನು ಗೈವೆನೆಂದು ಮೂರು ಕೋಟಿ ರಕ್ಕಸರ ರಕ್ಕಸಪಡೆಯೊಡನೆ ಅರ್ಜುನನನ್ನು ಹಿಡಿತರಲು ಹೊರಟನು. ರಾಕ್ಷಸರನ್ನು ಕಂಡುದೇ ತಡ, ಧ್ವಜದ ಮೇಲೇರಿದ್ದ ಹನುಮಂತನ ಹುರುಪು ಏರಿತು. ತನ್ನ ಬಾಲವನ್ನು ಬೀಸಿ ಅನೇಕರನ್ನು ಆತನು ಕೊಂದನು. ಭೀಷಣನೊಡನೆ ಭೀಷಣ ವಾಗಿ ಅರ್ಜುನನಿಗೆ ಕಾಳಗವಾಯಿತು. ಕೊನೆಗೆ ಆತನನ್ನೂ ಸೋಲಿಸಿ, ಅವನ ರಾಜ್ಯದ ಸಕಲ ವಸ್ತುಗಳನ್ನು ಸೂರೆಗೊಂಡು ಅರ್ಜುನನು ಕುದುರೆಯನ್ನು ಹಿಂಬಾಲಿಸಿ ಮುಂದೆ ಸಾಗಿದನು.

೮

ಯಜ್ಞಾಶ್ವವು ಭೀಷಣನ ರಾಜ್ಯದಿಂದ ದಕ್ಷಿಣದಿಙ್ಮುಖವಾಗಿ ಸಾಗಿತು. ಅಷ್ಟರಲ್ಲಿ ಮಳೆಗಾಲವು ಬಂತು. ಧರೆಗೆ ಬೇಸಗೆಯು ಬೇಸರ ಹೋಯಿತು. ಎಂಟು ದಿಕ್ಕುಗಳಲ್ಲಿಯೂ ಮುಗಿಲುಗಳೆದ್ದುವು. ಮಿಂಚು ಹೊಡೆಯಿತು. ಸಿಡಿಲು ಗುಡುಗಿತು. ಮುಸಲಧಾರೆಯಿಂದ ಮಳೆ ಸುರಿಯಿತು. ನೆಲದಲ್ಲಿ, ಹೊಲದಲ್ಲಿ ಹಚ್ಚನೆ ಹಸಿರು ಚಿಗುರುಗಳು ಶೋಭಿಸಿದುವು. ಪುಷ್ಪಗಳಿಂದೊಡ ಗೂಡಿ ಜಾಜಿಗಳು ಪರಿಮಳಿಸಿದುವು: ವೃಕ್ಷರಾಜಿಗಳು ಆಕಾಶದೆತ್ತರದಲ್ಲಿ ರಾರಾಜಿಸಿದವು. ಕೇದಗೆಯ ಧೂಳಿ ಕೆದರಿತು: ರಭಸದ ಗಾಳಿ ಬೀಸಿತು. ತೋಟಗಳ ತಾವುಗಳಲ್ಲಿ ಎಳೆಯ ಮಾವುಗಳು ಕಾಯ್ಬಿಟ್ಟವು. ನಡೆವ ದಾರಿಗಳು ನವವಾರಿಗಳಿಂದ ತುಂಬಿದುವು. ಎಡೆಬಿಡದೆ ಸುರಿವ ಧಾರಾವರ್ಷದಿಂದ ಧರಾತಳದ ಸಿರಿ ಮೆರೆಯಿತು.

ಇಂತು ಮೆರೆವ ಮಳೆಗಾಲದಲ್ಲಿ ಯಜ್ಞಾಶ್ವವು ಮಣಿಪುರವನ್ನು ಪ್ರವೇಶಿ ಸಿತು. ಅರ್ಜುನನು ಮಹಾಸಂಪತ್ಸಮೃದ್ಧವಾದ ಆ ನಗರದ ಶೋಭೆಯನ್ನು

ನಿರೀಕ್ಷಿಸಿ ಬೆರಗಾದನು. ಕುದುರೆಯು ಪಟ್ಟಣವನ್ನು ಹೊಗಲು ಅರ್ಜುನನ ಸೇನೆ ಪುರೋದ್ಯಾನವೀಥಿಗಳಲ್ಲಿ ಬೀಡುಬಿಟ್ಟಿತು. ಇಂತಹ ಸೊಗಸಿನ ನಗರದ ಹೆಸರೇನೆಂದೂ, ಇದರ ಒಡೆಯನಾರೆಂದೂ ಅರ್ಜುನನು ಹಂಸಧ್ವಜನೊಡನೆ ಕೇಳಲು ಆತನು, ಆ ನಗರದ ಹೆಸರನ್ನೂ ಅದನ್ನಾಳುವ ಬಭ್ರುವಾಹನನ ಪ್ರಖ್ಯಾತಿಯನ್ನೂ ಆತನ ಹೆಸರಾಂತ ಮಂತ್ರಿ ಸುಬುದ್ಧಿಯ ಗುಣಾತಿಶಯ ವನ್ನೂ ವಿವರಿಸಿ ಆತನ ಪ್ರಜೆಗಳೆಲ್ಲರೂ ವಿಷ್ಣುಭಕ್ತರೆಂದೂ, ಸತ್ಯಾಚಾರ ಸಂಪನ್ನರೆಂದೂ, ಅಂತಹ ಪ್ರಜೆಗಳಿಂದಲೂ, ಅಸದೃಶಚತುರಂಗಬಲದ ಸಾಮರ್ಥ್ಯದಿಂದಲೂ ಕೂಡಿದ ಬಭ್ರುವಾಹನನು ಕುದುರೆಯನ್ನು ಕಟ್ಟಿಹಾಕು ವುದು ನಿಶ್ಚಿತವೆಂದೂ ತಿಳಿಸಿದನು.

ಅಷ್ಟರಲ್ಲಿಯೇ ಅರ್ಜುನನಿಗೊಂದು ದುಶ್ಶಕುನವು ಸಂಭವಿಸಿತು. ಕಿರೀಟಿಯ ಕಿರೀಟಾಗ್ರದಲ್ಲಿ ಹದ್ದೊಂದು ಬಂದು ಕಾಲೂರಿಕುಳಿತಿತು. ಇದನ್ನು ಕಂಡು ನೀಲಧ್ವಜಾದಿರಾಜರು, ಇದು ಮುಂದಣ ಅಪಜಯದ ಸೂಚನೆಯೆಂದು ನೊಂದುಕೊಂಡರು.

ಅತ್ತ. ಮಣಿಪುರದಲ್ಲಿ, ಬಭ್ರುವಾಹನನು ವಿಶೇಷಾಶ್ವವೊಂದು ಪುರ ಪ್ರವೇಶಮಾಡಿದ ವಾರ್ತೆಯನ್ನು ಕೇಳಿ, ಅದನ್ನು ತರಿಸಿ ಕಟ್ಟಿಸಿದನು; ಅದರ ಪಟ್ಟದ ಲಿಪಿಯನ್ನು ಓದಿ ನೋಡಿದನು. ಅಷ್ಟರಲ್ಲಿ ಅಸ್ತಮಯ ಸಮಯ ವಾಗಲು. ಸಂಧ್ಯಾವಂದನೆಗಳನ್ನು ಆಚರಿಸಿ ಹತ್ತು ಸಾವಿರ ಕಂಬಗಳಿಂದ ಶೋಭಿ ಸುವ ತನ್ನ ಆಸ್ಥಾನಮಂಟಪಕ್ಕೆ ಬಂದು ಸಸಂಭ್ರಮದಿಂದ ಓಲಗಗೊಟ್ಟನು. ಆತನ ಆಶ್ರಿತರಾದ ಅನೇಕ ರಾಜರು ಬಂದು ಸೇರಿದ್ದರು. ಪಟುಭಟರು ನೆರೆದಿದ್ದರು. ಸುಬುದ್ಧಿ ಮೊದಲಾದ ಮುಖ್ಯಮಂತ್ರಿಗಳೂ ಆಸೀನರಾಗಿದ್ದರು.

"ಪರಮಂಡಲದಿಂದ ಬಂದ ರಾಜರ ಯಜ್ಞತುರಗವನ್ನು ಕಟ್ಟಿಹಾಕಿರು ವೆವು. ನಾವು ಸಂಗ್ರಾಮದಲ್ಲಿ ಸಮರ್ಥರಾದವರು: ನಾಳೆಯ ದಿನದಲ್ಲಿ ಯಾರೂ ಹಿಂದುಳಿಯಬಾರದು; ಸೈನ್ಯವು ಸಮರಕ್ಕೆ ಸಜ್ಜಾಗಿರಲಿ!"

ಇಂತು ಬಭ್ರುವಾಹನನ ಕಟ್ಟಪ್ಪಣೆಯಾಯಿತು: ಯುದ್ಧಕ್ಕೆ ಸಕಲ ಸಿದ್ಧತೆಗಳೂ ನಡೆದುವು. ಅಂತಃಪುರಕ್ಕೂ ಈ ಸುದ್ದಿ ಮುಟ್ಟಿತು. ಅರ್ಜುನನ ಗುಣಾವಳಿಗಳನ್ನು ನಿತ್ಯವೂ ನೆನೆನೆನೆದು ಚಿಂತಿಸುತ್ತಿರುವ ಬಭ್ರುವಾಹನನ ತಾಯಿ ಚಿತ್ರಾಂಗದೆಯೂ ನಡೆದ ಸರ್ವವೃತ್ತಾಂತವನ್ನೂ ಕೇಳಿದಳು. ತನ್ನ ನಿತ್ಯಧ್ಯಾನದ ಪತಿದೇವನೇ ರಾಜ್ಯಕ್ಕೆ ಆಗಮಿಸಿದ ಸಂತಸದ ಸುದ್ದಿಯಿಂದ ಆಕೆಗೆ ಸಂತೋಷ ವಾಯಿತು. ಸಂಭ್ರಮಾನ್ವಿತಳಾಗಿ ಚಿತ್ರಾಂಗದೆಯು ಪುತ್ರನ ಓಲಗಕ್ಕೆ ಬಂದಳು.

ಜನನಿಯನ್ನು ಕಂಡೊಡನೆ ಆತನು ಇದಿರೆದ್ದನು. ಮಗನನ್ನು ತಾಯಿ ತೆಗೆದಪ್ಪಿಕೊಂಡಳು—

"ಮಗನೇ, ನೀನಿಂದು ಕುಂತೀಪುತ್ರನ ತುರಗವನ್ನು ಕಟ್ಟಿದೆಯಾ? ಒಳ್ಳೆಯ ಕೆಲಸಮಾಡಿದಿ! ಇಂತಹ ಕ್ಷುದ್ರಬುದ್ಧಿಯನ್ನು ನೀನು ಎಲ್ಲಿ ಕಲಿತೆ? ಈ ಗುರುದ್ರೋಹಕ್ಕೆ ನಿನ್ನ ಮನಸ್ಸು ಹೇಗೆ ಒಡಂಬಟ್ಟುದೊ! ಅಯ್ಯೋ! ನನ್ನ ರಮಣನ ಆಗಮನವು, ಆತನ ಹೊಟ್ಟೆಯಲ್ಲಿ ಹುಟ್ಟಿದ್ದರೂ, ನಿನಗೆ ಬೇಡವಾಯಿತೆ? ಉದ್ರೇಕದಿಂದ ಕುದುರೆಯನ್ನು ಕಟ್ಟಿದಿಯಲ್ಲಾ! ನಿನ್ನ ರಾಜಕಾರ್ಯವು ಭದ್ರವಾಯಿತು. ಅಮೃತಕ್ಕಾಗಿ ಸಮುದ್ರವನ್ನು ಮಥಿಸಿದರೆ ಅದರಲ್ಲಿ ವಿಷವುದಿಸಿದಂತೆ ನನ್ನ ಉದರದಲ್ಲಿ ನಿನ್ನ ಜನ್ಮವು ಸಂಭವಿಸಿತು."

ಮಾತೆಯ ಈ ನಿಷ್ಠುರೋಕ್ತಿಯಿಂದ ಬಭ್ರುವಾಹನನು ನಡುನಡುಗಿದನು. ತನ್ನಿಂದ ಅನ್ಯಾಯವಾಯಿತೇ ಎಂದು ಭೀತಿಯಿಂದ ಆಕೆಯ ಅಡಿಗೆರಗಿದನು. ಕೈಮುಗಿದು ಹೇಳಿದನು—

"ಅಮ್ಮಾ, ಕ್ಷತ್ರಿಯರ ಪಂಥದಂತೆ ಕುದುರೆಯನ್ನು ಕಟ್ಟಿದೆನು. ನಿಮ್ಮ ಚಿತ್ತಕ್ಕೆ ಅದು ಸಮ್ಮತವಲ್ಲವೆಂದ ಮೇಲೆ ನಾನು ಮಾಡಿದ ಈ ಕೆಲಸ ನೀತಿಯಾಗಲಾರದು. ನಿಮ್ಮ ಅಡಿಗಳಿಗೆ ಎಂತು ಸಂಪ್ರೀತಿಯಾಗುವುದೋ ಅದನ್ನು ಆಜ್ಞಾಪಿಸಿದಿರಾದರೆ ಅಂತೆ ಮಾಡುವೆನು. ಅದಕ್ಕಿಷ್ಟು ಕಳವಳವೇಕೆ?"

"ಮಗನೇ, ಅರ್ಜುನನು, ಎಂದು ನನ್ನನ್ನು ಬಿಟ್ಟು ನಿಜನಗರಿಗೆ ಹೋದನೋ, ಅಂದು ಮೊದಲ್ಗೊಂಡು, ನಾನು ಅವನನ್ನು ಅಗಲಿದ ವ್ಯಥೆಯಿಂದ ತಪಿಸುತ್ತಿದ್ದೆನು. ಪುಣ್ಯವಶದಿಂದ ಇಂದು ಆತನು ಇಲ್ಲಿಗೆ ಬಂದಿರುವನು. ಪ್ರಿಯಪತಿಯನ್ನು ನಾನು ಎಂತು ಮರೆಯಲಿ? ನೀನಿಂದು ಆತನನ್ನು ಕಂಡು. ನಿನ್ನ ಸರ್ವಸ್ವವನ್ನೂ ತಂದೆಯ ಪಾದಗಳಿಗೆ ಒಪ್ಪಿಸಿದೆಯಾದರೆ, ನಾನು ಮಾಡಿದ ನಿಷ್ಕಾಪೂರ್ವಕವಾದ ತಪಸ್ಸು ಫಲಿಸಿತು. ಕಂದ! ನಿನ್ನ ಮಂತ್ರಿ, ಮಿತ್ರ, ಕೋಶ, ರಾಷ್ಟ್ರಾದಿಸರ್ವಸ್ವವನ್ನೂ, ನಿನ್ನನ್ನೂ, ತಂದೆಗೆ ಒಪ್ಪಿಸಿ, ನಿನ್ನ ತನು, ಧನ, ಪ್ರಾಣಗಳು ಅವರದಾಗಲು, ಯುಧಿಷ್ಠಿರ ಸಾರ್ವಭೌಮನ ವೈರಿಗಳ ಮುಂದೆ ಶೌರ್ಯವನ್ನು ತೋರಿಸು; ದುಷ್ಟಸಂತಾನದಂತೆ ನನ್ನ ಪಾತಿವ್ರತ್ಯಕ್ಕೆ ಕೊರತೆಯನ್ನು ಮಾಡದಿರು; ನಿಂದೆಗೆ ಒಳಗಾಗದಿರು."

ಹೀಗೆಂದು, ಮಗನಿಗೆ ಬುದ್ಧಿ ನೀತಿಗಳನ್ನು ತಿಳಿಸಿ ಚಿತ್ರಾಂಗದೆ ಪತಿಯ ಬರವಿಗಾಗಿ ಹಾರೈಸುತ್ತಾ ಹರ್ಷಿತಳಾಗಿದ್ದಳು.

ತಾಯಿಯನ್ನು ಬಭ್ರುವಾಹನನು ಸಮಾಧಾನಪಡಿಸಿ ಕಳುಹಿಸಿದನು.

"ಮಂತ್ರಿ, ನೀನು ರಾಜನೀತಿಗಳನ್ನು ಬಲ್ಲವನು; ಇಂದು ನಾವು ತಂದೆಯನ್ನು ಹೋಗಿ ಕಾಣುವುದು ಉಚಿತವೆನಿಸುವುದೊ? ಅನುಚಿತವೆನಿಸುವುದೋ ಹೇಗೆ? ನೀನು ಇದರ ನಿಶ್ಚಯವನ್ನು ನನಗೆ ಹೇಳು,"

—ಸುಬುದ್ಧಿಯೊಡನೆ ಬಭ್ರುವಾಹನನು ಮಂತ್ರಾಲೋಚನೆ ಮಾಡಿದನು.

"ಅರಸಾ, ಇನ್ನು ನೀನು ಆಲೋಚಿಸಲೇಕೆ? ಮೊದಲು ನಮಗೆ ಈ ಸಂಗತಿಯು ತಿಳಿಯದಾಯಿತು; ಅದರಿಂದ ಕುದುರೆಯನ್ನು ಕಟ್ಟಿದೆವು; ನಿನ್ನ ತಂದೆ ಧರ್ಮಪುತ್ರನು ಸೋದರನು. ಆತನೇ ಈ ಯಜ್ಞಾಶ್ವವನ್ನು ರಕ್ಷಿಸುತಿದ್ದಾನೆ. ಇದನ್ನು ತಿಳಿದ ಬಳಿಕವೂ ಕಲಿತನದಿಂದ ಕುದುರೆಯನ್ನು ಕಟ್ಟಿಹಾಕುವುದು ನೀತಿಪಥವಲ್ಲ. ಬೇಗನೇ, ನೀನೀಗ ಪಟ್ಟಣದಲ್ಲಿ ಗುಡಿಗಳನ್ನು ಕಟ್ಟಿಸು. ನಿನ್ನ ಅಖಿಲರಾಜ್ಯಪದವಿಯನ್ನು ತಂದೆಗೆ ಒಪ್ಪಿಸು; ಮನ್ನೆಯರೂ, ಚತುರಂಗ ಸೇನೆಯೂ, ನಾಗರಿಕ ಜನರು ಸರ್ವರೂ ಅಲಂಕರಿಸಿಕೊಳ್ಳಲಿ; ಕನ್ನೆಯರು ಹೊದಳು, ಮೊಸರು, ಗರಿಕೆ, ಮಂತ್ರಾಕ್ಷತೆಗಳಿಂದ ಕನ್ನಡಿಕಲಶ ಓಡಿದು ಸಂದರ್ಶನಕ್ಕಾಗಿ ಬರಲಿ. ಸಾಮ್ರಾಜ್ಯದಲ್ಲಿರುವ ಸಮಸ್ತಸುವಸ್ತುಗಳನ್ನು ತೆಗೆಸಿಕೊಂಡು ಪಿತೃದರ್ಶನಕ್ಕಾಗಿ ಹೊರಡು; ತಡಮಾಡಬೇಡ."

ಸುಬುದ್ಧಿಯ ಸದುಪದೇಶದಂತೆ ಬಭ್ರುವಾಹನನು ನಾನಾ ದೇಶಗಳಿಂದ ಬಂದ ದೊರೆಗಳೆಲ್ಲರನ್ನೂ ಅವರವರ ಮನೆಗಳಿಗೆ ಕಳುಹಿಸಿದನು. ಪಟ್ಟಣದಲ್ಲಿ ಡಂಗುರಹೊಯ್ಸಿದನು. ಕೋಶದ ಸುವಸ್ತುಗಳನ್ನು ತೆಗೆಸಿದನು. ಪ್ರತ್ತಳಿ ಬಂಗಾರಗಳನ್ನು ತುಂಬಿಸಿದ ನೂರು ಬಂಡಿಗಳನ್ನು ತರಿಸಿದನು. ಗೋಮಹಿಷಿಗಳನ್ನೂ, ಮದಗಜಗಳನ್ನೂ, ಕುಲಾಶ್ವಗಳನ್ನೂ, ಮಣಿಮಯ ರಥಗಳನ್ನೂ, ತರುಣಿಯರನ್ನೂ ಬರಿಸಿದನು. ಬೆಳ್ಳಿ ಬಂಗಾರಗಳಿಂದ ಕೂಡಿದ ಹಲವು ಕೊಪ್ಪರಿಗೆಗಳನ್ನು ಹೊರಿಸಿದನು. ಹೊಳೆಹೊಳೆವ ಹೊಸ ಹೊಸ ಆಭರಣಗಳನ್ನೂ, ವಿಧವಿಧದ ರತ್ನಗಳನ್ನೂ. ಪರಿಪರಿಯ ಪರಿಮಳ ದ್ರವ್ಯಗಳನ್ನೂ, ಸುವರ್ಣ ಮಂಚದಲ್ಲಿ ಶೋಭಿಸುವ ಹಂಸತೂಲಿಕೆಯ ಮೃದುತಲ್ಪಗಳನ್ನೂ, ಬೀಸಣಿಗೆ, ಚಾಮರ ಶ್ವೇತಾತಪತ್ರಗಳನ್ನೂ, ಸವ್ಯಸಾಚಿಗೆ ಕಾಣ್ಕೆಕೊಡಲೆಂದು ಬಭ್ರುವಾಹನನು ಸಡಗರದ ಸಿದ್ಧತೆ ಮಾಡಿದನು.

ಅಷ್ಟರಲ್ಲಿ, ಕೋಳಿ ಕೋಕೋ ಎಂದು ಕೂಗಿತು; ಮೂಡು ದಿಕ್ಕು ಬೆಳ್ಳಗೆ ಬೆಳಗಾಯಿತು; ತಂಗಾಳಿ ತಣ್ಣನೆ ಬೀಸಿತು; ಹಕ್ಕಿಗಳು ಚಿಲಿಪಿಲಿ ಗುಟ್ಟಿದುವು. ತಾವರೆಗಳು ಅರಳಿ ಪರಿಮಳಿಸಿದುವು: ತುಂಬಿ ಝೇಂಕರಿಸಿತು; ನಕ್ಷತ್ರಗಳು ಹರಿದುವು; ಕತ್ತಲೆ ತೊಲಗಿತು; ನೈದಿಲೆ ಕೊರಗಿತು; ಜನರ ಕಣ್ಣೆವೆ ತೆರೆಯಿತು;

ದೇಗುಲಗಳ ವಾದ್ಯಘೋಷ ಕೇಳಿಸಿತು. ಇಂತು ಸೂರ್ಯೋದಯವಾಗಲು, ಸವ್ಯಸಾಚಿಯ ಸುತನಾದ ಬಭ್ರುವಾಹನನು ಸಂಧ್ಯಾವಿಧಿಗಳನ್ನು ಆಚರಿಸಿ, ವಸ್ತುಗಳನ್ನೆಲ್ಲಾ ಸಂಪಾದಿಸಿ, ಕಿರೀಟಿಯನ್ನು ಕಾಣಲು ಹೊರಟನು. ಅತ್ತ, ಪಾಂಡವರ ಪಾಳಯದಲ್ಲಿ ಅರ್ಜುನನು ನಿತ್ಯಕರ್ಮಗಳನ್ನೆಲ್ಲಾ ತೀರಿಸಿ, ಶ್ರೀಕೃಷ್ಣನನ್ನು ಸ್ಮರಿಸಿ, ವೃಷಕೇತು ಮೊದಲಾದ ವೀರರನ್ನು ಕರೆಸಿ ಕುದುರೆಯನ್ನು ಬಿಡಿಸುವ ಸಮಾಲೋಚನೆಯನ್ನು ಮಾಡಿ ಸಂಗ್ರಾಮಕ್ಕೆ ಸಿದ್ಧನಾಗಿ, ಸಕಲ ಸನ್ನಾಹದೊಡನೆ, ವಾದ್ಯರಭಸದಿಂದ ಹೊರಡುತ್ತಿದ್ದನು.

ಆ ಸಮಯದಲ್ಲಿ, ಬಭ್ರುವಾಹನನು ಸುಬುದ್ಧಿ ಮೊದಲಾದ ಮಂತ್ರಿಗಳ ಗಡಣದಿಂದ, ಸಕಲ ವಸ್ತುಸಮೇತ ಕುದುರೆಯನ್ನು ತೆಗೆದುಕೊಂಡು, ಚತುರಂಗ ಬಲ ಸಮನ್ವಿತನಾಗಿ, ಕಳಸ ಕನ್ನಡಿ ಹಿಡಿದು ಬರುತ್ತಿರುವ ವಿಲಾಸಿನಿಯರು ಸಹಿತ, ಪುರಜನ ಬ್ರಾಹ್ಮಣ ಸಮೂಹದಿಂದ ಕೂಡಿದವನಾಗಿ, ಗುಡಿತೋರಣಾದಿ ಸಿಂಗಾರಗಳಿಂದ ಅರ್ಜುನನನ್ನು ಇದಿರ್ಗೊಳ್ಳಲು ಹೊರಟು ಬರುತ್ತಿದ್ದನು. ಪಿತೃವಿನ ಪುಣ್ಯದರ್ಶನೋತ್ಸುಕನಾದ ಆತನು, ಅರ್ಜುನನೆಲ್ಲಿರುವನೆಂದು ವಿಚಾರಿಸುತ್ತಾ ನಿಂದಲ್ಲಿ ನಿಲ್ಲದೆ, ಸಂಭ್ರಮಾನ್ವಿತನಾಗಿ ಬಂದು, ಪಾರ್ಥನನ್ನು ಕಂಡು, ಹರ್ಷಪುಳಕಗೊಂಡು ಆತನ ಪಾದಗಳಿಗೆ ಅನರ್ಘ್ಯರತ್ನಗಳನ್ನು ಸುರಿದು, ಕೈಗಳನ್ನು ಮುಗಿದು ಭಕ್ತಿಯಿಂದ ಸಾಷ್ಟಾಂಗ ಪ್ರಣಾಮ ಮಾಡಿದನು. ಅವನೊಡನೆ ಬಂದ ಪರಿವಾರವೂ, ಪುರಜನರೂ, ಕಾಮಿನಿಯರೂ, ಅರ್ಜುನನ ಶಿರದ ಮೇಲೆ ಅರಳಮಳೆಯನ್ನು ಸುರಿಸಿದರು, ಮುತ್ತು ರತ್ನಗಳನ್ನು ಚೆಲ್ಲಿದರು. ಸುಬುದ್ಧಿ ಮೊದಲಾದ ಮಂತ್ರಿಗಳು ಸಾಲಾಗಿ ಬಂದು ಕೈಮುಗಿದು ಕಾಣ್ಕೆಯಿತ್ತರು. ಈ ಪರಿಯ ಉಪಚಾರಗಳನ್ನು ನೋಡಿ ಅರ್ಜುನನಿಗೆ ಆಶ್ಚರ್ಯವಾಯಿತು—

"ಎಲೈ ಅರಸನೇ ! ನೀನು ಯಾರು?"

—ಅರ್ಜುನನು ಪ್ರಶ್ನಿಸಿದನು.

"ತಂದೆಯೇ ! ನಾನು ನಿನ್ನ ಪುತ್ರನು. ನನ್ನನ್ನು ಹೆತ್ತ ತಾಯಿ ಚಿತ್ರಾಂಗದೆ. ಸಾಕಿದವಳು ಉಲೂಪಿ. ನೀನು ಹಿಂದೆ ತೀರ್ಥಯಾತ್ರೆಗೆ ಬಂದಿದ್ದಾಗ, ಅವರಿಬ್ಬರೂ ನಿನಗೆ ಮೆಚ್ಚಿನ ಮಡದಿಯರಾದರು. ನಾನು ನಿನ್ನ ಮಗನಾಗಿರುವೆನು. ಈ ಕುದುರೆಯನ್ನು ಹಿಡಿದು ಕಟ್ಟಿ ತಪ್ಪು ಮಾಡಿದೆನು. ನನ್ನ ಅವಗುಣವನ್ನು ಮನ್ನಿಸಬೇಕು."

ಎದ್ದು ನಿಂತು ಕೈಮುಗಿದು ಇಂತು ಬಿನ್ನವಿಸಿದ ಬಭ್ರುವಾಹನನು ಭಯ ಭಕ್ತಿಯಿಂದ ಪುನಃ ಅರ್ಜುನನ ಅಡಿಗಳಿಗೆರಗಿದನು: ಕಾಲು ಹಿಡಿದು ಬೇಡಿಕೊಂಡನು.

ಪಾರ್ಥನು ಪುತ್ರನ ಮುಖವನ್ನು ನೋಡಲೇ ಇಲ್ಲ. ಆತನನ್ನು ಮತ್ತೆ ಮಾತಾಡಿಸಲೂ ಇಲ್ಲ. ಚಕಿತನಾಗಿ ಚಿತ್ರಾರ್ಪಿತಪ್ರತಿಮೆಯಂತೆ ನಿಂತಿದ್ದನು. ಅರ್ಜುನನ ಔದಾಸೀನ್ಯವನ್ನೂ, ಬಭ್ರುವಾಹನನ ಭಯಭರಿತ ಭಕ್ತಿಭಾವವನ್ನೂ ಕಂಡು ವೃಷಕೇತು ಮೊದಲಾದವರು ವಿಸ್ಮಿತರಾದರು, ಕರುಣೆಯಿಂದ ಕರಗಿದರು--

"ಪಾರ್ಥ, ಏಕಿಂತು ಸುಮ್ಮಗಿದ್ದಿಯೇ? ಈತನು ಕಂಡಿತವಾಗಿಯೂ ನಿನ್ನ ಪುತ್ರನಹುದು; ಬಹಳ ಪರಾಕ್ರಮಿಯೂ, ಮಹಾ ವೈಭವ ಶ್ಲಾಘ್ಯನೂ, ಅಭಿಮಾನಿಯೂ, ಲೋಕಮಾನ್ಯನೂ, ಸೂರ್ಯಸದೃಶನೂ, ನಿನ್ನನ್ನೇ ಹೋಲುತ್ತಿರುವ ಸುಂದರ ಸ್ವರೂಪನೂ ಆದ ಈ ನಿನ್ನ ಸಂಪುತ್ರನು ಪಾದಗಳಿಗೆ ಸಾಷ್ಟಾಂಗವೆರಗಿರಲು ಆತನನ್ನು ಒಪ್ಪಿಕೊಳ್ಳದೆ ಯಾಕೆ ಸುಮ್ಮನಿದ್ದಿಯೇ?"

ಪ್ರದ್ಯುಮ್ನ ಹಂಸಧ್ವಜಾದಿಗಳು ಸಾರಿ ಹೇಳಿದರು. ಏನು ದುರದೃಷ್ಟವೋ! ಅವರ ಹಿತೋಕ್ತಿಗಳನ್ನು, ಅರ್ಜುನನು ಕೇಳದೆ, 'ತಲೆ ಹೋಗುವುದಕ್ಕೆ ತನ್ನ ಕಾಲು ಹೊಣೆಯಾಯಿತು' ಎಂಬ ಮಾತು ಸತ್ಯವಾಗುವಂತೆ, ಕೋಪದಿಂದ ಬಭ್ರುವಾಹನನನ್ನು ನಿಟ್ಟಿಸುತ್ತಾ ಪುತ್ರನಾದ ಆತನನ್ನು ತನ್ನ ಕಾಲಿಂದ ಒದೆದು ಇಂತು ಮೂದಲಿಸಿದನು; ಬೈದು ಭಂಗಿಸಿದನು:

"ಎಲವೋ! ನೀನು ಹೇಡಿಯು; ಲೋಕದಲ್ಲಿ ನನಗೆ ಜನಿಸಿದವನು ಈ ರೀತಿ ಅಂಜುವನೆ? ಮೊದಲು ಕುದುರೆಯನ್ನು ಕಟ್ಟಿ ಆ ಮೇಲೆ ಕಾದದೆ ಬಿಡುವನೆ? ನೀನು ಚಿತ್ರಾಂಗದೆಗೆ ವೈಶ್ಯನಿಂದ ಸಂಭವಿಸಿದ ಪುತ್ರನಲ್ಲದೆ, ನನಗೆ ಜನಿಸಿದವನಾಗಿದ್ದರೆ ಕ್ಷತ್ರಿಯರ ಪಂಥವನ್ನು ಬಿಡುತ್ತಿದ್ದೀಯೆ? ಸುಭದ್ರೆಗೆ ನನ್ನಿಂದ ಜನಿಸಿದ ಅಭಿಮನ್ಯು, ಒಬ್ಬನೇ ಆದರೂ ಶತ್ರುಗಳ ಭೀಕರ ಚಕ್ರವ್ಯೂಹದಲ್ಲಿಗೆ, ಯುಧಿಷ್ಠಿರನು ತಡೆದರೂ ಕೇಳದೆ, ಮುನ್ನುಗ್ಗಿ, ಯುದ್ಧದಲ್ಲಿ ಶತ್ರುವೀರರನ್ನು ಗೆದ್ದು ವೀರಸ್ವರ್ಗವನ್ನು ಪಡೆದನು. ಅವನಲ್ಲದೆ ಬೇರೆ ನನಗೆ ಪುತ್ರರುಂಟೆ? ಸಿಂಹದ ಹೊಟ್ಟೆಯಲ್ಲಿ ಜಂಬುಕವು ಜನಿಸುವುದೆ? ಎಲೈ ಹೆಂಬೇಡಿ, ಕುಲಗೇಡಿಯಾದ ನೀನೂ ನನ್ನ ಬಸಿರಿಂದ ಬಂದವನೆ? ಧೂರ್ತನೇ, ಕಾದದೆ ಕುದುರೆಯನ್ನೇತಕ್ಕೆ ತಂದಿದ್ದೀಯೆ? ಹೆಂಬೇಡಿ, ನಿನಗೆ ಈ ಪ್ರಬಲ ಚತುರಂಗ ಬಲವೇತಕ್ಕೆ? ರಾಜರ ಆಡಂಬರದ ಛತ್ರಚಾಮರಗಳೇತಕ್ಕೆ? ವ್ಯರ್ಥ ಡಂಬಾಚಾರದ ಈ ಬಾಣಗಳೇತಕ್ಕೆ? ನೀನು ಬದುಕಿರುವುದು ವ್ಯರ್ಥ; ಸುಡು; ಆಚೆಗೆ ನಡೆ. ಗಂಧರ್ವ ರಾಜಪುತ್ರಿಯಾದ ನಿನ್ನ ತಾಯಿ ಚಿತ್ರಾಂಗದೆ ನರ್ತಕಿಯಷ್ಟೆ? ಕ್ಷತ್ರಿಯರ ವೇಷವನ್ನು ಹಾಕಿಕೊಂಡು ಈ ರೀತಿ ನಾಟಕದ ಪಾತ್ರ ವಹಿಸುವುದು ನಿನಗೆ ಯೋಗ್ಯವಾದುದಲ್ಲ. ಸಮಸ್ತ ರಾಜರ ಮುಂದೆ ಇಂತು ಕುದುರೆಯನ್ನು

ಕಟ್ಟಿದ ನಿನ್ನ ಇಂದಿನ ಅದ್ಭುತ ಕಾರ್ಯವು ಬಹಳ ಪೌರುಷದ್ದಾಯಿತು! ಹೋಗಾಚೆಗೆ"

ಹಾವಿನ ಹೆಡೆಯನ್ನು ತುಳಿದಂತಾಯಿತು; ಅಭಿಮಾನಧನನಾದ ಬಭ್ರುವಾಹನನು ಅರ್ಜುನನ ಕುತ್ಸಿತನಿಂದಾವಾಕ್ಯಗಳನ್ನು ಕೇಳಿ ಕಡುಕನಲಿದನು. ರೋಷ ವಿಷಾದದಿಂದ ಉರಿದೆದ್ದನು—

"ಎಲಾ, ನನ್ನ ತಾಯಿಯನ್ನು ನಿಂದಿಸಿದೆಯಾ? ನನ್ನನ್ನು ತಿರಸ್ಕರಿಸಿದೆಯಾ? ನಿನ್ನ ತಲೆಯನ್ನು ಉರುಳಿಸದಿದ್ದಲ್ಲಿ, ನನ್ನನ್ನು ಗುರುತು ಮಾಡಿ ನೀನು ಹೇಳಿದ ಈ ಮಾತುಗಳೆಲ್ಲವೂ ದಿಟವಾಗುವುದು; ನನ್ನ ಈ ಪ್ರತಿಜ್ಞೆಯನ್ನು ಮರೆಯದಿರು."

ಬಭ್ರುವಾಹನನು ಥಟ್ಟನೆ ಅಲ್ಲಿಂದ ಅರ್ಜುನನಿಗೆ ಮುಖ ತಿರುಗಿಸಿ ಪುರದತ್ತ ತೆರಳಿದನು. ಕುದುರೆಯನ್ನೂ ಹಿಂತೆರಳಿಸಿದನು. ತಂದ ವಸ್ತುಗಳೆಲ್ಲವನ್ನೂ ತೆಗೆಸಿದನು. ತುರಗವನ್ನು ಲಾಯದಲ್ಲಿ ಬಿಗಿಸಿದನು. ಪುರಜನ ಸ್ತ್ರೀಯರನ್ನು ಪಟ್ಟಣಕ್ಕೆ ಪುಗಿಸಿದನು. ಸಚಿವರನ್ನೂ. ಸೇನಾನಾಯಕರನ್ನೂ ಕರೆಸಿದನು. ಚತುರಂಗಸೇನೆ ನೆರೆಯಿತು. ರಣಭೇರಿ ಮಸಗಿತು. ಸೇನಾಪದ ಧೂಳಿ ನಭೋಮಂಡಲವನ್ನು ಮುಸುಕಿತು. ತಂದೆ ಮಕ್ಕಳೊಳಗೆ ಕರ್ಕಶದ ಕಾಳಗ ಮಸಗಿತು. ಉಭಯ ಪಕ್ಷದವರೂ ಬಾಣ. ತೋಮರ, ಪರಶು. ಚಕ್ರ. ಖಡ್ಗ, ಮುದ್ಗರ, ಕೃಪಾಣ, ಡೊಂಕಣಿ, ಕುಂತ, ಸುರಗಿ. ಭಲ್ಲೆಹ, ಶಕ್ತಿ ಮುಂತಾದ ಕೈದುಗಳನ್ನು ಹಿಡಿದು ಚಾರಿ. ಚಳಕ. ಚಾಳಿಯ. ಚಮರು. ಪಾಣಿಲಾಘವ, ಪಂಥಪಾಡುಗಳಿಂದ ಕನಲಿ ಕಾದಾಡಿದರು. ಅರ್ಜುನನನ್ನು ಅರಸುತ್ತಾ ಬಭ್ರುವಾಹನನು ಮುನ್ನುಗ್ಗಿದನು. ಆತನಿಗೆ ಅನುಸಾಲ್ವನು ಇದಿರಾಗಲು ಅವನನ್ನು ಧರೆಗುರುಳಿಸಿದನು. ಮುಂದೊತ್ತಿ ಬರುತ್ತಿರುವ ಚಿತ್ರಾಂಗದ ಪುತ್ರನೊಡನೆ ಮುರಾರಿಯ ಸೂನು ಮಾರಾಂತನು. ಅವರೊಳಗೆ ಭೀಕರವಾದ ಕಾಳಗ ನಡೆಯಿತು, ಒಬ್ಬರಿಗೊಬ್ಬರು ಸೋಲದೆ. ನೆಲದ ಮೇಲೆ ನಿಂತು ಕೆಲಹೊತ್ತು, ಆಕಾಶವನ್ನಡರಿ ಕೆಲಕಾಲ. ಹೀಗೆ ಹಿಂದಣ ಗರುಡ ಹನುಮಂತರ ಸಂಗ್ರಾಮದಂತೆ ಸೆಣಸಾಡಿದರು. ತನ್ನ ಮಣಿರಥವು ಮುರಿದು ಹೋಗಲು ಹೊಸತೊಂದು ತೇರನ್ನು ಸಜ್ಜುಗೊಳಿಸಿ ಘೋರ ಯುದ್ಧಕ್ಕೆ. ಬಭ್ರುವಾಹನನು ಸಿದ್ಧನಾಗಲು. ತನ್ನಿದಿರಲ್ಲಿ ಪ್ರದ್ಯುಮ್ನನನ್ನು ಕಾಣದೆ ಮುನ್ನುಗ್ಗಿದನು. ಇದಿರಾದ ವೃಷಕೇತುವನ್ನು ವಶಗೆಡಿಸಿದನು; ಕೆಣಕಿದ ಹಂಸಧ್ವಜನು ಮಾನವನ್ನು ಮಾರಿದನು; ಯೌವನಾಶ್ವನ ಯೌವನ ಕುಂದಿತು;

ಸುವೇಗನು ಇದಿರಾಗಿ ಸುವೇಗದಿಂದ ಹಿಮ್ಮೆಟ್ಟಿದನು. ಅನಿರುದ್ಧನು ಯುದ್ಧ ಭೂಮಿಗೆ ಬಿದ್ದನು. ಕೃತವರ್ಮನು ಕಂಗಾಲಾದನು. ಸಾತ್ಯಕಿ ಸೋತುಹೋದನು.

ಪಡೆಯು ದಿಕ್ಕೆಟ್ಟು ಓಡುತ್ತಿರುವುದನ್ನೂ, ಕಡುಗಲಿಗಳು ಕಂಗೆಡುತ್ತಿರುವುದನ್ನೂ, ಗಜತುರಗಗಳು ನಗರದ ಕಡೆ ಕಾಲ್ತೆಗೆಯುತ್ತಿರುವುದನ್ನೂ, ದೊರೆಗಳು ಧರೆಗುರುಳುತ್ತಿರುವುದನ್ನೂ, ನೋಡಿದ ಅರ್ಜುನನು ಕೋಪದಿಂದ ಘುಡುಘುಡಿಸಿ ಕಿಡಿಕಿಡಿಯಾದನು, ಗಾಂಡೀವವನ್ನು ಹಿಡಿದು ಟಂಕಾರ ಗೈದನು. ರೋಷರಕ್ತಾಕ್ಷನಾದನು. ಖಾಂಡವದಹನದಂದು ಸುರಪತಿಯೊಡನೆ ಸೆಣಸಿದ ಶೌರ್ಯದಿಂದ ಧೀರ ಬಭ್ರುವಾಹನನಿಗೆ ಇದಿರಾದನು.

ಪುನಃ ಉತ್ಪಾತಗಳು ತಲೆದೋರಿದುವು; ಅರ್ಜುನನ ಮಕುಟಾಗ್ರದಲ್ಲಿ ರಣಹದ್ದು ಕುಳಿತುಕೊಂಡಿತು. ಕಪೋತಗಳು ರಥದಲ್ಲಿ ಗೂಡು ಕಟ್ಟಿದುವು. ಶರೀರವಲ್ಲಿ ಮುಂಡದ ನೆರಳು ಮಾತ್ರ ಕಂಡಿತು; ರುಂಡ ಕಾಣಿಸಲೇ ಇಲ್ಲ. ಇದೆಲ್ಲವನ್ನೂ ಕಂಡು ಗಾಂಡೀವಿ ಕಂಗೆಟ್ಟನು. ತನಗೆ ಸೋಲು ಸಿದ್ಧವೆಂದು ಬಗೆದನು. 'ಧರ್ಮಜನು ದುರ್ಭಾಗ್ಯನಲ್ಲಾ!' ಎಂದು ಮರುಗಿದನು. 'ಶ್ರೀಕೃಷ್ಣನು ಅಶ್ವಮೇಧವನ್ನು ಎಂತು ಪೂರ್ತಿಗೊಳಿಸುವನೋ?' ಎಂದು ಚಿಂತಿಸಿದನು. ವೃಷಕೇತುವನ್ನು ಬಳಿಗೆ ಕರೆದು ಹೇಳಿದನು.

"ಕಂದ! ನೀನು ಯಜ್ಞಾಶ್ವಸಮೇತ ಹಸ್ತಿನಾವತಿಗೆ ಮರಳಿ. ಸಕಲ ಸಾಮಗ್ರಿಗಳಿಂದಲೂ, ತೇಜೋಮಯವಾದ ಅಗ್ನಿಗಳಿಂದಲೂ, ಬ್ರಾಹ್ಮಣ ಸಮಾಜದಿಂದಲೂ, ಸಮಸ್ತ ಋತ್ವಿಕ್ಕುಗಳ ಬಹು ವಿಧದ ಮಂತ್ರ ಘೋಷಗಳಿಂದಲೂ, ಶೋಭಿಸುತ್ತಿರುವ ಯಜ್ಞಶಾಲೆಯಲ್ಲಿ ಭೀಮ ಕೃಷ್ಣಾದಿ ಬಂಧು ಬಾಂಧವರಿಂದಾವರಿಸಿಕೊಂಡು, ಅಗ್ರಜನು ಯಜಮಾನನಾಗಿ ಮೆರೆವ ಸೌಭಾಗ್ಯವನ್ನು ಕಾಣುವೆನೆ? ಇನ್ನು ಚಿಂತಿಸಿ ಪ್ರಯೋಜನವೇನಿದೆ? ಬಭ್ರುವಾಹನನೊಡನೆ ನಾನು ಯುದ್ಧ ಮಾಡುವುದು ಖಂಡಿತ; ನಮ್ಮ ವಂಶಕ್ಕೆ ನೀನೊಬ್ಬನೇ ಸುಪುತ್ರನು ಉಳಿದಿದ್ದೀಯೆ; ನಿನ್ನ ಬಾಳುವೆಯನ್ನು ಕೆಡಿಸಬೇಡ; ಹಸ್ತಿನಾವತಿಗೆ ಹೋಗಿ ಶ್ರೀಕೃಷ್ಣ ಯುಧಿಷ್ಠಿರರಿಗೆ ಕೈಮೀರಿ ಹೋದ ರಾಜಕಾರ್ಯದ ಸ್ಥಿತಿಯನ್ನು ಎಚ್ಚರಿಸು; ಹೋಗೆನ್ನದಿರು; ನನ್ನ ಮಾತನ್ನು ಕೇಳು."

ನರನ ನೈರಾಶ್ಯಭಾವಕ್ಕಾಗಿ ವೃಷಕೇತು ನೊಂದನು; ಪಾರ್ಥನಲ್ಲಿ ರಣೋತ್ಸಾಹವನ್ನು ಹುರಿದುಂಬಿಸಿ ಹೇಳಿದನು—

"ತಾತ! ಇದೆಂತಹ ಮಾತು? ನಿನ್ನನ್ನು ಬಿಟ್ಟು ನಾನು ನಗರಿಗೆ ಹೋಗುವವನೆ? ಯುದ್ಧದಲ್ಲಿ ನಾನು ಜೀವಗಳ್ಳನಾದರೆ ಆಕಾಶ ಮಾರ್ಗದಿಂದ ನನ್ನ

ಪಿತಾಮಹನು ಭೂಮಿಗೆ ಬೀಳದಿರುವನೆ? ಹೇಡಿಗಳೊಡನೆ ಹೇಳುವ ಈ ಮಾತನ್ನು ನನ್ನೊಡನೆ ಹೇಳದಿರು; ನನ್ನನ್ನು ಹೆದರಿಸದಿರು; ನೀನು ಕಾಳಗದ ಕುರಿತು ಕಳವಳಗೊಳ್ಳಬೇಡ. ಇವನ ಬಿಂಕವನ್ನು ಈಗಲೇ ನಾನು ಮುರಿಯುವೆನು. ಆದಾಗದಿದ್ದರೂ, ತಂದೆಗಾಗಿ, ಒಡೆಯನಿಗಾಗಿ, ಗೋನಿಮಿತ್ತಕ್ಕಾಗಿ. ದೇವ ಸಜ್ಜನರ ಸಲುವಾಗಿ ಪ್ರಾಣಬಿಟ್ಟರೆ ಆತನಿಗೆ ಸಂದೇಹವಿಲ್ಲದೆ, ಕೈವಲ್ಯ ದೊರಕುವುದೆನ್ನುವರು. ಹೀಗಿರಲು, ನಾನು ಹೇಗೆ ಯುದ್ಧಕ್ಕೆ ಹಿಮ್ಮೆಟ್ಟಲಿ? ಹಿಮ್ಮೆಟ್ಟಿದೆನಾದರೆ ಪತ್ನಿಗೆ ಮುಖ ತೋರಿಸಲೆಂತು? ಸೂರ್ಯಸುತನ ಸುಪುತ್ರನೆಂದು ಹೇಳಿಸಿಕೊಳ್ಳುವೆನೆ? ಅನೃತವನ್ನು ನುಡಿಯಲಾರೆನು; ಇಗೋ. ಈಗಲೇ ನನ್ನನ್ನು ಕಾಳಗಕ್ಕೆ ಹರಸಿ ಕಳುಹು; ಸಕಲ ಸೇನಾಸಮೂಹದೊಡನೆ ಬಭ್ರುವಾಹನನು ನನಗಿದಿರಾಗಲಿ! ನಿನ್ನ ಕಣ್ಣುಗಳಿಗೆ ಇಂದು ನಾನು ಹಬ್ಬವನ್ನು ಉಂಟುಮಾಡುವೆನು."

ಅರ್ಜುನನ ಅಪ್ಪಣೆ ಪಡೆದು ವೃಷಕೇತು ರಥವನ್ನಡರಿದನು. ಬಭ್ರುವಾಹನನ ಮೇಲೆ ಏರಿ ಹೋದನು. ಕರ್ಣಜ ಪಾರ್ಥಜರಿಬ್ಬರೂ ಅದ್ಭುತವಾಗಿ ಅಸದೃಶವಾಗಿ ಹೋರಾಡಿದರು. ಐದು ದಿನಗಳ ಪರ್ಯಂತ ಅವರಿಬ್ಬರೊಳಗೆ ಘೋರ ಸಂಗ್ರಾಮ ಸಾಗಿತು; ವೃಷಕೇತುವಿನ ಸಾಹಸ ಸಾಮರ್ಥ್ಯಗಳನ್ನು ಕಂಡು ಬಭ್ರುವಾಹನನು ಕೊಂಡಾಡಿದನು. ಪಾರ್ಥಜನು ಕೊನೆಗೆ ಕೋಪದಿಂದ ಕಿಡಿಗೊಂಡು ಎಸೆದ ಕರ್ಕಶವಾದೊಂದು ಕಣೆಯು ಕರ್ಣಜನ ಕೊರಳನ್ನು ಖಂಡಿಸಿತು. ತುಂಡರಿಸಿದ ವೃಷಕೇತುವಿನ ರುಂಡವು ಪುಟ ಚೆಂಡಿನಂತೆ ಆಕಾಶಕ್ಕೆ ನೆಗೆದು ಮರಳಿ ಪಾರ್ಥನ ಪಾದಕ್ಕೆ ಬಿದ್ದಿತು! ಆ ಶಿರವನ್ನು ಕೈಗಳಿಂದೆತ್ತಿಕೊಂಡು, ಹಣೆಯಲ್ಲಿಟ್ಟು, ತುಂಬಿಸಿ, ಕಂಬನಿ ತುಂಬಿ ಪಾರ್ಥನು ಬಹಳವಾಗಿ ಶೋಕಿಸಿದನು. ಅವನ ಗುಣ ಶೀಲಗಳನ್ನು ನೆನೆನೆನೆದು ಹಂಬಲಿಸಿದನು. 'ನಮ್ಮ ವಂಶಕ್ಕೆ ಸದ್ಗತಿ ಕೊಡುವ ಸುಪುತ್ರರಿನ್ನಿಲ್ಲವಲ್ಲಾ!' ಎಂದು ಅಳವಳಿದನು. 'ಹಸ್ತಿನಾವತಿಗೆ ಹೋಗಿ ಬಂಧು ಬಾಂಧವರಿಗೆ ಎಂತು ಮುಖ ತೋರಿಸಲಿ?' ಎಂದು ಮರುಗಿದನು!

ಚಿಂತಿಸುತ್ತಿರುವ ಕುಂತೀ ಸುತನನ್ನು ನೋಡಿ ಚಿತ್ರಾಂಗದಾತನಯನು ನಸುನಗುತ್ತಿದ್ದನು—

"ಎಲೈ! ಪಾರ್ಥನೇ, ನಾವು ವೈಶ್ಯಸಂಭವರು. ನಿಮ್ಮ ಬಲ ಸಮಾಜದಲ್ಲಿ ಬಾಣಗಳೆಂಬ ಸಾಮಾನುಗಳನ್ನು ಹರಡಿ, ಜಯವೆಂಬ ಲಾಭವನ್ನು ಪಡೆದೆವು; ಶೂರರ ಶಿರಗಳನ್ನು ಹುಡುಕಿ, ಕೊಂಡುಕೊಂಡೆವು. ಭಟರು ಜೀವಕ್ಕೆ

ಸಂಚಕಾರವನ್ನು ಬೇಡಲು ನಾವು ಅದನ್ನೂ ಕೊಟ್ಟೆವು. ಇನ್ನು ನಿನ್ನ ತಲೆಗೂ ಬೆಲೆ ಕೊಡುವೆವು: ಇದೋ. ಅದಕ್ಕೆ ನಮ್ಮಲ್ಲಿ ಸಾಹಸವೆಂಬ ದ್ರವ್ಯವು ಧಾರಾಳ ವಾಗಿ ಇದೆ."

ಬಭ್ರುವಾಹನನು ಅರ್ಜುನನನ್ನು ಮೂದಲಿಸಿದನು. ತಾನು ಹಿಂದೆ ನಿಂದಿಸಿ ನುಡಿದ ಮಾತುಗಳನ್ನೇ ಪ್ರತ್ಯಸ್ತ್ರಗಳನ್ನು ಮಾಡಿ ತನ್ನೆದೆಗೆ ತಿವಿವಂತೆ ನುಡಿದುದು ನರನ ಹೃದಯಕ್ಕೆ ಚೆನ್ನಾಗಿ ನಾಟಿತು. ಅವನ ಕಣ್ಣಾಲಿಗಳು ಕೆಂಪಡರಿದುವು: ಕೋಪದಿಂದ ಕಿಡಿಗೊಂಡನು; ಧೈರ್ಯವನ್ನು ತಂದುಕೊಂಡು. ಶೋಕವನ್ನು ಈಡಾಡಿದನು. ವೃಷಕೇತುವಿನ ತಲೆಯನ್ನು ಬಿಸುಟು ಧನುಸ್ಸಿಗೆ ಬಾಣವನ್ನು ಹೂಡಿದನು. ಬಭ್ರುವಾಹನನ ಸರ್ವಾಂಗದಲ್ಲಿ ರುಧಿರ ಪ್ರವಾಹ ವನ್ನು ತೋಡಿದನು. ಖತಿಗೊಂಡ ಬಭ್ರುವಾಹನನು ತೀವ್ರಶರವರ್ಷವನ್ನು ಅರ್ಜುನನ ಮೇಲೆ ಸುರಿಸಿದನು. ಅವರ ಭೀಕರ ಯುದ್ಧದಿಂದ ಮೂರು ಲೋಕವೂ ಕಂಪಿಸುತ್ತಿತ್ತು. ಲೋಕದ ಜನರೂ. ನಾಕದ ದೇವತೆಗಳೂ, 'ಅರ್ಜುನ ಬಭ್ರುವಾಹನರ ಯುದ್ಧವು ಅರ್ಜುನ ಬಭ್ರುವಾಹನರ ಯುದ್ಧದಂತೆ' ಎಂದು ಹೊಗಳಿದರು.

ಗಂಗಾದೇವಿಯ ಶಾಪವು ಬರಿದಾಗಲುಂಟೆ? ಪಾರ್ಥನ ಸತ್ವವು ಎಳತೆಳ ತಾಗುತ್ತಾ ಬರುತ್ತಿತ್ತು; ಪಾರ್ಥಿಗೆ ಹುರುಪು ಹುಮ್ಮಸು ಏರುತ್ತಿತ್ತು.

"ಧನಂಜಯ. ನನ್ನ ಪುಣ್ಯಜನನಿಯಾದ ಚಿತ್ರಾಂಗದೆಯು ಪಾವನ ಚರಿತ್ರೆ ಯಾದ ಪತಿವ್ರತೆ; ನಿರ್ನಿಮಿತ್ತವಾಗಿ ಆಕೆಯನ್ನು ನಿಂದಿಸಿದೆಯಲ್ಲಾ ! ಅದರಿಂದಾಗಿ ನಿನ್ನ ಭುಜಬಲವು ಇಂತು ಕುಂದುತ್ತಿರುವುದು; ಇನ್ನು ನಿನ್ನ ವ್ಯರ್ಥ ಸಾಮರ್ಥ್ಯ ಸಾಕು; ಶ್ರೀಕೃಷ್ಣನನ್ನು ಸ್ಮರಿಸಿಕೊ: ಆತನ ಸಾರಥ್ಯವಿಲ್ಲದೆ ನೀನು ಇದುವರೆಗೆ ಯಾವ ವೀರನನ್ನು ತಾನೇ ಗೆದ್ದಿದ್ದೀಯೆ? ಅಂದು ನೀನು ಭೂಮಿಯ ಮೇಲಣ ಆಸೆಯಿಂದ ನಿನ್ನ ಅಣ್ಣನಾದ ಕರ್ಣನನ್ನು ಕೊಂದಿರುವಿ; ಆವನ ಮಗನ ನೆಳಲನ್ನೂ ಸೈರಿಸಲಾರದೆ ಇಂದು ನನ್ನ ಕೈಯಿಂದ ಆತನನ್ನೂ ಕೊಲ್ಲಿಸಿದಿ: ಸಾಕು ! ನಿನ್ನ ಹಗೆ ಮುಗಿಯಿತಷ್ಟೆ? ಪ್ರಾಣವನ್ನು ಉಳಿಸಿ ನಿನ್ನನ್ನು ಬಿಟ್ಟು ಬಿಡುವೆನು; ಹೋಗು; ಧನುಸ್ಸು ಹಿಡಿಯಲು ತ್ರಾಣವಿದ್ದರೆ ಚಕ್ರಪಾಣಿಯ ನ್ನಾದರೂ ನೆನೆ. ಬರಿದೆ ಬಳಲಬೇಡ."

—ಪುನಃ ಬಭ್ರುವಾಸನು ಅರ್ಜುನನನ್ನು ಜರೆದಾಡಿದನು.

"ಮೂಢನೇ, ರಣಾಂಗಣದಲ್ಲಿ ಶತ್ರುವನ್ನು ಕೊಂದರೆ ಯುದ್ಧದಲ್ಲಿ ಹೋರಾಡಿ ಮಡಿದರೆ ಕ್ಷತ್ರಿಯರಿಗೆ ಕೊರತೆಯುಂಟೆ? ಸಂಗ್ರಾಮದಲ್ಲಿ ಸೂರ್ಯ

ಸುತನನ್ನು ಕೊಂದರೇನು? ವೃಷಕೇತು ಮಡಿದರೇನು? ಇದರಿಂದಾಗಿ ನಾನು ಬಲಹೀನನೆ? ಇಷ್ಟರಿಂದಲೇ ನೀನು ಮಹಾಸಮರ್ಥ ನೆನಿಸುವಿಯಾ? ಇನ್ನು ನಿನ್ನ ಶೌರ್ಯವನ್ನು ನೋಡಬಹುದು."

ಅರ್ಜುನನು ಬಾಣಗಳನ್ನು ಸುರಿಸಿದನು; ಬಭ್ರುವಾಹನನು ಅವುಗಳನ್ನು ಮಧ್ಯಮಾರ್ಗದಲ್ಲಿ ಕತ್ತರಿಸುತ್ತಿದ್ದನು. ಪ್ರೀತಿಯಿಟ್ಟು ದ್ರೋಣಾಚಾರ್ಯನು ಕಲಿಸಿಕೊಟ್ಟ ಬಾಣಗಳೆಲ್ಲಾ ಬರಿದಾದವು; ಶಿವನೇ ಮೊದಲಾದ ದೇವತೆಗಳಿತ್ತ ಅಸ್ತ್ರಗಳು ವ್ಯರ್ಥವಾದವು. ಅಷ್ಟರಲ್ಲಿ ಬಭ್ರುವಾಹನನು, ಜ್ವಾಲಾಮುಖಿ ಯಾದ, ಕಾಮರೂಪದ, ಒಡಬಾಗ್ನಿಯಂತಿರುವ ಅರ್ಧ ಚಂದ್ರಾಕೃತಿಯ, ಕೆಂಡ ಗಳನ್ನು ಕಾರುತ್ತಿರುವ, ಜ್ವಲಿಸುವ ದಿವ್ಯಾಸ್ತ್ರವೊಂದನ್ನು ಬಿಲ್ಲಿಗೆ ಹೂಡಿದನು. ಅದನ್ನು ಕಂಡು ಸರ್ವಗ್ರಹಗಳೂ, ಇಂದ್ರಾದಿ ದೇವತೆಗಳೂ, ಅಂಗೀರಸಾದಿ ಮುನಿಗಳೂ ಮರುಗಿದರು. ಮೋಡಗಳು ಕೆನ್ನೀರನ್ನು ಸುರಿಸಿದುವು; ಉಲ್ಕಾ ಪಾತವಾಯಿತು. ಭೂಮಿ ಕಂಪಿಸಿತು. ಸುಂಟರಗಾಳಿ ಸುಳಿಯಿತು.

ಬಭ್ರುವಾಹನನು ಆ ಕರ್ಕಶವಾದ ಬಾಣವನ್ನು ಆಕರ್ಣಾಂತ ಸೆಳೆದು ಬಿಡಲು ಅದರ ಉಜ್ವಲ ಜ್ವಾಲೆಯು ದಿಕ್ಕು ದಿಕ್ಕುಗಳನ್ನು ಕವಿದು ಭುಗು ಭುಗಿಸುತ್ತಾ ಬರುತ್ತಿತ್ತು. ಜ್ವಾಲೆಯು ಪ್ರತೀಕಾರಾಗ್ನಿ ಜ್ವಲಿಸಿತು! ಗಂಗೆಯ ಶಾಪದ ನುಡಿ ಫಲಿಸಿತು.! ಪಾರ್ಥನ ಪ್ರತ್ಯಸ್ತ್ರವನ್ನು ಗಣಿಸದೆ ಬಭ್ರುವಾಹನನ ಆ ಅತ್ಯುಗ್ರಶರವು ಅರ್ಜುನನ ಕೊರಳನ್ನು ಕತ್ತರಿಸಿತು! ವೃಷಧ್ವಜನ ಶಿರದೊಡನೆ ನರನ ಶಿರವು ಕೂಡಿತು; ಕರ್ಣಜನ ಕಬಂಧವನ್ನು ಫಲುಗುಣನ ಮುಂಡವು ಅಪ್ಪಿಕೊಂಡಿತು; ಇದನ್ನು ಕಂಡು ಜನರೆಲ್ಲರೂ ಮರುಗಿದರು. ಕಾರ್ತಿಕ ಏಕಾದಶಿಯ ಮಂಗಳವಾರ ಉತ್ತರಾ ನಕ್ಷತ್ರದಂದು, ಇಂತು, ಪುತ್ರನ ಕೈಯಿಂದ ಪಿತನ ಮರಣವಾಯಿತು; ಕ್ಷಾತ್ರ ವೀರನಾದ ಬಭ್ರುವಾಹನನು ಜಯಘೋಷ ದಿಂದ ನಿಜನಗರಕ್ಕೆ ಹಿಂತಿರುಗಿದನು.

ಮಣಿಪುರದಲ್ಲಿ. ವಿಜಯನನ್ನು ವಧಿಸಿದ ವಿಜಯದಿಂದಾಗಿ ನಾಗರಿಕರಿ ಗುಂಟಾದ ಸಂಭ್ರಮೋಲ್ಲಾಸಗಳನ್ನು ಹೇಳತೀರದು. ಗೆಲುವಿನ ಗೌಜಿಯಿಂದಲೂ. ಪುರಜನರ ಒಸಗೆಯಿಂದಲೂ. ಸುವಾಸಿನಿಯರ ಆರತಿಯಿಂದಲೂ ಬಭ್ರುವಾಹ ನನು ನಗರಪ್ರವೇಶಮಾಡಿದನು.

"ದೇವಿ! ನೀನೇನು ಪುಣ್ಯವಂತಳೋ! ಯಾವ ನೋಂಪಿಯನ್ನು ನೋಂತು ಇಂತಹ ಸುಪುತ್ರನನ್ನು ಪಡೆದಿದ್ದೀಯೋ! ನಿನ್ನ ಮಗನು ಅರ್ಜುನ ನನ್ನು ಕೊಂದು ಬರುತ್ತಿದ್ದಾನೆ; ಆರತಿಗಳನ್ನು ತರಿಸು."

—ಅಂತಃಪುರದಲ್ಲಿ ಉಲೂಪಿಯೊಡನೆ ಪತಿಯ ಪಾದಪದ್ಮಗಳ ಚಿರ ಸ್ಮರಣೆಯಲ್ಲಿದ್ದ ಚಿತ್ರಾಂಗದೆಗೆ ಸಖಿಯರು ಈ ಸುದ್ದಿ ಹೇಳಿದರು. ಸಿಡಿಲು ಬಡಿದಂತೆ ಚಿತ್ರಾಂಗದೆ ಭೂಮಿಗೆ ಒರಗಿದಳು. "ಹಾನಾಥ! ಕೆಟ್ಟೆನಲ್ಲಾ" ಎಂದು ಕೂಗಿ ಕಂಬನಿಯ ಕಡಲಲ್ಲಿ ಮುಳುಗಿದಳು. ಮಹಾರಾಣಿಯ ದುಃಖ ದಾವಾಗ್ನಿಯಿಂದ ಮಹಿಳೆಯರೆಲ್ಲಾ ಮೊರೆಯಿಟ್ಟರು. ಅರಮನೆಯು ಇಳಲಿನ ಮನೆಯಾಯಿತು.

ರಾಜಾಲಯದ್ವಾರದಲ್ಲಿ ರಥದಿಂದಿಳಿದವನೇ ಬಭ್ರುವಾಹನನು ಆರತಿಯೆತ್ತುತ್ತಿರುವ ಮಾನಿನಿಯರ ಮಧ್ಯದಲ್ಲಿ ಮಾತೆಯನ್ನು ಕಾಣದೆ ಅಂತಃಪುರದ ಕಡೆಗೆ ಧಾವಿಸಿದನು. ಶೋಕಾರ್ತಳಾದ ಜನನಿಯ ದುರವಸ್ಥೆಯನ್ನು ಕಂಡು ದುಃಖಿಸಿದನು.

"ವೀರಮಾತೆ! ನಿನ್ನ ಪುತ್ರನಿಗೆ ಯುದ್ಧದಲ್ಲಿ ಅಪಜಯವಾಗಲಿಲ್ಲ: ಗೆಲವಿಗಾಗಿ ನಲಿಯಬೇಕಾದ ಈ ಸಮಯದಲ್ಲಿ ಅಳುವಿಯೇಕೆ? ಅರ್ಜುನನು ನನ್ನಲ್ಲಿ ಸಿಟ್ಟುಗೊಂಡು ಜರೆದಾಡಿದುದರಿಂದ ನಾನು ಆತನ ಶಿರವನ್ನು ಕತ್ತರಿಸಿದೆನು. ಶತ್ರುಗಳನ್ನೆಲ್ಲಾ ಸೋಲಿಸಿದೆನು. ವೀರಮಾತೆಯಾದ ನೀನು ಇದಕ್ಕಾಗಿ ಇಂತು ಏಕೆ ಚಿಂತಿಸುವಿ?"

"ಮಗನೇ. ಲೇಸುಮಾಡಿದೆ: ಅರ್ಜುನನು ನಿನಗೆ ಹಗೆಯಾದನೆ? ಅವನೊಡನೆ ಹೋರಾಡಲು ನಿನಗೆ ಪಂಥವಾದರೂ ಹೇಗೆ ಬಂತೊ? ನನ್ನ ಪ್ರಿಯನು ಮಡಿದನೆ? ಇಂದ್ರಪುತ್ರನು ಮೃತನಾದನಲ್ಲ! ಧರ್ಮಜನ ಪ್ರಿಯ ಸೋದರನು ಪ್ರಾಣವನ್ನು ಬಿಟ್ಟನೆ? ಶ್ರೀಕೃಷ್ಣಸಖನು ಮರಣಹೊಂದಿದನೆ? ನಿನ್ನಂತೆ ಕೆಟ್ಟಕಾಳಗ ಹೂಡಿ ಪಿತೃವಧೆಯನ್ನು ಮಾಡಿದವರು ಭೂಮಿಯಲ್ಲಿ ಯಾರಾದರೂ ಇರುವರೆ? ಸುಡು! ಮಕ್ಕಳನ್ನು ಯಾಕೆ ಬಯಸುವರೊ? ಈ ಮಂಗಳಸೂತ್ರ. ಈ ಕಿವಿಯೋಲೆ, ಈ ಮುತ್ತೈದೆಯ ತೊಡವುಗಳೆಲ್ಲಾ ನನ್ನ ತಾಯಿಗೇಕೆಂದು ಬಿಡಿಸಿದೆಯಾ? ಅಯ್ಯೋ! ಕುಂತೀದೇವಿಯು ಮಗ ಮೊಮ್ಮಗರ ಸಾವಿನ ಸುದ್ದಿಯನ್ನು ಕೇಳಿ ಹೇಗೆ ಸೈರಿಸುವಳೊ? ಧರ್ಮಪುತ್ರನು ಪ್ರಿಯಸೋದರನ ಮರಣವಾರ್ತೆಯನ್ನು ತಿಳಿದು ಏನು ಮಾಡುವನೊ?"

—ಪತಿಯ ಮರಣದ ಶೋಕದಿಂದ ಚಿತ್ರಾಂಗದೆ ಸುತನನ್ನು ಬಹಳವಾಗಿ ಬೈದಳು: ದುಃಖಗದ್ಗದಿತಳಾಗಿ ಅತ್ತಳು. ಉಲೂಪಿ ಚಿತ್ರಾಂಗದೆಯರಿಬ್ಬರೂ ಅರ್ಜುನನ ಮೃತ ಕಳೇಬರದೆಡೆಗೆ ಬಂದರು. ಅರ್ಜುನನ ಪಾದಗಳಲ್ಲಿ ಹೊರಳಾಡಿದರು; ಶರೀರವನ್ನಪ್ಪಿಕೊಂಡರು: ಕೈಗಳನ್ನು ಹಿಡಿದು ಎದೆಗೊತ್ತಿಗೊಂಡರು; ತುಂಡಾದ ತಲೆಯನ್ನು ಕೊರಳಿಗೆ ಕೂಡಿಸಿ ನೋಡಿದರು. ಹಸೆಗೆ

ಮುಖವಿಟ್ಟು ಚುಂಬಿಸಿದರು. ಫಲುಗುಣನ ಗುಣಾವಳಿಗಳನ್ನು ಹಾಡಿ ಕೊಂಡಾಡಿದರು. ಹತ್ತಿರವೇ ಮಡಿದುಬಿದ್ದ ವೃಷಕೇತುವನ್ನೂ ನೋಡಿ ಮುಂಡಾಡಿದರು: ಮಹಿಳೆಯರಿಬ್ಬರೂ ಮಮ್ಮಲಮರುಗಿದರು.

ತಾಯಂದಿರ ಅಸಹನೀಯವಾದ ಈ ಅಳಲನ್ನು ಕಂಡು ಕಡುನೊಂದವ ನಾಗಿ ಬಭ್ರುವಾಹನನು ಬಳಿಯಲ್ಲಿಯೇ ಕೃತಕಾರ್ಯಕ್ಕಾಗಿ ಪಶ್ಚಾತ್ತಾಪಗೊಂಡು ತಲೆತಗ್ಗಿಸಿ ನಿಂತಿದ್ದನು.

"ಅಯ್ಯೋ ! ತಂದೆಯನ್ನು ಕೊಲೆಮಾಡಿದಿಯಲ್ಲಾ ! ನಿನಗೆ ತಾಯಂದಿರು ಮಾತ್ರ ಇನ್ನು ಯಾಕೆ ಉಳಿದಿರಬೇಕು? ಭೂಮಿಯಲ್ಲಿ ವೈಧವ್ಯ ದುಃಖವನ್ನು ಸಹಿಸಿಕೊಂಡು ನಾವಾದರೂ ಎಂತು ಬದುಕಿರಲಿ? ಖಡ್ಗವನ್ನು ಸೆಳೆದು ನಮ್ಮ ತಲೆಗಳನ್ನೂ ತುಂಡರಿಸಬಾರದೆ? ಭಾರ್ಗವನು ಒಂದೆ ತಾಯಿಯನ್ನೂ ಕೊಂದಿ ಲ್ಲವೆ? ಪಿತನ ಕೊಲೆ ಮಾಡಿದ ನೀನು ಮಾತೆಯರ ಕೊಲೆಗೆ ಅಳುಕಲೇಕೆ? ನಮ್ಮನ್ನೂ ಕೊಂದೆಯಾದರೆ ನಿನ್ನ ಜನ್ಮ ಸಫಲವಾಗುವುದು."

—ಮಾತೆಯ ಬಿರುನುಡಿ ಬಭ್ರುವಾಹನನ ಎದೆಗೆ ಶೂಲದಂತೆ ನಾಟಿತು !

"ತಾಯೇ ! ನಿನ್ನ ಅಪ್ಪಣೆಯಂತೆ ನಾನು ಪ್ರೀತಿಯಿಂದಲೇ ಹೋಗಿ ಪಿತನನ್ನು ಸಂದರ್ಶಿಸಿದೆನು. ಬಹುವಾಗಿ ಬೇಡಿಕೊಂಡರೂ ಆತನು ನನ್ನನ್ನು ಪುತ್ರನಲ್ಲವೆಂದು ಧಿಕ್ಕರಿಸಿದನು; ಆಹವವನ್ನು ಆಹ್ವಾನಿಸಿದನು. ಕಾಳಗದ ಪಂಥದಲ್ಲಿ ಆತನು ಮೃತಿಹೊಂದಿದನು. ಹೇಗಿದ್ದರೂ. ಹಾದಿತಪ್ಪಿ ಹೋಯಿತು. ಇನ್ನು ಮಾತನಾಡಿ ಪ್ರಯೋಜನವೇನಿದೆ? ಪಿತೃವಧೆ ಮಾಡಿ ನನ್ನ ಜೀವನವೂ ಹೇಯವಾಯಿತು. ನಿಮ್ಮ ದುಃಖವನ್ನು ನೋಡಿ ಸೈರಿಸುವುದು ನನಗೆ ಸಾಧ್ಯ ವಾಗದು. ಈ ಶರೀರವನ್ನು ನಾನು ಈಗಲೇ ತೊರೆಯುವೆನು."

ಪಿತೃವಧೆಯ ಪಾಪಕ್ಕೆ ಯಾವ ಪರಿಹಾರವೂ ಇಲ್ಲವೆಂದೂ. ಅಗ್ನಿ ಪ್ರವೇಶ ಮಾಡುವುದೇ ನಿಶ್ಚಯವೆಂದೂ, ಬಭ್ರುವಾಹನನು ಅಗುರು ಚಂದನದ ಕಾಷ್ಟಗಳನ್ನು ತರಿಸಿದನು. ಅನಲಕುಂಡವನ್ನು ನಿರ್ಮಿಸಿದನು. ಬೆಂಕಿಗೆ ಬೀಳು ವರೆ ಸಿದ್ಧನಾದ ಮಗನನ್ನು ಚಿತ್ರಾಂಗದೆ ಬೈದು ತಡೆದಳು. "ಮಗನೆ ! ನಿನ್ನ ತಂದೆಗೆ ಶ್ರೀಕೃಷ್ಣನು ಆಪ್ತಮಿತ್ರನು; ಕೃಪಾಳುವಾದ ಆತನು ಈ ಸುದ್ದಿಯನ್ನು ಕೇಳಿ ಇಲ್ಲಿಗೆ ಬಾರದಿರಲಾರನು; ಅದು ವರೆಗೆ ಸೈರಿಸು" ಎಂದಳು. 'ಶ್ರೀಕೃಷ್ಣನು ಇಲ್ಲಿಗೆ ಎಂದಿಗೆ ಬರುವನೊ? ಪತಿಯನ್ನು ಪುನರ್ಜೀವಿಸುವುದು ಸಾಧ್ಯವುಂಟೆ?' ಎಂದು ಚಿತ್ರಾಂಗದೆ ಹಲವು ಹಂಬಲಿಸಿದಳು. ಉಲೂಪಿಗೆ. ಒಂದು ಹಂಚಿಕೆ ಹೊಳೆಯಿತು. ಆಕೆ ಬಭ್ರುವಾಹನನನ್ನು ಕರೆದು ಹೇಳಿದಳು.

"ಮಗನೆ ! ಪಾತಾಳಲೋಕದಲ್ಲಿ ಗರುಡನು ವಧಿಸಿದ ಸರ್ಪಗಳನ್ನು ಪುನಃ ಪ್ರಾಣಿಸುವಂತೆ ಮಾಡಲು ಫಣಿರಾಜನಿಗೆ ಶಿವನಿತ್ತ ಒಂದು ದಿವ್ಯ ಸಂಜೀವಕ ಮಣಿ ಇದೆ. ಅದನ್ನು ಪರಾಕ್ರಮದಿಂದ ತರಬಲ್ಲವರನ್ನು ಮಾತ್ರ ಯಾರನ್ನೂ ಕಾಣೆನು: ಅದನ್ನು ತಂದರೆ ನಿನ್ನ ತಂದೆಯನ್ನು ಬದುಕಿಸಬಹುದು."

"ಅಮ್ಮಾ ! ಆ ಸಂಜೀವಕಮಣಿಯನ್ನು ನಾನು ಈಗ ತಾರದಿದ್ದರೆ ನನ್ನನ್ನು ತಾಯಿ ಹೆತ್ತು ಪ್ರಯೋಜನವೇನು? ಮೃತಿ ಹೊಂದಿದ ತಂದೆಯ ಪ್ರಾಣವನ್ನು ಪುನಃ ನಾನು ಪಡೆಯುವೆನು; ಫಣಿರಾಜನು ಆ ಮಣಿಯನ್ನು ಕೊಡದಿದ್ದರೆ ಸರ್ಪಲೋಕವನ್ನೇ ಸುಡುವೆನು; ಬ್ರಹ್ಮರುದ್ರರಿಗೂ ಭಯಪಡೆನು. ದಿಕ್ಪಾಲಕರನ್ನು ದಿಕ್ಕುಗೆಡಿಸುವೆನು."

—ತಂದೆಯನ್ನು ಪುನರ್ಜೀವಿಸುವ ಸಲುವಾಗಿ ಎಂತಹ ಸಾಹಸದ ಕಾರ್ಯವನ್ನು ಸಾಧಿಸಲೂ ಬಭ್ರುವಾಹನನು ಸಿದ್ಧನಾದನು. ಪಾತಾಳ ಲೋಕಕ್ಕೆ ದುಮ್ಮಿಕ್ಕಿ. ಹಾವುಗಳ ಹುತ್ತಕ್ಕೆ ಕೈಯಿಕ್ಕಿ ಸರ್ಪರಾಜನ ಭಂಡಾರದಿಂದ ಸಂಜೀವಕ ಮಣಿಯನ್ನು ಸೆಳೆತರಲು ಸನ್ನದ್ಧನಾದನು.

"ಮಗನೇ, ನಿನ್ನ ಶಕ್ತಿಸಾಮರ್ಥ್ಯಗಳಾವುವೂ ಅಲ್ಲಿ ನಡೆಯವು; ಆ ಲೋಕವನ್ನು ಈಕ್ಷಿಸುವ ಮಾತ್ರಕ್ಕೆ ವಿಷಜ್ವಾಲೆಯಿಂದ ಕಣ್ಣೆವೆಗಳು ಸೀದು ಹೋಗುವುವು; ಮಹಾಶೇಷನ ಭಂಡಾರದಲ್ಲಿ ಭದ್ರವಾಗಿರುವ ಮಣಿಯನ್ನು ಗುಳಿಕ, ವಾಸುಕಿ. ತಕ್ಷಕ. ಶಂಖ, ಪದ್ಮ, ಕರ್ಕೋಟಕವೇ ಮೊದಲಾದ ಮಹಾ ಸರ್ಪಗಳು ಬಲವಾಗಿ ಕಾವಲು ಮಾಡುತ್ತಿವೆ. ಇಂತಿರಲು ಆ ಮಣಿಯನ್ನು ತರುವ ವೀರನು ಲೋಕದಲ್ಲಿ ಯಾರಾದರೂ ಇರುವನೆ?"

ಉಲೂಪಿಯು ಬಭ್ರುವಾಹನನೊಡನೆ ಮತ್ತೂ ಹೀಗೆ ಪ್ರಶ್ನಿಸಿದಳು.

"ತಾಯೇ. ನನ್ನ ಮಾತಾಮಹನಾದ ಆದಿಶೇಷನಿಗೆ ನೋವನ್ನುಂಟು ಮಾಡಬೇಕೆಂಬುದಕ್ಕೆ ಮಾತ್ರ ನಾನು ಚಿಂತಿಸುತ್ತಿರುವೆನಲ್ಲದೆ. ಕಾವಲಿನ ವಾಸುಕಿಗೀಸುಕಿಗಳ ವಿಷಕ್ಕೆ ನಾನು ಅಂಜುವೆನೆ? ಅವರು ಕೊಡದಿದ್ದರೆ ಸಪ್ತ ಪಾತಾಳಗಳನ್ನು ಕೂಡಾ ಒಡೆದು ಆ ರತ್ನವನ್ನು ತಂದು ತಂದೆಯನ್ನು ಬದುಕಿಸುವೆನು."

ಬಭ್ರುವಾಹನನು ಇಂತೆಂದರೂ ಉಲೂಪಿಗೆ ಸಂಶಯ ಹೋಗಲಾರದು. ಆಕೆ ಹೇಳಿದಳು—

"ಕಂದ. ಸೂರರ ತನಕ ಹೆಡೆಗಳುಳ್ಳ ಮಹಾ ಸರ್ಪಗಳು ವಾಸುಕಿಯನ್ನು ಸೇವಿಸುತ್ತಿರುವುವು. ಅವುಗಳ ವಿಷಜ್ವಾಲೆಯನ್ನು ಸಹಿಸುವುದು ವಿಷಕಂಠನಾದ ಶಿವನಿಗೂ ಅಸದಳವಾಗುವುದು. ಒಮ್ಮೊಮ್ಮೆ ಪಾತಾಳಕ್ಕೆ ಗರುಡನು ಹಾರಿ

ಬಂದು ಸರ್ಪಗಳ ಸಂಕುಲವನ್ನು ಕೊಂದು ಹಾಕುತ್ತಿರಲು, ಅವುಗಳನ್ನು ಬದುಕಿಸುವ ಸಲುವಾಗಿ ಮಾತ್ರ ಆ ಮಣಿಯನ್ನು ಹೊರ ತೆಗೆವರು: ಉಳಿದ ಸಮಯದಲ್ಲಿ ಅದು ಯಾರಿಗೂ ಅಗೋಚರವಾಗಿ ಗುಪ್ತವಾಗಿರುವುದು. ಆ ಮಣಿಯನ್ನು ನೀನೆ ಹೇಗೆ ತಾನೇ ತರಬಲ್ಲೆ?"

"ಅಮ್ಮಾ, ನಿನಗೆ ಇನ್ನೂ ಯೋಚನೆಯೆ? ಪಾತಾಳದ ಸರ್ಪಗಳೆಲ್ಲವನ್ನೂ ಕೊಂದಾದರೂ ಆ ಮಣಿಯನ್ನು ತರದೆಬಿಡೆನು; ತಂದೆಯನ್ನು ಬದುಕಿಸದಿರೆನು. ಅರ್ಜುನ ವೃಷಕೇತು ಮೊದಲಾದವರು ಸಂಪ್ರಾಣಿಸಿದ ಮೇಲೆ ಆ ಮಣಿಯನ್ನು ನಾನೇ ಒಯ್ದು ಸರ್ಪರಾಜನಿಗೆ ಸಮರ್ಪಿಸುವೆನು."

ಬಭ್ರುವಾಹನನ ಸಾಮರ್ಥ್ಯವನ್ನು ಉಲೂಪಿ ಬಲ್ಲವಳಾದರೂ, ಅನರ್ಘ್ಯ ರತ್ನವನ್ನು ಬಲಾತ್ಕರಿಸಿ ತರುವುದು ಆಕೆಗೆ ಒಪ್ಪಿಗೆಯಾಗಲಿಲ್ಲ.

"ಮಗನೇ, ಇತರರಲ್ಲಿರುವ ವಸ್ತುವನ್ನು ವಿನಯದಿಂದ ತಂದರೆ ನಮಗೆ ಅದರಿಂದ ಸಂಪೂರ್ಣ ಸುಖಸಂತೋಷಾದಿ ಪ್ರಯೋಜನಗಳಾಗುವುವು: ಹಾಗಲ್ಲದೆ ದುಡುಕಿ ಹೊಡೆದಾಡಿ ತಂದರೆ ಅದರಿಂದ ತೊಂದರೆಯೇ ಉಂಟಾಗುವುದು. ಅದು ಕಾರಣ, ನೀನು ದುಡುಕದಿರು. ಪಾತಾಳ ಲೋಕದಲ್ಲಿ ಪುಂಡರೀಕನೆಂಬ ಹೆಸರಿನ ನನ್ನ ವಿಶ್ವಾಸಪಾತ್ರನೋರ್ವನಿರುವನು. ಅವನು ನಮಗೆ ಅನುಕೂಲನಾಗಿರುವದರಿಂದ, ಆತನ ಮೂಲಕ ನಮ್ಮ ಕಾರ್ಯವನ್ನು ಸಾಧಿಸಬಹುದು."

ಹೀಗೆಂದವಳೇ ಉಲೂಪಿಯು ಪುಂಡರೀಕನನ್ನು ಧ್ಯಾನಿಸಿದಳು. ಆತನು ಪ್ರತ್ಯಕ್ಷನಾಗಿ. ತನ್ನನ್ನು ಸ್ಮರಿಸಿ ಬರಿಸಲು ಕಾರಣವೇನೆಂದು ಕೇಳಿದನು.

"ಅಯ್ಯಾ, ನೀನು ಮಹಾಶೇಷನ ಬಳಿಗೆ ಹೋಗಿ. ನಿನ್ನ ಮಗಳ ಮಾಂಗಲ್ಯ ಭಾಗ್ಯವನ್ನು ಉಳಿಸುವ ನಿಮಿತ್ತವಾಗಿಯೂ. ಮೃತನಾಗಿ ಬಿದ್ದಿರುವ ಅರ್ಜುನನನ್ನು ಬದುಕಿಸುವ ಸಲುವಾಗಿಯೂ, ಅಮೃತ ಸಂಜೀವಕ ಮಣಿಯನ್ನು ದಯಮಾಡಿ ಕೊಡಬೇಕೆಂಬ ನಮ್ಮ ಪ್ರಾರ್ಥನೆಯನ್ನು ತಿಳುಹಿಸಿ, ಆ ಮಣಿಯನ್ನು ತೆಗೆದುಕೊಂಡು ಬಾ"

ಪುಂಡರೀಕನು ದುಃಖಿತೆಯಾದ ಉಲೂಪಿಯನ್ನು ಸಂತೈಸಿ. ಅರ್ಜುನ ವೃಷಕೇತು ಮೊದಲಾದವರ ದೇಹವು ಕೊಳೆತು ಹೋಗದಂತೆ. ಕಟ್ಟಿ. ವಿಷವೇರುವಂತೆ ಮಾಡಿ, ಆ ಶರೀರಗಳನ್ನು ಎಚ್ಚರದಿಂದ ಕಾಯ್ದುಕೊಂಡಿರುವಂತೆ ಬಭ್ರುವಾಹನನಿಗೆ ತಿಳಿಸಿ ಸಪ್ತಪಾತಾಳ ಲೋಕಗಳನ್ನು ದಾಟಿ ಆದಿಶೇಷನ ಬಳಿಗೆ ಬಂದನು. ಸರ್ಪಸಂಕುಲಗಳಿಂದಾವೃತನಾಗಿ ತನ್ನ ಫಣಾಮಣಿಯಿಂದ ಶೋಭಿತನಾಗಿ ತನ್ನ ದೇಹ ಸೌಂದರ್ಯದಿಂದ ದೇದೀಪ್ಯನಾಗಿ ನಿಶ್ಚಲಭಕ್ತಿಯಿಂದ

ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತಾ, ಭೂಭಾರವನ್ನು ತನ್ನ ಕರ್ತವ್ಯವೆಂದರಿತು ಹೊತ್ತುಕೊಂಡಿದ್ದು ಅನರ್ಘ್ಯನಿಧಿಗಳಿಗೆ ಅಧಿಪತಿಯಾಗಿದ್ದ ಸರ್ಪರಾಜನಾದ ಆದಿಶೇಷನನ್ನು ಪುಂಡರೀಕನು ಕಂಡು, ತಾನು ಬಂದ ವೃತ್ತಾಂತವನ್ನು, ಶೇಷ ಪುತ್ರಿಯಾದ ಉಲೂಪಿಗೆ ವೈಧವ್ಯ ದುಃಖವು ಬಂದೊದಗಿದುದನ್ನೂ, ಆಕೆ ಪತಿಶೋಕವನ್ನು ಸಹಿಸಲಾರದೆ ಸಂಜೀವಿಕ ಮಣಿಗಾಗಿ ತನ್ನನ್ನು ಅಟ್ಟಿರುವ ವಿವರಗಳೆಲ್ಲವನ್ನೂ ವಿಸ್ತರಿಸಿದನು.

"ಅಯ್ಯಾ, ನಿನ್ನ ಅಳಿಯನೂ. ಹರಿಭಕ್ತನೂ, ಸಜ್ಜನ ಶ್ರೇಷ್ಠನೂ. ಇಂದ್ರ ಪುತ್ರನೂ. ಯುಧಿಷ್ಠಿರಾನುಜನೂ ಆಗಿರುವ ಆ ಅರ್ಜುನನನ್ನು ಬದುಕಿಸಿ ನಿನ್ನ ಮಗಳ ಮಾಂಗಲ್ಯವನ್ನುಳಿಸುವಂತೆ, ನಿನ್ನಲ್ಲಿರುವ ಅಮೂಲ್ಯಮಣಿಯನ್ನು ದಯವಿಟ್ಟು ಕೊಡಬಾರದೆ? ಪರೋಪಕಾರ ಮಾಡಿದವನಿಗೆ ಎಂದಿಗೂ ಕೇಡುಂಟಾಗದು".

ಪುಂಡರೀಕನು ಇಂತು ಪ್ರಾರ್ಥಿಸಿಕೊಂಡನು.

ಮಹಾಶೇಷನು ಪುಂಡರೀಕನ ಪ್ರಾರ್ಥನಾನುಸಾರವಾಗಿ. ತಕ್ಷಕಾದಿ ಸರ್ಪಗಳನ್ನು ನೋಡಿ ಅವರ ಇಂಗಿತವನ್ನು ಕೇಳಿದನು.

ಗರುಡನಿಂದ ನಾಶವಾಗುವ ತಮ್ಮ ವಂಶವನ್ನು ಉಳಿಸಲು ಸಹಾಯಕವಾದ ಮಣಿಯನ್ನು ತಮ್ಮಲ್ಲಿಂದ ಬೇರೆಡೆಗೊಯ್ಯುವ ಪ್ರಸ್ತಾಪ ಕೇಳಿದ ಕೂಡಲೇ ಸರ್ಪಗಳ ಸಮೂಹ ದುಃಖಗೊಂಡವು. ತಮಗಿನ್ನೇನು ಗತಿಯೆಂದು ಶೋಕಿಸತೊಡಗಿದವು.

"ಸ್ವಾಮೀ. ನಮಗೆ ಉಪಕಾರಕ್ಕಿರುವ ಅನರ್ಘ್ಯವಾದೀ ಮಣಿಯನ್ನು ನಾವಿಂದು ಬೇರೆಯವರ ಕೈಗೊಪ್ಪಿಸಿದರೆ. ಅದು ನಿಶ್ಚಯವಾಗಿಯೂ ಮರಳಿ ಬರಲಾರದು. ಮಾನವರು, ಮಾಡಿದ ಉಪಕಾರವನ್ನು ಮರೆಯುವವರು ಮಾತ್ರವಲ್ಲ. ಮರೆಮೋಸಗಳಿಂದ ಕೊರಲು ಕೊಯ್ಯುವವರೂ ಆಗಿದ್ದಾರೆ. ಅಂತಹವರ ವಶಕ್ಕೆ ಈ ಮಣಿಯನ್ನು ಒಪ್ಪಿಸುವ ಯೋಚನೆಯನ್ನು ಕೃಪೆಯಿಟ್ಟು ತೊರೆದುಬಿಡು."

ಧೃತರಾಷ್ಟ್ರನೆಂಬ ಸರ್ಪವು ಇಂತು ಎದ್ದುನಿಂತು ಬೇಡಿಕೊಂಡಿತು.

"ಅಯ್ಯಾ. ಧೃತರಾಷ್ಟ್ರನೇ, ತನ್ನಲ್ಲಿರುವ ವಸ್ತುವನ್ನು ದುಃಖಾರ್ತರಾದವರು ಬಂದು ಬೇಡಿದರೆ ಕೊಡದಿರುವುದು ಅಲ್ಪತ್ವವಲ್ಲವೆ? ಹಾಗೆ ಮಾಡಿದಲ್ಲಿ ನಮ್ಮಲ್ಲಿರುವ ಎಂತಹ ಅಮೂಲ್ಯ ವಸ್ತುವಾದರೂ, ಅದು ನಾಯಿಗೆಟ್ಟಲಿನ ಹಾಲಿನಂತಾಗುವುದಲ್ಲ! ದಧೀಚಿ ಮುಂತಾದವರು ಪರೋಪಕಾರ ಮಾಡಿ ಕೆಟ್ಟರೆ? ಹಾಗಾಗಿ ನಾನು ಸಂಜೀವಕ ಮಣಿಯನ್ನು ಕೊಟ್ಟೇತೀರುವೆನು".

"ಸರ್ಪರಾಜಾ, ಮನುಷ್ಯರ ಆಯುಸ್ಸಾದರೂ ಅತ್ಯಲ್ಪವಷ್ಟೆ? ಇಂದು ಒಮ್ಮೆ ಅರ್ಜುನನು ಬದುಕಿದರೂ, ಮುಂದೆ ಒಂದು ದಿನ ಸಾಯಲೇಬೇಕು. ಅಷ್ಟರ ಸಲುವಾಗಿ ನಾವು ಆ ಮಣಿಯನ್ನು ಅಗಲಿದೆವಾದರೆ ಮುಂದೆ ನಮ್ಮ ವಂಶವೇ ನಿರ್ಮೂಲವಾಗದಿರದು; ಅಂತೂ ಪಾಂಡವ ಪ್ರಾಣನಾದ ಶ್ರೀಕೃಷ್ಣನೇ ಸಹಾಯಕನಾಗಿರುವಾಗ ಅರ್ಜುನನನ್ನು ಆತನು ಎಂತಾದರೂ ಉಳಿಸುವನು. ಸುಮ್ಮನೆ ನಮ್ಮಲ್ಲಿರುವ ಈ ಮಣಿಯನ್ನು ಕೊಟ್ಟು ನಾಗಲೋಕದ ಬಾಳುವೆ ಕೆಡಿಸಬೇಡ."

ಧೃತರಾಷ್ಟ್ರನ ಮಾತಿಗೆ ಸರ್ಪಗಳೆಲ್ಲವೂ ಸಮ್ಮತಿಯಿತ್ತವು. ಸಂಜೀವಕ ಮಣಿಯನ್ನು ಸರ್ವಥಾ ಕೊಡಕೂಡದೆಂದು ಪ್ರಾರ್ಥಿಸಿದುವು. ದೇವರು ಕೊಟ್ಟರೂ ಪೂಜಾರಿ ಬಿಡನೆಂಬ ಗಾದೆಯಂತೆ ಪರಿಸ್ಥಿತಿ ಬಂದೊದಗಿತು. ಆದಿ ಶೇಷನು ಪುಂಡರೀಕನನ್ನು ಕರೆದು ಸರ್ಪಮಂಡಳಿಯ ಅಭಿಪ್ರಾಯವನ್ನು ತಿಳು ಹಿಸಿದನು; ಆತನು ಅಲ್ಲಿಂದ ಕೂಡಲೇ ಮರಳಿಬಂದನು.

ಇತ್ತ, ಪುಂಡರೀಕನು ಎಂದಿಗೆ ಸಂಜೀವಕ ಮಣಿಯನ್ನು ತರುವನೋ, ಎಂದಿಗೆ ಪತಿಯು ಜೀವಂತನಾಗುವದನ್ನು ಕಾಣುವೆವೋ ಎಂದು ಹಂಬಲಿಸುತ್ತಾ ಉಲೂಪಿ ಚಿತ್ರಾಂಗದೆಯರು ಆತನ ಬರವನ್ನೇ ಕಾದು ಕುಳಿತಿದ್ದರು. ಈ ಸುದ್ದಿ ಕೇಳಿ ಅವರಿಗೆ ಸಿಡಿಲೆರಗಿದಂತಾಯಿತು. ವೈಧವ್ಯವನ್ನು ಸಹಿಸಲಾರದೆ ಅವರು ಅಗ್ನಿಪ್ರವೇಶ ಮಾಡುವೆವೆಂದು ನಿಶ್ಚಯಿಸಿದರು.

ಪುಂಡರೀಕನ ಸಂಧಾನವು ವಿಫಲವಾದುದನ್ನು ಕಂಡು ಬಭ್ರುವಾಹ ನನು ಸಿಟ್ಟುಗೊಂಡನು. ತಾಯ ದುಃಖವನ್ನು ಸಮಾಧಾನಪಡಿಸಿ, ಮೃತ ದೇಹದ ಕಾವಲಿಗೆ ಮಂತ್ರಿಗಳನ್ನಿರಿಸಿ, ಚತುರಂಗ ಬಲಸಮೇತನಾಗಿ. ದಿವ್ಯವಾದ ಧನುಸ್ಸಿಗೆ ಹೆದೆಯೇರಿಸಿ, ಅದಕ್ಕೆ ಘೋರವಾದ ಬಾಣವನ್ನು ಹೂಡಿ. ಭೂಮಿ ಯನ್ನು ಕೊರೆದು, ಅತಳ, ವಿತಳ, ಸುತಳ, ತಳಾತಳ, ರಸಾತಲ ಲೋಕಗಳನ್ನು ದಾಟಿ ಪಾತಾಳವನ್ನು ಪ್ರವೇಶಿಸಿದನು. ಅಲ್ಲಿರುವ ಐದುಗಾವುದ ವಿಸ್ತೀರ್ಣದ. ವಿಷಜ್ವಾಲೆಯನ್ನು ಕಾರುತ್ತಿರುವ ಸರ್ಪ ಸೇನೆಯನ್ನು ಸುಡತೊಡಗಿ ದನು.

ತಕ್ಷಕ, ಕರ್ಕೋಟಕಾದಿ ಮಹಾಸರ್ಪಗಳು ಕಾದತೊಡಗಿದರು. ಬಭ್ರು ವಾಹನನ ಬಲದ ಇಪ್ಪತ್ತೊಂದು ಸಾವಿರ ವೀರರು ಮೃತಪಟ್ಟರು. ಇದರಿಂದ ರೋಷಭೀಷಣನಾದಾತನು, ಸರ್ಪಗಳ ಪೊರೆಗಡಿದು, ಹದ್ದು, ಕಾಗೆ, ನವಿಲು, ಗರುಡ, ಮುಂಗುಸಿಗಳ ರೂಪದಿಂದ ಹಿಂಡಿಸುವ ಸಹಸ್ರ ಮಂತ್ರಾಸ್ತ್ರಗಳನ್ನು

ಹೂಡಲು. ಆ ಬಾಣಗಳು ಸರ್ಪಸಮೂಹವನ್ನು ಮುತ್ತಿ ನಿಮಿಷಾರ್ಧದಲ್ಲಿ ಕೊಂದುಹಾಕಿದುವು. ಅಷ್ಟಾಗಲು. ತಮಗಿನ್ನು ಉಳಿವು ಸಾಧ್ಯವಿಲ್ಲವೆಂದರಿತು ತಕ್ಷಕ ಧೃತರಾಷ್ಟ್ರಾದಿ ಸರ್ಪಗಳು ಆದಿಶೇಷನಲ್ಲಿಗೆ ಓಡಿಬಂದು, ಸಂಜೀವಕ ಮಣಿಯನ್ನು ಬಭ್ರುವಾಹನನಿಗೆ ಒಪ್ಪಿಸಿ. ಅಳಿದುಳಿದ ಸರ್ಪಗಳನ್ನಾದರೂ ಬದುಕಿಸೆಂದು ಬೇಡಿಕೊಂಡವು.

ಕೆಟ್ಟ ಮೇಲೆ ಬುದ್ಧಿಯೆಂಬಂತೆ, ಈಗಲಾದರೂ, ಈ ಪಾಪಿಗಳ ಕಣ್ತೆರೆಯಿತಲ್ಲಾ ಎಂದು ತಿಳಿದ ಮಹಾಶೇಷನು, ಬಭ್ರುವಾಹನನ್ನು ಕಂಡು, ಸನ್ಮಾನಿಸಿ, ಆತನೊಡಗೂಡಿ. ಸರ್ಪಸಮೂಹ ಸಮೇತ ಸಂಜೀವಕ ಮಣಿಯನ್ನು ತೆಗೆದು ಕೊಂಡು ಮಣಿಪುರದ ಕಡೆಗೆ ಬಂದನು.

ಅತ್ತ. ಹಸ್ತಿನಾಪುರದಲ್ಲಿ. ಅರ್ಜುನನು ಮಡಿದು ಬಿದ್ದ ದಿನದ ಇರುಳು, ಕುಂತೀದೇವಿ ಭಯಂಕರ ಸ್ವಪ್ನವೊಂದನ್ನು ಕಂಡಳು. ಅರ್ಜುನನು, ಮೈಗೆ ಸೆಗಣಿ ಬಳಿದುಕೊಂಡು ದಾಸಣದ ಹೂವನ್ನು ಕೊರಳಿಗೆ ತೊಟ್ಟು ಕತ್ತೆಯನ್ನೇರಿ ತೆಂಕುಮುಖವಾಗಿ ಎಣ್ಣೆಯ ಬಾವಿಯ ಬಳಿಗೆ ಹೋಗುತ್ತಿರುವುದನ್ನು ಕಂಡೆನೆಂದು. ಶ್ರೀಕೃಷ್ಣ. ಧರ್ಮಸುತ. ಭೀಮಾದಿಗಳಿಗೆ ತನಗಾದ ದುಃಸ್ವಪ್ನವನ್ನು ಕುಂತಿ ಚಿಂತಾಕ್ರಾಂತಳಾಗಿ ತಿಳಿಸಿದಳು; ಸುಭದ್ರೆಯ ಕಣ್ಣುಗಳಲ್ಲಿ ಕಂಬನಿ ಹೊಸಲಿಡುತ್ತಿತ್ತು. ಶ್ರೀಕೃಷ್ಣನು ಭೀಮ. ಕುಂತಿ, ಯಶೋದೆ ದೇವಕಿಯರೊಡಗೂಡಿ ಹಸ್ತಿನಾವತಿಯಿಂದ ಹೊರಟು ಮಣಿಪುರಕ್ಕೆ ಬಂದನು. ಅಲ್ಲಿ ಪಾರ್ಥ ಕರ್ಣಜರ ಮೃತಕಳೇಬರಗಳನ್ನು ಕಂಡು ಎಲ್ಲರೂ ಕಡುನೊಂದರು, ಅಷ್ಟರಲ್ಲಿ ಮೂರ್ಛೆ ತಿಳಿದು ಎಚ್ಚೆತ್ತ ಅನಿರುದ್ಧ ಸಾತ್ಯಕಿ ಪ್ರದ್ಯುಮ್ನರು ಬಂದು ಶ್ರೀಕೃಷ್ಣ ಭೀಮರಿಗೆ ನಡೆದ ಸಂಗತಿಯನ್ನು ಆಮೂಲಾಗ್ರವಾಗಿ ತಿಳಿಸಿದರು. ಬಭ್ರುವಾಹನನು ಭೀಮಸೇನನೊಡನೆ ಬಿನ್ನವಿಸಿದನು.

"ಜೀಯಾ, ತಮ್ಮನನ್ನು ಕೊಂದವನು ಹಗೆಯಲ್ಲವೆ? ತಂದೆಯನ್ನು ಘಾತಿಸಿದವನು ಪಾಪಿಯಲ್ಲವೆ? ಇಗೋ, ನನ್ನನ್ನು ನಿನ್ನ ಗದೆಯಿಂದ ಅಪ್ಪಳಿಸು."

ಬಭ್ರುವಾಹನನು ಹೀಗೆಂದು ಭೀಮನ ಪಾದ ಮೂಲಕ್ಕೆ ಮಣಿದನು.

"ದೇವಾ. ವೈಷ್ಣವ ದ್ರೋಹಿಯಾದ ನಾನು ಪಿತನನ್ನು ಕೊಂದ ಕಾರಣ ಕೊಲೆಗೆ ಅರ್ಹನು. ನೀನು ಶಿಕ್ಷೆರಕ್ಷೆಗಳಿಗೆ ಕರ್ತೃ; ಅಂದು ಶಾಮುವಿನ ಕೊರಳನ್ನು ಕತ್ತರಿಸಿದಂತೆ ಚಕ್ರದಿಂದ ನನ್ನ ಕಂಠವನ್ನೂ ಖಂಡಿಸು."

—ಶ್ರೀಕೃಷ್ಣನ ಕಾಲಡಿಯಲ್ಲಿ ಬಿದ್ದು ಬಭ್ರುವಾಹನನು ಹೊರಳಾಡಿದನು. ಬಭ್ರುವಾಹನನ ಈ ಪಶ್ಚಾತ್ತಾಪದ ಪ್ರಾರ್ಥನೆಯಿಂದ ಭೀಮಕೃಷ್ಣರ ಮನಸ್ಸು ಕರಗಿತು. ದೇವಕಿ. ಯಶೋದೆ. ಕುಂತಿಯರ ಚರಣಗಳಿಗೆ ಬಿದ್ದು—

"ಅಯ್ಯೋ ! ತಂದೆಯನ್ನು ಕೊಂದ ಪಾಪಿ ನಾನು ! ನಿಮಗೆ ಮೊಮ್ಮಗನು; ನನ್ನನು ಹೇಗೆ ತಾನೇ ನೀವು ಆಶೀರ್ವದಿಸುವಿರಿ? ಅರ್ಜುನನನ್ನು ಕೈಹಿಡಿದ ಉಲೂಪಿ ಚಿತ್ರಾಂಗದೆಯರು ಇಲ್ಲಿರುವರು: ಅವರನ್ನಾದರೂ ನೋಡಿರಿ."

ದುಃಖಭಾರಹೃದಯದಿಂದ ಬಭ್ರುವಾಹನನು ದೇವಕಿ. ಯಶೋದೆ. ಕುಂತಿಯರಿಗೆ ನಮಿಸಿ ಹೇಳಿದನು. ಉಲೂಪಿ ಚಿತ್ರಾಂಗದೆಯರೂ ಬಂದು ಅವರ ಚರಣಗಳಲ್ಲಿ ಹೊರಳಾಡಿದರು. ಕುಂತಿಯು ಮಗನ ಸಾವಿಗಾಗಿ ಬಹಳ ಶೋಕಿಸುತ್ತಿದ್ದಳು.

ಅಷ್ಟರಲ್ಲಿ. ಮಹಾಶೇಷನು ಬಂದು ಶ್ರೀಕೃಷ್ಣನಿಗೆ ವಂದಿಸಿದನು: ತನ್ನಲ್ಲಿದ್ದ ಅಮೂಲ್ಯ ಸಂಜೀವಕ ಮಣಿಯನ್ನು ಆತನ ಕೈಯಲ್ಲಿ ಕೊಟ್ಟನು. ಹರಿಕೃಪೆಯಿಂದಲೂ. ಮಣಿಯ ಮಹಾತ್ಮ್ಯದಿಂದಲೂ. ವೃಷಕೇತು ಪಾರ್ಥರ ಶರೀರಗಳು ಶಿರಗಳೊಡನೆ ಒಂದುಗೂಡಿದುವು; ಅವರು ಸಜೀವರಾದರು. ಆಕಾಶದಲ್ಲಿ ದೇವದುಂದುಭಿ ಮೊಳಗಿತು. ಮಂದಾರ ಪುಷ್ಪದಮಳೆ ಸುರಿಯಿತು. ಅರ್ಜುನನು ಹರಿಯ ಚರಣಗಳಿಗೆ ಎರಗಿದನು. ಕುಂತೀಭೀಮರನ್ನು ಆಲಿಂಗಿಸಿದನು: ದೇವಕಿ ಯಶೋದೆಯರಿಗೆ ಅಭಿವಂದಿಸಿದನು; ಕೃಷ್ಣನು ಸಂತೋಷದಿಂದ ಪಾಂಚಜನ್ಯವನ್ನು ಊದಿದನು.

ಗಂಗೆಯ ಶಾಪದಿಂದಾಗಿ ಇಂತಹ ವಿಪತ್ತು ಬಂದೊದಗಿತೆಂದು ಶ್ರೀಕೃಷ್ಣನು ಅರ್ಜುನನನ್ನು ಸಮಾಧಾನ ಗೊಳಿಸಿದನು. ಬಭ್ರುವಾಹನನು ಸಮಸ್ತರಿಗೂ ವಂದಿಸಿ ಅವರೆಲ್ಲರನ್ನೂ ಮಣಿಪುರಕ್ಕೆ ಕರೆದುಕೊಂಡು ಹೋಗಿ ಸಂಭ್ರಮದಿಂದ ಸತ್ಕರಿಸಿದನು ತನ್ನ ಸಿಂಹಾಸನವನ್ನು ತಂದೆಗೆ ಅರ್ಪಿಸಿದನು. ಹೀಗೆ ಸಂತೋಷದಿಂದ ಐದು ದಿನಗಳ ವರೆಗೆ ಅಲ್ಲಿದ್ದು ಧರ್ಮಜನು ಹಸ್ತಿನಾವತಿಯಲ್ಲಿ ಚಿಂತಿಸುತ್ತಿರಬಹುದೆಂದು ಅವನಿಗೆ ಸುದ್ದಿಯನ್ನು ತಿಳಿಸಲು ಭೀಮನೊಡನೆ ಕುಂತಿ. ಚಿತ್ರಾಂಗದೆ. ಉಲೂಪಿ. ಯಶೋದೆ. ದೇವಕಿಯರು ಮರಳಿದರು. ಅರ್ಜುನನಿಗೆ ಮುಂಬರಲಿರುವ ಸಂಕಷ್ಟಗಳನ್ನು ಪರಿಹರಿಸಬೇಕೆಂದು ಶ್ರೀಕೃಷ್ಣನು ಅಶ್ವರಕ್ಷಣೆಗಾಗಿ ಆತನ ಜತೆಯಲ್ಲಿ ನಿಂತನು. ಅಶ್ವಮೇಧದ ಕುದುರೆ ಅಲ್ಲಿಂದ ಮುಂದೆ ಸಾಗಿತು. ಬಭ್ರುವಾಹನನೊಡನೆ ಶ್ರೀಕೃಷ್ಣಾರ್ಜುನರು ಪಡೆಸಹಿತ ಯಜ್ಞಾಶ್ವವನ್ನು ಹಿಂಬಾಲಿಸಿದರು

೯

ಎಂತಹ ಸತ್ವಶಾಲಿಯಾದ ತಂದೆಗೆ ಎಂತಹ ಶೂರನಾದ ಮಗನು ಹುಟ್ಟಿದನು: ಪಿತನನ್ನು ಪುತ್ರನು ಮೀರಿಸಿದನು. ಅದರಿಂದ ಅವರಿಬ್ಬರ ಕೀರ್ತಿಯೂ ಹೆಚ್ಚಿತು! ಶಿಷ್ಯನಿಂದ ಗುರುವು ಅಭಿವರ್ಧಿಸಬೇಕು; ಮಗನಿಂದ ತಂದೆಯ ಹೆಸರು ಹೆಚ್ಚಬೇಕು: ಗುರುವಿಗಿಂತ ಧೀಮಂತನಾದ ಶಿಷ್ಯನೂ, ತಂದೆಯನ್ನು ಮೀರಿಸಿದ ಮಗನೂ ಕುಲದೀಪಕರಲ್ಲವೆ? ದ್ವಾಪರಾಯುಗದಲ್ಲಿ ಪಿತಾಪುತ್ರರಾದ ಅರ್ಜುನ ಬಭ್ರುವಾಹನರೊಳಗೆ ಭೀಷಣ ಸಂಗ್ರಾಮವು ಮಸಗಿ ಘೋರ ದುರಂತವಾದಂತೆ. ಹಿಂದಣ ತ್ರೇತಾ ಯುಗದಲ್ಲಿಯೂ ಅಂತಹುದೇ ಒಂದು ಘಟನಾ ವಿಶೇಷವು ತಂದೆ ಮಕ್ಕಳೊಳಗೆ ಸಂಭವಿಸಿತು.

ಇಕ್ಷ್ವಾಕು ಮೊದಲಾದ ಸೂರ್ಯವಂಶದ ರಾಜರ ಏಳಿಗೆಯು ವೈಭವದಿಂದ ಕೂಡಿದ. ಸಂಪತ್ತಿಗೆ ನೆಲೆಮನೆಯೆನಿಸಿದ ಅಯೋಧ್ಯಾಪುರದಲ್ಲಿ ದಶರಥನಿಗೆ ಪುತ್ರಕಾಮೇಷ್ಟಿಯೆಂಬ ಯಾಗದಿಂದ ಶ್ರೀರಾಮನು ಪುತ್ರನಾಗಿ ಜನಿಸಿದನು. ತಮ್ಮಂದಿರಾದ ಲಕ್ಷ್ಮಣ, ಭರತ ಶತ್ರುಘ್ನರೊಡನೆ ಬಳೆದು, ವಿಶ್ವಾಮಿತ್ರನ ಯಾಗವನ್ನು ಕಾಪಾಡಿ, ತಾಟಕಿಯನ್ನು ಕೊಂದು, ಅಹಲ್ಯಾ ಶಾಪವಿಮೋಚನೆಗೊಳಿಸಿ ಮಿಥಿಲಾಪುರಿಗೆ ಹೋಗಿ ಪರಶುರಾಮನ ಗರ್ವವನ್ನು ಮುರಿದು, ಹರಚಾಪವನ್ನು ಖಂಡಿಸಿ ಶ್ರೀರಾಮನು ಸೀತಾದೇವಿಯನ್ನು ಮದುವೆಯಾಗಿ ಸಂಭ್ರಮೋಲ್ಲಾಸದಿಂದ ಮರಳಿ ಅಯೋಧ್ಯೆಗೆ ಬಂದನು.

ಪ್ರಾಯ ತುಂಬಿದ ಪುತ್ರನಿಗೆ ಯುವರಾಜ್ಯಾಭಿಷೇಕ ಮಾಡಬೇಕೆಂದು ದಶರಥನು ಗೈದ ಸಿದ್ಧತೆಯನ್ನು ಕೈಕೆ ತಡೆದರೆ, ಸೀತಾಲಕ್ಷ್ಮಣ ಸಮೇತನಾಗಿ ಶ್ರೀರಾಮನು ಕಾಡಿಗೆ ಹೊರಟು ಹೋಗಲು, ದಶರಥನು ಪುತ್ರಶೋಕದಿಂದ ಮರಣ ಹೊಂದಿದನು. ಶ್ರೀರಾಮನು. ಭೀಕರ ವನ ಪ್ರದೇಶಗಳಲ್ಲಿ ಸಂಚರಿಸಿ. ಕ್ರೂರರಾಕ್ಷಸರನ್ನು ಕೊಂದು, ಮುನಿಗಳನ್ನು ಕಾಪಾಡಿದನು. ದಂಡಕಾರಣ್ಯದಲ್ಲಿ ವಾಸವಾಗಿರುವಾಗ ಶೂರ್ಪಣಖಿಯೆಂಬ ರಕ್ಕಸಿಯು ಬಂದು ಅಂಡಲೆಯಲು ಆಕೆಯನ್ನು ಭಂಗಿಸಿ, ಖರಾದ್ಯರನ್ನು ಖಂಡಿಸಿ, ಕನಕ ಮೃಗದ ನೆವನದಿಂದ ಪರ್ಣಕುಟಿಯಿಂದ ಹೊರಗೆ ಹೋದಾಗ, ಲಕ್ಷ್ಮಣನೂ ಅಗಲಲು, ಕಪಟ ಸನ್ಯಾಸಿಯಾಗಿ ರಾವಣನು ಸೀತೆಯನ್ನು ಕದ್ದುಕೊಂಡು ಹೋದನು.

ಸೀತಾದೇವಿಯನ್ನು ಹುಡುಕುತ್ತಾ ಶ್ರೀರಾಮನು ರೆಕ್ಕೆಮುರಿದು ಬಿದ್ದ ಜಟಾಯುವಿನ ಮೂಲಕ ರಾವಣನ ಹೊಲಬನ್ನು ಕೇಳಿ, ಸೌಮಿತ್ರಿ ಸಹಿತನಾಗಿ

ಮುಂದೆ ಸಾಗಿ ದಾರಿಯಲ್ಲಿ ಕಬಂಧನನ್ನು ಕೊಂದು, ಶಬರಿಯ ಮನೋರಥ ವನ್ನು ಸಲಿಸಿ, ಹನುಮಂತನನ್ನು ಸಂಧಿಸಿ, ಸುಗ್ರೀವಸಖ್ಯ ಮಾಡಿ ವಾಲಿಯನ್ನು ವಧಿಸಿ, ರಾವಣನ ಮೇಲೆ ದಂಡೆತ್ತಿ ಹೋಗಿ ಕರಡಿಕಪಿಗಳನ್ನು ಕೂಡಿಸಿ. ಹನು ಮಂತನನ್ನು ಸೀತಾನ್ವೇಷಣೆಗಾಗಿ ಕಳುಹಿಸಿಕೊಡಲು, ಆತನು ಧೀಂಕಿಟ್ಟು ಕಡಲನ್ನು ದಾಟಿ, ಸೀತೆಗೆ ಶ್ರೀರಾಮಾಂಕಿತವಾದ ಮುದ್ರೆಯನ್ನಿತ್ತು, ಅವಳನ್ನು ಬೀಳ್ಕೊಂಡು, ನಿರ್ಭಯನಾಗಿ ರಾವಣನ ಸುಂದರಾಶೋಕವನವನ್ನು ಮುರಿದು. ರಾಕ್ಷಸರನ್ನು ಸದೆಬಡಿಯುತ್ತಿರಲು, ಆತನನ್ನು ಬಿಗಿದು ಅವನ ಬಾಲಕ್ಕೆ ಬೆಂಕಿ ಹಚ್ಚಲು, ಲಂಕಾರಾಜ್ಯವನ್ನು ಸುಟ್ಟು ಶ್ರೀರಾಮನಲ್ಲಿಗೆ ಬಂದು ಸೀತಾವೃತ್ತಾಂತ ವನ್ನು ಆತನಿಗೆ ಅರುಹಿದನು.

ಗಣನೆಯಿಲ್ಲದ ಕಪಿಗಳನ್ನು ಕೂಡಿಕೊಂಡು. ತೆಂಕಣ ಕಡಲ ತೀರಕ್ಕೆ ಬಂದು. ಕಡಲಿಗೆ ಸೇತುವೆಯನ್ನು ಕಟ್ಟಿ, ಯುದ್ಧದಲ್ಲಿ ರಾವಣ ಕುಂಭಕರ್ಣಾದಿ ರಾಕ್ಷಸ ರನ್ನು ಕೊಂದು, ಶರಣುಹೊಕ್ಕ ರಾವಣಾನುಜನಾದ ವಿಭೀಷಣನಿಗೆ ಲಂಕಾ ರಾಜ್ಯವನ್ನಿತು, ದೇವತೆಗಳನ್ನು ರಕ್ಷಿಸಿ, ಸೀತಾದೇವಿಯನ್ನು ಸೆರೆಯಿಂದ ಬಿಡಿಸಿ. ಲಕ್ಷ್ಮಣ ವಿಭೀಷಣ ಸುಗ್ರೀವಾದ್ಯರೊಡನೆ ಪುಷ್ಪಕ ವಿಮಾನವನ್ನೇರಿ ಅಯೋಧ್ಯಾ ಪಟ್ಟಣಕ್ಕೆ ಬಂದು ಚಿಂತಿಸುತ್ತಿದ್ದ ಭರತಾದ್ಯರನ್ನು ಸಂತೈಸಿದನು. ಮಂತ್ರಿ ಗಳನ್ನೂ, ಮನ್ನೆಯರನ್ನೂ, ಪರಿಜನರನ್ನೂ ಪುರಜನರನ್ನೂ ಕಾಣಿಸಿಕೊಂಡನು; ಕೈಕೆ ಸುಮಿತ್ರೆಯರಿಗೆ ವಂದಿಸಿದನು. ತನ್ನ ಬರವನ್ನೇ ಹಾರೈಸಿ ಕೃಶಾಂಗಿ ಯಾಗಿದ್ದ ಕೌಸಲ್ಯೆಗೆ ಅಭಿವಂದಿಸಿದನು; ಕೌಸಲ್ಯೆ ಕಯ್ಬುಳದಿಂದ ಮೆಲ್ಲಮೆಲ್ಲನೆ ಮುದ್ದು ಕಂದನ ಮೆಯ್ದಡವಿದಳು; ಅಕ್ಕರೆಯಿಂದ ಅಪ್ಪಿಕೊಂಡಳು. ಮುಂಡಾಡಿ ದಳು. ಶ್ರೀರಾಮನ ಮೈಮೇಲೆ ಯುದ್ಧದ ಗಾಯಗಳನ್ನು ಕಂಡು—

"ಅಯ್ಯೋ ಮಗನೆ! ನಿನ್ನ ಈ ಕೋಮಲ ಶರೀರವನ್ನು ಯಾರು ಗಾಯ ಗೊಳಿಸಿದರೊ? ನನ್ನ ಒಡಲು ಬೆಂದು ಹೋಯಿತಲ್ಲಾ"

ಹೀಗೆಂದು ಕೌಸಲ್ಯೆ ನಿಟ್ಟುಸಿರಿಟ್ಟಳು. ತನ್ನ ಮಗನಿಗೆ ವನವಾಸದ ಬನ್ನಗಳು ಬಂದೊದಗಲು ಕಾರಣಳಾದ ಸವತಿಯನ್ನು ಶಪಿಸಿದಳು. ಇಂತು ಮರುಗುತ್ತಿರುವ ಮಾತೆಯನ್ನು ರಾಮನು ಮಂದಹಾಸದಿಂದ ಆನಂದ ಗೊಳಿಸಿ ದನು.

ಶ್ರೀರಾಮನಿಗೆ ಸಮುದ್ರವಲಯಾಂಕಿತವಾದ ಸಮಸ್ತ ಭೂಮಂಡಲದ ಪಟ್ಟಾಭಿಷೇಕವು ಶುಭಮುಹೂರ್ತದಲ್ಲಿ ನೆರವೇರಿತು; ಶ್ರೀರಾಮನ ಪಟ್ಟಾ ಭಿಷೇಕವನ್ನು ಅಖಿಲ ಸುರನರವಾನರ ಮುನಿದನುಜರು ಕಂಡು ಹರ್ಷಗೊಂಡರು.

ಆ ಮೇಲೆ ಶ್ರೀರಾಮನು ಹಲವು ವರ್ಷಗಳ ಕಾಲ ಭೂಮಿಯನ್ನು ವೈಭವದಿಂದ ಪಾಲಿಸಿದನು.

ರಾಮರಾಜ್ಯದಲ್ಲಿ ಸಕಲವೂ ಸಮೃದ್ಧಿಯಾಯಿತು. ಪ್ರಜೆಗಳು ಸದಾಚಾರಸಂಪನ್ನರಾಗಿದ್ದರು. ಸುಖಸಂಪತ್ಸಮೃದ್ಧಿಯಿದ್ದರೂ ತನಗೆ ಸಂತಾನವಾಗಲಿಲ್ಲವೆಂದು ರಾಘವನು ವ್ಯಸನಾಕ್ರಾಂತನಾದನು. ನೀರಿದ್ದ ಸರೋವರಕ್ಕೆ ತಾವರೆಯಿಲ್ಲದಿರಲು. ನಕ್ಷತ್ರಗಳಿರುವ ಆಕಾಶಕ್ಕೆ ಚಂದ್ರನಿಲ್ಲದಿರಲು, ಸುಂದರ ಯೌವನವುಳ್ಳ ಸುದತಿಗೆ ಪತಿಯಿಲ್ಲದಿರಲು, ಸತ್ಪ್ರಜೆಗಳುಳ್ಳ ಭೂಮಿಗೆ ಅರಸನಿಲ್ಲದಿರಲು ಎಂತೋ. ಅಂತೆ ಸಿರಿಸಂಪತ್ತುಗಳುಳ್ಳ ತನ್ನ ವಂಶಕ್ಕೆ ಪುತ್ರನಿಲ್ಲದಿರಲು ಶೋಭೆಯಿಲ್ಲವೆಂದಾತನು ಚಿಂತಿಸುತ್ತಿದ್ದನು. 'ಇಕ್ಷ್ವಾಕುವಂಶವು ತನ್ನಲ್ಲಿ ಕೊನೆಗೊಳ್ಳುವಂತಾಯಿತಲ್ಲಾ, ಕುಲಘಾತಕನು ತಾನಾದೆನಲ್ಲಾ' ಎಂದು ಮರುಗಿದನು. ಹೀಗೆ ಚಿಂತಿಸುತ್ತಿರುವ ಸೀತಾರಾಮರಲ್ಲಿಗೆ ಕುಲಪುರೋಹಿತನಾದ ವಸಿಷ್ಠನು ಬಂದು, ಮುಂದೆ ನಿಮಗೆ ಸಂತಾನದ ಅಭ್ಯುದಯವಾಗುವುದೆಂದು ಹೇಳಲು ಅವರು ಆನಂದ ತುಂದಿಲರಾಗಿದ್ದರು.

ಋಷಿವಚನವು ಸತ್ಯವಾಯಿತು; ಸೀತಾದೇವಿಯು ಗರ್ಭಿಣಿಯಾದಳು. ಶ್ರೀರಾಮನು ಸಂತಸಗೊಂಡು ನಾಲ್ಕನೆಯ ತಿಂಗಳಲ್ಲಿ ವಸಿಷ್ಠ ವಿಶ್ವಾಮಿತ್ರರ ಉಪದೇಶದಂತೆ. ಪುಂಸವನ. ಸೀಮಂತಾದಿಗಳನ್ನು ಮಾಡಿಸಿದನು. ಯೋಜನದಗಲದಲ್ಲಿ ಚಪ್ಪರಹಾಕಿಸಿ, ಅಲ್ಲಿ ದೇವತೆಗಳಿಗೂ. ದಾನವರಿಗೂ. ನರವಾನರರೆಲ್ಲರಿಗೂ ಸಂಭ್ರಮದ ಸುಖಭೋಜನವೇರ್ಪಡಿಸಿ, ಸುಗಂಧ ತಾಂಬೂಲ, ಪುಷ್ಪಾಕ್ಷತೆಯ ಪೂಜೆ, ವಸ್ತ್ರಾಭರಣಗಳ ಉಡುಗೊರೆಗಳನ್ನಿತ್ತು ಮನ್ನಿಸಿದನು, ಆ ಮೇಲೆ ಒಂದು ದಿನ ಸೀತಾದೇವಿ, ಶ್ರೀರಾಮನಲ್ಲಿಗೆ ಬಂದು ಆಶ್ರಮದ ಋಷಿಪತ್ನಿಯರ ಸತ್ಸಂಗದಲ್ಲಿ ತನ್ನ ಬೇಸರವನ್ನು ಕಳೆಯಬೇಕೆಂಬ ಬಯಕೆಯನ್ನು ಪತಿಯೊಡನೆ ಬಿನ್ನೈಸಿದಳು. ಬಯಕೆಯನ್ನು ಪೂರೈಸುವುದಾಗಿ. ಪತ್ನಿಯನ್ನು ಶ್ರೀರಾಮನು ಸಂತೈಸಿ ಕಳುಹಿದನು. ಇಂತಿರಲು ಒಂದು ಇರುಳು, ಶ್ರೀರಾಮನಿಗೆ, ಸೀತಾದೇವಿಯು ಗಂಗೆಯನ್ನು ದಾಟಿ. ಕಾಡಿನಲ್ಲಿ ಬಹಳ ಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಗಳನ್ನು ನೋಡಿ ಮರುಗುತ್ತಾ ಮುಂದುವರಿಯುತ್ತಿರುವ ದುಃಸ್ವಪ್ನ ಬಿದ್ದಿತು. ವಸಿಷ್ಠನಿಗೆ ಇದನ್ನು ಅರುಹಲು, ಆತನು ಈ ಕನಸು, ಒಳ್ಳೆಯದಲ್ಲವೆಂದು ಹೇಳಿ ಅದಕ್ಕಾಗಿ ಶಾಂತಿಕ್ರಿಯೆಗಳನ್ನು ಮಾಡಿಸಿದನು.

ಶಾಂತಿವಿಧಿಗಳಿಂದಲೂ ಶ್ರೀರಾಮನ ಮನಸ್ಸಿಗೆ ಶಾಂತಿಯುಂಟಾಗಲಿಲ್ಲ. ಎರಡು ಮೂರು ದಿನಗಳ ವರೆಗೆ ಪ್ರಜಾಪರಿಪಾಲನಾಕಾರ್ಯವನ್ನು ತೊರೆದು

ಸಂತಾಪದಿಂದಿದ್ದನು. ಹೀಗಿದ್ದರೆ ಜನರಿಗೆ ತನ್ನ ಕುರಿತು ಬೇಸರಹುಟ್ಟುವುದೆಂದು ಬಗೆದು, ಒಮ್ಮೆ, ರಾತ್ರಿವೇಳೆಯಲ್ಲಿ ಏಕಾಂಗಿಯಾಗಿ ನಗರದಲ್ಲಿ ಹೊರಟು ನಗರ ಶೋಧಕಚರರಲ್ಲಿ ಒಬ್ಬನನ್ನು ಕರೆದು ಕೇಳಿದನು.

"ಪ್ರಜೆಗಳು ನನ್ನನ್ನು ನಿಂದಿಸುವರೆ? ನನ್ನ ಗುಣಕ್ಕೆ ದೋಷವನ್ನು ಸಂಧಿಸುವರೆ? ನನ್ನ ನಿರ್ಮಲವಾದ ಕೀರ್ತಿಗೆ ಕೊರತೆಯಿದೆಯೆ? ನನ್ನ ಭುಜ ವಿಜಯಪ್ರತಾಪವನ್ನು ಕಡೆಗಣಿಸುವರೆ? ನನ್ನ ವಂಶದ ಏಳಿಗೆಯನ್ನು ಕುಂದಿಸುವರೆ? ನನ್ನ ಕುರಿತು ಯಾರಾದರೂ ಕೊಂಕುಮಾತುಗಳನ್ನಾಡಿ ನಿಂದಿಸುವರೆ?".

"ದೇವ, ನಿನ್ನ ಹೆಸರು ಕೇಳಿದವನು ದೇವತ್ವವನ್ನು ಹೊಂದುವನು; ನಿನ್ನ ಸೇವೆ ಮಾಡಿದಾತನು ಬ್ರಹ್ಮತ್ವವನ್ನು ಪಡೆಯಲರ್ಹನು; ನಿನ್ನನ್ನು ಮರೆಹೊಕ್ಕವನು ಆಚಂದ್ರಾರ್ಕವಾಗಿ ಬಾಳಿ ವೈಭವದಿಂದ ಇಂದ್ರನನ್ನೂ ಮೀರುವನು: ನಿನ್ನಂತಹವನನ್ನೂ ನಿಂದಿಸುವವರಿದ್ದಾರೆಯೆ? ಅಥವಾ ಸೂರ್ಯನಿಗೆ ಕತ್ತಲು ಮುಸುಕಿದರೆ ಅದರಿಂದೇನು?"

ಚರನ ವಚನಸರಣಿಯ ಕೊನೆಯ ನುಡಿ ಶ್ರೀರಾಮನ ಕುತೂಹಲವನ್ನು ಕೆರಳಿಸಿತು.—

"ಹೇಳಯ್ಯ, ಸೂರ್ಯನಿಗೆ ಕತ್ತಲು ಮುಸುಕಿದರೆ ಅದರಿಂದೇನೆಂದು ನುಡಿದೆಯಲ್ಲಾ; ಹಾಗಾದರೆ. ನನ್ನ ಅರಸುತನದಲ್ಲಿ ಯಾವ ಕೊರತೆಯನ್ನು ಜನರು ಹೇಳುತ್ತಿದ್ದಾರೊ, ತಿಳಿಸು."

"ಪ್ರಭೋ, ನೀನು ಪಾವನ ಸ್ವರೂಪನೆಂಬುದನ್ನು ಅಹಲ್ಯೆಯು ಜಗದ ಜನತೆಗೆ ತಿಳಿಸಲಿಲ್ಲವೆ? ಲೋಕದಲ್ಲಿ ಅಜ್ಞಾನಿಗಳು ಆಡಿದ ಮಾತನ್ನು ನಿನ್ನೊಡನೆ ಹೇಳಲು ನಮ್ಮ ನಾಲಿಗೆಯೆಂತು ಬರಬೇಕೆ?" ಎನ್ನುತ್ತಾ ಚರನು ರಾಮನ ಪಾದಗಳಿಗೆರಗಿದನು.

ಶ್ರೀರಾಮನ ಸಂಶಯ ಬಲವಾಯಿತು; ಚರನನ್ನು ಹಿಡಿದೆತ್ತಿ, ಅಂಜಬೇಡವೆಂದು ಧೈರ್ಯವಿತ್ತು ತನ್ನಾಣೆಯಾಗಿ ಹೇಳೆಂದನು.

"ಜೀಯಾ, ಲಾಲಿಸು; ಕೊಳಕನ್ನು ಹಿಸುಕುವ ಒಬ್ಬ ಮಡಿವಳನು ನಿನ್ನ ಸದ್ಗುಣಚರಿತ್ರದ ಕುರಿತು ಹಾಳು ಮಾತನ್ನಾಡಿಬಿಟ್ಟನು: ಲೋಕವನ್ನೇ ಪಾವನಗೊಳಿಸಬಲ್ಲ ನಿನ್ನ ನಾಮಮಹಾತ್ಮ್ಯವನ್ನು ಆತನು ಎಂತು ಬಲ್ಲನು? ಅವನ ಹೆಂಡತಿ, ಸಿಟ್ಟುಗೊಂಡು ತವರುಮನೆಗೆ ಹೇಳದೆ ಹೋಗಿದ್ದಳು: ಆ ಹಠಮಾರಿತನದಿಂದಾಗಿ, ಅವಳ ತಾಯ್ತಂದೆಯರು ಆಕೆಯನ್ನು ಗಂಡನಲ್ಲಿಗೆ ಕರೆತಂದು.

ಕೂಡಿಬಾಳುವಂತೆ ಆತನನ್ನು ಒತ್ತಾಯಿಸಿ ಕೇಳಿಕೊಂಡರು. "ಹೇಳದೆ ಹೊರಟು ಹೋದ ಹೆಂಡತಿಯನ್ನು, ಪುನಃ ಶ್ರೀರಾಮನಂತೆ ಸ್ವೀಕರಿಸಿ ಕೂಡಿಬಾಳುವವನು ನಾನಲ್ಲ" ಎಂದು ಅಗಸನು ಕೆಡುನುಡಿಯನ್ನಾಡಿದನು. ಈ ನಿಷ್ಠುರೋಕ್ತಿಯನ್ನು ಕೇಳಲಾರದೆ, ನಾವು ಕಿವಿ ಮುಚ್ಚಿಕೊಂಡು ಬಂದೆವು; ಒಡೆಯಾ, ಮಂತ್ರಪವಿತ್ರವಾದ ಹವಿಸ್ಸನ್ನು ಕಾಗೆಯು ತಿಳಿದು ಎಂಜಲಿಸುವುದುಂಟೆ?"

ದೂತನ ಈ ದೂರನ್ನು ಸೀತಾಪತಿ ಕೇಳಿದನು; ಆತನನ್ನು ಕಳುಹಿಸಿ ಕೊಟ್ಟನು. ಬಂಧನದಲ್ಲಿ ಬಿದ್ದ ಮತ್ತಗಜದಂತೆ ಸಂಕಟದಿಂದ ತಲೆಯನ್ನು ತೂಗಿದನು. ಮೂಗಿನ ಮೇಲೆ ಬೆರಳಿಟ್ಟು ಮೌನವಾದನು; ಬೆರಗಾದನು; ಮಡಿವಳನ ಮಾತನ್ನು ನೆನೆನೆನೆದು ಮನಸ್ಸಿನಲ್ಲಿಯೇ ಮರುಗಿದನು. ಹುತ್ತವನ್ನು ಹೋಗುವ ಹಾವಿನಂತೆ ಅಂತಃಪುರವನ್ನು ಪ್ರವೇಶಿಸಿದನು. ಅಂದು ಅರಸನ ಓಲಗವಿಲ್ಲದಾಯಿತು; ಬಾಗಿಲಿಗೆ ಬಂದ ಭೂಪಾಲರಿಗೆ ಶ್ರೀರಾಮ ದರ್ಶನವೇ ದೊರಕಲಿಲ್ಲ. ಅಣ್ಣನು ಚಿಂತಾಕ್ರಾಂತನಾಗಿರುವ ಸುದ್ದಿ ತಮ್ಮಂದಿರಿಗೂ ತಲಪಿತು. ಅವರು ಅಂತಃಪುರವನ್ನು ಪ್ರವೇಶಿಸಿ, ರೋಗದಿಂದ ಹಾಸಿಗೆ ಹಿಡಿದವನಂತೆ ಬಿದ್ದಿದ್ದ ಶ್ರೀರಾಮನ ಪಾದಗಳಿಗೆರಗಿ ಮಾತನಾಡಿಸಲಾರದೆ ಮೌನವಾಗಿದ್ದರು.

ಶ್ರೀರಾಮನು ಎದ್ದು ಕುಳಿತನು; ತಮ್ಮಂದಿರನ್ನು ಪ್ರೀತಿಯಿಂದ ಬಳಿಗೆ ಕರೆದನು; ಮೆಲ್ಲಗೆ ಮಾತನಾಡಿದನು—

"ಅಯ್ಯೋ ! ಇಂದು ನನಗೆ ಹೊದ್ದಿರುವ ಅಪವಾದವನ್ನು ನೀವು ತಿಳಿಯಲಿಲ್ಲ; ಜನಸಮೂಹದೆಡೆಯಲ್ಲಿ. ಕದ್ದ ಕಳ್ಳನು ಕೆಟ್ಟ ಮಾತಿಗೆ ಗುರಿಯಾಗುವಂತೆ, ನಾನು ಆಗಲೊಲ್ಲೆನು. ಲೋಕದ ನಿಂದೆಗೆ ಗುರಿಯಾಗಿ ಹೇಗೆ ಬದುಕಲಿ? ತಿದ್ದಿ ತೀರದಂತಹ ಈ ಅಪವಾದಕ್ಕೆ ನಾನು ಅಂಜುತ್ತೇನೆ. ಸೀತೆಯನ್ನು ಬಿಟ್ಟು ಬಿಡುವೆನು. ಆಕೆ ಶೀಲಸಂಪನ್ನೆಯೆಂದೂ, ಪಾವನೆಯೆಂದೂ, ಪುಣ್ಯಚರಿತೆಯೆಂದೂ, ಪತಿವ್ರತೆಯೆಂದೂ ನಾನು ಬಲ್ಲೆನು. ಆದರೂ ನಿಂದೆಗೆ ಗುರಿಯಾದ ಮೇಲೆ ಭೂಮಿಯು ಮಗಳನ್ನು ಬಿಡುವುದು ನಿಶ್ಚಯವು. ಸೂರ್ಯವಂಶ ಸಂಭೂತರು ಅಪಕೀರ್ತಿಯನ್ನು ಎಂದಾದರೂ ಸಹಿಸುವರೆ? ಮೋಹದ ಸುಕುಮಾರನಾದ ನನ್ನನ್ನು ಸತ್ಯಭಾಷೆಗಾಗಿ ತಂದೆಯು ಬಿಟ್ಟುಬಿಡಲಿಲ್ಲವೆ? ಹಲವು ಮಾತಿನಿಂದೇನು? ಕಲಿಯುಗದ ಬ್ರಾಹ್ಮಣರು ಆಚಾರವನ್ನು ಬಿಡುವಂತೆ, ಇನ್ನು ನಾನು ಸೀತೆಯನ್ನು ಬಿಡುವೆನು."

ಅಗ್ರಜನ ಈ ಆಗ್ರಹದಿಂದ ಸೋದರರು ವ್ಯಗ್ರರಾದರು; ಈ ಘೋರ ನಿರ್ಣಯವನ್ನು ಕೇಳಿ, ಹೆದರಿ ನಡುನಡುಗಿ ತಮ್ಮಂದಿರು ಬಿನ್ನೈಸಿದರು—

"ದೇವ, ವೇದವನ್ನು ಪಾಷಂಡಿಗಳು ನಿಂದಿಸಿದರೆ, ಸಜ್ಜನರು ತ್ಯಜಿಸುವರೆ? ಕುಲವರ್ಧಿನಿಯಾದ ಸೀತಾಮಾತೆಯನ್ನು ಎಂತು ಬಿಡುವೆಯೊ?"

ಭಯಶೋಕಗಳಿಂದ ಭರತನ ಕಂಠ ಗದ್ಗದಿಸಿತು; ಕಣ್ಣುಗಳಲ್ಲಿ ಅಶ್ರುಜಲ ತುಳುಕಿತು—

"ಅಣ್ಣಾ, ತಿಳಿದವರು ಕರೆಯುವ ಕಪಿಲೆಯನ್ನು ಹೊಡೆದು ಕಾಡಿಗಟ್ಟುವರೆ? ನಿನ್ನ ಅರಸಿಯನ್ನು ಅಗ್ನಿಪರೀಕ್ಷೆಗೆ ಒಳಗಾಗಿಸಿದಾಗ, ಆಕೆ ನಿನಗೆ ಪ್ರಿಯಳೆಂದೂ, ಕುಲಕ್ಕೆ ಪರಿಶುದ್ಧೆಯೆಂದೂ, ತನಗೆ ಗತಿಕೊಡುವ ಸೊಸೆಯೆಂದೂ, ದೇವದಾನವ ಕಪಿಸೇನಾಸಮೂಹದ ಮುಂದೆ ನಮ್ಮ ತಂದೆಯೇ ಬಂದು ನಿನ್ನೊಡನೆ ಹೇಳಲಿಲ್ಲವೆ? ಅದೆಲ್ಲವನ್ನೂ ಮರೆತು, ಹುಲುಮನುಷ್ಯನಾದ ಮಡಿವಳನು ಆಡಿದ ಮಾತಿನ ಕಾರಣದಿಂದ ಕುಲಪತ್ನಿಯನ್ನು ಬಿಡುವುದು ಯಾವ ನೀತಿಯು? ರಘುಕುಲಲಲಾಮ, ವಿಷಯಗಳ ವ್ಯತ್ಯಾಸವರಿಯದ ಮೂಢರ ಹಾಗೆ ಅಗಸನ ಮಾತಿಗೆ ಅಂಜಿ ಸೀತಾದೇವಿಯನ್ನು ದೂಷಿತೆಯೆನ್ನಬಹುದೆ?"

"ತಮ್ಮಾ, ಸೀತೆ ಪುನೀತೆಯೆಂದು ನಾನು ಬಲ್ಲೆನು; ಉಮ್ಮಳಿಸಬೇಡ; ಈ ಅಪವಾದವನ್ನು ಮಾತ್ರ ನಾನು ಸಹಿಸಲೊಲ್ಲೆ; ಪೃಥು, ಪುರೂರವ, ಹರಿಶ್ಚಂದ್ರಾದಿ ಅರಸರು ಅಪಕೀರ್ತಿಯನ್ನು ಸಹಿಸಿದರೆ? ನಾನಾದರೂ ದೂಷಣೆಗೆ ಒಳಗಾಗಲಾರೆನು. ಮಹಾಯೋಗಿಯು ಮಮತೆಯನ್ನು ಬಿಡುವಂತೆ ಸೀತೆಯನ್ನು ಬಿಡುವೆನು."

ಲಕ್ಷ್ಮಣನು ಶ್ರೀರಾಮನ ಈ ದೃಢನಿರ್ಧಾರವನ್ನು ಕೇಳಿದನು; ಕೇಳಿ ಸಹಿಸಲಾರದೆ ಕಿವಿಮುಚ್ಚಿ ಕೊಂಡನು; ಹಮ್ಮೈಸಿದನು; ಕಂಪಿತ ಕಾಯನಾದನು; ಕೊನೆಗೆ ಬಿನ್ನೈಸಿದನು—

"ಅಣ್ಣಾ, ಶರೀರ ಸುಖವನ್ನು ಬಯಸಿ, ಧರ್ಮವನ್ನು ತ್ಯಜಿಸುವಂತೆ, ದೇವಿಯ ಚಿತ್ತಶುದ್ಧಿಯನ್ನು ತಿಳಿದಿದ್ದೂ ಇಂತಹ ಕ್ಷುಲ್ಲಕ ಅಪವಾದಕ್ಕಾಗಿ ಮಾತೆಯನ್ನು ಕರುಣೆಯಿಲ್ಲದೆ ಬಿಡುವುದೆ? ಜೀಯ ! ದೇವಿ ತುಂಬಿದ ಗರ್ಭಿಣಿ, ಮನುಕುಲವರ್ಧಿನಿ. ಇಂದು ಆಕೆಯನ್ನು ಪ್ರೀತಿಯ ಆರೈಕೆಯಿಂದ ನಾವು ನೋಡಿಕೊಳ್ಳಬೇಡವೆ?"

ಶತ್ರುಘ್ನನಿಗೆ ಶ್ರೀರಾಮನ ನಿರ್ಧಾರ ತೀರಾ ಅಸಮಂಜಸವೆನಿಸಿತು. ಭರತ ಲಕ್ಷ್ಮಣರ ವಿನಯೋಕ್ತಿ ಅಣ್ಣನಲ್ಲಿ ನಿಷ್ಫಲವಾಗಲು, ಸಿಟ್ಟುಗೊಂಡು ಅವನು ಇಂತೆಂದನು—

"ದೊರೆಯೆ, ಇಕ್ಷ್ವಾಕುವಂಶದ ಅರಸರು ಕೈಹಿಡಿದ ಧರ್ಮಪತ್ನಿಯನ್ನು ತೊರೆಯುವರೆ? ಲೋಕದಲ್ಲಿ ಯಾರಾದರೂ ನಿಂದೆಯ ನುಡಿಯನ್ನಾಡುವುದೆಂದ ರೇನು? ಬುದ್ಧಿ ಹೇಳುವ ಹಿರಿಯರಿಲ್ಲದಿದ್ದರೆ ಕೀರ್ತಿಯನ್ನು ಹೇಗೆ ಕಾಪಾಡಿ ಕೊಳ್ಳಬಹುದು? ಏಳಿಗೆಯ ಮರವನ್ನು ನಮ್ಮ ಕೈಯಿಂದಲೇ ಕಡಿದುಹಾಕು ವುದೆ? ಹೆಂಗಸನ್ನು ದುಃಖದಾವಾಗ್ನಿಯಿಂದ ಸುಡುವುದೆ? ನನ್ನ ಒಡಹುಟ್ಟಿ ದವರು ಇಂತಹ ಮಾತಿಗೆ ಕಿವಿಗೊಡಬಹುದೆ?"

ತಮ್ಮಂದಿರ ವಿನಯೋಕ್ತಿ ಪರುಷೋಕ್ತಿಗಳೆಲ್ಲವನ್ನೂ ರಾಘವನು ಆಲಿಸಿ ದನು. ಒದಗಿದ ಧರ್ಮಸಂಕಟದಿಂದ ತಲೆಬಾಗಿಸಿದನು. ಮೆಲ್ಲಮೆಲ್ಲನೆ ವಿನಯ ವಚನದಿಂದ ನುಡಿದನು—

"ಅಯ್ಯೋ, ತಮ್ಮಂದಿರೆ! ಅಪವಾದವೆಂಬ ಹೃದಯಶಲ್ಯವನ್ನು ನಾನು ಸಹಿಸಲಾರೆನು; ಜಾನಕಿಯನ್ನು ತೊರೆದು ಹೆರೆಕಳಚಿದ ಹಾವಿನಂತೆ ನಾನಾಗುವೆನು. ತಿಳಿಸಿದರೂ ನಿಮಗೆ ನನ್ನ ಸಂಕಟದ ಅರಿವಾಗಲೊಲ್ಲದು; ಇನ್ನು ಹೇಳಿ ಪ್ರಯೋಜನವೇನು?"

ಭರತ–ಶತ್ರುಘ್ನರು ಬೇಸರದಿಂದ ತಮ್ಮ ಭವನಗಳತ್ತ ಸಾಗಿದರು. ಏಕಾಂತಕ್ಕೆ ಸೌಮಿತ್ರಿಯನ್ನು ಕರೆದು ರಾಘವನೆಂದನು—

"ಬಾ ತಮ್ಮ! ನೀನು ಇದುವರೆಗೂ ನನ್ನ ಮಾತನ್ನು ಮೀರಿದವನಲ್ಲ, ಆಚೀಚೆಯ ಸಂಭವಗಳನ್ನು ಯೋಚಿಸಿಕೊಂಡು ಮರುಗಬೇಡ. ಇದೋ. ಈ ಖಡ್ಗದಿಂದ ನನ್ನ ಕೊರಳನ್ನು ಕತ್ತರಿಸು; ಅಲ್ಲವಾದರೆ. ಜಾನಕಿಯನ್ನು ವ್ಯಥಿಸದೆ ಗಂಗಾತೀರದ ಘೋರಾರಣ್ಯದಲ್ಲಿ ಬಿಟ್ಟು ಬಾ; ಹಿಂದೆ, ಆಕೆ ನನ್ನೊಡನೆ ವನಗ ಮನದ ಬಯಕೆಯನ್ನು ತಿಳಿಸಿದ್ದಳು. ಅದೇ ನಿಮಿತ್ತದಿಂದ ಅವಳನ್ನು ಕಾಡಿಗೆ ಕರೆದುಕೊಂಡು ಹೋಗು."

ಅಣ್ಣನ ಆಜ್ಞೆಯನ್ನು ಮೀರಿದರೆ ರೌರವ ನರಕ: ಅವನು ಹೇಳಿದ್ದನ್ನು ಮಾಡಿದರೆ ಮಾತೆಯನ್ನು ಕೊಂದ ಮಹಾಪಾಪ! ಏನು ಮಾಡಲಿ? ಎಂದು ಲಕ್ಷ್ಮಣನು ಧರ್ಮಸಂಕಟದಲ್ಲಿ ಸಿಲುಕಿದನು; ಶೋಕಾಕುಲನಾದನು. ಕೊರಳಸೆರೆ ಬಿಗಿಯಿತು; ಕಂಬನಿ ತುಂಬಿತು; ಸ್ಮೃತಿತಪ್ಪಿದಂತಾಯಿತು. ಇಂತು ಸಹೋದ ರನು ಸಂಕಟಪಡುತ್ತಿರುವುದನ್ನು ಕಂಡು. ಶ್ರೀರಾಮನು ನಿರ್ದಯನಂತೆ. 'ನಾನಿರು ವಾಗ ನಿನಗೆ ದೋಷವುಂಟೇ? ಹೋಗು, ಸೀತೆಯನ್ನು ಕಾಡಿಗೆ ಕಳುಹು' ಎಂದನು.

ಅಣ್ಣದೇವನ ಮೇಲಿನ ವಾತ್ಸಲ್ಯವೆಂಬ ಕಣ್ಣಿಯಲ್ಲಿ ಸಿಲುಕಿಬಿದ್ದು, ತನ್ನಿಂದಾಗದು ಎಂದು ಹೇಳಲಾರದೆ ಲಕ್ಷ್ಮಣನು ನಿರ್ವಿಣ್ಣನಾಗಿ, ಕುಮುರೆ

ಸಾರಥಿ ಪತಾಕೆಗಳಿಂದ ಕೂಡಿದ ರಥವನ್ನು ತರಿಸಿ ಸೀತಾಮಾತೆಯ ಮಂದಿರದ ಹೊರಗೆ ಇರಿಸಿ, ಆಕೆಯನ್ನು ಕಣ್ಣೆತ್ತಿ ಸಹ ನೋಡಲಾರದೆ ದೂರದಲ್ಲಿ ನಿಂತು ಕೊಂಡು ಮರುಕದಿಂದ ನುಡಿದನು—

"ತಾಯೆ! ನೀನು ಕಾಡಿಗೆ ಹೋಗಬೇಕೆಂದು ಏಕೆ ಬಯಸಿದೆಯೊ? ನಿನ್ನನ್ನು ಶ್ರೀರಾಮನು ತಪೋವನಕ್ಕೆ ಕಳುಹಿಸಲು ಹೇಳಿರುವನು. ನಿನಗೆ ಸಂತೋಷವಿದ್ದರೆ, ಇಕೋ, ರಥವು ಸಿದ್ಧವಾಗಿದೆ, ಹೊರಡುವುದು."

ಲಕ್ಷ್ಮಣನ ಮಾತನ್ನು ಕೇಳಿ ಸೀತೆ ಸಂತಸತಾಳಿದಳು. ಪತಿದೇವನು ತನ್ನ ಬಯಕೆಯನ್ನು ಈಡೇರಿಸಿದನಲ್ಲಾ ಎಂದಾಕೆ ಸಂಭ್ರಮಾನ್ವಿತೆಯಾದಳು. ಉಲ್ಲಾಸ ಗೊಂಡು ಹೊರಡಲನುವಾದಳು. ನಂಬಿದವರ ಇಷ್ಟಾರ್ಥವನ್ನು ಸಲ್ಲಿಸುವ ಕೃಪಾಳುವೆಂಬುದನ್ನು ತನ್ನ ಪತಿಯು ತೋರಿಸಿಕೊಟ್ಟನು, ಎಂದು ಹಿರಿಹಿಗ್ಗಿ, ಸೀತೆ, ಕೌಸಲ್ಯೆಯಲ್ಲಿಗೆ ಬಂದು ಆಕೆಯನ್ನೊಡಂಬಡಿಸಿ, ಹರಕೆಗೊಂಡು. ಕೈಕೆಯಿಗೆ ವಂದಿಸಿ, ಸುಮಿತ್ರೆಗೆ ಮಣಿದು, ಸಖಿಯರನ್ನು ಸಂತೈಸಿ ಬೀಳ್ಕೊಂಡಳು. ತಪೋ ವನದ ಋಷಿಗಳಿಗೂ, ಋಷಿಪತ್ನಿಯರಿಗೂ ಕಾಣ್ಕೆಕೊಡಲು, ಅಗರು, ಚಂದನ, ಕುಂಕುಮಾನುಲೇಪನ, ಬಗೆ ಬಗೆಯ ದಿವ್ಯಾಂಬರಾಭರಣಗಳನ್ನೂ, ವಿವಿಧ ಮಣಿ ಭೂಷಣಸುವಸ್ತುಗಳನ್ನೂ ತೆಗೆಸಿ ಕಟ್ಟಿಸಿ ರಥದಲ್ಲಿರಿಸಿ, ರಾಮನ ಸ್ವರ್ಣಪಾದುಕೆ ಗಳನ್ನು ತರಿಸಿಕೊಂಡು, ಬಹಳ ಸಂತೋಷದಿಂದ ಬಂದು ರಥವನ್ನೇರಿದಳು. ಪುಣ್ಯತಪೋವನ ದರ್ಶನಕ್ಕಾಗಿಯೇ ತಾನು ಹೋಗುವುದು ನಿಜವೆಂದು ನಂಬಿ ಸೀತೆ ಹೊರಟಳು. ಶ್ರೀರಾಮನು ತನ್ನಲ್ಲಿ ಹೇಳಿದ ಕಾರ್ಯದ ಕಠೋರತೆ ಯನ್ನೂ, ದೇವಿಯ ತಪೋವನಗಮನ ಸಂತೋಷವನ್ನೂ ಕಂಡು ಲಕ್ಷ್ಮಣನು ಮನಸ್ಸಿನಲ್ಲಿಯೇ ಮರುಗಿದನು; ಕಣ್ಣೀರನ್ನು ತಡೆಹಿಡಿದುಕೊಂಡನು. ಸಾರಥಿಗೆ ಸೂಚನೆಯೀಯಲು ರಥವು ನಿರ್ಮಲ ಗಂಗಾನದಿಯ ತಡಿಗಾಗಿ ಸಾಗಿತು.

ರಥವು ಮುಂದುಮುಂದಕ್ಕೆ ಸಾಗುತ್ತಿತ್ತು; "ಅಕಟಾ! ರಘುವರನು ಪತ್ನಿಯನ್ನು ಬಿಟ್ಟು ಬಿಡುವನಲ್ಲಾ" ಎಂದು ಸಂಕಟಗೊಂಡಂತೆ, ರಥದ ಮೇಲಿನ ಪತಾಕೆ ಹಿಂದುಹಿಂದಕ್ಕೆ ಹೋಗುತ್ತಿತ್ತು. ಪುರಜನರು "ಎಂತಹ ಕಠೋರ ಕಾರ್ಯವಿದು" ಎಂದು ಅಲ್ಲಲ್ಲಿ ಗುಜಗುಜಿಸಿ ಕಳವಳಿಸುತ್ತಿದ್ದರು. ರಥವು ವಾಯುವೇಗದಿಂದ ಅರಣ್ಯಮಾರ್ಗ ಹಿಡಿದು ಮುಂದು ಮುಂದೊತ್ತಿತು. ಸೌಮಿತ್ರಿ ಚಿಂತಾಸಂತಾನಗಳಿಂದ ವ್ಯಾಕುಲಗೊಂಡಿದ್ದನು—

"ರಣರಂಗದಲ್ಲಿ ಇದಿರಾಂತ ವೀರರನ್ನು ಇರಿಯಲು ಸಂಭ್ರಮೋತ್ಸಾಹ ದಿಂದ ಏರತಕ್ಕ ರಥವು, ಅಬಲೆಯನ್ನು ಅರಣ್ಯಕ್ಕೆ ಕಳುಹಿಸಲು ಅಡರುವಂತಾಯಿ

ತಲ್ಲಾ ! ಯುದ್ಧದಲ್ಲಿ ಕಂಗಾಲಾದವರನ್ನು ರಕ್ಷಿಸುವ ಬುದ್ಧಿಯನ್ನು ಕೋಮಲೆಯ ಕೊಲೆ ಕೆಲಸಕ್ಕೆ ಉಪಯೋಗಿಸುವಂತಾಯಿತೆ? ಕರುಣೆಯಿಲ್ಲದ ನನ್ನ ಬಾಳುವೆಯನ್ನು ಸುಡಲಿ; ನಿಷ್ಠುರದಿಂದ ಎಂತು ಈ ಕಾರ್ಯವನ್ನು ನೆರವೇರಿಸುವೆನೊ? ರಾಘವೇಶ್ವರನು ಹೇಗೆ ತಾನೇ ಕಠಿಣ ಕೃತ್ಯಕ್ಕೆ ಕಟ್ಟಪ್ಪಣೆಯಿತ್ತನೊ?"

ಮುದಿ ನರಿಯೊಂದು ಕೂಗಿತು; ಕುಳಿತುಕೊಂಡಿದ್ದ ಒಂದು ಮೃಗವು ರಥದ ಮುಂದೆ ಅಡ್ಡ ಹಾದುಹೋಯಿತು; ಬಲದ ಕಣ್ಣು ಅದಿರಿತು. ಈ ಶಕುನಗಳನ್ನು ಕಂಡು ಸೀತೆ ಭೀತೆಯಾದಳು.

"ಎಲೈ ಲಕ್ಷ್ಮಣ. ದುರ್ನಿಮಿತ್ತಗಳನ್ನು ನೋಡು; ನನಗೇಕೋ ಅಂಜಿಕೆಯಾಗುತ್ತಿದೆ. ಶ್ರೀರಾಮನ ಆಯುಷ್ಯ, ಐಶ್ವರ್ಯ, ಭುಜಬಲಗಳಿಗೆ ಒಳ್ಳೆಯದೇ ಆಗಲಿ; ರಾಕ್ಷಸರನ್ನು ಗೆದ್ದ ರಾಘವನು ನಮ್ಮೆಲ್ಲರನ್ನು ಕಾಪಾಡಲಿ."

ರಥವು ವಾಯುವೇಗದಿಂದ ಸಾಗಿ ದೇವಗಂಗಾನದಿಯ ತಡಿಗೆ ಬಂದಿತು. ಅವರು ರಥದಿಂದ ಇಳಿದು ಪಾವನೆ ಮಂದಾಕಿನಿಗೆ ನಮಸ್ಕರಿಸಿದರು. ನಾವಿಕರೊಡನೆ ದೋಣಿಯಲ್ಲಿ ಗಂಗೆಯನ್ನು ದಾಟಿದರು. ನಿರ್ಮಲ ತೀರ್ಥದಲ್ಲಿ ಮಿಂದರು. ಮುಂದಿನ ಮಹಾಘೋರವನ್ನು ನೆನೆದು ಲಕ್ಷ್ಮಣನು ಒಳಗೊಳಗೆ ಮರುಗುತ್ತಿದ್ದನು. ಅಲ್ಲಿಂದ ಅವರು ಮುಂದೆ ಸಾಗುತ್ತಾ ಕರ್ಕಶ ಮಾರ್ಗದಿಂದ ಕೂಡಿದ ಉಗ್ರಮೃಗಪಕ್ಷಿಗಣದಿಂದ ಘೂರ್ಮಿಸುತ್ತಿರುವ. ಅಡಿಯಿಡುವರೆ ಅಸದಳವೆನಿಸಿದ ಘೋರಾರಣ್ಯವನ್ನು ಪ್ರವೇಶಿಸಿದರು.

ಘೋರಾರಣ್ಯವು ಗಹ್ವರದಂತೆ ಗಂಭೀರವಾಗಿತ್ತು; ಮುಂದೆ ಕಾಲಿಡಲು ಕಷ್ಟವಾಯಿತು. ಸೀತೆ ಭೀತಿಯಿಂದ ನಡುಗಿದಳು. ಸಂಕಟದಿಂದ ರಾಮನಾಮವನ್ನು ಜಪಿಸಿದಳು.

"ಎಲೈ ಲಕ್ಷ್ಮಣ, ಈ ಅರಣ್ಯದಲ್ಲಿ ಅಡಿಯಿಡಲು ಅಸದಳವಾಗಿದೆ. ಇಲ್ಲಿ ಪುಣ್ಯಾಶ್ರಮದ ಋಷಿಗಳಾಗಲಿ. ವಲ್ಕಲವನ್ನು ಉಟ್ಟ ಮುನಿ ವಧುಗಳಾಗಲಿ, ವಟುಗಳಾಗಲಿ. ಶ್ರುತಿಘೋಷವಾಗಲಿ, ಹೋಮಧೂಮವಾಗಲಿ ನಾನು ಕಾಣೆನಾರೆನಲ್ಲಾ ! ಮುನಿಪೋತ್ತಮರ ಪಾವನವಾದ ತಪೋವನಗಳೆಲ್ಲಿವೆ? ಸಿದ್ಧರ ಆಶ್ರಮಗಳ ಮಂಗಳ ಸ್ಥಳಗಳೆಲ್ಲಿವೆ? ಹವಿಸ್ಸುಗಳ ಪರಿಮಳದಿಂದ ಕೂಡಿದ. ಹೊಗೆಹಿಡಿದ, ಅಗ್ನಿಹೋತ್ರದ ಪರ್ಣಕುಟೀರಗಳೆಲ್ಲಿವೆ? ಪರಿಚಿತವಾದ ವೇದ ಧ್ವನಿಗಳೆಲ್ಲಿವೆ? ಅಂತಹ ಸ್ಥಳಕ್ಕೆ ನನ್ನನ್ನೊಯ್ಯದೆ. ಈ ವೃಕ್ಷ ನಿಬಿಡವಾದ. ಕಠೋರವಾದ ಕಟ್ಟಡವಿಗೆ ಯಾಕೆ ಕರೆತಂದಿದ್ದೀಯೆ? ಯಾವನ ಚರಿತ್ರೆಯೂ ಪುಣ್ಯನಾಮವೂ, ಪಾವನಕ್ಕೆ ಪಾವನವೂ ಮಂಗಳಕ್ಕೆ ಮಂಗಳವೂ ಆಗಿದೆಯೋ,

ಆ ಶ್ರೀರಾಮನೇ ನನಗೆ ಜೀವಿತೇಶನಾಗಿರುವಾಗ, ಆತನ ಪಾದಪದ್ಮವನ್ನು ಬಿಟ್ಟು ಬಂದ ಮೇಲೆ, ಈ ಕಾಡಿನಲ್ಲಿ ನನಗೆ ಪುಣ್ಯಾಶ್ರಮವು ಹೇಗೆ ತಾನೇ ಗೋಚರಿಸುವುದು? ಅರವಿಂದದ ಮಕರಂದವನ್ನು ಬಿಟ್ಟು ಬಂದ ತುಂಬಿಗೆ ಬೊಬ್ಬುಳಿಯ ಹೂವಿನಲ್ಲಿ ಜೇನುದೊರಕುವುದುಂಟೆ?"

ಲಕ್ಷ್ಮಣನು ಸೀತಾದೇವಿಯ ಮಾತಿಗೆ ಏನೆಂದು ಉತ್ತರಗೊಡುವನು? ಮನಸ್ಸಿನಲ್ಲಿಯೇ ಪರಿತಪಿಸಿದನು.

"ಶ್ರೀರಾಮನು ಹೇಳಿದ ಕಷ್ಟವನ್ನು ಈಕೆಗೆ ಹೇಳುವೆನೆ? ನಿಷ್ಠುರದಿಂದ ಹೇಳದೆ ಬಿಡುವೆನೆ? ಅಯ್ಯೋ ! ಸೂರ್ಯವಂಶದ ಸಾರ್ವಭೌಮನ ರಾಣಿಯನ್ನು ಕಾಡಿನಲ್ಲಿರಿಸಿ ಹೇಗೆ ಹೋಗಲಿ? ಹೋಗದಿದ್ದರೆ ಸಹೋದರನು ಏನು ಹೇಳುವನೊ? ಹಾ ವಿಧಿಯೇ !"

—ಸೌಮಿತ್ರಿ ನೊಂದುಬೆಂದನು. ಆತನ ಕಣ್ಣುಗಳಲ್ಲಿ ಕಂಬನಿಗಳು ಉಕ್ಕಿದುವು; ಅಧರೋಷ್ಠಗಳು ಅದಿರಿದುವು: ಶರೀರವು ಶಸ್ತ್ರಹಾಕಿ ತಿರುಗಿಸಿದಂತೆ ಆಯಿತು. ಬಿಡಲು ಅವಕಾಶವಿದೆಲ್ಲ ನಿಟ್ಟುಸಿರು ಎದೆಯನ್ನು ಒತ್ತಿ ಒತ್ತಿ ಬರುತ್ತಿತ್ತು. ಕಾಯ ಕಂಪಿಸಿತು. ಎದೆ ಕರಗಿತು. ಸ್ಮರಣೆ ತಪ್ಪಿತು. ಕಂಠದಲ್ಲಿ ಮಾತುಗಳು ಸಿಕ್ಕಿದುವು. ಸೆರೆ ಬಿಗಿಯಿತು. ಮಿಕ್ಕಿಮೀರಿ ಬರುತ್ತಿರುವ ಶೋಕದಿಂದ ಬಳಲಿ ಬೆಂಡಾದನು. ಕಠೋರವಾದ ಕಾರ್ಯವನ್ನು ಹೇಳಲಾರದೆ ಸಂಕಟ ಪಟ್ಟನು—

"ದೇವಿ ! ಇದುವರೆಗೂ ನಿನಗೆ ವಿಷಯವನ್ನು ಹೇಳಿಲ್ಲ; ಅಪವಾದಕ್ಕೀಡಾಗಲು ಶ್ರೀರಾಮನು ನಿನ್ನನ್ನು ಇಚ್ಛಿಸದೆ ತಿರಸ್ಕರಿಸಿ ಬಿಟ್ಟು. ಕಾಡಿಗೆ ಕಳುಹಿಸಿ ಬರಬೇಕೆಂದು ನನಗೆ ನೇಮಿಸಿದನು. ಒಡೆಯನ ಆಜ್ಞೆಯನ್ನು ಮೀರಲಾರದೆ ನಿನ್ನನ್ನು ಈ ಅರಣ್ಯಕ್ಕೆ ಕರೆದುಕೊಂಡು ಬಂದಿರುವೆನು. ಇನ್ನು ಮೆಲ್ಲಮೆಲ್ಲನೆ ಎಲ್ಲಿಗಾದರೂ ಹೋಗು."

ಬಿರುಗಾಳಿಯ ರಭಸದ ಹೊಡೆತಕ್ಕೆ ಗೊನೆಬಿಟ್ಟ ಕದಳಿಯ ಗಿಡವು ಕಂಪಿಸಿ ಮುರಿದು ಭೂಮಿಗೆ ಬೀಳುವ ಹಾಗೆ, ಲಕ್ಷ್ಮಣನ ಮಾತು ಕಿವಿಗೆ ಬೀಳುವ ಮೊದಲೇ ಸೀತೆಯು ವ್ಯಥೆಯಿಂದ ನಡುನಡುಗಿ ಧರೆಗುರುಳಿದಳು ! ಸ್ಮೃತಿತಪ್ಪಿ ಅಂಗೋಪಾಂಗಗಳನ್ನು ಮರೆತಳು ! ಲಕ್ಷ್ಮಣನು ಈ ಕಷ್ಟವನ್ನು ಕಂಡು. ಮರುಗಿದನು. ತಣ್ಣೀರನ್ನು ತಂದು ಸೀತೆಯ ಮುಖಕ್ಕೆ ತಳಿದನು. ಎಲೆಯಿಂದ ಕೊಡೆಹಿಡಿದನು ಸೆರಗಿನಿಂದ ಬೀಸಿದನು. 'ರಾಮನ ಸೇವೆ ತನಗೆ ಸಂದಿತೇ' ಎಂದು ರೋದಿಸಿದನು.

ಸೌಮಿತ್ರಿಯ ಶೈತ್ಯೋಪಚಾರಗಳಿಂದ ಅರೆಗಳಿಗೆಯಲ್ಲಿ ಸೀತೆ ಕಣ್ಣು ತೆರೆದಳು: ನಿಟ್ಟುಸಿರು ಬಿಟ್ಟಳು. ಲಕ್ಷ್ಮಣನನ್ನು ನೋಡಿ ಗೋಳೋ ಎಂದು ಅತ್ತಳು.

"ಲಕ್ಷ್ಮಣಾ, ನನ್ನ ಕೊರಳನ್ನು ಕೊಯ್ಯುವುದು ಬಿಟ್ಟು, ಇಂತು ಘೋರಾರಣ್ಯದಲ್ಲಿ ಬಿಟ್ಟುಬಿಡುವಂತಹ ಯಾವ ಅಪರಾಧವನ್ನು ನಾನು ಮಾಡಿರುವೆನು? ಕಯ್ಯಾರೆ ಖಡ್ಗವನ್ನು ಕೊಟ್ಟು, ನಿನ್ನೊಡನೆ, ತನ್ನ ಅರಸಿಯ ಕೊರಳನ್ನು ಕಡಿದುಹಾಕೆಂದು ಹೇಳದೆ, ಹೀಗೆ ಕಾಡಿಗೆ ಕಳುಹಿಸಿಬಾರೆಂದು ಹೇಳಿದನೆ? ಅಯ್ಯೊ! ಶ್ರೀರಾಮನು ಕಾರುಣ್ಯನಿಧಿಯಲ್ಲವೆ? ರಘುಶ್ರೇಷ್ಠನು ನನ್ನನ್ನು ಬಿಟ್ಟನೆ? ಅಕಟ! ನನ್ನನ್ನು ಇನ್ನು ಮುಟ್ಟನೆ? ಕೀರ್ತಿವೆತ್ತ ತನ್ನ ಜೀವನಕ್ಕೆ ಇಂತು ಸಂಚಕಾರವನ್ನು ಕೊಟ್ಟನೆ? ಮನೋವಲ್ಲಭನನ್ನು ಅಗಲಿ ಕಾಡಿನಲ್ಲಿ ನೆಟ್ಟನೆ ಪಿಶಾಚಿಯಂತೆ ಎಂತು ಇರುವೆನೊ? ಅಕಟ! ಕೆಟ್ಟೆನಲ್ಲಾ!

"ಕೌಶಿಕ ಮುನಿಯೊಡನೆ, ಮಿಥಿಲಾಪುರಕ್ಕೆ ಬಂದು, ಹರಧನುವನ್ನು ಮುರಿದು, ನನ್ನನ್ನು ಕೈಹಿಡಿದಂದಿನಿಂದ ಶ್ರೀರಾಮನು ನನ್ನನ್ನು ಬಿಟ್ಟಿರಲಿಲ್ಲವಲ್ಲಾ! ನನ್ನ ಅಗಲಿಕೆಗಾಗಿ ನೊಂದು, ಕಪಿಬಲವನ್ನು ಸೇರಿಸಿ ಕಡಲನ್ನು ಕಟ್ಟಿ ರಾಕ್ಷಸರನ್ನು ಕೊಂದು, ನನಗಾಗಿ ಎಷ್ಟೊಂದು ಕಷ್ಟಪಟ್ಟು ಪುನಃ ಪಡೆದನು! ಅಗ್ನಿಯ ಮೂಲಕ ಪರೀಕ್ಷಿಸಿದಾಗ ನನ್ನಲ್ಲಿ ಏನಾದರೂ ಅಪರಾಧವನ್ನು ಕಂಡನೆ?

"ಕಲ್ಲುಮುಳ್ಳುಗಳಿಂದ ತುಂಬಿದ ಕಾಡಿನಲ್ಲಿ ನೀನು ನನ್ನನ್ನು ಉಪಚರಿಸಿದ್ದೀಯೇ; ಹಲ್ಲುಮೊರೆದು ಗರ್ಜಿಸಿದ ವಿರಾಧನನ್ನು ಕೊಂದಿದ್ದೀಯೇ; ಒತ್ತಾಯದಿಂದ ನಾನು ಕಳುಹಿಸಲು, ಜನಸ್ಥಾನದಿಂದ ಶ್ರೀರಾಮನನ್ನರಸಿ ಹೋಗಿದ್ದೀಯೇ; ಲಕ್ಷ್ಮಣ, ನಿನ್ನ ಇಂತಹ ಪ್ರೀತಿಯನ್ನು ನಾನು ಹೇಗೆ ಮರೆಯುವೆನು? ನೀನು ಎಲ್ಲರಂತೆ ನನಗೆ ಮೈದುನನೆ? ಕಾಡಿನಲ್ಲಿ ನನ್ನನ್ನು ನಿಲ್ಲಿಸಲು ನಿನಗಾದರೂ ಮನಸ್ಸು ಬರುವುದೇ?

"ಶೋಭಿಸುವ ನಾಸಿಕದ, ನುಣ್ಣನೆಯ ಕೆನ್ನೆಗಳ, ಹೊಳೆಯುವ ಕಣ್ಣುಗಳ, ತುಂಬಿದ ಎದೆಯ, ನಿಡಿದಾದ ಹುಬ್ಬುಗಳ, ಚಂದ್ರನಂತಹ ಹಣೆಯ, ಥಳಥಳಿಸುವ ಕಿರೀಟದ, ಕಿವಿಯ ಮಕರಕುಂಡಲದ, ಕೋಮಲವಾದ ಚುಬುಕಾಗ್ರದ, ಚೆಲ್ವಿನ ಚೆಂದುಟಿಯ, ಮಿರುಗುವ ದಂತಪಙ್ಕ್ತಿಗಳ, ಸೂಸುವ ಮಂದಸ್ಮಿತದ, ಮೋಹದ, ಸೌಂದರ್ಯದ ರಾಶಿಯೆನಿಸಿದ ಶ್ರೀರಾಮನ ಸಿರಿಮೊಗವನ್ನು ನೋಡದೆ ನಾನು ಹೇಗೆ ಬದುಕಿರಲಿ? ಭುವನಾಭಿರಾಮನನ್ನು, ಗುಣರತ್ನಧಾಮ

ನನ್ನು, ಸೌಭಾಗ್ಯಸೋಮನನ್ನು, ಕುವಲಯಶ್ಯಾಮನನ್ನು, ಘನಪುಣ್ಯನಾಮನನ್ನು, ಶ್ರೀರಾಮನನ್ನು ಮನದಣಿಯೆ ನೋಡದೆ ನಾನೆಂತು ಬಾಳ್ವೆನೊ?"

ಇಂತು ಸೀತೆ ಶ್ರೀರಾಮನ ಗುಣಮಾಲೆಯನ್ನು ನೆನೆನೆನೆದು ಹಲವು ವಿಧವಾಗಿ ಹಂಬಲಿಸಿದಳು. ಹಾವು ಅಗಿದ ಹಸುಳೆಯಂತೆ ಒಮ್ಮೆ ಮೈ ಮರೆತಳು; ಪುನಃ ಎಚ್ಚತ್ತಳು. ಈ ಸಂಕಷ್ಟವನ್ನು ಕಂಡು, ಕಡುಶೋಕಗೊಂಡು, ಲಕ್ಷ್ಮಣನು—

"ತಾಯೆ! ನಿನ್ನನ್ನು ಅಗಲಿ ನಾನು ಹೋಗಲಾರೆನು; ಹೋಗದಿದ್ದರೆ ಅಣ್ಣನು ಏನುಮಾಡುವನೋ? ಅಯ್ಯೊ! ಕಷ್ಟವೆ!" ಎಂದು ಕಳವಳಿಸಿದನು.

"ಕಂದ ಲಕ್ಷ್ಮಣ, ನಿನ್ನಲ್ಲಿ ಇನ್ನು ಏನು ಹೇಳಿದರೇನು? ಒಂದೆ ಜನಸ್ಥಾನದಲ್ಲಿ ನನ್ನನ್ನು ಬಿಟ್ಟು ಹೋದಂತೆ ಇಂದುಕೂಡಾ ಹೋಗು; ಆತ್ಮಹತ್ಯ ಮಾಡಿಕೊಳ್ಳುವೆನೆಂದರೆ ನನ್ನ ಬೆಂದೊಡಲಲ್ಲಿ ಬಸಿರಬೇನೆಯೊಂದಿದೆ; ಕಾಡಿನಲ್ಲಿ ಬಂದದ್ದನ್ನು ಅನುಭವಿಸುವೆನು. ನೀನು ಹೋಗಿ ಕೌಸಲ್ಯೆಯ ಪಾದಗಳಿಗೆ ನನ್ನ ವಂದನೆಯನ್ನು ತಿಳಿಸು. ನಿನ್ನ ಪುತ್ರನು ನನ್ನನ್ನು ಯಾವೊಂದು ಅಪರಾಧವೂ ಇಲ್ಲದೆ ತೊರೆದನೆಂದು ನನ್ನ ಬಿನ್ನಹವನ್ನು ಅರಿಕೆಮಾಡು."

ಲಕ್ಷ್ಮಣನಿಗೆ ಸೀತೆಯನ್ನು ಬಿಟ್ಟು ಹೊರಟುಬರಲು ಕಾಲೇಬರಲೊಲ್ಲದು. ತಲೆತಗ್ಗಿಸಿ ಆಕೆಯ ಬಳಿಯಲ್ಲಿಯೇ ನಿಂತು ಶೋಕಿಸುತ್ತಿದ್ದನು.

"ಲಕ್ಷ್ಮಣಾ! ಏಕೆ ಸುಮ್ಮನೆ ನಿಂತಿದ್ದೀಯೇ: ಹೋಗು; ನೀನಿಲ್ಲಿ ವಿಳಂಬಿಸಿದಿಯಾದರೆ ನಿನ್ನಣ್ಣನು ಕೋಪಿಸನೆ? ನನಗೆ ಈ ಕಾಡಿನಲ್ಲಿ ಅನೇಕ ಉಗ್ರಜಂತುಗಳ ಸಹಾಯವಿದೆ; ಅಲ್ಲಿ, ಶ್ರೀರಾಮನು ಏಕಾಕಿಯಾಗಿ ಇರುವನಲ್ಲಾ! ಲೋಕದ ಅರಸನಾದರೆನಂತೆ? ಅವನು ಏನು ಹೇಳಿದರೂ ಆತನ ಕಿಂಕರರು ಅದನ್ನು ಕೇಳುವುದೇ? ಭರತ ಶತ್ರುಘ್ನರೂ ಈ ಕೆಲಸಕ್ಕೆ ಒಪ್ಪಿದರೆ? ಹನುಮಂತನೂ ಇದ್ದಾನೆಯೆ? ಅಥವಾ, ಯಾರಿದ್ದರೆ ಏನು ಮಾಡುವರು? ಇದು ನನ್ನ ಮರುಳಾಟವಲ್ಲವೆ? ವಿಭೀಷಣನು ಆ ರಾವಣನ ತಮ್ಮನಷ್ಟೆ? ಅವನಿಗೆ ಅಂಜಿಕೆಯ ಅರಿವಾದರೂ ಏನು? ಅಣ್ಣನನ್ನೇ ಕೊಲ್ಲಿಸಿದ ಸುಗ್ರೀವನಲ್ಲಿ ಕಾರುಣ್ಯವಿರುವುದಾದರೂ ಹೇಗೆ? ಉಳಿದ ಮಂತ್ರಿಗಳಲ್ಲಿ ಶ್ರೀರಾಮನಿಗೆ ಬುದ್ಧಿ ಹೇಳತಕ್ಕವರು ಯಾರಿದ್ದಾರೆ? ನೀನೂ ಒಪ್ಪಿ ನನ್ನನ್ನು ಈ ಘೋರಾರಣ್ಯಕ್ಕೆ ಕೊಂಡುಬಂದೆಯಲ್ಲಾ! ಇನ್ನು ನಾನು ಚಿಂತಿಸಿ ಫಲವೇನು?

"ಎಷ್ಟಾದರೂ ಕರುಣಾಳುವಾದ ರಾಘವನಲ್ಲಿ ತಪ್ಪನ್ನುಕಾಣೆನು; ಹಿಂದಿನ ಜನ್ಮದಲ್ಲಿ ಬಹಳ ಪಾತಕವನ್ನು ಮಾಡಿ ಹೆಣ್ಣಾಗಿ ಹುಟ್ಟಿದ ಈ ಒಡಲನ್ನು

ಹೊರೆಯುವ ಅಪರಾಧ ನನ್ನದಾಗಿದೆ. ಸಾಕು, ಇನ್ನು ಇಲ್ಲಿರಬೇಡ; ನಡೆ; ಹೋಗು: ನಿಲ್ಲದಿರು: ನಿನಗೆ ಮಾರ್ಗದಲ್ಲಿ ಹೆಜ್ಜೆಹೆಜ್ಜೆಗೂ ಸುಖವಾಗಲಿ."

ಸೀತೆ ಕಂಬನಿಗಳನ್ನು ಸುರಿಸಿ ಕೂಗುತ್ತಾ ಇದ್ದಳು. ಲಕ್ಷ್ಮಣನು ಇನ್ನು ಹೊರಡಬೇಕು. ದೇವಿಯ ರಕ್ಷಣೆಯ ಭಾರವನ್ನು ಯಾರ ಕೈಗೆ ಒಪ್ಪಿಸುವುದು?

"ಎಲೆ ವನಸ್ಥಳಗಳಿರ, ವೃಕ್ಷಗಳಿರ, ಮೃಗಗಳಿರ, ಕ್ರಿಮಿಕೀಟಗಳಿರ, ಪಕ್ಷಿಗಳಿರ, ಲತೆಗಳಿರ, ತೃಣಗುಲ್ಮಗಳಿರ, ಪಂಚಭೂತಗಳಿರ. ದಿಕ್ಕುಗಳಿರ, ದಯೆಯಿಟ್ಟು ದೇವಿಯನ್ನು ನೀವೆಲ್ಲರೂ ರಕ್ಷಿಸುವುದು; ಎಲೈ ಧರ್ಮದೇವತೆಯಾದ ಜಗಜ್ಜನನಿ ಜಾಹ್ನವಿಯೆ. ನನ್ನ ತಾಯಿಯಾದ ಜಾನಕಿಯನ್ನು ಕಾಪಾಡು; ತಾಯೆ, ಭೂದೇವಿ, ಇಗೋ ನಿನ್ನ ಮಗಳು ಇಲ್ಲಿರುವಳು."

ಪ್ರಪಂಚದ ಚರಾಚರ ಜೀವಜಂತುಗಳೆಲ್ಲವನ್ನೂ ದೇವಿಯ ರಕ್ಷಣೆಗೆ ನೇಮಿಸಿ, ತಾಯಿಯ ಮಡಿಲಲ್ಲಿ ಮಗುವನ್ನಿಟ್ಟು ಹೋಗುವಂತೆ, ಲಕ್ಷ್ಮಣನು ಭೂಮಾತೆಯ ಕೈಗೆ ಸೀತಾದೇವಿಯನ್ನೊಪ್ಪಿಸಿದನು, ಇಂತಹ ನಿಷ್ಠುರವಾದ ತನ್ನ ಜೀವನವನ್ನು ಸುಡಲೆಂದು ತನ್ನನ್ನೇ ಶಪಿಸಿಕೊಂಡನು. ಸೀತೆಗೆ ಪ್ರದಕ್ಷಿಣೆ ಬಂದು, ನಮಸ್ಕರಿಸಿ ಆಕೆಯನ್ನು ಬೀಳ್ಕೊಂಡು ಮುಂದಡಿಯಿಟ್ಟನು ಭೂಮಿಜೆಯು ಭೂಮಿಗೆ ಬಿದ್ದು ಹೊರಳಾಡುತ್ತಿದ್ದಳು. ಅಣ್ಣದೇವನ ಕಡೆಗೆ ಲಕ್ಷ್ಮಣನು ಮುಂದಡಿಯಿಡುತ್ತಿದ್ದರೆ. ಸೀತಾದೇವಿಯ ಬಳಿಗೆ ಆತನ ಮನಸ್ಸು ಓಂದೋಡುತ್ತಿತ್ತು. ಲಕ್ಷ್ಮಣನು ಇಂತು ತೂಗುಯ್ಯಾಲೆಯಂತಾದನು. ಅಡಿಗಡಿಗೆ ಹಿಂದಿರುಗಿ ನೋಡಿದನು; ಸೀತೆ ಬಾಯಾರಿ ಬಿದ್ದೆದ್ದು ಬಸವಳಿದು ಬವಣೆಗೊಳ್ಳುತ್ತಿರುವುದನ್ನು ನೋಡಿ ಬಾಡಿದನು. ಬಿಸುಸುಯ್ದು ಬೆಂಡಾದನು. ಮುಂದೆ ಹೋಗಿ ಹಿಂದೆ ನೋಡುವನು. ದಾರಿಗಾಣದೆ ಅಳಲುವನು, ಬಳಲುವನು. ಇಂತು ತಾಯನ್ನು ಎಳಗರು ಬಿಚ್ಚುವಂತೆ. ಮೆಲ್ಲಮೆಲ್ಲನೆ ಬಹಳ ಆಯಾಸದಿಂದ ಲಕ್ಷ್ಮಣನು ಗಂಗಾನದಿಯನ್ನು ದಾಟಿ ಅತ್ತಸಾಗಿದನು.

ಇತ್ತ, ಲಕ್ಷ್ಮಣನ ತಲೆ ಕಾಣದಾಗಲು. ಸೀತೆ ಬಾಯಾರಿ ಕಂಗೆಟ್ಟಳು! 'ಹಾ'ಯೆಂದು ಭಯಶೋಕಗಳಿಂದ ಬಸವಳಿದು, ಬೇರು ಕೊಯ್ದುಬಿಸುಟ ಎಳೆಯ ಬಳ್ಳಿಯಂತೆ ಮೈಮರೆತು ಭೂಮಿಗೆ ಒರಗಿದಳು. ಜಗತ್ತಿನಲ್ಲಿ ಉತ್ತಮರಾದವರಿಗೆ ಒದಗಿದ ಸಂಕಟವನ್ನು ನೋಡಿ ಯಾರಾದರೂ ಸೈರಿಸುವರೆ? ಅಲ್ಲಿದ್ದ ಮೃಗಪಕ್ಷಿಜಂತುಗಳು ಧರಣಿಸುತೆಯನ್ನು ಬಳಸಿ ನಿಂದುವು; ಮೈಮುದುರಿಸಿಕೊಂಡು ಕಂಬನಿಗರೆದುವು; ತಮ್ಮೊಳಗಿನ ವೈರವನ್ನು ಮರೆತು, ಹುಲ್ಲುಮೇವುಗಳನ್ನು ತೊರೆದು ಕೊರಗುತ್ತಿದ್ದುವು; ವೃಕ್ಷಲತೆಗಳು ಕೂಡಾ ಬಾಡಿ ಸೊರಗು

ತ್ತಿದ್ದುವು. ಶೋಕಭಾರದಿಂದ ಕಲ್ಲುಗಳೂ ಕರಗುತ್ತಿದ್ದುವು. ತುಂಬಿಗಳು ಮೊರೆಯುಲೊಲ್ಲವು: ನವಿಲು ಕುಣಿಯಲೊಲ್ಲವು. ಕೋಕಿ ಕೂಡಲೊಲ್ಲವು: ಹಂಸೆ ನಡೆಯಲೊಲ್ಲವು; ಕೋಗಿಲೆ ಕೂಗಲೊಲ್ಲವು; ಗಿಳಿ ನುಡಿಯಲೊಲ್ಲವು; ಚಕೋರಿ ನಲಿಯಲೊಲ್ಲವು; ಹರಿಣಿ ನೆರೆಯಲೊಲ್ಲವು; ಕರಿಣಿ ಒಲೆಯುಲೊಲ್ಲವು; ಚಮರಿ ಪೊರೆಯಲೊಲ್ಲವು; ಸಿಂಹ ಮೆರೆಯಲೊಲ್ಲವು; ಸೀತಾಮಾತೆಯ ಶೋಕವು ತಮ್ಮದೆಂದೇ ಬಗೆದು ಎಲ್ಲವೂ ಅವಳ ಅವಸ್ಥೆಯನ್ನು ನೋಡಿ ನೋಡಿ ದುಃಖಿಸಿದುವು.

ರಾಘವನ ರಾಣಿ ದುಃಖ ಸಂತಪ್ತೆಯಾಗಿರುವುದನ್ನು ಕಂಡು, ಚಮರಿಗಳು ಬಾಲದಲ್ಲಿ ಚಾಮರವನ್ನು ಬೀಸಿದುವು; ಆನೆಗಳು ಎಳೆಚಿಗುರಿನ ಮೆಲ್ವಾಸನ್ನು ಹಾಸಿದುವು: ಸಾರಸಗಳು ತಮ್ಮ ಗರಿಗಳನ್ನು ನೀರಿನಲ್ಲಿ ತೊಯ್ದು ತುಂತುರು ಸೂಸಿದುವು; ಸೀತೆಯ ಸಿರಿಮೊಗಕ್ಕೆ ಬಿಸಿಲಾಗದಂತೆ ಅಂಚೆಗಳು ರೆಕ್ಕೆಗಳನ್ನು ಅಗಲಿಸಿ ನೆಳಲುಗೈದುವು. ಗಂಗಾನದಿಯ ತೆರೆತೆರೆಗಳ ನಡುನಡುವೆ ಬಿದ್ದು ಎದ್ದು ಬೇಗನೇ ಬರಲು ಸಾಧ್ಯವಾಗದಿದ್ದರೂ, ನೀರಿನಲ್ಲಿ ಅರಳಿರುವ ಅರವಿಂದ ಗಂಧದ ಬಹಳ ಭಾರವನ್ನು ಹೊರಲಾರದಿದ್ದರೂ, ಸೀತಾದೇವಿಯ ಸಂಕಟವನ್ನು ಸಂತೈಸದಿರಬಾರದೆಂದು ಲಗುಬಗೆಯಿಂದ ಬಂದು ಮಂದಮಾರುತವು ಸುಖ ಸ್ಪರ್ಶವಾಗುವಂತೆ ಬೀಸಿತು. ಲೋಕದಲ್ಲಿ ಉಪಕಾರಿಯಾವವನು ತನ್ನ ನೋವನ್ನು ನೋಡುವನೆ?

ದೇವಿ ಚೇತರಿಸಿದಳು. ಸುತ್ತ ನಿಟ್ಟಿಸಿನೋಡಿದಳು. ಅರಣ್ಯದಲ್ಲಿ ಏಕಾಂಗಿನಿ ಯಾಗಿರುವ ತನ್ನ ನಿಸ್ಸಹಾಯಕ ಸ್ಥಿತಿಗಾಗಿ ದುಃಖಿಸಿದಳು. ತನಗೆ ಮುಂದೇನು ಹಾದಿಯೆಂದು ದಿಕ್ಕುದಿಕ್ಕುಗಳನ್ನು ದಿಟ್ಟಿಸಿದಳು. ಶರೀರವು ಶಿಥಿಲವಾಗಿತ್ತು: ಮೈಯಲ್ಲಿ ಧೂಳುತುಂಬಿತ್ತು: ಸಿರಿಮುಡಿ ಬಿಚ್ಚಿಹೋಗಿತ್ತು. "ಅಯ್ಯೊ! ಮಿಥಿಲೇಂದ್ರನಾದ ಜನಕ ಮಹಾರಾಜನಿಗೆ ಸುತೆಯಾಗಿ ಜನಿಸಿ, ರಘುಕುಲದ ದಶರಥರಾಜನಿಗೆ ಸೊಸೆಯಾಗಿ ಬಂದು, ತನಗಿಂದು ಕಟ್ಟಡವಿಯಲ್ಲಿ ಕಷ್ಟಪಡ ಬೇಕಾಗಿ ಬಂತಲ್ಲಾ! ಅಯ್ಯೋ ವಿಧಿಯೇ" ಎಂದು ಕಲ್ಲು ಮರಗಳು ಸಹ ಕರಗುವಂತೆ ಮರುಗಿದಳು. "ಈ ನನ್ನ ದುರವಸ್ಥೆಯನ್ನು ಹೋಗಲಾಡಿಸಲು, ಆತ್ಮಹತ್ಯೆಯನ್ನಾದರೂ ಮಾಡಿ ಪ್ರಾಣವನ್ನು ಕಳೆದುಕೊಳ್ಳುವೆನೆಂದರೆ, ಬಸಿರು ತುಂಬಿರುವುದರಿಂದ ಭ್ರೂಣಹತ್ಯಾಪಾತಕವು ತನಗೆ ಬಂದೊದಗುವುದು: ನಾನೇನು ಮಾಡಲಿ? ಯಾರಿಗೆ ನನ್ನ ಕಷ್ಟವನ್ನು ತಿಳಿಸಲಿ?" ಹೀಗೆ ವ್ಯಾಕುಲ ಗೊಂಡಳು. ಮೆಲ್ಲನೆ ಅಲ್ಲಿಂದ ಎದ್ದು, ಕಾಡಿನಲ್ಲಿ ಮುನ್ನಡೆದಳು ಕಲ್ಲುಮುಳ್ಳು

ಗಳು ತಾಗಿ ಅವಳ ಮೃದುವಾದ ಪಾದಗಳಿಂದ ನೆತ್ತರು ಬಸಿದು ಹೊನಲಾಗಿ ಹರಿಯುತ್ತಿತ್ತು. ಹೆಣ್ಣಾಗಿ ಹುಟ್ಟುವುದು ಎಂತಹ ದೌರ್ಭಾಗ್ಯವೋ ಎಂದು ಕನಿಕರಪಡುವಂತಿತ್ತು.

ಅಷ್ಟರಲ್ಲಿ ಯಾಗಕ್ಕೆ ಯೂಪವನ್ನು ಹುಡುಕುತ್ತಾ, ಆ ಕಾಡಿಗೆ ಮಹರ್ಷಿಯಾದ ವಾಲ್ಮೀಕಿಯು ತನ್ನ ಶಿಷ್ಯರೊಡಗೂಡಿ ಬಂದನು. ಕಾಡಿನಲ್ಲಿ ಏಕಾಂಗಿನಿಯಾಗಿದ್ದು, ಮುಂದೆ ಹೋಗಲು ಮಾರ್ಗಕಾಣದೆ ಕಷ್ಟದಿಂದ ಕಳವಳಗೊಂಡು ಗ್ರೀಷ್ಮಋತುವಿನಿಂದ ನೊಂದ ಅರಣ್ಯದೇವಿಯೆಂಬಂತೆ ಗದ್ಗದ ಕಂಠಯಾಗಿ ರೋದಿಸುತ್ತಿದ್ದ ವಿದೇಹಪುತ್ರಿಯನ್ನು ಕಂಡನು ಇವಳಾರಿರಬಹುದು? ಈ ಕಾಡಿಗೇಕೆ ಬಂದಳು? ಎಂದು ತಿಳಿಯಬೇಕೆಂದು ಕರುಣೆಯಿಂದ ಋಷಿಯು ಮಾತನಾಡಿಸಿದನು—

"ತಾಯೆ, ನೀನಾರು, ನಿನ್ನನ್ನು ಹಿಂದೆ ನೋಡಿದ ಗುರುತು ತೋರುತ್ತದೆ. ಅಯ್ಯೊ! ಘೋರವಾದ ಈ ಅರಣ್ಯಕ್ಕೆ ಒಬ್ಬಳೇ ನೀನು ಹೇಗೆ ಬಂದಿಯೋ? ಹೆದರಬೇಡ. ನಾನು ವಾಲ್ಮೀಕಿಯು; ಶೋಕಾರ್ತರಾದವರನ್ನು ಕಂಡು ಸಮಾಧಾನಪಡಿಸದೆ ಹೋಗುವವನಲ್ಲ."

ಋಷಿಯ ಕರುಣೆಯ ಮಾತಿನಿಂದ ಸೀತೆ ಹರ್ಷಿತೆಯಾದಳು. ಆತನು ತೋರಿಸಿದ ಅನುಕಂಪೆಯಿಂದ ಅವಳ ಶೋಕವೂ ಇಮ್ಮಡಿಸಿತು. ಸ್ತ್ರೀಸಹಜವಾದ ಲಜ್ಜೆಯು ಅವಳನ್ನು ಆವರಿಸಿತು. ನಡುಗುವ ದನಿಯಿಂದ—

"ಮುನಿವರ್ಯ, ಲೋಕಾಪವಾದಕ್ಕಾಗಿ ನಿರಪರಾಧಿನಿಯಾದ ನನ್ನನ್ನು ಶ್ರೀರಾಮನು ಬಿಟ್ಟನು; ಅವನಾಜ್ಞೆಯಂತೆ ಲಕ್ಷ್ಮಣನು ಈ ಘೋರಾರಣ್ಯದಲ್ಲಿ ಇಂದು ಇರಿಸಿಹೋದನು; ಜೀವವನ್ನು ಕಳೆದುಕೊಳ್ಳುವೆನೆಂದರೆ ನನ್ನೀ ಒಡಲಲ್ಲಿ ಗರ್ಭವಿರುವುದು."

—ಇಂತೆಂದು ಜನಕಜೆಯು ಮುನಿಯ ಪಾದಗಳಿಗೆರಗಿದಳು.

"ದೇವಿ! ದುಃಖವನ್ನು ಬಿಡು; ನೀನು ಇಬ್ಬರು ಮಕ್ಕಳನ್ನು ಪಡೆವೆ; ಇನ್ನು ಸಂಶಯಬೇಡ ಜನಕನಿಗೆ ನಾವು ದೂರದವರಲ್ಲ. ನಮ್ಮ ಆಶ್ರಮಕ್ಕೆ ಬಂದು ನೀನು ಸುಖವಾಗಿದ್ದರೆ. ನಿನಗೆ ಯಾವ ಯಾವ ಬಯಕೆಗಳಿವೆಯೋ ಅವೆಲ್ಲವನ್ನೂ ಸಲಿಸಿ ನಾವು ರಕ್ಷಿಸಿಕೊಂಡಿರುವೆವು; ನೀನು ಅಂಜದಿರು."

—ಈ ರೀತಿ, ವಾಲ್ಮೀಕಿಯು ಸೀತಾದೇವಿಯನ್ನು ಸಂತೈಸಿ ತನ್ನ ಆಶ್ರಮಕ್ಕೆ ಕರೆತಂದನು.

ವಾಲ್ಮೀಕಿಯ ಆಶ್ರಮದಲ್ಲಿ ಸೀತಾದೇವಿಗಾಗಿ ಚಿತ್ರಮಯವಾದ ಪರ್ಣ ಶಾಲೆಯು ರಚಿತವಾಯಿತು. ಋಷಿಪತ್ನಿಯರ ಘನಸ್ನೇಹದಿಂದಲೂ, ವಾಲ್ಮೀಕಿ ಮುನಿಯ ಅಕ್ಕರೆಯ ಆರೈಕೆಯಿಂದಲೂ, ಸೀತಾದೇವಿಯು ಸುಖ ಪ್ರಸವಕಾಲ ವನ್ನು ಇದಿರು ನೋಡುತ್ತಾ, ಅಲ್ಲಿ ಸಂತೋಷದಿಂದಿದ್ದಳು. ಮುನಿವಟುಗಳು ಆಕೆಯ ಪರಿಚರ್ಯೆ ಮಾಡುತ್ತಿದ್ದರು. ಮಧುರ ಭಕ್ಷ್ಯಭೋಜ್ಯಗಳನ್ನು ಮಾಡಿ ಮುನಿವಧುಗಳು ಊಡಿಸುತ್ತಿದ್ದರು. ವಾಲ್ಮೀಕಿ ದಿನದಿನವೂ ಆಕೆಯ ಬಯಕೆ ಗಳನ್ನು ಸಲಿಸುತ್ತಿದ್ದನು. ಸೀತಾದೇವಿ ಆಶ್ರಮದಲ್ಲಿ ಶ್ರೀರಾಮನ ಧ್ಯಾನ ಮಾಡುತ್ತಾ, ರಾಜ್ಯಶ್ರೀಯನ್ನು ಸಹ ಮರೆತು ಸುಖವಾಗಿದ್ದಳು.

ಹೀಗಿರಲು, ಜಾನಕಿಯ ಗರ್ಭಕ್ಕೆ ನವಮಾಸ ತುಂಬಿತು; ಬಳಿಕ ಒಂದು ಇರುಳು, ಶುಭಲಗ್ನದಲ್ಲಿ ಸೀತಾದೇವಿ ಅವಳಿ ಮಕ್ಕಳನ್ನು ಪಡೆದಳು. ಈ ಸುಖದ ಸಮಾಚಾರವನ್ನು ವಟುಗಳು ಬಂದು ತಿಳಿಸಲು ವಾಲ್ಮೀಕಿಯು ಸಂತಸ ದಿಂದ ಬಂದು, ಶಿಶುಗಳಿಗೆ ಕುಶಲವಗಳಿಂದ ಸೇಚನಗೈದು ಕುಶಲವರೆಂದು ನಾಮಕರಣ ಮಾಡಿದನು.

ದಿಕ್ಕುಗಳು ಪ್ರಸನ್ನವಾದುವು. ಅಂತರಿಕ್ಷದಲ್ಲಿ ನಕ್ಷತ್ರ ರಾಶಿಗಳು ಶೋಭಿಸಿ ದುವು. ಸುಗಂಧಮಾರುತ ಬೀಸಿತು. ಕಡಲು ಉಕ್ಕಿತು. ವಸುಧೆ ನಲಿದುದು. ನದಿಗಳು ಸ್ವಚ್ಛಸಲಿಲದಿಂದ ಹರಿದುವು. ಏಕಕಾಲದಲ್ಲಿ ರವಿಶಶಿಗಳುದಿಸಿ ಬಂದರೆಂಬಂತೆ ಲವಕುಶರು ಮುನಿಗಳ ಕಣ್ಣುಗಳಿಗೆ ಕಂಗೊಳಿಸಿದರು. ವಾಲ್ಮೀಕಿಯು ಆ ಶಿಶುಗಳಿಗೆ ಬಾಲ್ಯದ ಉಡುಗೆಗಳನ್ನು ಉಡಿಸುವನು. ತೊಡುಗೆಗಳನ್ನು ತೊಡಿಸಿ ಅಂದಚಂದವನ್ನು ನೋಡುವನು. ಎತ್ತಿ ಆಡಿಸಿ ಮುದ್ದು ಮಾಡು ವನು; ಸವಿಯಾದ ತಿಂಡಿತಿನಸುಗಳನ್ನು ಕೊಡುವನು; ತನ್ನ ಮಡಿಲಲ್ಲಿಟ್ಟು ಮಾತನ್ನು ಲಾಲಿಸುವನು. ಅವರ ಮೇಲಣ ಅಕ್ಕರೆಯಿಂದ ತನ್ನ ಜಪತಪ ಸಮಾಧಿಗಳನ್ನು ಮರೆತು ಬಿಡುವನು; ಇಂತು ಆಶ್ರಮದಲ್ಲಿ ಸಂತೋಷ ಹೆಚ್ಚಿತು. "ದಶರಥನರಪಾಲನ ಅರಮನೆಯ ಶಿಶುಗಳ ಬೆಳವಿಗೆ ಕಾನನದಲ್ಲಿ ಇಂತು ಕಷ್ಟ ದಿಂದ ಸಾಗಿತಲ್ಲಾ" ಎಂದು ಜಾನಕಿ ಶೋಕಿಸಿದಂತೆ. ವಾಲ್ಮೀಕಿಯು ಕುಶ ಲವರನ್ನು ವೈಭವದಿಂದ ಪಾಲಿಸಿದನು. ದಿನದಿನಕ್ಕೆ ಕಾಂತಿಕೂಡುವ ಚಂದ್ರಕಲೆ ಯಂತೆ ಶಿಶುಗಳು ವರ್ಧಿಸಿದರು. ಬಾಲಕರ ಬಾಲಲೀಲೆಗಳನ್ನು ವಾಲ್ಮೀಕಿಯೂ ವೈದೇಹಿಯೂ ಕಂಡು ಅಮಿತಾನಂದಗೊಂಡರು.

ಕುಶಲವರಿಗೆ ವಾಲ್ಮೀಕಿಯು ಚೌಲಕರ್ಮಾದಿಗಳನ್ನು ನೆರವೇರಿಸಿದನು. ಅಕ್ಷರಾಭ್ಯಾಸವಾಯಿತು. ನಡೆನುಡಿಗಳ, ಕುಶಲಕಲೆಯ, ರಾಜ ಲಕ್ಷಣದ

ಸುಂದರಸ್ವರೂಪರಾದ ಕುಶಲವರು ಕುಶಲವರ್ಧನರಾಗಿ ತಪೋವನವನ್ನು ಬೆಳಗಿಸಿದರು. ಇಂತಿರಲು, ಅವರಿಗೆ ಹನ್ನೆರಡನೆಯ ವರ್ಷ ತುಂಬಿತು. ವಾಲ್ಮೀಕಿಯು ವೇದೋಕ್ತ ರೀತಿಯಿಂದ ಕುಮಾರರಿಗೆ ಉಪನಯನಗಳನ್ನು ಮಾಡಿಸಿದನು. ವಸಿಷ್ಠನಿಂದ ಕಾಮಧೇನುವನ್ನು ಬೇಡಿ ತಂದು ಸಮಸ್ತ ಜನರನ್ನೂ ಭೂರಿ ಭೋಜನಗಳಿಂದ ತಣಿಸಿದನು. ವೇದ, ವೇದಾಂಗ, ಧರ್ಮಶಾಸ್ತ್ರ, ರಾಜ್ಯಶಾಸ್ತ್ರಗಳನ್ನು ಸಾಂಗೋಪಾಂಗವಾಗಿ ಕಲಿಸಿದನು. ಆ ಮೇಲೆ, ಕುಲದ ಕ್ರಮದಂತೆ ಧನುರ್ವೇದದ ಶಿಕ್ಷಣವು ಪೂರ್ಣವಾಯಿತು. ರಾಮಾಯಣವನ್ನು ಆಮೂಲಾಗ್ರವಾಗಿ ಮಧುರಭಾವದಿಂದ ಹಾಡುವಂತೆ ಹೇಳಿಕೊಟ್ಟನು. ಸೀತೆ ಸಂತೋಷದಿಂದ ನಲಿವಂತೆಯೂ, ವಾಲ್ಮೀಕಿ ಮೆಚ್ಚುವಂತೆಯೂ, ತಪೋವನದ ಮುನಿಗಣವು ಕೊಂಡಾಡುವಂತೆಯೂ ಆ ಕುಶಲವರು ಮಧುರವೀಣೆಗಳ ಮೇಳದಿಂದ ರಾಗಯುಕ್ತವಾಗಿ ಶ್ರೀರಾಮಾಯಣವನ್ನು ಅನುದಿನವೂ ಹಾಡುತ್ತಿದ್ದರು.

೧೦

ಅಯೋಧ್ಯಾಪಟ್ಟಣದಲ್ಲಿ ಶ್ರೀರಾಮನು, ಬ್ರಹ್ಮಕುಲದಲ್ಲಿ ಜನಿಸಿದ ರಾವಣಾದ್ಯರನ್ನು ವಧಿಸಿದ ಪಾಪಪರಿಹಾರಕ್ಕಾಗಿ ವಸಿಷ್ಠನ ಅನುಮತಿಯಂತೆ ಅಶ್ವಮೇಧಯಾಗವನ್ನು ಮಾಡಲು ನಿಶ್ಚೈಸಿದನು. ಪತ್ನೀಸಹಿತನಾಗಿ ಯಾಗವನ್ನು ನೆರವೇರಿಸಬೇಕೆಂದು ಸಕಲಋಷಿಗಳೂ ಹೇಳಲು, ಸೀತೆಯ ಸುವರ್ಣಪ್ರತಿಮೆಯನ್ನು ಇರಿಸಿಕೊಂಡು ಆ ಪುಣ್ಯಯಜ್ಞವನ್ನು ಪ್ರಾರಂಭಿಸಿದನು. ದೀಕ್ಷಿತನಾದ ರಾಘವನು, ಕುದುರೆಯನ್ನು ಪೂಜೆಮಾಡಿ, ಅದರ ಹಣೆಗೆ ತನ್ನ ಬಿರುದಿನ ಪತ್ರಿಕೆಯನ್ನು ಬರೆದುಕಟ್ಟಿ, ಅಶ್ವರಕ್ಷಣೆಗಾಗಿ ವೀರಶತ್ರುಘ್ನನನ್ನು ಮೂರಕ್ಷೋಹಿಣೀಬಲಸಹಿತ ಕಳುಹಿಸಲು, ಆ ಕುದುರೆ ಭೂಮಿಯ ಮೇಲೆ ಇಚ್ಛೆಬಂದ ದಿಕ್ಕುಹಿಡಿದು ಸಾಗಿಹೋಯಿತು. ಪ್ರತಾಪಶಾಲಿಗಳಾದ ಪೃಥ್ವೀಶ್ವರರೆಲ್ಲರೂ ಶ್ರೀರಾಮಸೇನೆಯ ಸುದ್ದಿಕೇಳಿ ಶರಣಾಗುತ್ತಿರಲು, ಅಧ್ವತಹಯವು ವಾಲ್ಮೀಕಿಯ ಆಶ್ರಮದ ಉಪವನದೆಡೆಗಾಗಿ ಬಂದಿತು. ಅಲ್ಲಿನ ಹಚ್ಚನೆ ಹಸುರುಹುಲ್ಲಿನ ಆಶೆಯಿಂದ ಕುದುರೆಯು ಮೇಯುತ್ತಿರಲು, ತನ್ನೊಡನಾಡಿಗಳೊಡನೆ ವಿನೋದಗೊಂಡು ಅಲ್ಲಿ ಆಟವಾಡುತ್ತಿದ್ದ ಲವನು ಅದನ್ನು ಕಂಡನು.

"ಇದು ಯಾರಕುದುರೆಯೋ? ತೋಟವನ್ನು ತುಳಿದು ಹಾಳುಮಾಡು ತ್ತಿದೆಯಲ್ಲಾ! ವರುಣನ ಆಮಂತ್ರಣದಂತೆ, ವಾಲ್ಮೀಕಿಋಷಿಯು ಹೊರಟು ಹೋಗುವಾಗ, ತೋಟವನ್ನು ನೋಡಿಕೊಳ್ಳಬೇಕೆಂದು ಆಜ್ಞಾಪಿಸಿ ಹೋಗಿರು ವನು. ವರುಣಲೋಕದಿಂದ ಮರಳಿಬಂದ ಮೇಲೆ ಹಾಳಾಗಿರುವುದನ್ನು ಕಂಡರೆ ಮುನಿಯು ಮುನಿಯುವನು."

ಲವನು ಕುದುರೆಯ ಬಳಿಗೆ ಬಂದು, ಅದರ ಹಣೆಯಲ್ಲಿ ಮೆರೆಯುವ ಲಿಖಿತವನು ಕಂಡು ಓದಿನೋಡಿದನು—

"ಭೂಮಿಯಲ್ಲಿ ಕೌಸಲ್ಯೆ ಪಡೆದ ಪುತ್ರನು ರಾಮನೊಬ್ಬನೇ ವೀರನು: ಇದು ಆತನ ಯಜ್ಞತುರಗವು; ನಿರ್ವಹಿಸಿಕೊಳ್ಳಲು ಸಾಧ್ಯವಿದ್ದ ಯಾರಾದರೂ ಇದ್ದರೆ ಇದನ್ನು ಕಟ್ಟಿಹಾಕಬಹುದು."

ಲಿಖಿತದ ಒಕ್ಕಣೆಯನ್ನು ಓದಿ ಲವನು ಉತ್ಸಾಹಿತನಾದನು.

"ಹೀಗೆ ಬರೆದವನ ಗರ್ವವನ್ನು ಮುರಿಯದಿದ್ದರೆ ನನ್ನ ತಾಯನ್ನು ಸರ್ವ ಜನರೂ ಬಂಜೆಯೆನ್ನರೆ? ನನಗಾದರೂ ಈ ಬಾಹುಬಲವಿದ್ದು ಏನು ಪ್ರಯೋ ಜನವಾಯಿತು?"

—ಲವನು ಪಂಥತೊಟ್ಟುಕೊಂಡನು. ಉತ್ತರೀಯವನ್ನು ತೆಗೆದು ಕುದುರೆಯ ಕೊರಳಿಗೆ ಬಿಗಿದು ಬಾಳೆಯಗಿಡಕ್ಕೆ ಕಟ್ಟಿಹಾಕಿದನು.

"ಅಯ್ಯೊ ಬೇಡ, ಬೇಡ, ಇದು ಕ್ಷತ್ರಿಯರ ತುರಗ: ಬಿಟ್ಟುಬಿಡು: ನಮ್ಮನ್ನು ಅವರು ಬಡಿವರು"

—ಎಂದು ಮುನಿಸುತರು ಬೆದರಿನುಡಿದರು.

ಹಾರುವರ ಹುಡುಗರು ಹೆದರಿದರೆ, ಜಾನಕಿಯ ಮಗನು ಅಂಜುವುದುಂಟೆ?

"ನೀವು ಹೋಗಿರಿ."

ಲವನು ಪೌರುಷದಿಂದ ಬಿಲ್ಲಿಗೆ ಹಗ್ಗವನ್ನು ಏರಿಸಿತೀಡಿ ಜೇಗೈದನು.

ಕಾವಲಿನ ಭಟರು ಕುದುರೆಯನ್ನು ಹುಡುಕುತ್ತಾ ಬಂದು ಕದಳೀದ್ರುಮಕ್ಕೆ ಕಟ್ಟಿಹಾಕಿದುದನ್ನು ಕಂಡರು. ಅಲ್ಲಿದ್ದ ಬ್ರಹ್ಮಚಾರಿಗಳೊಡನೆ ಹೆದರಿಸಿ ಕೇಳಿ ದರು—

"ಕುದುರೆಯನ್ನು ಏಕೆ ಕಟ್ಟಿದಿರಿ?"

ಹೆದರಿ ನಡುಗುತ್ತಾ ವಟುಗಳು ಹೇಳಿದರು—

"ಅಯ್ಯಯ್ಯೊ! ನಾವು ಕಟ್ಟಲಿಲ್ಲ. ಹೇಳಿದರೂ ಕೇಳದೆ ಇವನು ಬಂಧಿಸಿ ದನು."

ಬೆರಳಿನಿಂದ ಲವನನ್ನು ಗುರುತಿಸಿ ತೋರಿಸಿದರು. ತರಳನು ತಿಳಿಯದೆ ಕಟ್ಟಿಹಾಕಿರಬಹುದೆಂದು ತುರಗವನ್ನು ಬಿಟ್ಟುಬಿಡುವಂತೆ ಚರರು ಲವನಿಗೆ ತಿಳಿಯಹೇಳಿದರು.

"ನನ್ನಲ್ಲಿ ನಿಮ್ಮ ಪಂಥಪರಾಕ್ರಮಗಳು ಸಲ್ಲವು; ಕುದುರೆಯನ್ನು ಬಿಡುವುದಕ್ಕಾಗಿ ಕಟ್ಟಿ ಹಾಕಿದವನಲ್ಲ; ಯಾರಾದರೂ ಅದನ್ನು ಬಿಡಿಸಬಂದರೆ ಅವರ ಕೈಗಳನ್ನು ಕಡಿದು ಹಾಕುವೆನು."

ಬಾಲಕನ ಈ ಉದ್ಧಟವಾದ ಮಾತಿಗೆ ಚರರು ಕೋಪಿಸಿ ಕುದುರೆಯನ್ನು ಬಿಡಿಸಲು ಮುಂದಾದರು. ಅವರ ಕೈಗಳನ್ನು ಲವನು ಬಾಣಗಳಿಂದ ಕತ್ತರಿಸಿದನು. ಸೈನ್ಯದ ಮೇಲೆ ಆತ ಸರಳಮಳೆಗರೆದನು. ಅವನನ್ನು ಅಶ್ವರಕ್ಷಕದಲವು ಮುತ್ತಿಗೆ ಹಾಕಿತು. ಕರಿತುರಗರಥ ಪದಾತಿ ಬಲಗಳು ಬಾಲಕನು ಏಕಾಂಗಿಯೆಂದು ವಿಚಾರಿಸದೆ, ಪರಶುತೋಮರ ಶಕ್ತಿಸುರಗಿಗಳನ್ನೆತ್ತಿ ಹೋರಾಡುತ್ತಿರಲು ಅವರೆಲ್ಲರನ್ನೂ ಏಕಕಾಲದಲ್ಲಿಯೇ ಲವನು ಇದಿರಿಸಿ ನಿಂತನು. ಶತ್ರುಗಳ ಒಂದೊಂದು ಬಾಣಕ್ಕೆ ಪ್ರತಿಯಾಗಿ ಐದೈದು ಬಾಣಗಳನ್ನು ಪುಂಖಾನುಪುಂಖವಾಗಿ ಬಿಡುತ್ತಾ, ಸೈನ್ಯವನ್ನು ಸದೆಬಡಿದು ಬರುತ್ತಿರುವ ಬಾಲಕನ ಶೌರ್ಯವನ್ನು ಕಂಡು ಶತ್ರುಘ್ನನು ಮಣಿರಥವನ್ನೇರಿ ಆತನನ್ನಿದಿರಿಸಿದನು.

ಶತ್ರುಘ್ನನು ಹುಡುಗನೆಂದು ಧಿಕ್ಕರಿಸಿ ನುಡಿದರೆ, ಲವನ ಬಾಣಗಳು ಶತ್ರುಘ್ನನ ಶೌರ್ಯವನ್ನು ಧಿಕ್ಕರಿಸಿದುವು: ಕುದುರೆ, ಸಾರಥಿ, ರಥ, ಧ್ವಜ, ಛತ್ರಾಳಿಕೆಗಳನ್ನು ತುಂಡರಿಸಿದುವು. ಹೊಸ ರಥವನ್ನು ತರಿಸಿ ಶತ್ರುಘ್ನನು ಕನಲಿ ಕಾದಿದನು. ವಿಷಮ ವೀರರಿಬ್ಬರು ಅಪ್ರತಿಮರಾಗಿ ಹೋರಾಡಿದರು. ಶತ್ರುಘ್ನನು ಸಿಟ್ಟುಗೊಂಡು ಅಮೋಘಾಸ್ತ್ರವೊಂದನ್ನೆಸೆಯಲು ಅದನ್ನೂ ಲವನು ಇಕ್ಕಡಿ ಮಾಡಿದನು. ಅದರರ್ಧವು ಭೂಮಿಗೆ ಬಿತ್ತು. ಉಳಿದರ್ಧವು ಅವನ ಮೇಲೆರಗಿ ಮೂರ್ಛೆಗೊಳಿಸಿತು. ಶತ್ರುಘ್ನನು ಸಂತೋಷದಿಂದ ಜಯಘೋಷ ಮಾಡುತ್ತಾ, ಮೈಮರೆತು ಬಿದ್ದಿದ್ದ ತರಳನಲ್ಲಿಗೆ ಬಂದು ನೋಡಲು ರಾಮಾಕೃತಿಯಂತಿರುವಾತನ ಶರೀರವನ್ನು ಕಂಡು ಮೋಹದಿಂದ ಹಿಡಿದೆತ್ತಿ ತನ್ನ ರಥದ ಮೇಲಿರಿಸಿಕೊಂಡು ಹೊರಟುಹೋದನು.

ಕದಳಿಗೆ ಕಟ್ಟಿ ಹಾಕಿದ ಕುದುರೆಯನ್ನು ಬಿಡಿಸಿಕೊಂಡು ಶತ್ರುಘ್ನನು ಪಡೆ ಸಹಿತ ತಿರುಗಿದನು. ಮುನಿಪುತ್ರರು ಓಡಿ ಓಡಿ ಬಂದು, ಪರ್ಣಕುಟಿಯಲ್ಲಿದ್ದ ಸೀತಾದೇವಿಗೆ ಕೂಗುತ್ತಾ ಕೂಗುತ್ತಾ ನಡೆದ ವೃತ್ತಾಂತಗಳನ್ನೆಲ್ಲಾ ವಿವರಿಸಿದರು. ಸೀತೆ, ಪುತ್ರಬಂಧನ ವಾರ್ತೆಯಿಂದ ದುಃಖಿತೆಯಾದಳು; ರೋದಿಸಿದಳು.

ಕಣ್ಣೀರು ಪೊನಲಾಗಿ ಹರಿಯಿತು; ಶರೀರ ಕಂಪಿಸಿತು. ಹೊಟ್ಟೆಯನ್ನು ಸಂಕಟ ದಿಂದ ಹೊಸೆದುಕೊಂಡಳು. ಪುತ್ರ ಮೋಹದಿಂದ ಕಂಗೆಟ್ಟಳು—

"ನನ್ನ ಕಂದನೆಲ್ಲಿರುವನೊ? ಕಾದುತ್ತಿರುವನೆ? ಹಗೆಯ ಕೈವಶನಾದನೆ? ಹಸುಳೆಗೆ ಏನಾಯಿತೊ? ಮಗನು ಎಂತು ಎಷ್ಟು ನೊಂದನೊ? ಪುತ್ರನು ಬದುಕಿರುವನೊ? ಬಾಲಕನ ಮುದ್ದುಮೊಗವನ್ನು ನಾನಿನ್ನು ನೋಡುವೆನೆ? ಬದುಕಿ ಕೆಟ್ಟೆನಲ್ಲಾ"

—ಎಂದು ಹಲವು ವಿಧವಾಗಿ ಹಲುಬಿದಳು.

ಅಷ್ಟರಲ್ಲಿ ಸಮಿತ್ಪುಷ್ಪಗಳನ್ನು ಕೊಯ್ದುಕೊಂಡು ಕುಶನು ಆಶ್ರಮಕ್ಕೆ ಮರಳಿದನು. ಅಳುತ್ತಿರುವ ತಾಯನ್ನು ಕಂಡನು.

"ಯಾಕಮ್ಮಾ ಹೀಗೆ ಕೂಗುತ್ತಿದ್ದೀಯೆ?"

"ಮಗುವೆ, ಬಂದೊದಗಿದ ಕಷ್ಟವನ್ನು ಕೇಳಿದೆಯಾ? ಕುದುರೆಯೊಂದು ನಮ್ಮಾಶ್ರಮೋದ್ಯಾನಕ್ಕೆ ಬಂದಿರಲು, ನಿನ್ನ ತಮ್ಮನು ಅದನ್ನು ಕಟ್ಟಿಹಾಕಿದನು; ರಾಜರು ಅವನನ್ನು ಹಿಡಿದು ಕೊಂಡುಹೋದರು. ನಾನು ಏನು ಮಾಡಲಿ? ಎಂತು ಜೀವಿಸಲಿ?"

ಕುಶನಿಗೆ ಲವನನ್ನು ಬಂಧಿಸಿದ ಈ ವಾರ್ತೆ ಕೇಳಿ ರೋಷವುಕ್ಕೇರಿತು.

"ತಾಯೇ, ದುಃಖಿಸದಿರು. ಲವನ ಜೀವವನ್ನು ಕೊಂಡೊಯ್ದರೆ ಯಮನ ಲೋಕವನ್ನೇ ಸುಡುವೆನು; ಬೇಡ, ಕೂಡದು, ಎಂದರೆ–ಹರಿಹರ ಬ್ರಹ್ಮರನ್ನೇ ಸದೆಬಡಿಯುವೆನು. ಉಳಿದ ಅರಸುಗಿರಸುಗಳ ಪಾಡೇನು? ಆ ಕವಚ ಶರ ಧನುಃಖಡ್ಗ ಮುಕುಟಗಳನ್ನು ಇತ್ತತಾ; ಅಮ್ಮಾ ಕಳವಳಿಸಬೇಡ".

ಸೀತೆ, ಸುತನ ಮಾತಿನಂತೆ ಎಲ್ಲವನ್ನೂ ತಂದು ಆತನ ಕೈಗೆ ಕೊಟ್ಟು, ಕವಚ ವನ್ನು ತೊಡಿಸಿ, ಹರಸಿಬೀಳ್ಕೊಟ್ಟಳು. ತಾರಕಾಸುರನ ಪೆರ್ಬಡೆಗೆ ಗುಹನು ಹೋದಂತೆ, ವಾಯುವೇಗದಿಂದ ಕುಶನು ಶತ್ರುಘ್ನನ ಸೈನ್ಯವನ್ನು ಸಂಧಿಸಿದನು.

"ನಿಲ್ಲು ! ನಿಲ್ಲು; ಹೋಗದಿರು."

ಎನ್ನುತ್ತಾ ಸರಳ ಮಳೆಗರೆದನು. ಶತ್ರುಘ್ನನ ಸೇನೆಯು ಹಿಂದಿರುಗಿತು.

ಭಟರ ಮಂಡೆಗಳ ಮೇಲೆ ಹದ್ದುಗಳು ಎರಗಿದುವು: ಚಲಿಸುವ ಪತಾಕೆ ಗಳು ಕಳಚಿಬಿದ್ದುವು; ಒಡನೆ ಧೂಳಿದ್ದು ಬಿರುಗಾಳಿ ಬೀಸಿತು: ಆನೆ ಕುದುರೆ ಗಳು ಕಂಬನಿಗರೆದುವು; ಈ ಉತ್ಪಾತವನ್ನು ಕಂಡು ಬಲವು ಗಜಬಜಿಸಿತು.

"ಹೋಗದಿರಿ, ನಿಲ್ಲಿ, ಹೆದರಿ ಹೋಗುವಿರಾದರೆ ಕುದುರೆ ಸಹಿತ ಅವನನ್ನು ಬಿಟ್ಟು ನಡೆಯಿರಿ."

—ಎಂದು ಹೇಳುತ್ತಾ ಕುಶನು ನಿಶಿತಶಸ್ತ್ರಗಳನ್ನು ಎಸೆಯುತ್ತಿದ್ದನು. ಶತ್ರುಘ್ನನ ಬಲ ಕಂಗಾಲಾಯಿತು.

"ಈಗ ಇವನೂ ಒಬ್ಬನು ಬಂದನಲ್ಲಾ."

ಹೀಗೆಂದು ಸೈನಿಕರು ದಿಕ್ಕುದಿಕ್ಕುಗಳಿಗೆ ದಿಕ್ಕೆಟ್ಟು ಚದರಿ ಹೋದರು.

"ಹರಿಣ ಶಿಶು, ಹುಲಿಯನ್ನು ಹೆದರಿಸುವುದುಂಟೆ?"

ಗರ್ವಗೊಂಡು ಶತ್ರುಘ್ನನು ಚದರಿದ ಸೇನೆಯನ್ನು ಒಟ್ಟುಗೂಡಿಸಿ ಪುನಃ ಕುಶನ ಮೇಲೆ ಏರಿ ಹೋಗುವಂತೆ ಸೇನಾಪತಿಗೆ ಆಜ್ಞೆಯಿತ್ತನು. ಶತ್ರುಘ್ನನ ಸೈನಿಕರು ಹುರುಪಿನಿಂದ ವಿವಿಧಾಯುಧಗಳನ್ನು ಝಳಪಿಸುತ್ತಾ ನುಗ್ಗಿದರು. ಕುಶನು, ಕುದುರೆ ತೇರಾನೆ ಕಾಲಾಳುಗಳನ್ನು ಸವರಿ. ಸೇನಾಪತಿಯನ್ನು ಸಾರಥಿ ರಥಾಶ್ವಸಹಿತ ಯಮಪುರಿಗಟ್ಟಿದನು. ಆತನ ತಮ್ಮನಾದ ನಗನೆಂಬವನು ಖಾತಿಯಿಂದ ಕಾದಲು, ಕುಶನು ಅವನ ರುಂಡವನ್ನು ಖಂಡಿಸಿದನು. ಇದನ್ನು ಕಂಡು ಕೋಪಗೊಂಡು ಶತ್ರುಘ್ನನೇ ಬಂದು ಮಾರಾಂತನು.

ಶತ್ರುಘ್ನನು ಸಿಟ್ಟಿನಿಂದ ಒಂಭತ್ತು ಬಾಣಗಳನ್ನು ಎಡೆಬಿಡದೆ ಕುಶನ ಮೇಲೆ ಎಸೆದನು. ಅದನ್ನು ಖಂಡಿಸಿ, ಶತ್ರುಘ್ನನ ತೇರು ಪುಡಿಪುಡಿಯಾಗು ವಂತೆಯೂ, ಸಾರಥಿರಥಾಶ್ವಗಳು ಧರೆಗುರುಳುವಂತೆಯೂ, ಬಿಲ್ಲು ಮುರಿಯು ವಂತೆಯೂ, ಎದೆಗೆ ನಾಟುವಂತೆಯೂ ಸರಳ ಮಳೆಗರೆಯಲು ಆತನೂ ಮೂರ್ಛಿತನಾದನು. ಶತ್ರುಘ್ನನು ಮೈಮರೆತು ಬೀಳುತ್ತಲೇ ದೊರೆದೊರೆ ಗಳೆಲ್ಲರೂ ಬಂದು ಮುತ್ತಲು, ಗಿರಿತಟದಲ್ಲಿ ಒಂದೊಂದರೊಡನೆ ಹೆಣಗಿ ಸೋತ ಮದಕರಿಗಳು ಅಲ್ಲಿಂದ ಉರುಳುವಂತೆ, ಕನ್ಯಾವಿಕ್ರಯವನ್ನು ಮಾಡಿ ಜೀವಿಸುವ ಮನುಷ್ಯನ ಪಿತೃಗಳು ಸ್ವರ್ಗದಿಂದ ಬೀಳುವಂತೆ, ಅವರೆಲ್ಲರೂ ಧರೆಗೆ ಕೆಡೆದರು. ಸ್ವಧರ್ಮದಿಂದ ಬಹುದುರಿತವನ್ನು ಒರೆಸುವಂತೆ ಕುಶನು ಶತ್ರುಬಲವನ್ನು ತನ್ನ ಭುಜಬಲದಿಂದ ಸವರಿದನು. ಅಷ್ಟರಲ್ಲಿ ಮೂರ್ಛೆ ತಿಳಿದೆದ್ದು ಲವನು ಅಣ್ಣ ನನ್ನು ಕೂಡಿಕೊಂಡನು. ಸೋದರರಿಬ್ಬರೂ ಗಾಳಿ ಬೆಂಕಿಗಳಂತೆ ಜತೆಗೂಡಿ, ಕುದುರೆಯನ್ನು ಕಟ್ಟಿಹಾಕಿ ಹೋರಾಟಕ್ಕೆ ನಿಂತರು. ಸಮರದ ಸೋಲಿನ ಸುದ್ದಿ ಚರರ ಮೂಲಕ ಸಾಕೇತನಗರಕ್ಕೆ ತಲಪಿತು ಯಜ್ಞದೀಕ್ಷಿತನಾದ ಶ್ರೀರಾಮನಿಗೆ ಚರರು ಅರಿಕೆಮಾಡಿದರು:

"ಜೀಯ, ನಿನ್ನ ಯಾಗದ ಕುದುರೆ ಭೂಮಿಯನ್ನೆಲ್ಲಾ ನಿರ್ವಿಘ್ನವಾಗಿ ಸಂಚರಿಸಿತು. ಆ ಮೇಲೆ, ಲವನೆಂಬ ಬಾಲಕನೊಬ್ಬನು ಅದನ್ನು ಕಟ್ಟಿಹಾಕಿದನು. ಅವನೊಡಲು ಸೆಣಸಾಡಲು ಬಲ್ಲವೆಲ್ಲವನ್ನೂ ಕೊಂದುಹಾಕಿದನು. ಯುದ್ಧದಲ್ಲಿ

ಶತ್ರುಘ್ನನು ಆತನನ್ನು ಬಂಧಿಸಲು, ಅವನ ಹಿಂದೆಯೇ ಇನ್ನೊಬ್ಬ ಬಾಲಕನು ಬಂದು ನಿನ್ನ ತಮ್ಮನನ್ನು ಸೋಲಿಸಿದ್ದಾನೆ. ಇದನ್ನು ಅರಿಕೆಮಾಡಲು ಅಂಜುತ್ತೇವೆ".

"ಎಲಾ, ಲೋಕದಲ್ಲಿ ಶತ್ರುಘ್ನನನ್ನು ಜಯಿಸುವವರಿದ್ದಾರೆಯೇ? ಹೋಗಿರಿ, ಇವರು ಹುಚ್ಚರು".

"ಪ್ರಭೋ, ನಿಮ್ಮ ಪಾದಗಳಾಣೆ ಸತ್ಯ".

ಶ್ರೀರಾಮನು ಬೆರಗಾದನು; ಮರುಗಿದನು. ಶತ್ರುಘ್ನನು, ಭೀಷಣ ಲವಣಾಸುರನನ್ನು ಕೊಂದ ಅತಿಪರಾಕ್ರಮಿ. ಅವನನ್ನು ಸೋಲಿಸಬೇಕಾದರೆ ಬಾಲಕರ ಸಾಮರ್ಥ್ಯವೆಂತಹುದೋ ಎಂದು ಚಿಂತಿಸಿದನು: ರಾಜಾಜ್ಞೆಯಾಯಿತು:

"ಲಕ್ಷ್ಮಣ, ಸೇನೆ ಸಹಿತ ನಡೆ."

ಅಣ್ಣನ ಅಡಿದಾವರೆಗಳಿಗೆರಗಿ ಬೀಳ್ಕೊಂಡು ಸಕಲ ಸೇನಾ ಸನ್ನಾಹದಿಂದ ಕಾಲಜಿತುವೆಂಬ ದಳಪತಿಯೊಡನೆ ಲಕ್ಷ್ಮಣನು ನಗರವನ್ನು ಹೊರಟುಬಂದನು. ಮುನ್ನಡೆವ ಪಡೆಯ ಪದಹತಿಗೆ ಪೊಡವಿ ನಡುಗಿತು! ಲಕ್ಷ್ಮಣ ಸೇನೆ ವಾಯುವೇಗದಿಂದ ಸಾಗಿತು. ಚೇತರಿಸಿಕೊಳ್ಳಲು ಶರೀರದಲ್ಲಿ ಪ್ರಾಣವಿಲ್ಲದೆ. ಗಾಯದಿಂದಾಗಿ ತನುವಿನಲ್ಲಿ ತ್ರಾಣವಿಲ್ಲದೆ, ಮೂರ್ಛೆಗೊಂಡ ಶತ್ರುಘ್ನನು ರಾಹುಗ್ರಸ್ತನಾದ ಚಂದ್ರನಂತೆ ಸಮರಭೂಮಿಯಲ್ಲಿ ಬಿದ್ದಿದ್ದನು. ರೋಷವಿಷಾದಗಳಿಂದ ಕೂಡಿದ ಲಕ್ಷ್ಮಣನು ಯುದ್ಧಕ್ಕೆ ಸೇನೆಯನ್ನು ಸಿದ್ಧಗೊಳಿಸಿದನು.

ಶತ್ರುಸೇನೆಯ ಬರವನ್ನು ಕುಶಲವರು ದೂರದಿಂದಲೇ ಕಂಡರು; ಕಾಳಗದಲ್ಲಿ ಇವರನ್ನು ಖಂಡಿಸುವೆವೆಂದು ತಮ್ಮೊಳಗೆ ಮಾತಾಡಿಕೊಂಡರು. ತನ್ನ ಬಿಲ್ಲು ಮುರಿದುಹೋದುದನ್ನು ಲವನು ಅಣ್ಣನಿಗೆ ತಿಳಿಸಿ. ವಾಲ್ಮೀಕಿಯ ದಿವ್ಯೋಪದೇಶದಂತೆ ಸೂರ್ಯಸ್ತುತಿಮಾಡಿ, ಮೆಚ್ಚಿಸಿ. ಆತನಿಂದ ಕೋದಂಡವನ್ನು ಪಡೆದುಕೊಂಡನು. ಇಬ್ಬರೂ ಶತ್ರುಸೇನೆಯ ಕಡೆಗೆ ನುಗ್ಗಿ ಸಾಗಿದರು. ಸಹಸ್ರಶತಸಹಸ್ರಸಂಖ್ಯಾಪರಿಮಿತವಾದ ಲಕ್ಷ್ಮಣನ ಅಪರಿಮಿತ ಚತುರಂಗಬಲವನ್ನು ನಿಮಿಷದಲ್ಲಿ ತಾರುತಟ್ಟಾಗಿ ಕೆಡಹಿದರು.

ಲಕ್ಷ್ಮಣನಿಗೂ ಕುಶನಿಗೂ ಕಾಳಗವಾಯಿತು; ಕಾಲಜಿತು ಲವನನ್ನು ದಿರಿಸಿದನು.

ಲವನ ಮೇಲೆ ಎಷ್ಟು ಬಾಣಗಳನ್ನು ಭಟರು ಬಿಟ್ಟರೋ, ಅಷ್ಟು ಬಾಣಗಳನ್ನೂ ಅವರ ಮೈಮೇಲೆ ಪುನಃ ಆತನು ನಾಟಿಸಿದನು! ಎಷ್ಟು ಆನೆ ಕುದುರೆ

ಗಳು ಮುತ್ತಿದುವೋ ಅಷ್ಟನ್ನೂ ಸೀಳಿದನು. ಎಷ್ಟು ತೇರು ಕಂಡಿತೋ ಅಷ್ಟನ್ನೂ ಮುರಿದನು. ಎಷ್ಟು ಮಂದಿ ಮುಂದಾದರೋ, ಅವರೆಲ್ಲರನ್ನೂ ಕೊಂದನು. ನೂರಾಳಿಗೆ ಒಂದು ಕುದುರೆ, ನೂರು ಕುದುರೆಗೆ ಒಂದು ರಥ, ನೂರು ರಥಕ್ಕೆ ಒಂದಾನೆ. ಸಾವಿರ ಆನೆಗಳಿಗೆ ಒಂದು ಭೂಮಿ, ಈ ಗಣನೆಯ ನಲ್ವತ್ತು ಭೂಮಿಗಳು ಲವನ ಬಾಣಾವಳಿಯ ಹಾವಳಿಯಿಂದ ನಾಶಗೊಂಡುವು.

ಅಷ್ಟರಲ್ಲಿ ಕುಶನನ್ನು ಕಾಣದೆ ವೀರಲವನು ಎಡಬಲದಲ್ಲಿ ಹುಡುಕುತ್ತಿರಲು, ಲವಣಾಸುರನ ಮಾವನಾದ ರುಧಿರಾಕ್ಷನೆಂಬ ಶೂರರಾಕ್ಷಸನು ಲವನ ಕೈಯ ಕೋದಂಡವನ್ನು ಕಿತ್ತು ಕೊಂಡೊಯ್ದು ಆಕಾಶಕ್ಕೆ ನೆಗೆದನು. ಆಗ ಲವನು, ವಾಲ್ಮೀಕಿ ಉಪದೇಶವಿತ್ತ ಅಗ್ನಿಮಂತ್ರಧ್ಯಾನಮಾಡಲು, ಅವನ ಕೈಗೆ ಚಕ್ರವೊಂದು ಬಂದು ಸೇರಿಕೊಂಡಿತು. ಅದರ ಪ್ರಭಾವದಿಂದ ರುಧಿರಾಕ್ಷನನ್ನು ಆಗಸದಲ್ಲಿ ತಡೆಹಿಡಿದನು. ತನ್ನನ್ನು ಸುತ್ತಿಮುತ್ತಿ ಬರುವ ಆತನ ಪ್ರಬಲಬಲವನ್ನು ಚಕ್ರದಿಂದ ತತ್ತರತರಿದನು. ಸುಮಂತ್ರಪುತ್ರರಾದ ಹತ್ತುಮಂದಿ ಪ್ರಸಿದ್ಧ ಪ್ರಧಾನಿಗಳು ಬಂದು ಒಬ್ಬೊಬ್ಬರೂ ಹತ್ತು ಹತ್ತು ಬಾಣಗಳನ್ನೆಸೆದು ಲವನ ಕೈಯ ಚಕ್ರವನ್ನು ಖಂಡಿಸಿದರು. ಚಕ್ರ ಮುರಿಯಲು, ಪರಿಘವನ್ನು ಕೊಂಡು ಲವನು ಹೋರಾಡಿ ಅವರೆಲ್ಲರನ್ನೂ ಹೊಡೆದು ಕೆಡಹಿದನು. ಗದಾದಂಡದಿಂದ ರುಧಿರಾಕ್ಷನು ಲವನಿಗಪ್ಪಳಿಸಲು, ಒಮ್ಮೆ ಮೂರ್ಛಿತನಾದ ಕೂಡಲೇ ಎಚ್ಚೆತ್ತು ಆ ಮಹಾಸುರನ ಶಿರವನ್ನು ಕತ್ತರಿಸಿ ಸೂರ್ಯನಿತ್ತ ಕೋದಂಡವನ್ನು ಕೈವಶ ಮಾಡಿಕೊಂಡನು. ಚಾಪಚಾಪಲಹಸ್ತನಾದ ವೀರಲವನು ಚತುರಂಗಬಲವನ್ನು ಸಂಹರಿಸತೊಡಗಿದನು.

ಇನ್ನೊಂದೆಡೆ, ಕುಶನೊಡನೆ ಲಕ್ಷ್ಮಣನಿಗೆ ಯುದ್ಧ ಸಾಗುತ್ತಿತ್ತು. ಲಕ್ಷ್ಮಣನು ಕರ್ಣಪರ್ಯಂತ ಸೆಳೆದು ಐದು ಬಾಣಗಳನ್ನು ಕುಶನ ಮೇಲೆಚ್ಚನು. ಖತಿಗೊಂಡು ಕುಶನು ಅಸ್ತ್ರವೊಂದನ್ನು ಹೂಡಲು ಲಕ್ಷ್ಮಣನ ರಥವು ಎರಡು ಗಳಿಗೆಯ ತನಕ ತಿರ್ರನೆ ತಿರುಗಿತು. ರಥಾಶ್ವಗಳು ತಲೆ ಕೆಳಗಾಗಿ ಬಿದ್ದುವು! ಬಾಲಕನ ವಿಕ್ರಮವನ್ನು ಕಂಡು ಲಕ್ಷ್ಮಣನು ಮೆಚ್ಚಿದನು. ರೋಷಭೀಷಣನಾಗಿ, ಎರಡು ಬಾಣಗಳಿಂದ ಕುಶನ ಕಿರೀಟವನ್ನೂ, ಮೂರರಿಂದ ಕವಚವನ್ನೂ ಕೊಚ್ಚಿ ಕೆಡಹಿದನು. ಕುಶನಿಗೆ ಹೆರೆಬಿಟ್ಟ ಸರ್ಪರಾಜನಂತೆ ಶೌರ್ಯವಿಮ್ಮಡಿಸಲು ಅಗ್ನಿ ಸೂಕ್ತದಲ್ಲಿ ಅಥರ್ವಮಂತ್ರದ ಪುರಶ್ಚರಣೆಮಾಡಿ ಅನಲಾಸ್ತ್ರವನ್ನು ಧನುಸ್ಸಿಗೆ ಹೂಡಿ ಎಸೆದನು. ಪ್ರಳಯ ಕಾಲದ ಶಿವನ ಹಣೆಗಣ್ಣಿನ ಬೆಂಕಿಯಂತೆ ಅದು ಚತುರ್ಬಲವನ್ನು ಸುಡುತ್ತಾಬಂತು. ಲಕ್ಷ್ಮಣನು ಅದನ್ನು ಅಡಗಿಸಿ ಮಹಾ

ಪರಾಕ್ರಮದಿಂದ ಕಾದಾಡುತ್ತಿರಲು, ಆತನನ್ನು ಒಂದಿಕ್ಕಿ ಕಾಲಜಿತು ಕುಶನಿದಿರಾಗಿ ಆತನನ್ನು ಹೀನೈಸಿ ತನ್ನ ಪೌರುಷವನ್ನು ಕೊಚ್ಚಿಕೊಳ್ಳುತ್ತಿರಲು, ಕುಶನು ನಿಶಿತಾಸ್ತ್ರದಿಂದ ಅವನ ನಾಲಿಗೆಯನ್ನು ಕತ್ತರಿಸಿ ಕೈಕಾಲು ತಲೆಗಳನ್ನೂ ತುಂಡರಿಸಿದನು; ಬಾಲಕನ ಬಾಹುಬಲವನ್ನೂ, ತನ್ನ ಪಡೆಯ ಪರಾಜಯವನ್ನೂ ಪ್ರತೀಕ್ಷಿಸಿ ಲಕ್ಷ್ಮಣನು ಕುಶನ ಮೇಲೆ, ಘೂರು ಲೋಕಗಳನ್ನು ಆವರಿಸುವಂತಹ ಸರಳಮಳೆ ಸುರಿಸಲಾರಂಭಿಸಿದನು. ವೀರಲಕ್ಷ್ಮಣನ ಹರಿತವಾದ ಶರಗಳೆಲ್ಲವನ್ನೂ, ರಥವನ್ನೂ, ಕುದುರೆಗಳನ್ನೂ, ಧ್ವಜವನ್ನೂ, ಬಿಲ್ಲಿನ ಹಗ್ಗವನ್ನೂ, ಬಾಣಬತ್ತಳಿಕೆಗಳನ್ನೂ, ಸಾರಥಿಯನ್ನೂ, ಕವಚವನ್ನೂ ಕುಶನು ಕತ್ತರಿಸಲು, ಆ ಮೇಲೆ ಲಕ್ಷ್ಮಣನು ಗದಾಧರನಾಗಿ ಅವನ ಮೇಲೆರಗಿದನು. ಕುಶಲಕ್ಷ್ಮಣರ ಘೋರಸಂಗ್ರಾಮದಲ್ಲಿ, ಕುಶನು ವಾಲ್ಮೀಕಿ ಮುನಿಯಿತ್ತ ದಿವ್ಯಾಸ್ತ್ರದಿಂದ ಲಕ್ಷ್ಮಣನನ್ನು ಮೂರ್ಛೆಗೆಡಹಿದನು. ಲವನಿದ್ದಲ್ಲಿಗೆ ಧಾವಿಸಿ ಆತನನ್ನು ಮುತ್ತಿದ ಪಟುಭಟರನ್ನುರುಳಿಸಿ, ಸೈನಿಕರನ್ನು ಚದರಿಸಿ ಕುದುರೆಯನ್ನು ಕಟ್ಟಿಹಾಕಿದ ವನದ ಕಡೆಗೆ ಸೀತಾಕುಮಾರರಿಬ್ಬರೂ ತೆರಳಿದರು.

ಗಂಗಾನದೀ ತೀರದಲ್ಲಿ ಯಜ್ಞದೀಕ್ಷಿತನಾಗಿದ್ದ ದಾಶರಥಿಗೆ ಕಾಳಗದ ಕುರಿತು ಕಳವಳವುಂಟಾಯಿತು. ಭರತನನ್ನು ಬಳಿಗೆ ಕರೆದನು.

"ತಮ್ಮಾ, ಶತ್ರುಘ್ನನು ಏನು ಮಾಡಿದನೆಂದು ನನಗಾರೂ ತಿಳಿಸಲಿಲ್ಲವಲ್ಲಾ! ಲಕ್ಷ್ಮಣನು ಬಾಲಕರನ್ನು ಬಿಗಿದಿರುವನೊ? ಕೊಂದಿರುವನೊ? ಧುರದಲ್ಲಿ ಬಳಲಿರುವನೊ? ಗೆದ್ದಿರುವನೊ? ಬಿದ್ದಿರುವನೊ? ಕುದುರೆಯನ್ನು ಬಿಡಿಸಿ ತರುವನೊ? ನಾನು ಒಂದನ್ನೂ ತಿಳಿಯದಾದೆನಲ್ಲಾ! ಲಕ್ಷ್ಮಣನು ಇದು ವರೆಗೆ ಯಾರೊಡನೆಯೂ ಸ್ವಪ್ನದಲ್ಲಿ ಸಹ ಸೋತವನಲ್ಲ; ವನಚಾರಿಗಳಾದ ಹುಡುಗರು ಅವನಿಗೆ ಈಡೆ? ಯುದ್ಧದಲ್ಲಿ ಇಬ್ಬರನ್ನೂ ಕೊಲ್ಲದೆ ಸಮ್ಮೋಹನಾಸ್ತ್ರದಿಂದ ಮೂರ್ಛೆಗೊಳಿಸಿ ನನಗೆ ತಂದೊಪ್ಪಿಸುವ ಹಾಗೆ ಚರರನ್ನು ಬೇಗನೇ ಅವನಲ್ಲಿಗೆ ಕಳುಹಿಸು.

ಶ್ರೀರಾಮನ ಆದೇಶವನ್ನು ಶಿರಸಾವಹಿಸಿ ಚರರು ಧಾವಿಸಿದರು! ಅಲ್ಲಿನ ವಿಪರೀತ ವಾರ್ತೆಯನ್ನು ತಿಳಿದು ಮರಳಿ ಬಂದು ಅರಿಕೆ ಮಾಡಿದರು—

"ದೇವ, ದೀಕ್ಷೆಯನ್ನು ಬಿಡು; ಯುದ್ಧ ಮಾಡು: ಆತನು ಮಹಾಬಲಶಾಲಿ. ಶತ್ರುಘ್ನ ಲಕ್ಷ್ಮಣರ ಜೀವವೇ ಸಂದೇಹವಾಗಿದೆ: ಸೇನೆಯು ಸೋತು ಹೋಗಿದೆ. ನಿನ್ನ ಆಕೃತಿಯ ಆ ಬಾಲಕರ ದೆಸೆಯಿಂದ ನಮ್ಮವರಿಗೆ ಬಹಳ ಗಂಡಾಂತರ ಬಂದಿದೆ."

ಚರರು ತಂದ ವಿಷಮ ವಾರ್ತೆ ಕಿವಿಗೆ ಬಿದ್ದೊಡನೆ ಶ್ರೀರಾಮನು ಮೂರ್ಛೆಗೊಂಡನು. ಸೀತಾಪತಿಗೆ ಶೈತ್ಯೋಪಚಾರಗಳು ನಡೆದುವು; ಭರತನು ಅಣ್ಣನನ್ನು ಸಂತೈಸುತ್ತಿದ್ದನು. ಶ್ರೀರಾಮನು ಲಕ್ಷ್ಮಣನ ಗುಣಗಣಗಳನ್ನು ನೆನೆನೆನೆದು ಹಂಬಲಿಸಿದನು—

"ಅಯ್ಯೊ! ಲಕ್ಷ್ಮಣಾ! ನಿನೇನಾದೆಯೊ? ನನ್ನ ಮಾತನ್ನು ಅಕ್ಷರಶಃ ಪಾಲಿಸುವ ಪ್ರಿಯ ಸೋದರನೇನಾದನು? ಅಯ್ಯೊ! ಹಿಂದೆ ಘೋರಾರಣ್ಯದಲ್ಲಿ ನನಗಾಗಿ ಎಷ್ಟು ಕಷ್ಟಪಟ್ಟನು! ಇಂದಿಗೂ ನನ್ನಿಂದ ನಿನಗೆ ಈ ಗತಿಯಾಯ್ತೆ! ಹಾ ತಮ್ಮ! ಹಾ! ನೀನೆಲ್ಲಿ ಹೊದೆಯೊ!"

ದಶರಥಿಯ ದುಃಖವನ್ನು ಕಂಡು. ಸಮಸ್ತ ಜನರೂ ಸಂಕಟ ಪಟ್ಟರು.

"ಜಾನಕಿಯನ್ನು ಅನ್ಯಾಯವಾಗಿ ಹೊರಡಿಸಿದ ಕಾರಣ, ಸೂರ್ಯಕುಲದ ಶ್ರೀರಾಮನಿಗೆ ಇಂತಹ ದುಸ್ಸಂಭವಗಳಾದುವಲ್ಲವೆ? ಅಲ್ಲವಾದರೆ ಲಕ್ಷ್ಮಣ ಶತ್ರುಘ್ನರನ್ನು ಜಯಿಸುವ ಸಮರ್ಥರು ಲೋಕದಲ್ಲಿ ಯಾರಿದ್ದಾರೆ? ಕಾನನದ ಮುನಿಸೂನುಗಳಿಗೆ ಅಂತಹ ಪೌರುಷವಿರುವುದುಂಟೆ? ನಿಜವಾಗಿಯೂ ಆ ಬಾಲಕರು ಶ್ರೀರಾಮಪುತ್ರರೇ ಇರಬೇಕು." ಇದರಲ್ಲಿ ಅನುಮಾನವೇನಿದೆ?"

—ಶ್ರೀರಾಮನು ಕೇಳುವಂತೆ ಇಂತು ಜನರು ಮೊರೆಯಿಟ್ಟರು.

ರಾಘವನು ಚಿಂತಿಸಿದನು:—

"ಸೀತೆಯ ಸಿರಿಮೊಗದ ಚಿಹ್ನೆಯೂ, ನನ್ನ ಅಂಗದ ಆಕಾರವೂ ಆ ಬಾಲಕರಲ್ಲಿದೆಯಂತೆ! ಅವರನ್ನು ಪಡೆದ ತಾಯಿ ಎಲ್ಲಿರುವಳೊ? ತುರಗವನ್ನು ಬಂಧಿಸುವ ಕಾರ್ಯವನ್ನು ಅವರು ಹೇಗೆ ಕೈಗೊಂಡರೆಂಬುದನ್ನು ದೂತರಿಂದ ಕೇಳಿ ತಿಳಿಯುವೆನು. ಲಕ್ಷ್ಮಣನು ಶಿಶುಗಳನ್ನು ಘಾತಿಸಲು ಮನಸ್ಸಿಲ್ಲದವನಾಗಿ ದಯದೋರಿ ತಾನು ಗಾಯಗೊಂಡನೊ? ಅಥವಾ ಆ ತರಳರು ಅತಿ ಬಲರೊ? ಲಕ್ಷ್ಮಣನು ಹೇಗೆ ಮೂರ್ಛೆ ಬಿದ್ದನು?"

ರಾಘವನು ಇಂತು ಹಂಬಲಿಸಿದನು. ಸೋದರರ ಗುಣಗಳನ್ನು ನೆನೆನೆನೆದು ಚಿಂತಿಸಿದನು. ಕುಶನ ಬಾಣದ ಪೊಡೆತದಿಂದ ನೊಂದು ಭೀತರಾಗಿ ಪುನಃ ಚರರು ಬಂದು. ಶ್ರೀರಾಮನೊಡನೆ ಮೊರೆಯಿಟ್ಟು ಅರಿಕೆ ಮಾಡಿದರು—

"ಸ್ವಾಮಿ. ಲಕ್ಷ್ಮಣನ ಒಡಲಲ್ಲಿ ಜೀವವು ಬಹುಕಾಲ ನಿಲ್ಲಲಾರದು; ನಮ್ಮ ಸಕಲ ಸೈನ್ಯವೂ ಮಡಿಯಿತು; ಶತ್ರುಘ್ನನು ಹೇಗಿದ್ದಾನೋ ತಿಳಿಯದು. ಇನ್ನೂ ನಿಮಗೆ ದೀಕ್ಷೆಯೆ?"

ಇಂತು ಅಶುಭ ವಾರ್ತೆಯನ್ನು ಅಣ್ಣನೊಡನೆ ಮರಳಿ ಮರಳಿ ಹೇಳು ತ್ತಿರುವ ಚರರನ್ನು ಭರತನು ಗದರಿ ಕಳುಹಿಸಿದನು. ಶ್ರೀರಾಮನನ್ನು ಸಂತೈಸಿ ದನು—

"ದೇವ, ಈ ದೂತರು ಭಯದಿಂದ ಕಂಗಾಲಾಗಿದ್ದಾರೆ; ಏನೇನೋ ಗಳಹುತ್ತಿದ್ದಾರೆ. ಲಕ್ಷ್ಮಣ ಶತ್ರುಘ್ನರು ಯುದ್ಧದ ಆಯಾಸದಿಂದ ಮೈಮರೆತಿರ ಬಹುದಲ್ಲದೆ, ಅವರಿಗೆ ಮರಣ ಸಂಭವಿಸುವುದೆಂದರೇನು? ಹೇಗಿದ್ದರೂ ನೀನು ಚಿಂತಿಸಬೇಡ; ನಾನು ಹೋಗಿ ತರಳರ ತುಂಟತನವನ್ನು ಮುರಿದು ಬರುವೆನು."

ಭರತನು ಶ್ರೀರಾಮನಿಗೆ ಭರವಸೆಯಿತ್ತು, ಜಾಂಬವ, ಸುಷೇಣ, ಅಂಗದ, ಹನುಮಂತ, ನಳ, ನೀಲ, ಕುಮುದ, ಶತಬಲಿ, ಗವಯರೆಂಬ ಕಪಿಗಳ ಪಡೆಯ ನ್ನೆಲ್ಲಾ ಕೂಡಿಸಿಕೊಂಡು, ಚತುರಂಗಬಲವನ್ನು ಸಿದ್ಧಗೊಳಿಸಿ ಶ್ರೀರಾಮನನ್ನು ಬೀಳ್ಕೊಂಡು, ಗಂಗಾನದಿಯನ್ನು ದಾಟಿ ಹೋಗಿ, ಯುದ್ಧ ವೃತ್ತಾಂತವನ್ನು ಮುಂಚಿತವಾಗಿ ತಿಳಿದು ಬರುವಂತೆ ಆಂಜನೇಯನನ್ನಟ್ಟಿದನು.

ಕಲಿಹನುಮನು ಸಂಗ್ರಾಮ ಭೂಮಿಗೆ ಧೀಂಕಿಟ್ಟನು. ರಣರಂಗದಲ್ಲಿ ಕುಶನ ಬಾಣಗಳಿಂದ ಮಡಿದು ಬಿದ್ದ ಸೈನಿಕರನ್ನು ಕಂಡನು. 'ರಾಮನು ನಿನ್ನ ಮಗಳನ್ನು ಬಿಟ್ಟನೆಂದು ಕೋಪಿಸದಿರು; ಸೈರಿಸು' ಎಂದು ಭೂದೇವಿಯೊಡನೆ ಬೇಡಿಕೊಳ್ಳುವಂತೆ ಭೂಮಿಗೆ ಬಿದ್ದು ಮೈಮರೆತಿದ್ದ ಲಕ್ಷ್ಮಣ ಶತ್ರುಘ್ನರನ್ನೂ ನೋಡಿದನು. ಅವರಿಬ್ಬರನ್ನು ತೆಗೆದೆತ್ತಿಕೊಂಡು ಭರತನಲ್ಲಿಗೆ ತರಲು, ಅವರನ್ನು ಭರತನು ಮಣಿರಥದಲ್ಲಿ ಮಲಗಿಸಿದನು. ಕುದುರೆಯನ್ನು ಕಟ್ಟಿ ಕುಶಲವರು ಶರಚಾಪಹಸ್ತರಾಗಿ ಇರುವರೆಂದು ಕೇಳಿ ಕೋಪಿಸುತ್ತಾ ಕೋದಂಡವನ್ನು ಜೇಗೈದು ಬಾಲಕರ ಕಡೆಗೆ ನುಗ್ಗಿದನು.

ಶತ್ರು ಸೈನ್ಯವು ತಮ್ಮ ಕಡೆಗೆ ನುಗ್ಗಿ ಬರುತ್ತಿರುವುದನ್ನು ಅಣ್ಣತಮ್ಮಂದಿ ರಿಬ್ಬರೂ ದೂರದಿಂದಲೇ ಕಂಡರು; ಬಾಣಪ್ರಯೋಗ ಮಾಡಿ ಪಟುಭಟರ ತಲೆ ಗಳನ್ನು ಅಣ್ಣೆಕಲ್ಲಾಟವಾಡಿದರು. ಯೋಜನವಗಲ ವಿಸ್ತಾರದ ರಣಭೂಮಿಯು ಶರಮಯವಾಯಿತು. ವೀರರ ಧನುಷ್ಟಂಕಾರವು ಮೂರು ಲೋಕಗಳನ್ನು ವ್ಯಾಪಿಸಲು ದಿಗ್ಗಜಗಳು ಕಿವುಡಾದುವು. ಏಳು ಕಡಲುಗಳು ಬೆರೆತುಹೋದುವು. ಕುಲಪರ್ವತಗಳು ಜರಿದು ಬಿದ್ದುವು. ಮಹಾಶೇಷನು ಕುಸಿದು ಕಂಪಿಸಿದನು. ಕೂರ್ಮನು ಅಡಿ ಮುಗುಚಿದನು. ಬಾಣದ ಕತ್ತಲೆಯಿಂದ ಸೂರ್ಯನ ತೇಜವಡಗಿ ರಣಾಂಗಣವು ದೀಪವಿಲ್ಲದ ಮನೆಯಂತಾಯಿತು. ಆನೆಗಳ ಸುಂಡಿಲುಗಳೂ, ಕುದುರೆಗಳ ಕಾಲುಗಳೂ, ಯೋಧರ ಶಿರಗಳೂ, ರಥಿಕರ ಧನುರ್ದಂಡವೂ,

ಕೈದುಹಿಡಿದವರ ಕೈಗಳೂ ಭೂಮಿಗೆ ಸಾಲುಸಾಲಾಗಿ ಬಿದ್ದುವು. ಕಪಿಗಳ ಮೇಲೆ ಕಣೆಗಳು ಕೀಲು ಹಾಕಿದಂತೆ ನಾಟಿದುವು. ಕುಶಲವರ ಮುಂದೆ ನಿಲ್ಲುವ ಪಟುಭಟರಾಗಲಿ, ರಣಧೀರರಾಗಲಿ. ಅವರನ್ನು ಗೆಲ್ಲುವ ವೀರಯೋಧರಾಗಲಿ ಯಾರೂ ಇರಲಿಲ್ಲ.

ಹನುಮಂತನು ಭರತನ ಹತ್ತಿರ ಹೋದನು; ಕುಶಲವರನ್ನು ಶ್ರೀರಾಮ ಪುತ್ರರೆಂದು ಗುರುತಿಸಿ ಹೇಳಿದನು—

"ಭರತ, ಈ ಬಾಲಕರ ರೂಪವನ್ನು ನೋಡು; ಶ್ರೀರಾಮನ ಆಕೃತಿ ಯನ್ನೇ ಹೋಲುವುದಿಲ್ಲವೆ ಹೇಗೆ."

ಭರತನಿಗೂ ಹನುಮಂತನ ಮಾತು ಅಹುದೆನಿಸಿತು. ಮಕ್ಕಳ ಮೇಲೆ ಮಮತೆ ಉಕ್ಕಿತು. ಧನುರ್ಬಾಣಗಳನ್ನು ಹಿಡಿದು ಅವರ ಮುಂದೆ ಬಂದು ನಿಂತನು. ಮುಖಗಳನ್ನು ನಿರೀಕ್ಷಿಸುತ್ತಾ, ಅತಿ ಸ್ನೇಹದಿಂದ ರೋಮಾಂಚನ ಗೊಂಡು ಕುಶನನ್ನು ಮಾತನಾಡಿಸಿದನು—

"ವತ್ಸ. ನೀನು ಯಾರು? ನಿನಗೀತನು ಏನಾಗಬೇಕು? ನನ್ನ ಸೋದರರನ್ನು ಘಾತಿಸಿದಿರಿ; ನಮ್ಮ ಮಹಾ ಸೈನ್ಯವನ್ನು ಕೊಂದಿರಿ; ಇನ್ನಾದರೂ ಕುದುರೆ ಯನ್ನು ಬಿಟ್ಟುಬಿಡಿ; ಸುಮ್ಮನೆ ನಮ್ಮೊಡನೆ ಹಠ ಸಲ್ಲದು. ನಿಮ್ಮನ್ನು ಪಡೆದ ತಾಯಿಯ ಬಳಿಗೆ ಹೋಗಿ ಸುಖವಾಗಿ ಇರುವುದು ಒಳ್ಳೆಯದು."

ಭರತನ ಮಾತಿನಿಂದ ಕುಶನಿಗೂ ಕುತೂಹಲವುಂಟಾಯಿತು; ನಸು ನಕ್ಕನು. ವೀರೋಚಿತವಾಣಿಯಿಂದ ನುಡಿದನು—

"ಕಟ್ಟಿದ ಕುದುರೆಯನ್ನು ನಾನು ಬಿಡುವವನಲ್ಲ; ಈತನು ನನ್ನ ಸಹೋದರನು; ನಾವು ವಾಲ್ಮೀಕಿ ಮುನಿಯ ಕಡೆಯವರು; ನಿನ್ನನ್ನೂ ನಿನ್ನ ತಮ್ಮಂದಿರಂತೆ ಘಾತಿಸಿದ ಮೇಲೆ ವಿಜಯೋತ್ಸವದಿಂದ ತಾಯಬಳಿಗೆ ಹೋಗಿ ಆಕೆಗೆ ಸಾಷ್ಟಾಂಗವೆರಗಿ ಸುಖವಾಗಿರುವೆವು; ಇದೋ ಕುಶನೆಂಬವನು ನಾನು; ನನ್ನ ಪೌರುಷವನ್ನು ನೋಡು."

ಭರತನ ಮೇಲೆ ಕುಶನ ಸರಳು ನಾಟಿತು. ಭರತನು ಅದನ್ನು ಲೆಕ್ಕಿಸದೆ ಪತ್ಯಸ್ತ್ರಹೂಡಿದನು. ಭರತನ ಬಲವು ಲವಕುಶರನ್ನು ಮುತ್ತಿತು. ಲವನನ್ನು ಕರೆದು ಕುದುರೆಯ ರಕ್ಷಣೆಗೆ ಕಳುಹಿಸಿ, ಕುಶನು ವೈರಿಬಲವನ್ನಿದಿರಿಸಿದನು. ಭರತನ ಮೇಲೆ ಹತ್ತು, ನಳನ ಮೇಲೆ ಎಂಟು. ಹನುಮಂತನ ಮೇಲೆ ಮೂವತ್ತು, ಜಾಂಬವನ ಮೇಲೆ ನಾಲ್ವತ್ತು. ಅಂಗದನ ಮೇಲೆ ತೊಂಬತ್ತು. ನೀಲಕುಮುದರ ಮೇಲೆ ನೂರು ನೂರು, ಗವಯ. ಶತಬಲಿ. ಸುಷೇಣರ ಮೇಲೆ

ಹತ್ತು ಹತ್ತು ಬಾಣಗಳನ್ನು ಎಸೆದು, ಭರತನ ಮೇಲೆ ಕೂರ್ಗಣೆಗಳನ್ನು ಕರೆದನು. ಎಲ್ಲಿ ಕುಶನ ಬಾಣ ನಾಟಿತೋ, ಅಲ್ಲಿ ಮೂರ್ಛೆ ಮರಣಗಳಾದುವು; ಪಡೆಯು ತಲ್ಲಣಿಸಿ ದಿಕ್ಕುದಿಕ್ಕಿಗೆ ಚೆಲ್ಲಿತು; ಬಲಶಾಲಿಗಳಾದ ಕಪೀಶ್ವರರು ಮೈ ಮರೆತರು; ಸಾರಥಿ ಕುದುರೆಗಳು ನಿಂತಲ್ಲಿಯೇ ಕಣ್ಮುಚ್ಚಿದುವು; ತೇರು ಮುರಿಯಿತು. ಭರತನ ಅಂಗೋಪಾಂಗಗಳಲ್ಲಿಯೂ ಹೊಸಮಸೆದ ಕಣೆಗಳು ನಾಟಿದುವು; ಭರತನು ಮೂರ್ಛೆಹೊಂದಿದನು. ಅಷ್ಟರಲ್ಲಿ ಹನುಮಂತನು ಹೆಬ್ಬೆಟ್ಟವೊಂದನ್ನು ಕಿತ್ತು ಎತ್ತಿತಂದು ಕುಶನ ಮೇಲೆ ಎಸೆದನು. ಅದನ್ನು ಆತನು ಗಣಿಸದೆ ಕಪೀಶ್ವರನ ಒಡಲಿಗೂ ಕಣೆಗಳನ್ನು ಕೀಲಿಸಿದನು. ಭರತನ ಸರ್ವಸೇನೆಯನ್ನು ಸೋಲಿಸಿ ಕುಶನು ಗೆಲುವಿನ ಉತ್ಸಾಹದಿಂದ ಲವನಿದ್ದಲ್ಲಿ ಬಂದನು.

ದೂತರು ವೇಗವಾಗಿ ಸಾಗಿಹೋಗಿ ಶ್ರೀರಾಮನಿಗೆ ಈ ಸುದ್ದಿಯನ್ನೂ ತಿಳಿಸಿದರು. ಒಂದರ ಮೇಲೊಂದಾಗಿ ಬರುತ್ತಿರುವ ದುಃಖವಾರ್ತೆಯಿಂದ ರಾಘವನು ಸಂತಾಪಗೊಂಡನು; ವಿಸ್ಮಯವಿಹ್ವಲನಾದನು. ಸುಗ್ರೀವ ವಿಭೀಷಣರನ್ನು ಕೂಡಿಕೊಂಡು ಹೊರಟನು. ರಥಾರೂಢನಾಗಿ ಬಂದು. ರಣರಂಗದಲ್ಲಿ ನಿಂತನು. ಮೈಮರೆತು ಮಲಗಿದ ತಮ್ಮಂದಿರನ್ನೂ, ಮಡಿದ ಸೈನ್ಯವನ್ನೂ ನೋಡಿದನು. ಕುದುರೆಯನ್ನು ಕಟ್ಟಿಹಾಕಿ ಇದಿರಲ್ಲಿಯೇ ಬಿಲ್ಲುಹಿಡಿದು ಕಾಳಗಕ್ಕೆ ಸಿದ್ಧರಾಗಿ ನಿಂತಿದ್ದ ಯಮಳರನ್ನು ಕಂಡು ಬೆರಗಾದನು. ಶ್ರೀರಾಮನು ವಿನಯದಿಂದಲೂ ಮನೋಹರ ಸ್ವರದಿಂದಲೂ ಘನ ಗಂಭೀರ ವಾಕ್ಸರಣಿಯಿಂದಲೂ ಅವರೊಡನೆ ಹೇಳಿದನು—

"ಬಾಲಕರೆ, ನಿಮಗೆ ಈ ಧನುರ್ವೇದವನ್ನು ಕಲಿಸಿದವನು ಯಾವನು? ವಾಸಸ್ಥಳ ಯಾವುದು? ನಿಮ್ಮನ್ನು ಪಾಲಿಸಿದವನಾವನು? ತಂದೆ ಯಾರು? ತಾಯಿ ಯಾವಾಕೆ? ಕುದುರೆಯನ್ನು ಕಟ್ಟುವಂತಹ ಛಲವೇಕೆ? ನಮ್ಮ ಸೇನೆಯನ್ನು ಗೆಲ್ಲುವ ಅದಟು ನಿಮ್ಮಲ್ಲಿ ಎತರಿಂದ ಬಂತು?"

ಕುಶನು ಮಾರ್ನುಡಿದನು—

"ರಾಜೇಂದ್ರ, ನೀನು ನಮ್ಮಲ್ಲಿ ಯುದ್ಧಮಾಡುವರೆ ಸಿದ್ಧನಾಗಿ ಕುದುರೆಯನ್ನು ಬಿಡಿಸಿಕೊ; ಕ್ಷತ್ರಿಯರ ಪೌರುಷವನ್ನು ಬಿಟ್ಟು ಇಂತಹ ನಿಷ್ಪ್ರಯೋಜಕವಾದ ಮಾತುಗಳನ್ನು ಯಾಕೆ ಆಡುತ್ತೀಯೆ? ಯುದ್ಧ ಮಾಡಿನೋಡು."

ಶ್ರೀರಾಮನನ್ನು ಗಣಿಸದೆ ಕುಶನು ಮಾರ್ನುಡಿದನು. ಆದರೂ ರಾಘವನು ತಾಳ್ಮೆಗೆಡಲಿಲ್ಲ. ಸಮಾಧಾನದಿಂದಲೇ ಹೇಳಿದನು—

ಶಿಶುಗಳಾಗಿರುವ ನಿಮ್ಮೊಡನೆ ಯುದ್ಧವೆ? ಮೈಮರೆತು ಬಿದ್ದಿರುವ ತಮ್ಮಂದಿರನ್ನು ಕಂಡು ಖತಿಗೊಂಡು ನಾನು ಬಾಣವನ್ನು ತೊಡುವೆನೆಂದರೆ ಮನಸ್ಸು ಏಕೋ ಒಡಂಬಡದು: ನಿಮ್ಮ ಜನನಸ್ಥಿತಿಗಳನ್ನು ಕೇಳುವ ಕುತೂಹಲವಿದೆ."

ಶ್ರೀರಾಮನ ಹೃದಯಕ್ಕೆ ನಾಟುವಂತಹ ಕರುಣಾಮಯವೂ, ಲೋಕಾನಂದಕರವೂ ಆದ ವಾರ್ತೆಯನ್ನು ಕುಶನು ಹೇಳತೊಡಗಿದನು—

"ಈ ತಪೋವನದಲ್ಲಿ ಸೀತಾದೇವಿಯು ನಮ್ಮಿಬ್ಬರನ್ನು ಅವಳಿ ಮಕ್ಕಳಾಗಿ ಪಡೆದಳು; ವಾಲ್ಮೀಕಿ ಮುನಿಪತಿಯು ಪ್ರತಿನಿತ್ಯವೂ ಪರಿಪಾಲಿಸುತ್ತಾ, ಜಾತೋಪನಯನಾದಿ ಕರ್ಮಗಳನ್ನು ನೆರವೇರಿಸಿ ನಿಗಮಾಗಮ ಸ್ಮೃತಿಗಳನ್ನು ತಿಳಿಸಿ. ಧನುರ್ವಿದ್ಯೆಯನ್ನು ಕಲಿಸಿ. ನೀತಿಗಳನ್ನು ಹೇಳಿ, ರಾಮಾಯಣವನ್ನು ಓದಿಸಿ ಮಹಾತಿಬಲರಾಗುವಂತೆ ಮಾಡಿದನು, ರಾಮ ಚರಿತ್ರಪಠನಾಭ್ಯಾಸದಿಂದ ನಮಗೆ ಕ್ಷೇಮವೂ, ಆರೋಗ್ಯವೂ, ನಿಶ್ಚಲ ಬುದ್ಧಿಯೂ, ನಿರಾಲಸ್ಯವೂ, ಮಹಾಸೈನ್ಯವನ್ನು ಗೆಲ್ಲುವ ಬಾಹುಬಲವೂ ಉಂಟಾಯಿತು."

ಕುಶಲವರು ತನ್ನ ಪುತ್ರರತ್ನಗಳೆಂದು ತಿಳಿದು ಶ್ರೀರಾಮನು ಸಂತೋಷಗೊಂಡನು. 'ಸೀತೆ'ಯೆಂಬ ಮಾತು ಕಿವಿಗೆ ಬಿದ್ದಾಗ ಸಂಕಟದಿಂದ ಮೂರ್ಛೆಗೊಂಡನು. ಮಕ್ಕಳ ಮುಖ ನೋಡಿ ಪ್ರಸನ್ನತೆಯಾದರೆ. ಕೃತಕಾರ್ಯಕ್ಕಾಗಿ ಪಶ್ಚಾತ್ತಾಪವೂ ಒಡನೆ ಉಂಟಾಯಿತು. ಸುಗ್ರೀವನನ್ನು ಕರೆದು ಕೇಳಿದನು—

"ಕಪಿರಾಜ, ಮಕ್ಕಳ ಮಾತನ್ನು ಕೇಳಿದಿಯಾ? ಇವರು ನಿಪುಣರಿದ್ದಾರೆ ಇವರು ಯಾವ ಪುರುಷನಿಗೆ ಸಂಭವಿಸಿದರೊ? ಈ ಕಾಡಾಡಿಗಳನ್ನು ನೀನೊಮ್ಮೆ ವಿಚಾರಿಸುತ್ತೀಯಾ?"

ಸುಗ್ರೀವನು ಮುಗುಳ್ನಕ್ಕನು—

"ದೇವ. ಇವರು ಸೂರ್ಯಕುಲ ಸಂಭೂತರು; ಪುರುಷೋತ್ತಮನ ಸಂತಾನ; ನೋಡಿವರೆ ನಿನ್ನದೇ ರೂಪವಾಗಿದ್ದಾರೆ. ಅಲ್ಲವಾದರೆ ಇವರಿಗೆ ಇಷ್ಟೊಂದು ಶಕ್ತಿ ಎಲ್ಲಿಂದ ಬರಬೇಕು?"

ಸುಗ್ರೀವ ಶ್ರೀರಾಮರು ಹೀಗೆ ಮಾತನಾಡುತ್ತಿರುವಾಗ, ಕಟ್ಟಿದ ಕುದುರೆಯನ್ನು ಬಿಡಿಸಿಕೊಳ್ಳುವ ಆಗ್ರಹದಿಂದ ನೀಲನು ವಿಗ್ರಹಕ್ಕೆ ಮುಂದೊತ್ತಿ ಬರಲು, ಕುಶನು ಕೋಪದಿಂದ ಅವನ ಮೇಲೆ ಸರಳ ಮಳೆ ಸುರಿಸಿದನು. ಅವನ ನೇತ್ರರಿಂದ ಉಗ್ರರೂಪದ ಕೋಟಿಸಂಖ್ಯೆಯ ನೀಲರುದ್ಭವಿಸಿ ಮರ, ಕೊಂಬೆ, ಬೆಟ್ಟ. ಕಲ್ಲುಂಡಗೊಂಡು ಸುತ್ತಲೂ ಮುತ್ತಿ ಬಂದರು. ನೀಲ ಕಪಿಕೋಟಿಯು ಮುತ್ತಿಗೆಯನ್ನು ನೋಡಿ ಕುಶನು ಸೂರ್ಯನನ್ನು ಆರಾಧಿಸಿ, ಅಕ್ಷಯ ಬಾಣ

ಗಳನ್ನು ಪಡೆದನು. ಆ ಬಾಣಗಳಿಂದ ನೀಲಕೋಟಿಯನ್ನು ಕಡಿದುರುಳಿಸಿ, ಮೂಲ ನೀಲನನ್ನೂ ಸುಗ್ರೀವನೇ ಮೊದಲಾದ ವಾನರ ಸೇನಾಪತಿಗಳನ್ನೂ ಮೂರ್ಛೆಗೊಳಿಸಿದನು. ವಿಭೀಷಣನ ಸಾಮರ್ಥ್ಯವನ್ನು ನಿಲಿಸಿದನು. ಅವನ ಕಕ್ಕಸರಕ್ಕಸ ಪಡೆಯನ್ನು ದಿಕ್ಕುಗೆಡಿಸಿದನು.

ರಾಮ ಸೇನೆಯಲ್ಲಿ ಒಬ್ಬರೂ ಉಳಿಯಲಿಲ್ಲ. ತಾನು ಏಕಾಕಿಯಾದು ದನ್ನು ಕಂಡು ಶ್ರೀರಾಮನು ಖತಿಗೊಂಡನು. ಮಕ್ಕಳ ಮೇಲೆ ರಾಘವನು ಬಾಣಗಳನ್ನು ಎಚ್ಚನು. ವ್ಯರ್ಥವಾಗದ ರಾಮಬಾಣಗಳನ್ನು ಕುಶನು ನುಚ್ಚು ನೂರಾಗಿ ಕತ್ತರಿಸಿ, ಕಣೆಗಳಿಂದ ಆತನ ಶರೀರವನ್ನು ಮುಚ್ಚಿದನು. ಪುನಃ ಕೆರಳಿ ಕುಶಲವರ ಮೇಲೆ ಬಾಣಗಳನ್ನು ಬಿಡಲು ಅದನ್ನವರು ಮಧ್ಯ ಮಾರ್ಗ ದಲ್ಲಿಯೇ ಖಂಡಿಸಿ, ರಾಮನನ್ನು ನೋಯಿಸಿದರು. ಹೀಗೆ, ತಂದೆ ಮಕ್ಕಳಿಗೆ ಆಶ್ಚರ್ಯಕರವಾದ ಮಹಾ ಸಂಗ್ರಾಮವು ನಡೆಯಿತು. ದೇವತೆಗಳು ಬೆರಗಾಗಿ ನೋಡಿದರು. ರಾವಣ ಕುಂಭಕರ್ಣಾದಿ ಕರ್ಕಶ ರಾಕ್ಷಸರ ತಲೆಗಡಿದು ಮರಳಿ ಬಂದ ರಾಮಬಾಣಗಳೂ ಇಕ್ಕಡಿಯಾಗಿ ಬಿದ್ದುವು. ಬಾಲಕರ ಇಸುಗೆಯು ಶ್ರೀರಾಮನ ಇಸುಗೆಯನ್ನು ಮೀರಿ ಬರುತ್ತಿತ್ತು. ಇದನ್ನು ನೋಡಿ ಶ್ರೀರಾಮನು ಬೆರಗಾಗಿ ತುಸು ಹೊತ್ತು ಸುಮ್ಮನೆ ನಿಂತಿದ್ದನು. ಅಷ್ಟರಲ್ಲಿ ತನ್ನ ಪುತ್ರರ ಮೇಲೆ ಶ್ರೀರಾಮನಿಗೆ ಪ್ರೀತಿಯುಂಟೇ ಇಲ್ಲವೇ ಎಂಬುವನ್ನು ಪರೀಕ್ಷೆ ಮಾಡಲೋ ಎಂಬಂತೆ ಆತನ ಒಡಲನ್ನು ಲವಕುಶರ ಬಾಣಗಳು ಹೊಕ್ಕವು. ಶ್ರೀರಾಮನು, ಶರೀರದಿಂದ ಹರಿದು ಹೋಗುತ್ತಿರುವ ರುಧಿರ ಪ್ರವಾಹಕ್ಕೆ ಕಂಗಾಲಾಗಿ ಮೆಲ್ಲನೆ ರಥದ ಮೇಲೆ ಮೈಮರೆತು ಮಲಗಿದನು. ಬಾಲಕರ ಅದ್ಭುತ ಪರಾಕ್ರಮವನ್ನು ಕಂಡು ಮೆಚ್ಚಿ ದೇವತೆಗಳು ಪುಷ್ಪವೃಷ್ಟಿ ಸುರಿಸಿದರು. ದೇವದುಂದುಭಿ ಮೊಳಗಿತು.

ಲವಕುಶರು, ಮೂರ್ಛಿತರಾದ ರಾಘವನಲ್ಲಿಗೆ ಬಂದು ಶ್ರೀರಾಮನ ಶುಭಾಕಾರವನ್ನು ನೋಡಿ, ಸಿರಿಮೊಗದ ಮಣಿಕುಂಡಲಗಳನ್ನೂ, ಕಂಬುಕಂಠದ ಏಕಾವಳಿಯ ಹಾರವನ್ನೂ ತೆಗೆದುಕೊಂಡು ಲಕ್ಷ್ಮಣ ಭರತ ಶತ್ರುಘ್ನರ ಭೂಷಣಾ ವಳಿಗಳನ್ನು ಕಳಚಿ, ಒಂದು ವಸ್ತ್ರದಲ್ಲಿ ಕಟ್ಟಿಕೊಂಡರು.

"ಅಣ್ಣಾ, ಈ ರಥಗಳಲ್ಲಿನ ಒಂದು ರಥವನ್ನೇರಿ. ಯುದ್ಧದಲ್ಲಿ ಎಚ್ಚರ ಗೊಂಡಿರುವ ವೀರರ ಜುಟ್ಟು ಹಿಡಿದು ಎಳತರುತ್ತೇನೆ."

ಲವನು ಕುಶನೊಡನೆ ಹೀಗೆಂದು ಹೇಳಿ, ಲಕ್ಷ್ಮಣನ ಹೊಂದೇರನ್ನೇರಿ. ಯುದ್ಧಭೂಮಿಯಲ್ಲಿ ಎಚ್ಚರಗೊಂಡಿರುವವರ ಜುಟ್ಟು ಹಿಡಿದು ಎಳೆದುತರುವೆ

ನೆಂದು ಸುತ್ತಾಡುತ್ತಿರಲು. ಕಾಳಗದಲ್ಲಿ ಗಾಯಗೊಂಡು ಮೈಮರೆಯದೆ ಉಳಿದಿದ್ದ. ಹನುಮಂತನು ಜಾಂಬವನೊಡನೆ ಪಿಸುಮಾತನಾಡಿದನು.

"ಜಾಂಬವರೇ, ನೋಡಿದಿರೇ? ರಾಮಾದಿವೀರರನ್ನು ಉರುಳಿಸಿದ ಮೇಲೆ, ಯುದ್ಧದಲ್ಲಿ ಉಸಿರು ಹಿಡಿದಿರುವವರನ್ನು ಮಂಡೆಹಿಡಿದು ಎಳೆದೊಯ್ಯುವೆನೆಂದು ಸೀತಾಸುತನು ಬರುತ್ತಿದ್ದಾನೆ. ನಾವು ಇವನೊಡನೆ ಹೋರಾಡಲಾರೆವು; ನಮ್ಮನ್ನು ಈ ಹುಡುಗನು ಜಾನಕಿಯಲ್ಲಿಗೆ ಹಿಡಿದುಕೊಂಡು ಹೋಗಲಿ. ದೇವಿಯಾದರೂ ದಯೆಯಿಂದ ತನ್ನ ಭಕ್ತರೆಂದು ನಮ್ಮನ್ನು ಪಾಲಿಸುವಳು; ಇಲ್ಲವಾದರೆ ಅವಳಿಷ್ಟಬಂದಂತೆ ಮಾಡಲಿ."

ಲವನು ಸುತ್ತು ಹುಡುಕಾಡಿದನು; ಯುದ್ಧದಲ್ಲಿ ಎಲ್ಲರೂ ಬಿದ್ದಿದ್ದರು; ಯಾರಿಗೂ ಎಚ್ಚರವಿರಲಿಲ್ಲ; ಅಷ್ಟರಲ್ಲಿ ಹನುಮಂತ ಜಾಂಬವರು ಮಾತಾಡುವುದು ಕೇಳಿಸಿತು. ಇವರಿಬ್ಬರನ್ನೂ ಲವನು ಕಂಡನು. ಅವರನ್ನು ಹಿಡಿದು ಎಳೆದು ತಂದನು. "ಇವರು ಕೌತುಕದ ಕಪಿಗಳು" ಎಂದು ಅಣ್ಣನಿಗೆ ತೋರಿಸಿದನು. ಕುಶನು ಮೆಚ್ಚಿ ತಮ್ಮನನ್ನು ಅಪ್ಪಿಕೊಂಡನು. ಆ ಮೇಲೆ ಆ ಕಪಿಗಳಿಬ್ಬರನ್ನೂ, ಆಭರಣಗಳನ್ನೂ, ತೆಗೆದುಕೊಂಡು ಬಾಲಕರು ಆಶ್ರಮಕ್ಕೆ ಬಂದರು. ಮಕ್ಕಳೇನಾದರೋ, ಎಂದು ಚಿಂತಿಸುತ್ತಿದ್ದ ಜಾನಕಿಗೆ ಕುಶಲವರು, ರಾಮಾದಿಗಳ ಭೂಷಣಗಳನ್ನೂ. ಕಾಡಿನ ಬೇಟೆಯಲ್ಲಿ ಸಿಕ್ಕಿ ಕಂಗಾಲಾದ ಮೃಗಶಿಶುಗಳಂತೆ ಮೌನದಿಂದ ಮೈಮುದುಡಿಕೊಂಡಿರುವ ಎಳತಂದ ಕಪಿಶ್ರೇಷ್ಠರನ್ನೂ ತಂದು ಕಾಣಿಕೆಯಿತ್ತು ತಾಯಿಯ ಅಡಿಗಳಿಗೆ ಸಾಷ್ಟಾಂಗವೆರಗಿದರು.

ಸೀತೆ ಈ ದೃಶ್ಯವನ್ನು ಕಂಡಂ ನಡುಗಿದಳು !

"ಮಕ್ಕಳಿರ ! ನೀವು ಎಂತಹ ಘೋರಕರ್ಮಗಳನ್ನು ಮಾಡಿದಿರಿ; ಯಾರೂ ತಿಳಿಯದಂತೆ ನಾನು ಈ ಕಾನನದಲ್ಲಿದ್ದೆನು. ನಮಗೆ ರಾಜರ ಭೂಷಣಗಳೇಕೆ? ಇವರಿಬ್ಬರು ಲೋಕದಲ್ಲಿ ವೀರರಾದ ಕಪಿವರರು; ಬಹಳ ಅಭಿಮಾನವುಳ್ಳವರು. ಇವರಿಗೆ ಈ ರೀತಿ ಅಪಮಾನವೇಕೆ ಮಾಡಿದಿರಿ? ತಪ್ಪು ಕೆಲಸ ಮಾಡಿದಿರಲ್ಲಾ ! ವಾಲ್ಮೀಕಿಮುನಿ ಈಗ ಬರುವನು; ಬಂದರೆ ಅವನೇನೆಂದಾನು? ಇವರನ್ನು ಯುದ್ಧ ಭೂಮಿಯಲ್ಲಿಯೇ ಇರಿಸಿಬನ್ನಿರಿ".

ಮಾತೆಯು ಮಾತಿನಂತೆ ಲವನು ಅವರನ್ನು ಒಯ್ದು ಪುನಃ ರಣಭೂಮಿಯಲ್ಲಿರಿಸಿ ಬಂದನು. ನಾರದ ಮುನಿಯ ಮೂಲಕ ತಪೋವನದಲ್ಲಿ ನಡೆದ ಸಂಗತಿಗಳನ್ನೆಲ್ಲಾ ಕೇಳಿದ ವಾಲ್ಮೀಕಿಯುಂ ಪಾತಾಳಲೋಕದಿಂದ ತಕ್ಷಣ ಬಂದನು.

ಆಶ್ರಮದ್ವಾರದಲ್ಲಿಯೇ ಋಷಿಯನ್ನು ಸಂದರ್ಶಿಸಿ ಸೀತೆ ವಂದಿಸಿದಳು. ಎಲ್ಲರೂ ಮಣಿದರು; ಕುಶಲವರು ಸಾಷ್ಟಾಂಗವೆರಗಿದರು.

ವಾಲ್ಮೀಕಿಯು ಮಕ್ಕಳನ್ನು ಎತ್ತಿಕೊಂಡನು.

"ಮಕ್ಕಳೇ, ನಿಮಗೆ ಶ್ರೀರಾಮನ ಸೇನೆಯೊಡನೆ ಕಲಹವಾಯಿತಂತೆ: ಜಗಳವಾಗಲು ಕಾರಣವಾದರೂ ಏನು? ನಿಮ್ಮೊಡನೆ ಯುದ್ಧಹೂಡಿ ಯಾರು ಬಿದ್ದರು? ನಿಮ್ಮ ಮೇಲೆ ಶತ್ರುಗಳ ಸರಲಗಾಯಗಳೊಂದೂ ಕಾಣಿಸದು; ಎಂತಹ ಪರಾಕ್ರಮ ನಿಮ್ಮದು".

ಕುಶನು ಅಂಜುತ್ತಾ ನಡೆದ ಘಟನೆಯನ್ನು ಸೂಕ್ಷ್ಮವಾಗಿ ತಿಳಿಸಿದನು—

"ತಂದೆ ! ನೀವಿರಲು ನಮಗೆ ಎಂದೆಂದೂ ಕ್ಷೇಮವಾಗುವುದು ನಿಶ್ಚಯ; ನಿಮ್ಮ ಉಪದೇಶದಿಂದ ಶತ್ರುಗಳನ್ನು ಗೆದ್ದೆವು. ಈ ನಿಮ್ಮ ಪುಣ್ಯಾಶ್ರಮದಲ್ಲಿ ಪ್ರಾಣಿಹಿಂಸೆ ನಡೆದುಹೋಯಿತು; ಇಲ್ಲಿಗೆ ಒಂದು ಕುದುರೆ ಬಂದಿತ್ತು; ಅದನ್ನು ಲವನು ಕಟ್ಟಿಹಾಕಿದನು. ಅವನ ಮೇಲೆ ಮಂದಿ ಮುತ್ತಿಗೆ ಹಾಕಿತು. ಶತ್ರುಘ್ನನು ಹೋರಾಡಿದನು. ಬಳಿಕ ಲಕ್ಷ್ಮಣಭರತರಾಮಾದಿಗಳು ಬಂದರು. ಮತ್ತೇನು ಹೇಳಲಿ? ಹೋರಾಡಿದ ರಾಜರೆಲ್ಲರನ್ನೂ, ಇದಿರಾದ ರಾಕ್ಷಸನರವಾನರ ಚತುರ್ಬಲವನ್ನೂ ನಾವು ಗೆದ್ದೆವು".

ಕುಶನ ಕೌತುಕದ ಕಥನವನ್ನು ಕೇಳಿ ಋಷಿ ಚಕಿತನಾದನು. ಮನಸ್ಸಿನಲ್ಲಿಯೇ ವಾಲ್ಮೀಕಿ ನೊಂದುಕೊಂಡನು: 'ತಪ್ಪಾಯಿತಲ್ಲಾ' ಎಂದನು. ನಡುಗುತ್ತಿರುವ ಸೀತೆಯನ್ನು ಸಂತೈಸಿದನು. ಬೇಗನೇ, ಮುನಿಸಮೂಹ ಸಹಿತ ಸಂಗ್ರಾಮ ಭೂಮಿಗೆ ನಡೆತಂದನು. ಕಡಿದುಬಿದ್ದ ಹಸ್ತ್ಯಶ್ವ ರಥಪದಾತಿಗಳನ್ನೂ, ಮಡಿದು ಬಿದ್ದ ರಾಕ್ಷಸ ನರವಾನರ ಸೇನೆಯನ್ನೂ, ಮೈಮರೆತು ಬಿದ್ದ ಶ್ರೀರಾಮರಾಮಾನುಜರನ್ನೂ ವಾಲ್ಮೀಕಿಯು ಕಂಡನು. ಕಮಂಡಲೋದಕದಿಂದ ಪ್ರೋಕ್ಷಿಸಿದನು. ಶೇಷಶಯನದಿಂದ ಏಳುವ ಮಹಾವಿಷ್ಣುವಿನಂತೆ ಶ್ರೀರಾಮನು ಎದ್ದು ಇದಿರಲ್ಲಿ ಮಹರ್ಷಿಯನ್ನು ನೋಡಿ ಅಭಿವಂದಿಸಿದನು. ವಾಲ್ಮೀಕಿಯು ಶ್ರೀರಾಮಸ್ತುತಿಗೈದನು. ಶ್ರೀರಾಮನ ಸಿರಿಮುಡಿಗೆ ಅರಳಮಳೆ ಸುರಿಯಿತು. ಸುರದುಂದುಭಿ ಮೊಳಗಿತು. ಋಷಿಯ ಮಂತ್ರಜಲದಿಂದ ಭರತಾದಿಗಳು ಎಚ್ಚೆತ್ತರು. ದೇವತೆಗಳು ಅಮೃತಸೇಚನಮಾಡಲು ಮಡಿದ ಸಕಲ ಸೇನೆಯೂ ಸಜೀವವಾಯಿತು.

ವಾಲ್ಮೀಕಿಯು ಕಾಮಧೇನುವನ್ನು ಬರಿಸಿದನು: ಬೇಕಾದ ವಸ್ತುಗಳನ್ನು ತರಿಸಿದನು. ಶ್ರೀರಾಮನಿಗೆ ದುಗ್ಧಾಭಿಷೇಕವನ್ನು ಮಾಡಿಸಿದನು. ಆತನನ್ನು

ಕೊಂಡಾಡಿ ಕುಶಲವರನ್ನು ಶ್ರೀರಾಮನ ಪಾದಗಳಿಗೆ ಸಾಷ್ಟಾಂಗವೆರಗಿಸಿ ಬಿನ್ನೈಸಿದನು.

"ದೇವ, ಈ ಮಕ್ಕಳ ಮೇಲೆ ಕೋಪವನ್ನು ಮಾಡದಿರು; ನೀನು ಮರೆ ಹೊಕ್ಕವರನ್ನು ಕಾಪಾಡುವವನು. ಈ ಪುತ್ರರು ನಿನ್ನವರು. ಜಾನಕಿಯ ಶಿಶುಗಳು ಏನೋ ತಿಳಿಯದೆ ತಪ್ಪಿ ನಡೆದಿದ್ದಾರೆ. ನಾನು ಆಶ್ರಮದಲ್ಲಿ ಇರಲಿಲ್ಲ. ಯಾಗಕ್ಕಾಗಿ ವರುಣನು ಕರೆಸಲು ನಾನು ಹೋಗಿದ್ದೆನು, ಇದೊಂದನ್ನೂ ನಾನು ತಿಳಿಯೆನು. ಎಷ್ಟು ಅಪರಾಧ ಮಾಡಿದರೂ ಸೈರಿಸಬೇಕು; ಇವರನ್ನು ಸ್ವೀಕರಿಸಬೇಕು."

ವಾಲ್ಮೀಕಿಯು ನಾನಾ ವಿಧವಾಗಿ ಶ್ರೀರಾಮನೊಡನೆ ಬೇಡಿಕೊಂಡನು. ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬಂದ ಸುದ್ದಿಯನ್ನು ಲಕ್ಷ್ಮಣನಿಂದಲೂ, ಆ ಮೇಲಿನ ವಾರ್ತೆಯನ್ನು ವಾಲ್ಮೀಕಿಯ ಮುಖದಿಂದಲೂ ಶ್ರೀರಾಮನು ಕೇಳಿ ತಿಳಿದನು. ಋಷಿಯು, ಆಶ್ರಮದಿಂದ ವೀಣೆಯನ್ನು ತರಿಸಿ, ರಮ್ಯರಾಮಾಯಣವನ್ನು ಕುಶಲವರಿಂದ ಹಾಡಿಸಿದನು. ಶ್ರೀರಾಮನು ಅದನ್ನು ಕೇಳಿ ಮಕ್ಕಳನ್ನು ಮೆಚ್ಚಿ ಕೊಂಡಾಡಿದನು. ಮುನಿಯ ಮಾತಿನಂತೆಯೂ, ಲಕ್ಷ್ಮಣನ ಸಮ್ಮತಿಯಂತೆಯೂ ಕುಶಲವರನ್ನು ಸ್ವೀಕರಿಸಿದನು. ಪ್ರಿಯಪುತ್ರಲಾಭಸಂತುಷ್ಟನಾದ ಶ್ರೀರಾಮನು ಲವಕುಶರನ್ನು ತೆಗೆದು ಮುಂಡಾಡಿ ಬಿಗಿಯಪ್ಪಿ, ಶಿರವನ್ನು ಅಘ್ರಾಣಿಸಿ. ಚುಂಬಿಸಿದನು. ಆನಂದ ಸಾಗರದಲ್ಲಿ ಮುಳುಗಿದನು. ವಾಲ್ಮೀಕಿಯೊಡನೆ ಹೀಗೆಂದನು—

"ಮಹರ್ಷಿಯೆ, ಸೀತೆ ಪರಿಶುದ್ಧೆಯೆಂದು ನಾನು ಬಲ್ಲೆನು. ಲೋಕಾಪವಾದಕ್ಕೆ ಹೆದರಿ ನಾನವಳನ್ನು ಕಳೆದುಕೊಂಡೆನು. ಸತ್ಪುತ್ರರನ್ನು ಆಕೆ ಪಡೆದಳು. ಇನ್ನು ತಡಮಾಡದೆ ಅವಳನ್ನು ನನ್ನ ಬಳಿಗೆ ಕಳುಹಿಸಿಕೊಡು."

ರಾಘವನು ಸುತಸಹೋದರರೊಡನೆ ದಳಸಹಿತ, ಕುದುರೆಯನ್ನು ಕೂಡಿಕೊಂಡು ಅಯೋಧ್ಯೆಗೆ ಮರಳಿದನು. ಮೂರು ಲೋಕವೂ ಮೆಚ್ಚುವಂತೆ ಅಶ್ವಮೇಧಯಾಗವು ನೆರವೇರಿತು.

ಮಕ್ಕಳನ್ನು ತಂದೆಯೊಡನೆ ಕಳುಹಿಸಿ ಕೊಟ್ಟು ವಾಲ್ಮೀಕಿ ಆಶ್ರಮಕ್ಕೆ ಮರಳಿದನು. ವಾಲ್ಮೀಕಿಯ ಜತೆಯಲ್ಲಿ ತನ್ನ ಮಕ್ಕಳನ್ನು ಕಾಣದೆ ಸೀತೆ ಭೀತೆಯಾದಳು.

"ತಾತ ! ನನ್ನ ಮಕ್ಕಳು ಏನಾದರು? ಅವರನ್ನು ಬಿಟ್ಟು ನಾನೆಂತು ಬದುಕುವೆನೊ? ಹೆತ್ತ ಮೊದಲ್ಗೊಂಡು ಪತಿವಿರಹವನ್ನೂ ಮರೆತು ಪುತ್ರರ

ಮಮತೆಯಿಂದ ದೇಹ ಹಿಡಿದಿರುವೆನಲ್ಲಾ! ನನ್ನ ಮಕ್ಕಳನ್ನು ಯಾರ ಕೈಗೆ ಕೊಟ್ಟು ಬಂದೆಯೋ ತಂದೆ!"

—ವಾಲ್ಮೀಕಿಯ ಪಾದಗಳಿಗೆ ಬಿದ್ದು ಸೀತೆ ಬೇಡಿಕೊಂಡಳು.

"ಮಗಳೆ! ನಿನ್ನ ಮಕ್ಕಳನ್ನು ಅವರ ತಂದೆಯೇ ಕರೆದುಕೊಂಡು ಹೋದನು. ಇನ್ನು ಚಿಂತಿಸಬೇಡ; ನಿನ್ನನ್ನೂ ಪತಿಯ ಬಳಿಗೆ ಕಳುಹಿಸಿ ಕೊಡುವೆನು."

ಇಂತು ಸೀತೆಯನ್ನು ಒಡಂಬಡಿಸಿ, ಮಣಿರಥವನ್ನೇರಿಸಿ ವಾಲ್ಮೀಕಿಯು ಅಯೋಧ್ಯಾಪುರಕ್ಕೆ ಕರೆತಂದು ಶ್ರೀರಾಮನಿಗೊಪ್ಪಿಸಿದನು. ಮುಂದೆ, ಜಾನಕಿ ಸಹಿತ ರಾಘವನು ಬಹುಕಾಲ ಸುಖಸಾಮ್ರಾಜ್ಯಲೋಲನಾಗಿರ್ದನು.

೧೧

ಭೀಮಸೇನನನ್ನು ಗಜನಗರಿಗೆ ಕಳುಹಿಸಿ, ಶ್ರೀಕೃಷ್ಣನು ನರನ ನೆರವಿಗೆ ನಿಂತನು. ಬಭ್ರುವಾಹನನ ಅತುಲಬಲದ ಬೆಂಬಲದೊಡನೆ ಅರ್ಜುನನು ಯಜ್ಞಾಶ್ವವನ್ನು ಹಿಂಬಾಲಿಸಿದನು. ಮಣಿಪುರದಿಂದ ಹೊರಟ ಕುದುರೆಯು ದೇಶದೇಶಗಳನ್ನು ಸಂಚರಿಸುತ್ತಾ ತಿರುಗಲಾರಂಭಿಸಿತು.

ಅಷ್ಟರಲ್ಲಿ ಶರತ್ಕಾಲವು ಸಮೀಪಿಸಿತು. ರಾಜಹಂಸಗಳು ಸಂಚರಿಸ ತೊಡಗಿದುವು. ನದಿಗಳ ಉಬ್ಬರವು ನಿಂತು ಸ್ವಚ್ಛಸಲಿಲಸ್ರೋತವು ಹರಿಯ ತೊಡಗಿತು. ಆಕಾಶ ಬಿಳುಪಾಯಿತು; ನಕ್ಷತ್ರಗಳು ಮಿನುಗಿದುವು; ಹರಿಯ ತೊಡಗಿತು. ಆಕಾಶ ಬಿಳುಪಾಯಿತು; ನಕ್ಷತ್ರಗಳು ಮಿನುಗಿದುವು: ಸೂರ್ಯ ಚಂದ್ರರ ಕಿರಣಗಳು ನಿರ್ಮಲವಾದುವು; ತುಂಬಿಗಳು ತಾವರೆ ಹೂಗಳನ್ನು ಹುಡುಕಿದುವು: ಪರ್ವತಗಳು ಪ್ರಾಕೃತಿಕ ಶೋಭೆಯಿಂದ ಮೆರೆದುವು. ಇಂತಹ ಸುಂದರಶರತ್ಕಾಲದಲ್ಲಿ ಯಜ್ಞತುರಗವು ಭೂಮಿಯ ಮೇಲೆ ಸುಖಸಂಚಾರ ಮಾಡುತ್ತಾ, ರತ್ನಪುರವೆಂಬ ಪಟ್ಟಣವನ್ನು ಪ್ರವೇಶಿಸಿತು.

ರತ್ನಪುರವೆಂಬಾಪಟ್ಟಣಕ್ಕೆ ಮಯೂರಧ್ವಜನೆಂಬವನು ಅರಸನಾಗಿದ್ದನು. ಆ ರಾಜನು ಹಿಂದೆ ಸಪ್ತಾಶ್ವಮೇಧಗಳನ್ನು ಮಾಡಿ, ನರ್ಮದಾನದಿಯ ತಟದಲ್ಲಿ ಯಾಗಮಂಟಪ ರಚಿಸಿ ಅಷ್ಟಮಯಜ್ಞಕ್ಕೆ ದೀಕ್ಷಿತನಾಗಿ ಕುಳಿತಿದ್ದನು. ಆತನ ಮಗನಾದ ತಾಮ್ರಧ್ವಜನ ರಕ್ಷಣೆಯಲ್ಲಿ ಮಯೂರಧ್ವಜನ ಯಜ್ಞಾಶ್ವವು

ಭೂಸಂಚಾರಕ್ಕಾಗಿ ಹೊರಟುಬಂದಿತ್ತು. ಮಧ್ಯಮಾರ್ಗದಲ್ಲಿ ಉಭಯಹಯಗಳು ಸಂಧಿಸಿದುವು. ಒಂದನ್ನೊಂದು ನೋಡಿ ಹೇಷಾರವಗೈದುವು. ಹತ್ತಿರಕ್ಕೆ ಬಂದು ಒಂದರ ಮುಖವನ್ನು ಇನ್ನೊಂದು ಮೂಸಿದುವು. ಕಿವಿಗಳನ್ನು ನಿಗುರಿಸಿದುವು. ಪರಸ್ಪರ ಪ್ರೀತಿಯಿಂದ ನಲಿದಾಡಿದುವು. ಆ ಕುದುರೆಗಳು ಕಿವಿಗಳನ್ನು ಕೊಡಹುತ್ತಾ, ಮುಂಗಾಲುಗಳಿಂದಪ್ಪಳಿಸಿ, ಹಿಂಗಾಲುಗಳಿಂದ ನೆಲವನ್ನು ಕೆರೆಯುತ್ತಾ, ಕಡಿದು ಕಚ್ಚುತ್ತಾ, ಗೊರಸುಗಳಿಂದ ಬಡಿದು ಕೊನೆಗೆ ಮೈಮೇಲೆ ಹಾಕಿದ್ದ ಮುತ್ತು ಮಾಣಿಕ್ಯಗಳ ಭೂಷಣಗಳನ್ನು ಹರಿದಿಕ್ಕಿ ನಿಂತುಕೊಂಡಿದ್ದುವು.

ತಾಮ್ರಧ್ವಜನ ಮಂತ್ರಿ ನಕುಲಧ್ವಜನೆಂಬವನು ಕುದುರೆಗಳ ಕುಣಿತಗಳನ್ನು ಕಂಡನು. ಇದಾವ ನೂತನತುರಗವೆಂದು ಚರರನ್ನು ಅಟ್ಟಿ ತರಿಸಿದನು. ಅದರ ಹಣೆಯ ಲಿಖಿತವನ್ನೋದಿ, ಯುಧಿಷ್ಠಿರಭೂಪತಿಯ ಬಿರುದುಗಳನ್ನು ಒಡೆಯನಿಗೆ ವಿಸ್ತರಿಸಿ ತಿಳಿಸಿದನು. ಅದನ್ನು ಕೇಳಿ ಕೋಪಗೊಂಡು ತಾಮ್ರಧ್ವಜನು, ಅರ್ಜುನನ ಹಯವನ್ನು ಕಟ್ಟಿಹಾಕಿಸಿ, ತನ್ನ ಸೇನೆಯನ್ನು ಅರ್ಧಚಂದ್ರಾಕೃತಿಯಲ್ಲಿ ನಿಲ್ಲಿಸಿದನು.

"ಹಿಂದೆ ಏಳು ಯಜ್ಞವು ಕೃಷ್ಣವರ್ಜಿತವಾಗಿ ನಡೆದುವು. ಈ ಸಲದ ಯಜ್ಞವು ಕೃಷ್ಣಸಹಿತ ಆಗಲಿದೆ. ಲೋಕವಿಖ್ಯಾತವೀರರಾದ ಪಾಂಡವರೊಡನೆ ಯುದ್ಧವೊದಗಲಿದೆ. ಆ ಮೇಲೆ ದೇವರ ದರ್ಶನವಾಗುವುದು."

—ಹೀಗೆಂದು ಮನಸ್ಸಿನಲ್ಲಿಯೇ ತಾಮ್ರಧ್ವಜನು ಉಬ್ಬಿಕೊಂಡನು. ಅರ್ಜುನನೊಡನೆ ಯುದ್ಧಕ್ಕೆ ಸನ್ನದ್ಧನಾದನು.

ತಾಮ್ರಧ್ವಜನು ಕುದುರೆಯನ್ನು ಕಟ್ಟಿಹಾಕಿ, ಅರ್ಧಚಂದ್ರಾಕೃತಿಯಲ್ಲಿ ಸೇನೆಯನ್ನು ಸಜ್ಜುಗೊಳಿಸಿ ಯುದ್ಧಕ್ಕೆ ಸಿದ್ಧನಾಗಿರುವುದನ್ನು ಶ್ರೀಕೃಷ್ಣನು ನೋಡಿದನು. ಅರ್ಜುನನೊಡನೆ, ಈತನು ಮಯೂರಧ್ವಜನ ಪುತ್ರನು. ಮಾತ್ಸರ್ಯವಿರಹಿತನು, ಮಹಾಧೀರನು, ಸತ್ಯವಾದಿಯು, ಶುಚಿಯು, ವೈಷ್ಣವನು: ಇವನೊಡನೆ ಯುದ್ಧಮಾಡುವುದು ಸುಲಭವಲ್ಲ. ಇವನ ತಂದೆ ನರ್ಮದಾತೀರದಲ್ಲಿ ಅಶ್ವಮೇಧದೀಕ್ಷಿತನಾಗಿರುವನು, ಎಂದು ತಿಳಿಸಿ ಪಾಂಡವಸೈನ್ಯವನ್ನು ರಣಹದ್ದಿನಾಕಾರದಲ್ಲಿ ನಿಲ್ಲಿಸಿ ಅದರ ಮುಂಗಡೆ ಅನುಸಾಲ್ವನನ್ನೂ, ಕಣ್ಣುಗಳಲ್ಲಿ ನೀಲಧ್ವಜ-ಹಂಸಧ್ವಜರನ್ನೂ, ಎರಡು ಪಕ್ಕಗಳಲ್ಲಿ ಪ್ರದ್ಯುಮ್ನ-ಅನಿರುದ್ಧರನ್ನೂ, ಪಾದದಬಳಿ ಭೋಜ-ಸಾತ್ಯಕಿಗಳನ್ನೂ, ಬಾಲದ ಗರಿಯಕಡೆ ಮೇಘನಾದ-ಯೌವನಾಶ್ವರನ್ನೂ ಜೋಡಿಸಿದನು. ವ್ಯೂಹದ ಚಂಚುಸ್ಥಾನದಲ್ಲಿ ಬಭ್ರುವಾಹನ-ವೃಷಧ್ವಜರನ್ನೂ ಇರಿಸಿ, ಉಳಿದ ಭಟರನ್ನು ಅದರ ದೇಹದ ಅವಯವದೆಡೆಗಳಲ್ಲಿ

ನೆಲೆಗೊಳಿಸಿ, ಹೃದಯದಲ್ಲಿ ಚತುರಂಗಬಲಸಹಿತ ಅರ್ಜುನನನ್ನು ನಿಲ್ಲಹೇಳಿ ದಾರುಕಸಹಿತನಾಗಿ ಶ್ರೀಕೃಷ್ಣನು ರಥವನ್ನೇರಿ ಶತ್ರುಗಳ ಹೃದಯವನ್ನು ಭೇದಿಸುವಂತೆ ಪಾಂಚಜನ್ಯವನ್ನು ಮೊಳಗಿಸಿದನು,

ಪಾಂಚಜನ್ಯದ ಮೊಳಗನ್ನು ಕೇಳಿ ತಾಮ್ರಧ್ವಜನು ಹಿಗ್ಗಿದನು; ಪುಲಕಿತ ಕಾಯನಾದನು. ಶ್ರೀಕೃಷ್ಣನಿಗೆ ಇದಿರಾಗಿ ಬಂದುನಿಂತು—

"ದೇವ, ನಾನು ಸಿದ್ಧನಾಗಿ ಬಂದಿದ್ದೇನೆ. ಕಿರೀಟಿಯ ಕುದುರೆಯನ್ನು ಕಟ್ಟಿಹಾಕಿರುವೆನು. ನೀನು ಅದನ್ನು ಬಿಡಿಸು; ಫಲ್ಗುಣನನ್ನು ಪಾಲಿಸುವರೆ ನಿನ್ನ ಚಕ್ರವನ್ನು ತೊಡು. ಶಾಂರ್ಜವನ್ನು ಹಿಡಿ. ನಾನು ಎಂತಾದರೂ ಹಿಮ್ಮೆಟ್ಟುವವನಲ್ಲ. ನನ್ನ ಕುದುರೆಯನ್ನು ಶೌರ್ಯವಿದ್ದರೆ ತಡೆದು ನಿಲ್ಲಿಸು."

—ಎಂದು, ಶೌರಿಯ ಮೇಲೆ ಮೂರು, ದಾರುಕನಿಗೆ ಐದು, ರಥಾಶ್ವಗಳಿಗೆ ನಾಲ್ಕು, ಅರ್ಜುನನಿಗೆ ಇಪ್ಪತ್ತು, ಭೋಜನಿಗೆ ಎಂಟು, ಸಾತ್ಯಕಿಗೆ ಒಂಬತ್ತು, ಹಂಸಧ್ವಜನಿಗೆ ಹತ್ತು, ಕರ್ಣ, ಬಭ್ರುವಾಹನ, ಅನುಸಾಲ್ವ, ಪ್ರದ್ಯುಮ್ನ, ಯೌವನಾಶ್ವ, ಅನಿರುದ್ಧ, ನೀಲಧ್ವಜರಿಗೆ ಎರಡೆರಡು, ಮೇಘನಾದನಿಗೆ ಏಳು—ಶರಗಳನ್ನು ಏಕಕಾಲದಲ್ಲಿ ಪ್ರಯೋಗಿಸಿ ತಾಮ್ರಧ್ವಜನು ಆರ್ಭಟಿಸಿದನು. ತಾಮ್ರಧ್ವಜನ ಪರಾಕ್ರಮವನ್ನು ಕಂಡು ಅಚ್ಯುತನು ಅಚ್ಚರಿಪಟ್ಟನು. ಅರ್ಜುನನು ಮೆಚ್ಚಿದನು. ಮಿಕ್ಕ ಪಟುಭಟರು ಕೆಚ್ಚುಗೊಂಡರು. ಅನಿರುದ್ಧನು ಮುಂಬಂದು ಹೋರಾಡಿದನು.

ಅನಿರುದ್ಧನ ಆಟೋಪವನ್ನು ತಾಮ್ರಧ್ವಜನು ತಡೆದನು. ಅವರೊಳಗೆ ಮಹಾಸಂಗ್ರಾಮ ಸಾಗಿತು. ಅರ್ಜುನನ ಸೇನೆಯ ರಥಿಕರು ವ್ಯಥಿತರಾದರು. ಗಜತುರಗಗಳು ಹೋಳಾಗಿ ಸೀಳಾಗಿ ಕೆಡೆದವು. ಭಟರು ಭಂಗಗೊಂಡರು. ವೀರರಿಬ್ಬರೂ ಹೊಗೆಯಿಲ್ಲದ ಬೆಂಕಿಯಂತೆ ವೀರಾವೇಶದಿಂದ ಉರಿದು ಕಾದಿದರು. ತಾಮ್ರಧ್ವಜನ ಅರ್ಬುದ ಸಂಖ್ಯೆಯ ಬಾಣಗಳು ಅಂಬರವು ತುಂಬುವಂತೆ ಪುಂಖಾನುಪುಂಖವಾಗಿ ವೈರಿ ಬಲವನ್ನು ಸವರಿ ಅನಿರುದ್ಧನನ್ನು ಮೂರ್ಛೆಗೊಳಿಸಿತು. ಆ ಮೇಲೆ ಹಂಸಧ್ವಜ, ಕೃತವರ್ಮ, ಸಾತ್ಯಕಿ, ಬಭ್ರುವಾಹನ, ಯೌವನಾಶ್ವರನ್ನು ಹಿಮ್ಮೆಟ್ಟಿಸಿ, ನೀಲ ಧ್ವಜಾನುಸಾಲ್ವರನ್ನು ಸೋಲಿಸಿ, ಪ್ರದ್ಯುಮ್ನನನ್ನು ಪರಾಜಯಗೊಳಿಸಿ. ಮುಂದುವರಿಯಲು ವೃಷಧ್ವಜನು ತಾಮ್ರಧ್ವಜನನ್ನು ತಡೆದನು. ಆತನ ರಥವನ್ನು ಕತ್ತರಿಸಿ ಕೆಡಹಿದನು. ಹೊಸ ರಥವನ್ನು ಏರಿ, ಹೊಸ ಹುರುಪು ತೋರಿ, ಸಿಕ್ಕಿಸಿಕ್ಕಿದ ಸೇನೆಯನ್ನು ಸವರಿ, ಕರ್ಣಜನನ್ನೂ ಕೆಡಹಿ ತಾಮ್ರಧ್ವಜನು ಮತ್ತೂ ಮುನ್ನುಗ್ಗಿದನು.

ತಾಮ್ರಧ್ವಜನಿಗೆ ಇದಿರಾದ ವೀರರೂ ಧೀರರೂ ಧರೆಗುರುಳುತ್ತಿದ್ದರು. ಇಂತು ಆತನನ್ನು ತಡೆದು ನಿಲ್ಲಿಸುವವರಾಗಲಿ, ಗೆಲ್ಲುವವರಾಗಲಿ ಯಾರೂ ಇರಲಿಲ್ಲ. ಇದನ್ನು ಕಂಡು ಅರ್ಜುನನು ಉಗ್ರನಾದನು. ಕೋದಂಡವನ್ನು ತೀಡಿ ತಾಮ್ರಧ್ವಜನ ಮೇಲೆ ಬೆಂಕಿಕಾರುವ ಬಾಣಗಳನ್ನು ಹೂಡಿದನು.

"ಪಾರ್ಥ, ಶ್ರೀಕೃಷ್ಣನ ಸಹಾಯದಿಂದ ಇಷ್ಟು ಕಾಲ ಕಾಳಗದಲ್ಲಿ ಗೆದ್ದಿದ್ದೀಯೋ! ನಿನ್ನ ಆ ಪೌರುಷವನ್ನು ನನ್ನಲ್ಲಿ ಬಿಡು. ಗೋತ್ರಹತ್ಯಾ ದೋಷಪರಿಹಾರ ಕಾರ್ಯವಾದ ಯಾಗಕ್ಕೆ ಎಷ್ಟು ಹಯಗಳು ಅವಶ್ಯವಿವೆಯೋ, ಅಷ್ಟನ್ನು ನಾನು ನಿನಗೆ ಬೇಕಾದರೆ ಕೊಡಬಲ್ಲೆ. ಆದರೆ ಶ್ರೀ ಹರಿಯೇ ನಿನ್ನೊಡನೆ ಇರುವಾಗ ನಿನಗೆ ಏಕೆ ಈ ಹುಚ್ಚು? ಧನದಾಸೆಯಿಂದ ಧರ್ಮವನ್ನು ಬಿಟ್ಟವನ ಹಾಗೆ ಏಕೆ ಮಾಡುತ್ತಿಯೇ?"

"ತಾಮ್ರಧ್ವಜನೇ, ಸದ್ದ್ರವ್ಯಗಳಿಂದ ಧರ್ಮವನ್ನು ಕಾಪಾಡಬೇಕಲ್ಲದೆ ಸುಮ್ಮನೆ ಆಗುತ್ತದೆಯೇ? ವಿಧಿವಿಧಾನಗಳಿಂದಲ್ಲದೆ ಶ್ರೀಕೃಷ್ಣ ಸಾಕ್ಷಾತ್ಕಾರವಾಗು ವುದುಂಟೆ? ಶ್ರೀ ಹರಿಯ ವಿಚಾರ ನಿನಗೇನು ಗೊತ್ತು? ಮೂಢಾ! ವ್ಯರ್ಥ ನನ್ನೊಡನೆ ಕಾದಿ ಕಷ್ಟಪಡಬೇಡ, ನಡೆ!"

ತಾಮ್ರಧ್ವಜ ಫಲ್ಗುಣರು ಘೋರಸಂಗ್ರಾಮ ಹೂಡಿದರು. ಏಳು ದಿನಗಳ ವರೆಗೆ ಅಹೋರಾತ್ರಿ ಬಿಡದೆ ಕಾದಿದರು. ತಾಮ್ರಧ್ವಜನು ತಾಮ್ರಲೋಚನನಾಗಿ ಅರ್ಜುನನನ್ನು ಅಡಿಗಡಿಗೆ ಗಾಯಗೊಳಿಸಿದನು. ಧ್ವಜದಲ್ಲಿದ್ದ ಹನುಮಂತನು ಆಗಾಗ ಹಲ್ಗಿರಿಯುತ್ತಿದ್ದನು. ಶ್ರೀಕೃಷ್ಣನ ಮೇಲೆ ಬಾಣವನ್ನೆಸೆದನು; ನರನ ಗಾಂಡೀವದ ತಿರುವು ಸಡಿಲಿತು. ಅರ್ಜುನನು ಅಸಮಶೌರ್ಯದಿಂದ ಸೆಣಸು ತ್ತಿದ್ದನು. ಎಷ್ಟಾದರೂ ವಿಜಯನಿಗೆ ವಿಜಯ ದೊರಕದಿರುವುದನ್ನು ಶ್ರೀಕೃಷ್ಣನು ತಿಳಿದನು.

"ಅರ್ಜುನಾ, ಒಬ್ಬನೊಡನೆ ಇಬ್ಬರು ಕಾದುವುದು ಅಧರ್ಮವೆಂದು ಅಳುಕಬೇಡ; ಈತನನ್ನು ಗೆಲ್ಲಬೇಕಾದರೆ ನಾವಿಬ್ಬರೂ ಸಾಹಸಗೈಯ್ಯದೆ ಸಾಧ್ಯ ವಾಗದು. ಒಂದು ಕಡೆಯಿಂದ ನೀನು ಎಸೆ; ಇನ್ನೊಂದು ಕಡೆಯಿಂದ ನಾನು ಎಸೆಯುವೆನು."

ಶ್ರೀಕೃಷ್ಣಾರ್ಜುನರು ಬಹಳ ಕೋಪಗೊಂಡವರಾಗಿ ಒಂದೇ ಬಾರಿ ಶಾರ್ಙಗಾಂಡೀವಗಳನ್ನು ಒಡಿದು ಭೂಮಿ ನಡಗುವಂತೆ. ತಾಮ್ರಧ್ವಜನ ಮೇಲೆ ಎರಗಿದರು. ಇದನ್ನು ನೋಡಿ ಆತನು ಯುದ್ಧೋತ್ಸಾಹಗೊಂಡನು. ತಾಮ್ರ ಧ್ವಜನ ಅಕ್ಷಿಗಳು ಅರಳಿದುವು; ಶರೀರ ರೋಮಾಂಚನಗೊಂಡಿತು. ನಸುನಕ್ಕನು.

"ದೇವ, ನೀನೇ ಬಿಲ್ಲು ಹಿಡಿದೆಯಾದರೆ ಮಹಾವೀರನೆನಿಸಿದ ಅರ್ಜುನನು ನಿರ್ವೀರ್ಯನೆಂದಾಗುವುದಿಲ್ಲವೆ? ಅವನ ಕೀರ್ತಿಗೆ ಕಳಂಕ ತರಬೇಡ; ಅರ್ಜುನನಿಗೆ ಸಾರಥಿಯಾಗು; ಆತನೇ ಹೋರಾಡಲಿ."

ಶ್ರೀಕೃಷ್ಣನಿಗೂ ಈ ಮಾತು ಮೆಚ್ಚಿಕೆಯಾಯಿತು. ತನ್ನ ಕೃತ್ಯಕ್ಕಾಗಿ ನಾಚಿಕೆಯೂ ಆಯಿತು. ನರನ ರಥವನ್ನೇರಿ ಪುನಃ ಚಮ್ಮಟಿಕೆವಾಘೆಗಳನ್ನು ಹಿಡಿದು ನಿಂತನು. ಅವರ ಕದನಕೋಲಾಹಲಕ್ಕೆ ಹೊಸ ಕಳೆಯೇರಿತು. ತಾಮ್ರ ಧ್ವಜನು ಇದಿರಾದ ವೀರರೆಲ್ಲರನ್ನೂ ಕೊಚ್ಚಿ ಕೆಡಹಿದನು. ಕೊನೆಗೆ ಅರ್ಜುನ ನನ್ನೂ ಮೈಮರೆಸಿದನು. ಶತ್ರುವಿನೊಡನೆ ಕಾದುವ ಕಲಿಗಳಾರನ್ನೂ ಕಾಣದೆ ಶ್ರೀಕೃಷ್ಣನೇ ಚಕ್ರವನ್ನು ಕೈಗೆ ತೆಗೆದುಕೊಂಡನು. ವಿಷಮ ಚಕ್ರಧಾರೆಯ ಸೋಂಕಿನಿಂದ ಶತ್ರುಸೇನೆಯು ಧರೆಗೆ ಉರುಳುತ್ತಿತ್ತು.

"ದೇವ, ಸೇನೆಯನ್ನು ಸೋಲಿಸುವುದು ಏನು ಮಹಾ ಸಾಹಸವೊ? ಹಿಂದೆ ಪಾರ್ಥನಿಗಾಗಿ ನಿನ್ನ ಪುಣ್ಯವನ್ನೇ ಕೊಟ್ಟಿದ್ದೀಯೆ, ಈಗ ಪುನಃ ಆತನಿ ಗಾಗಿ ನಿನ್ನ ಒಡಲನ್ನೂ ಕೊಡದಿರು. ಇಗೋ, ನಿನ್ನನ್ನೂ ಅರ್ಜುನನನ್ನೂ ಬಿಗಿದು ತಂದೆಯ ಯಾಗವನ್ನು ನಾನು ಪೂರೈಸುವೆನು. ಇದು ನಿಶ್ಚಯ!"

ತಾಮ್ರಧ್ವಜನು ಚಕ್ರಪಾಣಿಯಾದ ಶ್ರೀಕೃಷ್ಣನ ಮೇಲ್ವಾಯ್ದನು. ಒಂದು ಕೈಯಿಂದ ಶ್ರೀಕೃಷ್ಣನ ಕರದ್ವಯವನ್ನು ಇನ್ನೊಂದರಿಂದ ಆತನ ಪಾದದ್ವಯ ವನ್ನು ಮಹಾಪರಾಕ್ರಮದಿಂದ ಹಿಡಿದು ಎತ್ತಿ, ಶ್ರೀಕೃಷ್ಣನ ಪಾದಗಳನ್ನು ಹಣೆಗೆ ಒತ್ತಿಕೊಂಡು ಅರ್ಜುನನಿದ್ದಲ್ಲಿಗೆ ಸಾಗಿದನು. ತಾಮ್ರಧ್ವಜನ ಹಿಡಿಗೈಯ ಲ್ಲಿದ್ದ ಶ್ರೀಕೃಷ್ಣನು ಅರ್ಜುನನನ್ನು ಕರೆದು, "ಗಾಂಡೀವಿ, ತೊಡು, ತೊಡು, ದಿವ್ಯಾಸ್ತ್ರವನ್ನು" ಎಂದು ಕೂಗಿ ಹೇಳಲು, ಅರ್ಜುನನು ಗಾಂಡೀವಕ್ಕೆ ಬಾಣ ವನ್ನು ಹೂಡುತ್ತಿರಲು, ತಾಮ್ರಧ್ವಜನು ಆತನನ್ನು ಕಾಲಿನಿಂದ ಕೆಡಹಿದನು. ಆ ಮೇಲೆ ಅವರಿಬ್ಬರೂ ಮಿಡುಕಾಡದಂತೆ ಬಿಗಿದು ಹಿಡಿಯಲು, ಶ್ರೀಕೃಷ್ಣನು, ತಾಮ್ರಧ್ವಜನೆದೆಗೆ ಒದೆದನು. ಆ ಮೂವರೂ, ಒಬ್ಬರು ಇನ್ನೊಬ್ಬರಿಗೆ ತಾಗಿ ಭೂಮಿಗೆ ಬಿದ್ದರು. ಶ್ರೀಕೃಷ್ಣನೂ, ಅರ್ಜುನನೂ ಮೂರ್ಛೆಗೊಂಡರು. ತಾಮ್ರಧ್ವಜನು ಶೌರ್ಯದಿಂದ ಎದ್ದು ನಿಂತನು. ಮುಂದೆ ತನ್ನೊಡನೆ ಹೋರಾಡುವವರನ್ನು ಕಾಣದೆ ವಿಜಯೋತ್ಸಾಹದಿಂದ ಕುದುರೆಗಳೆರಡನ್ನೂ ಕೂಡಿಕೊಂಡು ನಿಜನಗರಿಗೆ ನಡೆದನು.

ಪಟ್ಟಣದ ಹೊರವಳಯದಲ್ಲಿ ಚಿತ್ರಮಯವಾಗಿ ರಚಿಸಿದ ಯಾಗಮಂಟಪದ ಮಧ್ಯಭಾಗದಲ್ಲಿ ದೀಕ್ಷಾಬದ್ಧನಾಗಿ ಮಯೂರಧ್ವಜನು ಕುಳಿತಿದ್ದನು. ತಂದೆ

ಯಲ್ಲಿಗೆ ತಾಮ್ರಧ್ವಜನು ಬಂದು, ಪಾದಗಳನ್ನು ಮುಟ್ಟಿ, ಸಾಷ್ಟಾಂಗವೆರಗಿ ಕೈಮುಗಿದು ಉಭಯಾಶ್ವಗಳನ್ನು ತಂದೊಪ್ಪಿಸಿದನು. ಅವುಗಳನ್ನು ನೋಡಿ ಕುತೂಹಲಚಿತ್ತನಾಗಿ, ಮುಗುಳ್ನಗುತ್ತಾ ಮಯೂರಧ್ವಜನು ಮಗನೊಡನೆ ಕೇಳಿದನು.

"ವತ್ಸ, ವತ್ಸರ ತುಂಬುವ ಮುನ್ನ ಈ ಕುದುರೆ ಏಕೆ ಹಿಂದಿರುಗಿತು? ಇದರ ಜತೆಯಲ್ಲಿ ಬೇರೊಂದು ತುರಗವಿದೆಯಲ್ಲಾ? ಇದನ್ನು ನೀನು ಹೋರಾಡಿ ಪಡೆದಂತೆ ತೋರುತ್ತಿದೆ. ಮಗನೇ, ಇದು ಯಾವಲ್ಲಿನದು? ನಿನಗೆ ಯಾವ ರಾಜರೊಡನೆ ಕಾಳಗವೊದಗಿತು? ನನ್ನಲ್ಲಿಗೆ ನೀನು ಇಷ್ಟು ಬೇಗ ಏಕೆ ಬಂದಿದ್ದೀಯೆ?"

"ತಾತ, ಇದು ರಾಜಶ್ರೇಷ್ಠನಾದ ಯುಧಿಷ್ಠಿರನ ಯಾಗದ ಕುದುರೆ. ಇದರ ಕಾವಲಿಗಾಗಿ ಕೃಷ್ಣನೂ, ಕಿರೀಟಿಯೂ ಬಂದಿದ್ದರು. ನಾನವರ ಕುದುರೆ ಯನ್ನು ಕಟ್ಟಿದೆನು. ಅವರೊಡನೆ ನನಗೆ ಮಹಾಯುದ್ಧವು ಸಂಭವಿಸಿತು."

ಮಯೂರಧ್ವಜನು ಮಗನ ಮಾತನ್ನು ಕೇಳಿ ಸಂಶಯಗೊಂಡನು. ಪಕ್ಕ ದಲ್ಲಿದ್ದ ನಕುಲಕೇತುವಿನ ಮುಖ ನೋಡಿದನು. ಮಂತ್ರಿಯು ರಾಜನಿಗೆ ಇಂತು ಅರಿಕೆ ಮಾಡಿದನು—

"ಜೀಯ, ಈ ಮಾತು ಹುಸಿಯಲ್ಲ; ಪಾಂಡವರಾಯನ ಕುದುರೆಯನ್ನು ಕಾಯುವರೆ ಬಂದ ಬಭ್ರುವಾಹನಾದಿಗಳನ್ನು ಸೋಲಿಸಿದ ಮೇಲೆ, ಕೃಷ್ಣ ಅರ್ಜುನರು ಇದಿರಾಗಲು ಅವರ ಶೌರ್ಯವನ್ನು ಹದಗೆಡಿಸಿ ಅವರಿಬ್ಬರನ್ನು ಹಿಡಿದು ತಂದನು. ಪಾರ್ಥನ ತುರಗವನ್ನು ಕೂಡಿಕೊಂಡು ಅಪಾಯವಾಗದೆ ಬಂದಿರುವನು.

ಮಯೂರಧ್ವಜನಿಗೆ ತುಂಬಾ ವ್ಯಸನವಾಯಿತು. ಕೈವಶನಾದ ಶ್ರೀಕೃಷ್ಣ ನನ್ನು ಬಿಟ್ಟು ಕುದುರೆಯನ್ನು ಮಗನು ತಂದುದೇಕೆಂದು ವ್ಯಥೆ ಪಟ್ಟನು. ತಾಮ್ರಧ್ವಜನನ್ನು ಜರೆದನು. ಕೃಷ್ಣದರ್ಶನಕ್ಕಾಗಿ ಹಂಬಲಿಸಿದನು.

"ಅಯ್ಯೋ ಪುಣ್ಯಕಾರ್ಯವನ್ನು ಇವನು ಕೆಡಿಸಿದನಲ್ಲಾ ! ಮಗನೇ ನಮಗೆ ಹಗೆಯಾದನಷ್ಟೆ. ಹಸ್ತಗತನಾದ ಶ್ರೀಹರಿಯನ್ನು ಬಿಟ್ಟು, ಗರ್ದಭಾಕಾರದ ಈ ಹರಿಯನ್ನು ಯಾಕೆ ತಂದನೋ, ಇವನಿಗೆ ಬುದ್ಧಿ ಕೆಟ್ಟಿರಬೇಕು. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಯಿತು ! ಎಲ್ಲವೋ, ಮೂಢಾ, ನಿನ್ನನ್ನು ಏನು ಮಾಡಬೇಕು. ನನ್ನ ಮುಂದೆ ನಿಲ್ಲಬೇಡ, ನಡೆಯಾಚೆ. ತುಲಸಿಯೊಡನಿರುವ ಸುಗಂಧಮಂದಾರ ಪುಷ್ಪವನ್ನು ಬಿಟ್ಟು ದತ್ತೂರದ ಹೂವಿನ ಮಾಲೆ ಕಟ್ಟುವುದೇ?

ಕೃಷ್ಣಾರ್ಜುನರನ್ನು ತೊರೆದು ಈ ಕುದುರೆಯನ್ನು ಏಕೆ ತಂದಿದ್ದೀಯೋ? ಇನ್ನು ನಮಗೆ ಯಜ್ಞವೇಕೆ? ಯಾಗ ಇಲ್ಲಿಗೆ ಕೊನೆಗೊಂಡಿತು ಈ ಕುದುರೆಯನ್ನು ಎಲ್ಲಿಗಾದರೂ ಹೊಡೆದಟ್ಟು. ಒಮ್ಮೆ ಕೃಷ್ಣಕಿರೀಟಿಯರು ಎಲ್ಲಿರುವರೋ ತೋರಿಸು."

ಈ ರೀತಿ, ಇತ್ತ ಮಯೂರಧ್ವಜನು ಶ್ರೀಕೃಷ್ಣ ದರ್ಶನಾಕಾಂಕ್ಷಿತನಾಗಿ ಹಂಬಲಿಸುತ್ತಿರಲು ಅತ್ತ, ಸಮರಭೂಮಿಯಲ್ಲಿ ಮೈಮರೆತ್ತಿದ್ದ ನರನಾರಾಯಣರು ಎಚ್ಚರಗೊಂಡರು. ವೀರಭಟರೆಲ್ಲರೂ ಮೂರ್ಛೆ ತಿಳಿದೆದ್ದರು. ಸರ್ವರೂ ಸೋಲಿಗಾಗಿ ಪರಿತಪಿಸುತ್ತಿರಲು ಅವರನ್ನು ಶ್ರೀಕೃಷ್ಣನು ಸಂತೈಸಿದನು. ಅರ್ಜುನನೊಡನೆ ಒಂದು ಉಪಾಯವನ್ನು ಸೂಚಿಸಿದನು.

"ಕೌಂತೇಯ, ತಾಮ್ರಧ್ವಜನು ಮಾಡಿದ ಅನರ್ಥವನ್ನು ನೋಡಿದೆಯಲ್ಲಾ ! ನಮ್ಮೆಲ್ಲರನ್ನೂ ಧರೆಗುರುಳಿಸಿ, ನಮ್ಮ ಕುದುರೆಯನ್ನು ಸಹ ಕೊಂಡೊಯ್ದಿರುವನು. ಇದನ್ನು ಹೇಳಿ ಫಲವೇನು? ಸೇನೆ ನಮ್ಮ ಹಿಂದೆ ಮೆಲ್ಲನೆ ಬರುತ್ತಿರಲಿ: ನಾನು ಮುಂದೆ ಹೋಗುತ್ತೇನೆ. ನೀನೂ ನನ್ನೊಡನೆ ಬಾ. ನಿನಗೆ ಒಂದು ತಂತ್ರವನ್ನು ತೋರಿಸುವೆನು."

ಸೇನೆ ಹಿಂದುಳಿಯಿತು. ಕೃಷ್ಣಾರ್ಜುನರಿಬ್ಬರೂ ಮುನ್ನಡೆವರು. ಅವರಿಬ್ಬರೂ ಮಾತನಾಡಿಕೊಂಡು ತಮ್ಮ ರೂಪವನ್ನು ಮರೆಮಾಡಿ ಬ್ರಾಹ್ಮಣ ವೇಷ ಧರಿಸಿದರು. ಶ್ರೀಕೃಷ್ಣನು ದರಿದ್ರವೃದ್ಧಬ್ರಾಹ್ಮಣನಾದನು. ಆತನಿಗೆ ಕೈಕೊಡುವ ಆತನ ಬಾಲಕ ಶಿಷ್ಯನಾಗಿ ಅರ್ಜುನನು ನಟಿಸಿದನು. ಅವರಿಬ್ಬರೂ ರತ್ನಪುರಿಯ ಹಾದಿಹಿಡಿದು ಮಯೂರಧ್ವಜನ ಪಟ್ಟಣಕ್ಕೆ ಬಂದರು. ಅಷ್ಟರಲ್ಲಿ ಕತ್ತಲಾಯಿತು; ಆ ಕತ್ತಲೆಯ ಹೊತ್ತಿನಲ್ಲಿ ಶಿಷ್ಯನಾದ ಅರ್ಜುನನೊಡನೆ ಗುರುವಾದ ಶ್ರೀಕೃಷ್ಣನು ಬ್ರಾಹ್ಮಣವೇಷ ಧರಿಸಿ ರತ್ನಪುರಿಯ ಬೀದಿ ಬೀದಿಗಳಲ್ಲಿ ಬರು ಬರುತ್ತಾ ಅಲ್ಲಿನ ವಿವಿಧ ವಿಲಾಸಗಳನ್ನು ಕಂಡು ವಿಸ್ಮಿತರಾದರು; ವಿಸ್ಮಯಗೊಂಡು ಮುಂದೆ ಮುಂದಕ್ಕೆ ಸಾಗಿ ಹೋದರು.

ಸೂರ್ಯೋದಯವಾಗಲು. ಸಂಧ್ಯಾವಿಧಿಗಳನ್ನು ತೀರಿಸಿಕೊಂಡು ಮಯೂರಧ್ವಜನು, ಶ್ರೀಕೃಷ್ಣನ ದಿವ್ಯದರ್ಶನ ಗೆಯ್ಯಬೇಕೆಂದು ಸಕಲ ಸಿದ್ಧತೆಗಳನ್ನು ಮಾಡುತ್ತಿದ್ದನು. ಪುತ್ರರನ್ನೂ, ಪರಿವಾರವನ್ನೂ, ಪುರೋಹಿತರನ್ನೂ ಮಂತ್ರಿಗಳನ್ನೂ, ಮಂಡಲೇಶ್ವರರನ್ನೂ ಕರೆಸಿ ಓಲಗಗೊಟ್ಟನು. ಅಷ್ಟರಲ್ಲಿ ವೃದ್ಧವಿಪ್ರಾಕಾರವನ್ನು ತಳೆದ ಶ್ರೀಕೃಷ್ಣನು ತನ್ನ ಶಿಷ್ಯನೊಡಗೂಡಿ ಯಾಗದೀಕ್ಷಾಬದ್ಧನಾಗಿ ಓಲಗದಲ್ಲಿ ವಿರಾಜಿಸುತ್ತಿದ್ದ ಮಯೂರಧ್ವಜನಲ್ಲಿ ಬಂದನು.

"ರಾಜಶ್ರೇಷ್ಠನೇ, ನಿನಗೆ ಉತ್ತರೋತ್ತರ ಸ್ವಸ್ತ್ಯಸ್ತು: ನೀನು ಮಹಾದಾನಿಯೆಂದು ಕೇಳಿ ಬೇಡಿದುದನ್ನೆಲ್ಲಾ ಕೊಡಬಲ್ಲೆಯೆಂದು ಈ ಪವಿತ್ರ ಯಾಗಶಾಲೆಗೆ ನಿನ್ನನ್ನು ಹುಡುಕಿಕೊಂಡು ಶಿಷ್ಯನೊಡಗೂಡಿ ಬಂದಿರುವೆನು."

—ಹೀಗೆ ವೃದ್ಧ ಬ್ರಾಹ್ಮಣನು ಆಶೀರ್ವಾದ ಪೂರ್ವಕ ಅರಸನೊಡನೆ ಅರಿಕೆ ಮಾಡಿಕೊಂಡನು.

ಅರಸನು ಬಂದ ಬ್ರಾಹ್ಮಣನನ್ನು ಭಕ್ತಿಯಿಂದ ವಂದಿಸಿ, ಆತನಿಗೆ ಯಥೋಚಿತ ಸತ್ಕಾರಗಳನ್ನು ಗೈದನು.

"ಎಲೈ ಬ್ರಾಹ್ಮಣನೇ, ನಿನ್ನ ಆಶೀರ್ವಾದದಂತೆ ನನಗೆ ಉತ್ತರೋತ್ತರ ಏಳಿಗೆಯಾಗುವುದೆಂದು ನಾನು ನಿಶ್ಚಯವಾಗಿಯೂ ನಂಬಿದ್ದೇನೆ. ಆದರೆ ಬ್ರಹ್ಮಜ್ಞಾನಿಯಾದವನು ಸಂಧಿಸಿದವನ ವಂದನೆಗಿಂತ ಮೊದಲೇ 'ಸ್ವಸ್ತಿ' ಎಂದರೆ ಆ ಮನುಷ್ಯನನ್ನು ಪ್ರೀತಿಯಿಂದ ಕೊಂದಂತಾಗುವುದಲ್ಲವೇ? ಇದಕ್ಕಿಂತ ಬೇರೆ ಶಾಪವುಂಟೆ?"

"ರಾಜನೆ, ನಮಸ್ಕಾರಕ್ಕಿಂತ ಮೊದಲು ಹರಸಬಾರದೆಂದೇನೋ ಶಾಸ್ತ್ರವುಂಟು. ಆದರೆ ತನ್ನ ಸಂಕಟವನ್ನು ಅರಸನಿಗೆ ಅರಿಕೆ ಮಾಡಬೇಕಾದವನು ಮೊದಲೇ ಆಶೀರ್ವಾದ ಮಾಡದಿರುವನೆ? ಇದರಲ್ಲಿ ದೋಷವೇನೂ ಇಲ್ಲ: ನಾನು ದೊಡ್ಡ ಗಂಡಾಂತರದಲ್ಲಿ ಸಿಕ್ಕಿ ಬಿದ್ದು ನಿನ್ನಲ್ಲಿಗೆ ಬಂದಿರುವೆನು."

"ಅಯ್ಯಾ, ಅನುಗ್ರಹ ಮಾಡು. ಶಿಷ್ಯರೊಡಗೂಡಿ ನೀನು ಇಲ್ಲಿಗೆ ಬಂದ ಕಾರ್ಯವೇನು? ನಿನಗೇನು ಬೇಕಾಗಿದೆ? ನೀನು ಯಾವುದನ್ನು ಕೇಳುವುದಕ್ಕೂ ಬೇಸರಿಸಬೇಡ; ಬೇಡಿದುದನ್ನು ನಾನು ಕೊಡುವೆನು. ಅನುಮಾನವಿಲ್ಲದೆ ಹೇಳು."

"ರಾಜನೆ, ಹಾಗಾದರೆ ಕೇಳು, ನಾನು ಧರ್ಮಪುರ ನಿವಾಸಿಯು. ನನ್ನ ಹೆಸರು ಕೃಷ್ಣಶರ್ಮನೆಂದು. ನನಗೊಬ್ಬ ಮಗನಿದ್ದಾನೆ. ಅವನಿಗೆ ಮದುವೆ ಮಾಡಿಸಲು, ನಿನ್ನ ಪುರೋಹಿತನಾದ ವತ್ಸಶೀಲನಲ್ಲಿ ಒಬ್ಬಳು ಅನುರೂಪಳಾದ ಕನ್ನೆಯಿರುವಳೆಂದು ಕೇಳಿ ಅವಳನ್ನು ನೋಡಲೋಸುಗ ಮಗನೊಡಗೂಡಿ ಬರುತ್ತಿದ್ದೆನು. ಅರಣ್ಯ ಮಾರ್ಗವಾಗಿ ನಾವು ಸಾಗುತ್ತಿರಲು ಒಂದು ಸಿಂಹವು ನನ್ನ ಮಗನ ಮೇಲೆ ಬಿದ್ದಿತು. ನಾನು ಹೆದರಿ "ಅಯ್ಯೋ ಕಂದಾ" ಎಂದು ಮೊರೆಯಿಡಲು, ತನ್ನ ಉಗ್ರನಖದಂಷ್ಟ್ರಗಳಿಂದ ಮಗನನ್ನು ಸೀಳದೆ ಮನುಷ್ಯ ಭಾಷೆಯಿಂದ, ಅದು ಮಾತನಾಡತೊಡಗಿತು. ನಾನು ಬಹಳ ಮುದುಕನೆಂದೂ, ಇನ್ನು ಕೆಲವೇ ದಿನ ಬದುಕುವವನೆಂದೂ, ಪುತ್ರ ವಿರಹಿತನಾಗಿ ಬದುಕಿ ಫಲವಿಲ್ಲವೆಂದೂ ತನ್ನನ್ನು ಆಹುತಿಗೊಂಡು ಪುತ್ರನನ್ನು ಬಿಟ್ಟುಬಿಡಬೇಕೆಂದೂ ಅದ

ರೊಡನೆ ಅರಿಕೆ ಮಾಡಿದೆನು. ಅದಕ್ಕೆ ಸಿಂಹವು ನನ್ನನ್ನು ಅಪೇಕ್ಷಿಸದೆ ನಿನ್ನೆಡೆಗೆ ಕಳುಹಿಸಿತು.

"ಅಯ್ಯೋ! ಆ ಕ್ರೂರ ಸಿಂಹವು ಹೇಳಿದ ಮಾತನ್ನು ನಿನ್ನೊಡನೆ ನಾನು ಹೇಗೆ ಹೇಳಲಿ? ಮಕ್ಕಳನ್ನು ಕಳಕೊಳ್ಳುವ ಕಷ್ಟವಾದರೂ ಎಷ್ಟು ಅಸಹನೀಯವಾದುದು! ಅದರಿಂದಾಗಿ ನಿನ್ನೊಡನೆ ನನಗೆ ಹೇಳದೆ ನಿರ್ವಾಹವಿಲ್ಲ. ಸಿಂಹವು ನನ್ನೊಡನೆ ಇಂತು ಸಾರಿತು:

"ನಿನ್ನ ಒಡಲು ಮೊದಲೇ ಮುದಿತನದಿಂದ ಗೂಡುಕಟ್ಟಿದೆ. ಆ ಮೇಲೆ ತಪಸ್ಸಿನಿಂದ ಒಣಗಿ ಹೋಗಿರುವುದು. ಇದರಿಂದ ನನಗೇನು ಪ್ರಯೋಜನ? ಆದರೂ ಚಿಂತಿಸಬೇಡ. ದಿವ್ಯವಾದ ಹಾಲು ಬೆಣ್ಣೆಗಳನ್ನು ಉಪಯೋಗಿಸಿ ಹಣ್ಣು ಹಂಪಲುಗಳನ್ನು ತಿಂದು ಪುಷ್ಟಿಗೊಂಡ ಮಯೂರಧ್ವಜನ ಶರೀರದಲ್ಲಿ ಅರ್ಧವನ್ನು ಕೊಡಿಸಲು ಸಾಧ್ಯವಿದ್ದರೆ, ನಿನ್ನ ಮಗನನ್ನು ಬಿಟ್ಟು ಬಿಡುವೆನು."

"ನನ್ನ ಮಗನ ಸಲುವಾಗಿ ರಾಜನು ಶರೀರಾರ್ಧವನ್ನು ಕೊಡುವುದುಂಟೆ?"

"ಹೀಗೆ ನಾನು ಚಿಂತಿಸುತ್ತಿದ್ದೆನು; ಆ ಸಿಂಹವು, ನನಗೆ ಈ ರೀತಿ ಪುನಃ ಸಮಾಧಾನ ಹೇಳಿತು—

"ಅಯ್ಯಾ, ಪರೋಪಕಾರವನ್ನು ಮಾಡುವಂತಹ ಮನುಷ್ಯನು ತನ್ನ ಜೀವವನ್ನಾಗಲಿ ಶರೀರವನ್ನಾಗಲಿ ಲೆಕ್ಕಿಸನು; ಹಿಂದೆ ಕರ್ಣದಧೀಚಿ ಮೊದಲಾದವರು ಕವಚ ಅಸ್ಥಿ ಮೊದಲಾದವುಗಳನ್ನು ಕೊಟ್ಟು ಕೀರ್ತಿಕಾಯರಾಗಿಲ್ಲವೆ? ನೀನು ಮಗನನ್ನುಳಿಸುವ ಸಲುವಾಗಿ ಬೇಡಿಕೊಂಡರೆ ಒಳ್ಳೆಯವನಾದ ಆ ಅರಸನು ಕರುಣೆಯಿಂದ ಶರೀರಾರ್ಧವನ್ನು ಸಂತೋಷಪೂರ್ವಕವಾಗಿ ಕೊಡುವನು.

"ಹಾಗಾಗಿ ನಾನು ನಿನ್ನಲ್ಲಿಗೆ ಬಂದಿರುವೆನು. ನಿನ್ನ ಶರೀರವನ್ನು ಕೊಟ್ಟು ನನ್ನ ಮಗನನ್ನು ಉಳಿಸಬೇಕೆಂದು ಬೇಡಿಕೊಳ್ಳಲು ಪುತ್ರ ವ್ಯಾಮೋಹದಿಂದೇನೋ ನಾನಿಲ್ಲಿಗೆ ಬಂದಿದ್ದೇನೆ. ಆದರೆ ಈ ರೀತಿ ನಿನ್ನೊಡನೆ ಪ್ರಾರ್ಥಿಸುವ ನಾನು ನಿಜವಾಗಿ ಮೂಢನೆಂದು ಬಲ್ಲೆನು. ಹೇಗಿದ್ದರೂ ನನ್ನ ಮಗನನ್ನು ದೊರೆಯಾದ ನೀನೇ ಕಾಪಾಡಬೇಕು."

ವೃದ್ಧಬ್ರಾಹ್ಮಣನು ಅಂಗಲಾಚಿ ಬೇಡಿಕೊಂಡನು. ಶಿಷ್ಯನೂ ಗುರುವಿನ ಮಾತನ್ನು ಪುಷ್ಟೀಕರಿಸಿದನು. ಹೇಗಾದರೂ ಬ್ರಾಹ್ಮಣ ಪುತ್ರನನ್ನು ಬಿಡಿಸುವ ದಯೆತೋರಿಸಬೇಕೆಂದು ಅವನೂ ಅರಿಕೆ ಮಾಡಿಕೊಂಡನು. ಮಯೂರಧ್ವಜನು ಅವರೀರ್ವರ ಮಾತನ್ನು ಆಲಿಸಿ ಕೇಳಿದನು. ಮನುಷ್ಯ ಜೀವಿತವು ನಶ್ವರ

ವೆಂದೂ ಕೀರ್ತಿ ಶಾಶ್ವತವೆಂದೂ ನಿಶ್ಚೈಸಿ ಬ್ರಾಹ್ಮಣನನ್ನು ಕರೆದು ಈ ರೀತಿ ತನ್ನ ನಿರ್ಧಾರವನ್ನು ತಿಳಿಸಿದನು—

"ಇದಿಗೋ, ನನ್ನೀ ಶರೀರದ ಅರ್ಧವನ್ನು ನಿನಗೆ ಸೀಳಿ ಕೊಡುತ್ತೇನೆ."

ಬ್ರಾಹ್ಮಣನಿಗೆ ಇಂತು ಅಭಯವಿತ್ತು, ಆತನು ರಾಜ್ಯದ ಒಡೆತನವನ್ನು ಪುತ್ರನಿಗೆ ಒಪ್ಪಿಸಿ ಆತ್ಮಾರ್ಪಣೆಗೆ ಸಿದ್ಧನಾದನು. ನಿರ್ಮಲ ಗಂಗಾಸಲಿಲವನ್ನು ತರಿಸಿ ಮಜ್ಜನ ಗೈದನು. ದಿವ್ಯಸಾಲಿಗ್ರಾಮತೀರ್ಥವನ್ನು ಸ್ವೀಕರಿಸಿದನು. ತುಲಸೀದಲಮಾಲೆಯನ್ನು ಕಂಠದಲ್ಲಿ ಧರಿಸಿದನು. ಸಭಾಮಂಟಪಕ್ಕೆ ಬಂದು ನೆರೆದ ಸಭಾಜನರೆಲ್ಲರಿಗೂ ವಂದಿಸಿ ಕೈಗಳೆರಡನ್ನೂ ಜೋಡಿಸಿ ಬಿನ್ನೈಸಿದನು—

"ಆಸ್ಥಾನದಲ್ಲಿ ಆಸೀನರಾಗಿರುವ ಸರ್ವ ಜನರೂ ನೋಡುತ್ತಿರಿ. ಬಲಿಯ ಯಾಗಕ್ಕೆ ವಾಮನಮೂರ್ತಿ ಬಂದ ಹಾಗೆ ಈ ಬ್ರಾಹ್ಮಣನು ಇಂದು ನನ್ನ ಯಜ್ಞಾಕಾಲದಲ್ಲಿ ಆಗಮಿಸಿರುವನು. ಈತನು ದೇವಸ್ವರೂಪಿಯೆಂದೇ ಭಾವಿಸಿ ನನ್ನ ಈ ಶರೀರಾರ್ಧವನ್ನು ಕೊಯ್ದು ಸಂತೋಷದಿಂದ ಇವನಿಗೆ ಕೊಡುತ್ತೇನೆ. ಬ್ರಾಹ್ಮಣನ ಮಗನು ಬಾಳಲಿ. ಈ ನನ್ನ ಕೃತ್ಯವು ಲೋಕಕ್ಕೆ ಹೊಸತಾಗಲಿ."

ಅರಸನ ಅಚಲನಿರ್ಧಾರವಚನವನ್ನಾಲಿಸಿ, ಪ್ರಜೆಗಳು, ಪ್ರಧಾನಿಗಳು, ಪುರೋಹಿತರು ಎಲ್ಲರೂ ಕಳವಳಗೊಂಡರು.

"ಇದೆಂತಹ ಕೃತ್ಯವೋ? ಈ ಬ್ರಾಹ್ಮಣನು ಮೃತ್ಯುದೂತನೇನೋ! ರಾಜ್ಯ, ಐಶ್ವರ್ಯ, ಧನಕನಕ ಗೋವುಗಳನ್ನೆಲ್ಲಾ ದಾನ ಬೇಡುವುದುಂಟು. ಶರೀರವನ್ನು ಕೊಯ್ದುಕೊಡೆಂದು ಕೇಳುವವರೂ ಇದ್ದಾರೆಯೇ?"

ಎಲ್ಲರೂ ಇಂತು ದುಃಖಿಸಿದರು. ಬ್ರಾಹ್ಮಣನ ಯಾಚನೆ ಅಯುಕ್ತ ವೆಂದರು. ಅರಸನು ನಿಶ್ಚಯವನ್ನು ಬದಲಾಯಿಸಬೇಕೆಂದು ಬೇಡಿಕೊಂಡರು.

"ಮಗನನ್ನು ಬದುಕಿಸುವ ಸಲುವಾಗಿ ಈ ಬ್ರಾಹ್ಮಣನು ಶರೀರಾರ್ಧ ವನ್ನು ಕೇಳಿರುವನು. ನಾನು ಕೊಡುವೆನೆಂದು ವಾಗ್ದಾನ ಮಾಡಿದ್ದೇನೆ. ಮಾತಿಗೆ ತಪ್ಪಿದರೆ ಲೋಕ ನನ್ನನ್ನು ನಿಂದಿಸಲಾರದೆ? ಸುಳ್ಳು ಹೇಳಿದರೆ ನನ್ನನ್ನು ಯಮದೂತರು ಬಿಡುವರೆ? ಇನ್ನು ನನ್ನ ನಿಶ್ಚಯದಲ್ಲಿ ಬದಲಾವಣೆ ಮಾಡಲು ಸಾಧ್ಯವಿಲ್ಲ."

—ಎಂದು ಪರಿತಪಿಸುತ್ತಲಿರುವ ಸಕಲರನ್ನೂ ಅರಸನು ಸಮಾಧಾನ ಪಡಿಸಿದನು. ತನ್ನ ಭಂಡಾರದ ನಾನಾ ದ್ರವ್ಯಗಳನ್ನು ತರಿಸಿ ಭೂಮಿ ತಣಿವಂತೆ ಸಕಲರಿಗೂ ದಾನವಿತ್ತನು. ಎರಡು ಕಂಬಗಳನ್ನು ನೆಡಿಸಿ ಅದರ ಮಧ್ಯದಲ್ಲಿ ತನ್ನ ಕೋಮಲ ಶರೀರವನ್ನು ನಿಲ್ಲಿಸಿ ಆ ಬ್ರಾಹ್ಮಣನ ಪಾದಗಳನ್ನು ತೊಳೆದು

ಬಂಗಾರದ ಸರಪಳಿಯಿಂದ ತನ್ನ ತೋಳುಗಳೆರಡನ್ನು ಕಂಬಕ್ಕೆ ಬಿಗಿಸಿಕೊಂಡನು. ಆ ಮೇಲೆ ಇಂತು ವಿನಂತಿಸಿದನು—

"ಬ್ರಾಹ್ಮಣನೆ, ನಾನು ನಿನಗೆ ಕೊಡುವ ಶರೀರಾರ್ಧದ ದಾನದಿಂದಾಗಿ ಅಖಿಲ ಯಜ್ಞಗಳಿಗೂ ಅಧಿಪತಿಯಾದ, ಶ್ರೀಮನ್ನಾರಾಯಣನು ಸಂತುಷ್ಟ ನಾಗಲಿ. ನನ್ನ ಕುಲದಲ್ಲಿ ಹುಟ್ಟಿದವರಾರೂ ತನುಧನಗಳನ್ನು ದಾನ ಮಾಡು ವಲ್ಲಿ ಒಂದಿಷ್ಟು ಹಿಂಜರಿಯದಿರಲಿ."

ಅರಸನ ಈ ಆಜ್ಞೆಯಂತೆ ತಲೆಸಿಗಿವಪ್ಪು ಕ್ರೂರರಾದ ಕೊಯ್ಗಾರರೂ ಬಂದರು. ಅವರು ಮಸೆದ ಗರಗಸವನ್ನು ಹಿಡಿದು ನಿಂತರು. ಇದನ್ನು ಕಂಡು ಜನರೆಲ್ಲಾ ಹೆದರಿದ ಜಿಂಕೆಗಳಂತೆ ನಡುನಡುಗಿ ಮೊರೆಯಿಟ್ಟರು. ಈ ಘೋರ ದೃಶ್ಯವನ್ನು ನಾವೆಂತು ನೋಡುತ್ತಿರಲಿ ಎಂದು ಗೋಳಾಡಿದರು.

"ಅಯ್ಯೋ, ಕೊಡುವವನೊಬ್ಬನಿದ್ದರೆ ತನಗೆ ಬೇಕಾದುದನ್ನೆಲ್ಲಾ ಬೇಡು ವವನು ಬೇಡದಿರುತ್ತಾನೆಯೇ? ಬೇಡುವವನು ಬರಲು ದಾನಿಯಾದವನು ತನ್ನಲ್ಲಿದ್ದುದನ್ನು ದಾನ ಕೊಡದಿರುತ್ತಾನೆಯೇ? ಕೊಡುವವನಲ್ಲೂ, ಬೇಡುವವ ನಲ್ಲೂ, ಕೊಡೆನೆಂದೂ, ಬೇಡೆನೆಂದೂ, ಭೇದ ಬರಲಾರದು. ಈ ನೀತಿಯು ಈ ರಾಜನಲ್ಲೂ ಬ್ರಾಹ್ಮಣನಲ್ಲೂ ಲೋಕಕ್ಕೆ ವಿಶದವಾಯಿತು. ಇದೆಂತಹ ಕಷ್ಟವೋ? ಈ ಘೋರದೃಶ್ಯವನ್ನು ನಾವೆಂತು ನೋಡುತ್ತಿರಲಿ !"

ಪ್ರಜೆಗಳಿಗೆ ತನ್ನ ಮೇಲಿರುವ ಇಂತಹ ಪ್ರೇಮಾತಿಶಯವನ್ನು ಕಂಡು ಮಯೂರಧ್ವಜನು ಮನದಲ್ಲಿಯೇ ಸಂತೋಷಪಟ್ಟನು. ತಾನು ಧನ್ಯನಾದೆ ನೆಂದು ಬಗೆದನು. ಅವರ ದುಃಖವನ್ನು ಸಂತೈಸಿದನು.

"ಪ್ರಜೆಗಳಿರಾ, ನೀವು ಇಂತು ಏಕೆ ದುಃಖಿಸುತ್ತೀರಿ? ನಾನಿಂದು ಕೃತಾರ್ಥ ನಾಗಿರುವೆನು. ಈತನೇ ವಿಷ್ಣುವೆಂದು ಬಗೆದು ಇವನ ಕೈಗೆ ನನ್ನ ಶರೀರಾರ್ಧವನ್ನು ಕೊಯ್ದು ಕೊಡುತ್ತೇನೆ: ಅದನ್ನು ಕಾಡಿನ ಸಿಂಹಕ್ಕೆ ಅರ್ಪಿಸಲಿ. ನೀವು ಕಳವಳ ಪಡಬೇಡಿರಿ. ಪರೋಪಕಾರಕ್ಕೆ ಆಗದ ಮನುಷ್ಯ ಜೀವಿತವು, ನಾರು ಸುಟ್ಟ ಬೂದಿಯಂತೆ ! ವ್ಯಥೆಪಡದೆ ನನ್ನೀ ಪಾವನ ಬಲಿದಾನವನ್ನು ನೋಡುತ್ತಿರಿ."

ಪ್ರಜೆಗಳನ್ನಿಂತು ಒಡಂಬಡಿಸಿ ಬ್ರಾಹ್ಮಣನನ್ನು ಕರೆದು "ಇದಿಗೋ. ನಿನಗೆ ಶರೀರಾರ್ಧವನ್ನು ಕೊಟ್ಟೆನು; ಸ್ವೀಕರಿಸು" ಎಂದು ಕೊಯ್ಗಾರರಿಗೆ ದೇಹವನ್ನು ಸೀಳುವಂತೆ ಹೇಳಿದನು. ಅವರು ಸಿದ್ಧರಾದರು. ಅಷ್ಟರಲ್ಲಿ ಮಯೂರಧ್ವಜನ ಧರ್ಮಪತ್ನಿ ಪತಿವ್ರತಾಶಿರೋಮಣಿಯೆನಿಸಿದ ಕುಮುದ್ವತಿಯು ಬಂದು ಪತಿಯ ಪಾದಗಳಿಗೆರಗಿ ಹೀಗೆ ಅರಿಕೆ ಮಾಡಿದಳು.

"ಅರಸಾ, ಅರಣ್ಯದ ಸಿಂಹವು ಹೇಳಿದ ಮಾತಿನ ಅರ್ಥವನ್ನು ನೀನಾಗಲಿ. ಬ್ರಾಹ್ಮಣನಾಗಲಿ ಸರಿಯಾಗಿ ಯೋಚಿಸಲಿಲ್ಲವಲ್ಲಾ! ಪತ್ನಿಯು ಪತಿಯ ಅರ್ಧಾಂಗಿಯೆಂದು ಶಾಸ್ತ್ರವೇ ಹೇಳುವುದಿಲ್ಲವೇ? ಹಾಗಾಗಿ ನಿನ್ನ ವಾಮಾಂಗಿಯಾದ ನನ್ನನ್ನು ಆ ಸಿಂಹವು ಬೇಡಿರಲು ನಿನ್ನೀ ಶರೀರವನ್ನು ಕೊಯ್ದು ಕೊಡುವುದೆ? ನನ್ನನ್ನು ಜೀವಸಹಿತ ಸಿಂಹದ ಬಲಿಗೆ ಅರ್ಪಿಸು; ನಾನು ಮುತ್ತೈದೆಯಾಗಿಯೇ ಸದ್ಗತಿಗೆ ಹೋಗುವೆನು."

ಕುಮುದ್ವತಿಯ ಬೇಡಿಕೆ ಶಾಸ್ತ್ರಸಮ್ಮತವೆಂದು ಎಲ್ಲರೂ ಒಪ್ಪಿದರು. ಬ್ರಾಹ್ಮಣನು ತುಸು ಹೊತ್ತು ಸುಮ್ಮನಿದ್ದನು. ಆ ಮೇಲೆ ಯೋಚಿಸಿ ಹೀಗೆ ಹೇಳಿದನು—

"ಎಲೈ ರಾಜನೇ. ನಿನ್ನ ಪತ್ನಿಯ ನುಡಿಯನ್ನು ನಾವು ಒಪ್ಪಬಹುದಿತ್ತು. ಸಿಂಹವು ಅರಸನ ದಕ್ಷಿಣ ಭಾಗವನ್ನು ಮೆಲ್ಲುವೆನೆಂದು ಹೇಳಿದ್ದಲ್ಲದೆ, ವಾಮಾಂಗವೆಂದಾಡಲಿಲ್ಲ. ಅದಕ್ಕೇನು ಮಾಡಲಿ!"

ಕುಮುದ್ವತಿಯ ಕೇಳಿಕೆ ನಿರರ್ಥಕವಾಗಲು ರಾಜಪುತ್ರನಾದ ತಾಮ್ರಧ್ವಜನು ಬಿನ್ನಹಗೈದನು—

"ಬ್ರಾಹ್ಮಣನೆ, ದಯೆದೋರು; ನಿನ್ನೊಡನೆ ನಾನು ಒಂದು ಪ್ರಾರ್ಥನೆ ಮಾಡುತ್ತೇನೆ. ನಾನು ತರುಣನು. ಪುಷ್ಟಿಯುಳ್ಳ ಶರೀರವುಳ್ಳವನೂ ಆಗಿರುವೆನು. ಸಿಂಹಕ್ಕೆ ನನ್ನ ಶರೀರ ಮಾಂಸದಿಂದ ಸಂತೋಷವಾದೀತು. ಪಿತೃಋಣವನ್ನು ಪುತ್ರನು ಸಲ್ಲಿಸಿದಂತೆಯೂ ಆಗುವುದು. ಶ್ರೀರಾಮ ಭೀಷ್ಮರಂತೆ ಕೀರ್ತಿಯು ನನಗೆ ಬರುವುದು. 'ಆತ್ಮಾವೈ ಪುತ್ರನಾಮಾಸಿ' ಎಂದು ಶ್ರುತಿ ಸಾರುವುದಿಲ್ಲವೆ? ತಂದೆ ಮಕ್ಕಳಲ್ಲಿ ಭೇದವಿಲ್ಲ; ನನ್ನ ಶರೀರವನ್ನು ತೆಗೆದುಕೋ."

"ರಾಜಪುತ್ರ. ನೀನೇನೋ ಕಪಟವಿಲ್ಲದೆ ಮಾತಾಡುತ್ತಿದ್ದೀಯೆ! ಆ ಪಾಪಿಯಾದ ಮೃಗರಾಜನು ನನ್ನೊಡನೆ. ರಾಜನ ಪುತ್ರನಾಗಲಿ. ಪತ್ನಿಯಾಗಲಿ ಬೇಕೆಂದು ಹೇಳಲಿಲ್ಲವಲ್ಲಾ? 'ಸಾಧ್ಯವಾದರೆ ಮಯೂರಧ್ವಜನ ದಕ್ಷಿಣಾಂಗವನ್ನು ತಾ: ನಿನ್ನ ಮಗನನ್ನು ಬಿಟ್ಟುಬಿಡುತ್ತೇನೆ" ಎಂದಿತು. ಹಾಗಾಗಿ ನಾನಿಲ್ಲಿಗೆ ಬಂದಿರುವೆನು. ಈ ರೀತಿ ನೀವು ಅಳುಕುವುದಿದ್ದರೆ ನನಗೇನೂ ಕೊಡಬೇಡಿರಿ. ನಾನು ಹೋಗಿ ಬಿಡುತ್ತೇನೆ."

ನಿರಾಶನಾಗಿ ತೆರಳುವ ಬ್ರಾಹ್ಮಣನನ್ನು ಅರಸನು ಸಮಾಧಾನ ಪಡಿಸಿದನು.

"ಅಯ್ಯೋ ಬ್ರಾಹ್ಮಣ, ರಾಣಿಯನ್ನಾಗಲಿ, ಮಗನನ್ನಾಗಲಿ ನಾನು ಅರ್ಪಿಸಲಾರೆನು; ನನ್ನ ಮಾತಿಗೆ ಕುಂದನ್ನು ತರಲಾರೆನು. ದೇವರು ಮೆಚ್ಚು

ವಂತೆ ಶರೀರದ ಅರ್ಧಭಾಗವನ್ನು ಕೊಯ್ದು ಈಗಲೇ ಕೊಡುತ್ತೇನೆ: ಸ್ವೀಕರಿಸು!"

ಅರಸನು ಸಾಣೆಹಿಡಿದ ಗರಗಸವನ್ನು ತನ್ನ ಪತ್ನಿಯ ಕೈಯಲ್ಲಿ ಕೊಡಿಸಿದನು.

"ಪ್ರಿಯೇ. ಏನೊಂದೂ ಕೊರತೆಬಾರದಂತೆ ಮಗನೊಡಗೂಡಿ ನೀನು ನನ್ನ ಉತ್ತಮಾಂಗವನ್ನು ಸೀಳಿ ಕೊಡು; ವ್ಯಸನಪಡಬೇಡ ದೇವರಿಗೆ ಮೆಚ್ಚುವ ಈ ಕೆಲಸವನ್ನು ಯಾವ ಉದಾಸೀನವೂ ಮಾಡದೆ ನೆರವೇರಿಸಿರಿ. ನನ್ನ ತಲೆಯ ಮೇಲಿನಿಂದ ಗರಗಸ ಇಳಿಸಿ, ಸರಿಯಾದ ಎರಡು ಹೋಳಾಗಿ ಸೀಳಿಬಿಡು."

ಪತಿಯ ಆಜ್ಞೆ ವೇದವಾಕ್ಯವೆಂದೇ ಕುಮುದ್ವತಿ ಒಪ್ಪಿದಳು. ಮಗನೊಡಗೂಡಿ ಗರಗಸವನ್ನು ಕೈಗೆತ್ತಿಕೊಂಡಳು. ಸಭೆ ಸಮಸ್ತರೂ ದೇವರಲ್ಲಿ ಮೊರೆಯಿಟ್ಟು ಬೇಡುತ್ತಿದ್ದರು. ಅರಸನು ಧ್ಯಾನಮಗ್ನನಾಗಿದ್ದನು. 'ರಾಮಾ, ರಾಮಾ' ಎಂದು ಜಪಿಸುತ್ತಾ ಕುಮುದ್ವತಿಯು ಪತಿಯ ದೇಹವನ್ನು ಓರೆ ಪೋರೆಗಳಿಲ್ಲದೆ ಎರಡಾಗಿ ಸೀಳಿದಳು. ಇದನ್ನು ಕಂಡು ಕಪಟ ವೇಷದ ಶ್ರೀಕೃಷ್ಣಾರ್ಜುನರು ಬೆರಗಾದರು. ಸಭೆಯಲ್ಲಿ ಸಮುದ್ರಘೋಷದಂತೆ ಹಾಹಾಕಾರವೆದ್ದಿತು. ಇಂತಹ ಘೋರಕೃತ್ಯವನ್ನು ಮಾಡುತ್ತಿರುವಾಗ ಅರಸನ ಹೆಂಡತಿಯಾಗಲಿ ಮಗನಾಗಲಿ ಒಂದಿಷ್ಟು ಅಳುಕಲಿಲ್ಲ. ಮಯೂರಧ್ವಜನು ಮಾಯಿನಲಿಲ್ಲ. ಆದರೆ, ರಾಜನ ವಾಮಾಕ್ಷಿಯಲ್ಲಿ ಕಣ್ಣೀರು ಒಸರುತ್ತಿರುವುದನ್ನು ವೃದ್ಧ ಬ್ರಾಹ್ಮಣನು ಕಂಡನು.

"ಅಯ್ಯೋ, ಇಷ್ಟು ವ್ಯಸನದಿಂದ ಕೊಡುತ್ತಿರುವವನ ದಾನವನ್ನು ಸ್ವೀಕರಿಸುವುದೆ? ಲೋಕದಲ್ಲಿ ಯಾಚಕನು ಎಂತಹ ಭಂಡನೋ? ನನಗೆ ಈ ದಾನ ಬೇಡ. ಮಗನನ್ನು ಸಿಂಹವು ತಿಂದರೆ ತಿನಲಿ."

ಹೀಗೆ ಹೇಳುತ್ತ ಶಿಷ್ಯನೊಡನೆ ತಿರುಗಿದನು.

ಎಂತಹ ಬಲಿದಾನವು ಇಂತು ನಿರರ್ಥಕವಾಗುವುದೆ? ಕುಮುದ್ವತಿ ಕಳವಳಿಸಿದಳು—

"ಅಯ್ಯೋ, ಪ್ರಿಯ! ವ್ಯರ್ಥವಾಗಿ ತಲೆಯನ್ನು ಸೀಳಿಸಿಕೊಂಡೆಯಲ್ಲಾ! ನಿನ್ನ ಎಡಗಣ್ಣಿನಲ್ಲಿ ಒಸರುತ್ತಿರುವ ಕಂಬನಿಯನ್ನು ಕಂಡು. ಬ್ರಾಹ್ಮಣನು. ನೀನು ಅಳುತ್ತಾ ದಾನಮಾಡುತ್ತೀಯೆಂದು ಹಿಂತಿರುಗಿ ಹೋಗುತ್ತಿರುವನು. ನಿನ್ನ ಈ ಅಸಾಮಾನ್ಯ ಬಲಿದಾನವೂ ಇಂತು ವಿಫಲವಾಯಿತಲ್ಲಾ!"

"ಪ್ರಿಯೆ, ಚಿಂತಿಸಬೇಡ; ನಾನು ಆತನಿಗೆ ಎಲ್ಲವನ್ನೂ ತಿಳಿಸುವೆನು. ದಯಮಾಡಿ ಅವನನ್ನು ಕರೆಸು. ತನ್ನ ಹೋಳುಗಳನ್ನು ಕೂಡಿಸಿ ಹಿಡಿದುಕೊ."

ಕುಮುದ್ವತಿಯು ಅರಸನ ತಲೆಯ ಹೋಳುಗಳನ್ನು ಜೋಡಿಸಿ ಹಿಡಿದು ಕೊಂಡಳು. ಬ್ರಾಹ್ಮಣನನ್ನು ಕರೆದು ತರುವರೆ ಮಗನನ್ನು ಅಟ್ಟಿದಳು. ಆತನು ಅವರನ್ನು ವಿನಯದಿಂದ ಒಪ್ಪಿಸಿ ಕರೆದು ತಂದನು. ಅರಸನು ಅರಿಕೆ ಮಾಡಿದನು.

"ಎಲೈ ಬ್ರಾಹ್ಮಣನೆ. ನಾನು ಗರಗರಸದ ನೋವಿನಿಂದ ಅಳುಕಿದವನಲ್ಲ. 'ನನ್ನ ಬಲಭಾಗವು ಉಪಕಾರಕ್ಕೆ ಸಂದಿತು. ಆದರೆ ಎಡಭಾಗವು ನಿರರ್ಥಕವಾಗಿ ಉಳಿಯಿತಲ್ಲಾ' ಎಂದು ಯೋಚಿಸಿ ಎಡಗಣ್ಣಿನಲ್ಲಿ ನೀರು ಒಸರಿತು."

ಆಹಾ! ಎಂತಹ ಮಾತು! ಅರಸನ ಈ ಪವಿತ್ರಚಿಂತೆಯನ್ನು ಕೇಳಿ ಸಭಾಸದರು ಸ್ತಂಭಿತರಾದರು. ಶ್ರೀಕೃಷ್ಣಾರ್ಜುನರು ರೋಮಾಂಚಿತರಾದರು. ಮಯೂರಧ್ವಜನ ಹೋಳುಗಳೆರಡನ್ನು ಶ್ರೀಕೃಷ್ಣನು ಕರುಣೆಯಿಂದ ಒಂದು ಗೂಡಿಸಿ, ಮೈಸವರಿ ಆಲಂಗಿಸಿದನು. ತನ್ನ ಕಪಟವೇಷವನ್ನು ಕಳೆದು ನಿಜವನ್ನು ತಿಳಿಸಿದನು—

"ಅಯ್ಯಾ, ನಿನ್ನನ್ನು ನಾನು ಪರೀಕ್ಷಿಸಿದೆನು. ನಿನ್ನಂತಹ ಭಕ್ತರು ಇದ್ದಾರೆಯೆ? ಇಗೋ, ಇವನು ಅರ್ಜುನನು. ಇನ್ನು ಮುಚ್ಚುಮರೆಯಾಕೆ? ನಾನೇ ಕೃಷ್ಣನು."

ಅರಸನ ಮುಂದೆ ಸುಪ್ರಸನ್ನ ಮುಖದ, ಕಮಲ ನಯನದ, ಮಕರ ಕುಂಡಲದ, ಲಲಿತ ನಾಸಿಕದ, ಹಣೆಯ ಕಸ್ತೂರಿ ತಿಲಕದ, ಸುಳಿಗೂದಳಿನ ಮಣಿ ಮಕುಟದ, ತುಲಸಿಮಾಲೆಯ ಶ್ರೀವತ್ಸಾಂಕಿತದ, ಸುಂದರ ಶರೀರದ ಸರ್ವಾಭರಣ ಶೋಭೆಯ ಶ್ರೀಕೃಷ್ಣನು ಶೋಭಿಸಿದನು!

ಪುಣ್ಯದರ್ಶನದಿಂದ ರಾಜನು ಪುಲಕಿತನಾದನು. ಶ್ರೀಕೃಷ್ಣನನ್ನು ಬಹಳ ಭಕ್ತಿಯಿಂದ ಭಜಿಸಿದನು. ದಿವ್ಯಮೂರ್ತಿಯನ್ನು ಕಣ್ದಣಿಯೆ ನೋಡಿದನು. ಶರೀರವನ್ನು ಶ್ರೀಕೃಷ್ಣನ ಪಾದತಲದಲ್ಲಿ ಈಡಾಡಿ, ದಂಡ ಪ್ರಣಾಮ ಮಾಡಿದನು; ನಾನಾ ವಿಧದಿಂದ ಸ್ತುತಿಸಿ ಪೂಜಿಸಿದನು. ರಾಜನ ಪತ್ನೀಪುತ್ರರೂ ಶ್ರೀಕೃಷ್ಣನಿಗೆ ಎರಗಿದರು. ಈ ಮಂಗಳದರ್ಶನದ ಸಂಭ್ರಮವನ್ನು ಕಂಡು ಸಭೆ ಸಮಸ್ತರೂ ಕೈಮುಗಿದುಕೊಂಡು ಶ್ರೀಕೃಷ್ಣನನ್ನು ಜಯಘೋಷದಿಂದ ಕೊಂಡಾಡುತ್ತಿದ್ದರು.

ಬಳಿಕ ಶ್ರೀಕೃಷ್ಣನು ಮಯೂರಧ್ವಜನನ್ನು ಸಮಾಧಾನಪಡಿಸಿದನು. ಶರೀರಾರ್ಧವನ್ನು ದಾನವಿತ್ತ ಭಕ್ತಿಗೆ ಮೆಚ್ಚಿದೆನೆಂದೂ, ತಾಮ್ರಧ್ವಜನ ಪೌರುಷವನ್ನು ಕಂಡು ಒಂದೆಯೇ ಹರ್ಷಿತನಾಗಿರುವೆನೆಂದೂ ತಿಳಿಸಿದನು. ಕೈಕೊಂಡ ಅಶ್ವಮೇಧವನ್ನು ಇನ್ನು ಪೂರೈಸೆಂದು ಹೇಳಿದನು.

"ದೇವಾ, ಇನ್ನು ಯಾವ ಪುಣ್ಯಕ್ಕಾಗಿ ನಾನು ಯಾಗಮಾಡಲಿ? ನಶ್ವರವಾದ ಶರೀರವನ್ನು ನಿನಗರ್ಪಿಸಿದ್ದೇನೆ. ನನ್ನ ಪುತ್ರನು ನಿಮ್ಮಿಬ್ಬರನ್ನು ಬಿಟ್ಟು ಬಂದ ವ್ಯಥೆಯಿಂದ ನಾನಿರಲು, ದಯೆಯಿಟ್ಟು ನೀವೇ ಬಂದಿರಿ; ಈಗ ನಾನು ಧನ್ಯನು. ನರನಾರಾಯಣರನ್ನು ನಾನು ಕಂಡೆನು. ಇನ್ನು ನನಗೇನು ಬೇಕಾಗಿದೆ? ಯುಧಿಷ್ಠಿರನೇ ಯಾಗ ಮಾಡಲಿ. ನನಗಾವುದೂ ಬೇಡ. ಪವಿತ್ರ ಗಂಗಾಜಲವಿರುವಾಗ ಬಾಯಾರಿಕೆಗಾಗಿ ಹಿಮದ ಹನಿಯನ್ನು ಹಾರೈಸುವು ದುಂಟೆ? ನಿನ್ನ ದರ್ಶನವಾದ ಮೇಲೆ, ಯಾವ ಯಾಗವೇಕೆ? ನನ್ನನ್ನೂ, ನನ್ನ ಸತಿಸಂತರನ್ನೂ, ನನ್ನಲ್ಲಿರುವ ಸಮಸ್ತ ರಾಜ್ಯಕೋಶಾದಿಗಳನ್ನು ಸರ್ವಸ್ವವನ್ನೂ ಇಗೋ ನಿನಗರ್ಪಿಸಿರುವೆನು."

ಭೂಪತಿಯ ಭಕ್ತಿಭಾವಕ್ಕೆ ಹರಿ ಹರ್ಷಿತನಾದನು. ಅರ್ಜುನನಿಗೆ ಆತನ ಉತ್ತಮ ಜೀವನದ ಆದರ್ಶವನ್ನು ತೋರಿಸಿದನು. ಆ ಮೇಲೆ ಅವರೆಲ್ಲರೂ ಮೂರು ದಿವಸಗಳ ವರೆಗೆ ರತ್ನಪುರಿಯಲ್ಲಿದ್ದು ಅರಸನಿಂದ ಅನೇಕ ವಿಧದ ಸತ್ಕಾರಗೊಂಡರು. ಅವನಿತ್ತ ಸಮಸ್ತ ವಸ್ತುಗಳನ್ನು ಹಸ್ತಿನಾವತಿಗೆ ಕಳುಹಿ ದರು. ಮಯೂರಧ್ವಜನೊಡಗೂಡಿ ಶ್ರೀಕೃಷ್ಣಾರ್ಜುನರು ಉಭಯಾಶ್ವಗಳನ್ನು ಕೂಡಿಕೊಂಡು ಮುಂದೆ ಸಾಗಿದರು.

೧೨

ಮಯೂರಧ್ವಜನ ಸೇನೆಯು ಪಾಂಡವ ಸೇನೆಯೊಡಗೂಡಿ ಮುನ್ನಡೆಯು ತ್ತಿರಲು ಭೂಮಂಡಲವು ತುಂಬಿದಂತೆ ತೋರುತ್ತಿತ್ತು. ಇಂತು ತುಂಬು ಪಡೆಯು ಮುಂಬರಿದು ಸೌರಾಷ್ಟ್ರ ದೇಶವನ್ನು ತಲಪಿತು. ಆ ದೇಶದಲ್ಲಿನ ಸಾರಸ್ವತವೆಂಬ ನಗರದಲ್ಲಿ ವೀರವರ್ಮನೆಂಬ ಅರಸನು ಆಳುತ್ತಿದ್ದನು. ಆತನು ಮಹಾಧರ್ಮಿಷ್ಠನೂ, ಪಾಪಭೀರುವೂ ಆಗಿದ್ದುದರಿಂದ ಅವನ ರಾಜ್ಯದಲ್ಲಿ ಆಧಿವ್ಯಾಧಿಗಳಾಗಲಿ, ಶೋಕಸಂತಾಪಗಳಾಗಲಿ ಇಲ್ಲದೆ ಸರ್ವರೂ ಸುಖವಾಗಿ ದ್ದರು. ಆತನಿಗೆ ಯಮಧರ್ಮನು ಮನೆಯಳಿಯನಾಗಿದ್ದು ಅವನಲ್ಲಿಯೇ ನೆಲೆನಿಂತಿದ್ದನು. ಆ ವೀರವರ್ಮನು ಪಾಂಡವ ಸೈನ್ಯವು ತನ್ನ ನಗರವನ್ನು ಪ್ರವೇಶಿಸಿತೆಂಬ ಸುದ್ದಿಯನ್ನು ಕೇಳಿ, ಖತಿಗೊಂಡು ಕೃಷ್ಣಾರ್ಜುನರ ಶೌರ್ಯ

ವನ್ನು ಪರೀಕ್ಷಿಸಬೇಕೆಂದು ಕುದುರೆಗಳನ್ನು ಕಟ್ಟಿ ಹಾಕಿಸಿದನು. ಆತನ ಮಕ್ಕಳಾದ ಸುಲಭ-ಸುಪಾಲ-ಕುವಲ-ನೀಲ-ಸರಳರೆಂಬ ಐವರು ಮಕ್ಕಳೂ ಪಿತೃವಾಕ್ಯದಂತೆ ಸಂಗ್ರಾಮಕ್ಕೆ ಸೈನ್ಯವನ್ನು ಸಜ್ಜುಗೊಳಿಸಿ ಕಾವಲನುಪಾದರು.

ವೀರವರ್ಮನು ಕಾಳಗಕ್ಕೆ ಸಿದ್ಧನಾಗಿ ಸೈನ್ಯವನ್ನು ಸಂಗ್ರಹಿಸುತ್ತಿರಲು, ಬಭ್ರುವಾಹನನು ಶತ್ರುಸೇನೆಯನ್ನು ನುಗ್ಗಿ ಕಾದಾಡತೊಡಗಿದನು. ಉಭಯ ಪಕ್ಷದವರಿಗೂ ಖಾತಾಖಾಡಿಯಾಗಿ ಬಾಹುನಖಮುಷ್ಟಿಕೇಶಾಕೇಶಿ ಮಲ್ಲಯುದ್ಧಗಳು ಹತಾಹತಿಗಳಿಂದ ನಡೆದುವು. ವೀರವರ್ಮನ ಐವರು ಪುತ್ರರೂ ರಣರಂಗಕ್ಕೆ ದುಮ್ಮಿಕ್ಕಿದರು. ಬಭ್ರುವಾಹನನ ಪಡೆಯನ್ನು ತಡೆದರು. ಶೂರ ಪಾರ್ಥಿಯ ಶರಹತಿಯಿಂದ ತನ್ನ ಪಡೆಯು ಕಂಗಾಲಾಗುತ್ತಿರುವುದನ್ನು ಕಂಡು ವೀರವರ್ಮನು ಇದಿರಾದನು. ಯಮಧರ್ಮನೂ ಸಹಾಯಕ್ಕೆ ಬಂದು ಪಾಂಡವಸೇನೆಯನ್ನು ಸಂಹರಿಸತೊಡಗಿದನು.

ಯಮಧರ್ಮನ ಉಗ್ರಸಂಗ್ರಾಮವನ್ನು ಕಂಡು ದಿಗಿಲುಗೊಂಡ ಅರ್ಜುನನು ಈ ಮಹಾವೀರನಾರೆಂದು ಕೃಷ್ಣನೊಡನೆ ಕೇಳಿದನು. ಅರ್ಜುನನಿಗೆ ಶ್ರೀಕೃಷ್ಣನು, ಈತನು ನಿನ್ನ ಹಿರಿಯಯ್ಯನಾದ ಯಮಧರ್ಮನೆಂದೂ, ಈ ಅರಸನಿಗೆ ಜಾಮಾತನಾಗಿರುವನೆಂದೂ ತಿಳಿಸಿ, ಆತನು ಸಾರಸ್ವತ ನಗರದಲ್ಲಿ ನೆಲೆನಿಂತಿರುವ ಕಾರಣಗಳನ್ನು ವಿವರಿಸಿದನು—

"ಅರ್ಜುನನೇ, ವೀರವರ್ಮಮಹಾರಾಜನಿಗೆ ಮಾಲಿನಿ ಎಂಬ ಹೆಸರಿನ ಮಮತೆಯ ಮಗಳೊಬ್ಬಳಿರುವಳು. ಆಕೆ ಪ್ರಾಪ್ತವಯಸ್ಕಳಾಗಲು ತಂದೆಯು ಆವಳಿಗೆ ವರಾನ್ವೇಷಣೆಗೆ ತೊಡಗಿದನು. ಆಕೆ, ತಂದೆಯೊಡನೆ, ತನಗೆ ಮನುಷ್ಯರಾದವರಲ್ಲಿ ಯಾರ ಮೇಲೂ ಇಚ್ಛೆಯಿಲ್ಲವೆಂದು ತಿಳಿಸಿದಳು. ಆಗ ರಾಜನು, ಆಕೆಯೊಡನೆ, ನೀನಾವನನ್ನು ಇಚ್ಛಿಸಿರುವೆಯೋ ಎಂದು ಕೇಳಲು. ಆ ಮಾಲಿನಿಯು ತಂದೆಯೊಡನೆ ಹೀಗೆ ಹೇಳಿದಳು—

"ಅಪ್ಪಾ, ಮನುಷ್ಯರಿಗೆ ಮರಣವು ಎಂದಿಗಾದರೂ ತಪ್ಪುವದಲ್ಲ. ಆದರಿಂದಲಾಗಿ ಮಾನವನ ಪಾಣಿಗ್ರಹಣಕ್ಕೆ ನನ್ನ ಮನಸ್ಸು ಒಡಂಬಡದು. ಅವರನ್ನು ಮದುವೆಯಾದರೆ ಪತಿಮರಣಾನಂತರ ನಾನು ಬೆಂಕಿಯಲ್ಲಿ ಬೀಳಬೇಕು ಇಲ್ಲವೇ ವಿಧವೆಯಾಗಿ ಬಾಳಬೇಕು. ಅಥವಾ ಕೆಟ್ಟ ಹಾದಿಹಿಡಿದು ಪಾಪಕೂಪಕ್ಕಿಳಿಯಬೇಕು. ಇದಾವುದಕ್ಕೂ ನನ್ನ ಮನಸ್ಸು ಒಪ್ಪದು. ಪತಿಯು ಜೀವಂತನಾಗಿರುವಾಗಲೇ ಸತಿಯು ಮೃತಿಹೊಂದಿದರೆ ಆಕೆಗೆ ಸದ್ಗತಿಯುಂಟೆಂಬರು. ಚಿತೆಗೆ ಬಿದ್ದು ಸತ್ತರೂ, ವಿಧವೆಯಾಗಿ ಅತ್ತರೂ, ಪಾಪ

ತಪ್ಪಿದ್ದಲ್ಲವೆಂಬುದು ನಿಶ್ಚಯ. ಸಂತಾನವನ್ನು ಪಡೆದು ಸ್ವರ್ಗವನ್ನು ಸೇರಲು, ಮನುಷ್ಯರ ಕೈಹಿಡಿದರೆ ಸಾಧ್ಯವಾಗಲಾರದು. ಹಾಗಾಗಿ ನಾನು ಯಮಧರ್ಮನನ್ನು ಭಜಿಸುತ್ತಿರುವೆನು. ಆತನಿಗೇ ನನ್ನನ್ನು ಮದುವೆ ಮಾಡಿಕೊಡು. ಲೋಕದಲ್ಲಿ ಸತ್ತವರೆಲ್ಲರೂ ಅವನ ಪಟ್ಟಣಕ್ಕೆ ಹೋಗುವರು. ಸುಕೃತ ದುಷ್ಕೃತಗಳನ್ನು ಆತನು ಬಲ್ಲವನಾಗಿರುವನು. ಅದರಿಂದ ಆತನೇ ನನಗೆ ಯೋಗ್ಯವರನು. ಇದು ಅತಿಯಾದ ಆಸೆಯೆಂದು ತಿಳಿಯಬೇಡ. ವ್ರತದಾನ ಜಪತಪಗಳಿಂದ ನಾನು ಆತನನ್ನು ಮೆಚ್ಚಿಸುವೆನು. ನಿನ್ನ ಪುಣ್ಯದ ಫಲವೂ ನನಗೆ ಅನುಕೂಲವಾಗುವುದು. ಧರ್ಮನೂ ನನಗೆ ಪತಿಯಾಗದಿರನು. ತಾತ. ಎಂತಾದರೂ ನೀನು ಆತನನ್ನು ಮೆಚ್ಚಿಸಿ ಅವನೊಡನೆ ನನ್ನ ವಿವಾಹವಾಗುವಂತೆ ಮಾಡು."

ಮಾಲಿನಿ ಇಂತು ಮನೋಗತವನ್ನು ತಂದೆಗೆ ತಿಳಿಸಲು, ಆಕೆಯ ಇಚ್ಛೆಗೆ ಪ್ರತಿ ಹೇಳಲಾಗದೆ ವೀರವರ್ಮನು ಯಮಸೂಕ್ತದಿಂದ ಯಮಧರ್ಮನನ್ನು ಪ್ರಾರ್ಥಿಸುತ್ತಿದ್ದನು. ಅದು ಮೊದಲ್ಗೊಂಡು ಮಾಲಿನಿಯು ದಿವಸ ರಾತ್ರಿ ಯಮನನ್ನು ನಾನಾ ವಿಧಾನಗಳಿಂದ ಪೂಜಿಸುತ್ತಿದ್ದಳು. ಹೀಗೆ ವರ್ಷಗಳೆಷ್ಟೋ ಸಂದುವು. ಮಾಲಿನಿಗೆ ಪ್ರಾಯ ಮೀರುತ್ತಿತ್ತು. ಯಮಧರ್ಮನು ಪ್ರತ್ಯಕ್ಷನಾಗಲೇ ಇಲ್ಲ. ಹೀಗಿರಲು ಈ ಧರ್ಮಕಾರ್ಯಕ್ಕೆ ಅನುಕೂಲ ಒದಗಿಸಬೇಕೆಂದು ಬಗೆದು ನಾರದಮುನಿಯೊಮ್ಮೆ ಯಮಪುರಕ್ಕೆ ಬಂದು ಯಮನೊಡನೆ ವೀರವರ್ಮ ಪುತ್ರಿಯ ವಿಚಾರವನ್ನು ತಿಳಿಸಿ, ನಿನ್ನನ್ನೇ ಹಾರೈಸಿ, ನೀನೇ ಪತಿಯಾಗಬೇಕೆಂದು ಭಜಿಸುತ್ತಿರುವ ಚಾರಿತ್ರ ಗುಣಶೀಲ ಸತ್ಯ ಧರ್ಮಗಳಿಂದ ಸಾರಸ್ವತ ಪುರವನ್ನು ಪಾವನಗೊಳಿಸುವ ಆ ಮಾಲಿನಿಯನ್ನು ಮದುವೆಯಾಗು ಎಂದನು. ನಾರದನ ಮಾತಿಗೆ ಯಮನೂ ಸಮ್ಮತಿಸಿದನು.

ಯಮಧರ್ಮನ ಒಪ್ಪಿಗೆಯ ಒಸಗೆಯು ವೀರವರ್ಮನಿಗೂ ನಾರದ ಮುನಿಯ ಮುಖದಿಂದ ತಿಳಿಯಿತು. ವೈಶಾಖ ಶುಕ್ಲಪಕ್ಷದಂದು ಧರ್ಮನು ಧರೆಗಿಳಿದು ಬಂದನು. ನಿರ್ಮಲಚರಿತ್ರಳಾದ ತನ್ನ ಮಗಳನ್ನು ಮದುವೆಯಾಗುವನೆಂಬ ಋಷಿವಾಕ್ಯವನ್ನು ಕೇಳಿ ಹರ್ಷಿತನಾಗಿ ಅಳಿಯನ ಆಗಮನದ ಸಲುವಾಗಿ ವೀರವರ್ಮನು ಪುರವನ್ನು ಸಿಂಗರಿಸಿದನು. ಬಂಧುಬಾಂಧವರೆಲ್ಲರನ್ನೂ ಬರಮಾಡಿದನು. ಅತ್ತ, ಯಮನು ತನ್ನ ಪರಿವಾರವನ್ನು ಕರೆಸಿ, ತನ್ನೊಡನೆ ಮದುವೆಗೆ ಬರಬೇಕೆಂದು ತಿಳಿಸಿದನು. ವಿಕಟಕರಾಳಾಕೃತಿಯ ಪರಿವಾರವೆಲ್ಲವೂ, ಯಮನಾಜ್ಞೆಯಂತೆ ದಿವ್ಯಾಕಾರವನ್ನು ತಾಳಿತು. ಕಾಲನು ಪಾಪಿಗಳ ಕಣ್ಣು

ಗಳಿಗೆ ಭಯಾಕಾರನೂ ಪುಣ್ಯಜೀವಿಗಳ ದೃಷ್ಟಿಗೆ ಸೌಮ್ಯಸುಂದರವಿಗ್ರಹನೂ ಆಗುವನೆಂದು ತಿಳಿಸುವಂತೆ ಸುಂದರ ಸ್ವರೂಪನಾಗಿ ತನ್ನಂತೆ ದಿವ್ಯಾಕಾರವನ್ನು ತಾಳಿದ ಪರಿವಾರದೊಡಗೂಡಿ ಸಾರಸ್ವತ ನಗರಕ್ಕೆ ನಡೆತಂದನು.

ಇಂತು ಆಗಮಿಸಿದ ಯಮಧರ್ಮನಿಗೆ, ವೀರವರ್ಮನು ನಾರದರೇ ಮೊದಲಾದ ಮುನಿಗಳ ಮುಂದೆ ಅಗ್ನಿಸಾಕ್ಷಿಯಾಗಿ ಮಗಳು ಮಾಲಿನಿಯನ್ನು ವಿಧಿವಿಹಿತದಿಂದ ಮದುವೆ ಮಾಡಿಸಿದನು. ವೀರವರ್ಮನ ಉಪಚಾರ ಸತ್ಕಾರ ಗಳಿಗೆ ಮೆಚ್ಚಿದ ಯಮಧರ್ಮನು ನಿನಗೆ ಬೇಕಾದ ವರಗಳನ್ನು ಬೇಡೆಂದು ಅರಸನೊಡನೆ ಹೇಳಿದನು.

"ಅಯ್ಯಾ, ಮಗಳನ್ನು ಮದುವೆ ಮಾಡಿ ಕೊಟ್ಟ ಮೇಲೆ ನಿನ್ನೊಡನೆ ಏನನ್ನು ಹೇಗೆ ತಾನೇ ಬೇಡಲಿ? ಕನ್ಯಾಶುಲ್ಕವು ಪಾಪವಲ್ಲವೇ?"

—ಧಾರ್ಮಿಕನಾದ ವೀರವರ್ಮನು ಶಂಕಿಸಿದನು.

"ರಾಜನೆ, ನಿನಗೆ ಸಂದೇಹ ಬೇಡ. ಸಂತೋಷದಿಂದ ದಾನಮಾಡಿದವನನ್ನು ದಾನ ತೆಗೆದುಕೊಂಡವನು ಹರಸದಿರಬಹುದೇ? ನನ್ನ ಮಾತನ್ನು ಹಿಂದುಗಳೆಯ ದಿರು; ಬೇಕಾದುದನ್ನು ಬೇಡಿಕೊ."

ಎಷ್ಟಾದರೂ ತಾನು ಮಾನವನು. ಅದರ ಮೇಲೆ ಪ್ರಾಯ ತುಂಬಿ ದವನು. ಅಲ್ಪ ಕಾಲದಲ್ಲಿಯೇ ತನಗೆ ಮರಣ ಸನ್ನಿಹಿತವಾಗುವುದೆಂಬುದು ನಿಶ್ಚಯ. ಹಾಗಾಗಿ, ಈ ಸುಸಂದರ್ಭವನ್ನು ಪುಣ್ಯಸಂಗ್ರಹಕ್ಕಾಗಿ ಸದುಪ ಯೋಗಿಸಬೇಕೆಂದು, ವೀರವರ್ಮನು ಬಗೆದನು—

"ಧರ್ಮನೇ. ಈ ನಗರಕ್ಕೆ ನಿನ್ನ ದಯೆಯಿಂದ ಮಹಾವಿಷ್ಣುವು ಆಗಮಿ ಸಲಿ. ಆತನು ಬರುವ ತನಕ ನನಗೆ ಮರಣ ಒದಗದಿರಲಿ. ನೀನು ಕೂಡಾ ಅದು ವರೆಗೆ ಈ ಪಟ್ಟಣವನ್ನು ಕಾದುಕೊಂಡಿರು. ಈ ವರವನ್ನು ಕರುಣಿಸು."

ವೀರವರ್ಮನ ಸದಾಶಯಕ್ಕೆ ಮೆಚ್ಚಿದ ಯಮನು 'ತಥಾಸ್ತು' ಎಂದನು. ಅಂದಿನಿಂದ ಈ ನಗರದಲ್ಲಿ ಮಾಲಿನಿ ಸಹಿತ ಆತನು ವಾಸವಾಗಿರುವನು. ಹಾಗಾಗಿ ಮಾವನ ಸಹಾಯಕ್ಕೆ ಅಳಿಯನು ಬಂದಿದ್ದಾನೆ. ನಿನ್ನನ್ನು ಕಾಣುವುದ ಕ್ಕಾಗಿ ವೀರವರ್ಮನು ಬರುತ್ತಿರುವನು. ಕೋದಂಡವನ್ನು ಸರಿಡಿಸು."

ಈ ರೀತಿಯಾಗಿ ವೀರವರ್ಮನ ವೃತ್ತಾಂತವನ್ನು ಅರ್ಜುನನಿಗೆ ಶ್ರೀಕೃಷ್ಣನು ಅರುಹಿದನು. ಅಷ್ಟರಲ್ಲಿ ಕಿರೀಟಿಯು ಗಾಂಡೀವವನ್ನು ಜೇಗೈದನು. ಅನಿರುದ್ಧ, ಸಾತ್ಯಕಿ, ಪ್ರದ್ಯುಮ್ನ, ಕೃತವರ್ಮ, ಹಂಸಧ್ವಜಾದಿಗಳು ಯುದ್ಧಸನ್ನದ್ಧರಾದರು.

ಅವರನ್ನು ಗಣಿಸದೆ ವೀರವರ್ಮನು ವೀರಸಮರೋತ್ಸಾಹದಿಂದ, ಅರ್ಜುನನ ರಥದ ಮುಂದಕ್ಕೆ ತನ್ನ ರಥವನ್ನು ತಂದು ನಿಲ್ಲಿಸಿದನು.

"ಶ್ರೀಕೃಷ್ಣ, ಈ ವೀರರಾರೂ ನನಗೆ ಸರಿಸಾಟಿಯರಲ್ಲ. ನಿನ್ನೊಡನೆಯೂ, ಅರ್ಜುನನೊಡನೆಯೂ, ಧ್ವಜದ ಮೇಲಿರುವ ಪವಮಾನಪುತ್ರನೊಡನೆಯೂ, ನನ್ನ ತೋಳತೀಟೆಯನ್ನು ತೀರಿಸಬೇಕೆಂದಿರುವೆನು. ನೀವು ಮೂವರೂ ತೊಲಗದಿರಿ."

ವೀರವರ್ಮನ ಬಾಣಗಳು ಮೂವರನ್ನೂ, ಮುತ್ತಿದುವು. ಅರ್ಜುನನು ಕೆರಳಿ ಕಣೆಗರೆದನು. ಅವರೊಳಗೆ ವಿಷಮಸಮರ ಸಾಗಿತು. ಅರುವತ್ತು ಬಾಣಗಳಿಂದ ವೀರವರ್ಮನು ಶ್ರೀಕೃಷ್ಣಾರ್ಜುನ ಹನುಮಂತರ ರಥಾಶ್ವಗಳನ್ನು ಏಕಕಾಲದಲ್ಲಿ ಎಚ್ಚನು. ಆ ಬಾಣಘಾತಿಗೆ ಅರ್ಜುನನು ಕೊರಗಿದನು. ಕಪಿ ಹಲ್ಗಿರಿದನು. ಕೃಷ್ಣನು ಕೈಮರೆತು ವಾಘೆಯನ್ನು ಸಡಿಲಿಸಿದನು. ರಥಾಶ್ವಗಳು ಪೆಟ್ಟು ತಡೆಯಲಾರದೆ ಓಡಿದುವು. ವೀರವರ್ಮನು ಅವರನ್ನು ಬೆಂಬತ್ತಿ ಸರಳಮಳೆ ಸುರಿಸಿದನು. ಆಕಾಶದಲ್ಲಿ ಮಿಂಚು ಸುಳಿವ ಹಾಗೆ ಶತ್ರುಸೇನೆಯಲ್ಲಿ ವೀರವರ್ಮನ ರಥ ತಿರುಗಿತು. ಎರಗುತ್ತಿರುವ ಸಿಡಿಲಿನಂತೆ ಅತನು ಉದ್ಘೋಷ ಮಾಡಿದನು. ಅವನ ಧನುಸ್ಸಿನಿಂದ ಸರಳಸರಿಗಳು ಸುರಿಯಲಾರಂಭಿಸಿದುವು. ಬಭ್ರು ವಾಹನಾದಿಗಳು ಕಂಗೆಟ್ಟರು. ಅರ್ಜುನನು ರೋಷಬದ್ಧಭ್ರುಕುಟಿಯಾದನು !

"ಪಾರ್ಥ, ಸಿಟ್ಟುಗೊಳ್ಳದಿರು. ನಿನಗಾಗಲಿ ನನಗಾಗಲಿ ಈತನು ಬಾಗುವವನಲ್ಲ. ವೀರವರ್ಮನು ಮಹಾ ಬಲಶಾಲಿಯು; ಎಲ್ಲರ ಹಾಗೆ ಇವನಲ್ಲಿ ಪೌರುಷ ಸಲ್ಲದು ಉಪಾಯಕೊಳ್ಳದು. ಜಯದ್ರಥನ ತಲೆ ತುಂಡರಿಸಿದ ಕಣೆ ಇವನಿಗೆ ನಿಲ್ಲದು. ರಥದ ಕಾಲಿಗೆ ಸಿಕ್ಕುಹಾಕಿದ ಭೂಮಿ ಇವನಿಗೇನೂ ಮಾಡಲೊಲ್ಲದು. ನಾನು ಸಿಟ್ಟುಗೊಂಡರೂ. ಶಿಶುಪಾಲನಂತೆ ಚಕ್ರದಲ್ಲಿ ಈತನ ಶಿರಚ್ಛೇದನಗೈಯಲಾರೆನು."

ಅರ್ಜುನನನ್ನು ಸಾಂತ್ವನಗೊಳಿಸಿ, ಹನುಮಂತನೊಡನೆ ಶ್ರೀಕೃಷ್ಣನು ಹೀಗೆಂದನು—

"ಎಲೈ ಹನುಮ, ನಿನ್ನ ಬಾಲದ ತುದಿಯಿಂದ ಈತನ ರಥವನ್ನು ಆಕಾಶದಲ್ಲಿ ಗರಗನ ತಿರುಗಿಸಿ ಕಡಲಿಗೆ ಎಸೆದು ಬಿಡು."

ಕೃತಯುಗದ ಕಲಿಯಾದ ಹನುಮಂತನಿಗೂ ಧೈರ್ಯವಿರಲಿಲ್ಲ.

"ಸ್ವಾಮಿ, ಇವನ ರಥವನ್ನು ಹೇಗೆ ಎಸೆದು ಬಿಡಲಿ? ಈತನು. ರಾವಣನ ಹಾಗೆಯೂ, ಜಂಬುಮಾಲಿಯಂತೆಯೂ. ಸೀತಾದೇವಿಗೆ ಕಾವಲ್ಲಿದ್ದ ರಕ್ಕಸಿಯರಂತೆಯೂ ಇಲ್ಲವಲ್ಲಾ !"

"ವಾಯು ಪುತ್ರ, ಸಂಶಯಪಡಬೇಡ, ನನ್ನ ಆಜ್ಞೆಯಿದೆ; ಧರ್ಮದ ಬೆಂಬಲವೂ ನಿನಗಿದೆ. ಇದು ನಿನಗೂ, ನಮಗೂ ಅವಶ್ಯವಾದ ಕರ್ತವ್ಯ."

ಶ್ರೀಕೃಷ್ಣನು ಹನುಮಂತನನ್ನು ಪುರಿದುಂಬಿಸಿದನು. ಹನುಮಂತನು ತನ್ನ ನೀಳವಾದ ಬಾಲವನ್ನು ನೀಡಿದನು. ಸಾರಥಿಕುದುರೆಸಹಿತ ಅಜೇಯನಾದ ವೀರವರ್ಮನ ರಥವನ್ನು ಬಾಲದಲ್ಲಿ ಬಿಗಿದು, ಕಡಲಿಗೆ ಎಸೆಯುವ ಸಲುವಾಗಿ ಗಗನಕ್ಕೆ ನೆಗೆದನು.

ಅಷ್ಟರಲ್ಲಿ ವೀರವರ್ಮನು ತನ್ನ ರಥದಿಂದ ದುಮ್ಮಿಕ್ಕಿ ಅರ್ಜುನನ ರಥದ ಮೇಲೇರಿ ಪೌರುಷದಿಂದ ಆಕಾಶಕ್ಕೆ ರಥವನ್ನು ಚಿಗಿಸಿ, ಬೊಬ್ಬಿರಿದನು---

ಒಳ್ಳೆ ಕಪಿವರನೆ, ಇಗೋ ಇಲ್ಲಿ ನೋಡು, ನಿನ್ನ ವಶದಲ್ಲಿ ನನ್ನ ಬರಿಯ ತೇರು ಮಾತ್ರ ಇರುವುದು. ಕೃಷ್ಣಾರ್ಜುನ ಸಮೇತವಾದೀ ರಥವು ನನ್ನ ಕೈಯ್ಯಲ್ಲಿದೆ ನನ್ನ ರಥವನ್ನು ನೀನೆಲ್ಲಿಗೆ ಎಸೆಯುವಿಯೋ, ಅಲ್ಲಿಗೆ ಕೃಷ್ಣಾರ್ಜುನ ಸಮೇತವಾದ ಈ ರಥವನ್ನೂ ನಾನು ಎಸೆಯುವೆನು. ಅಲ್ಲವಾದರೆ, ಅರ್ಜುನನ ಭಕ್ತಿಗೆ ಮೆಚ್ಚಿ ಆತನೊಡನೆಯೇ ತನ್ನ ಗಂಡನು ಸದಾ ಇರುವುದರಿಂದ, ಪತಿವಿರಹಖಿನ್ನೆಯಾದ ಮಹಾಲಕ್ಷ್ಮಿಗೆ ಸಂತೋಷವಾಗುವಂತೆ ಕ್ಷೀರೋದಧಿ ಗಾದರೂ ಇವನ್ನು ಬಿಸುಡುವೆನು. ಸಮುದ್ರಲಂಘನ ಮಾಡಿದ ನೀನೇನೋ ಮಹಾ ಸಾಹಸಿಯೆಂದು ತಿಳಿದುಕೊಂಡಿದ್ದೀಯೆ; ಆಕಾಶದಲ್ಲಿ ಸೂರ್ಯನಿದ್ದಾಗ ಚಂದ್ರನಿಗೆ ಶೋಭೆಯುಂಟೆ? ಎಲೈ ಮೂಢ: ನನ್ನ ಮುಂದೆಯೂ ನೀನು ಶೌರ್ಯತೋರಿಸುತ್ತೀಯಾ?"

ಹನುಮಂತನ ಮೇಲೆ ವೀರವರ್ಮನ ಬಾಣಗಳು ಕೀಲಿಸಿದುವು.

"ಎಲೈ ಶೂರನೆ, ನಾವು ಮುದುಕರಾಗಿದ್ದೇವೆ. ಈಗಿನವರ ಹಾಗೆ ನಮ್ಮ ಪೌರುಷವನ್ನು ನಾವೇ ಹೇಳಿಕೊಳ್ಳಲಾರೆವು."

ಹನುಮಂತನು ವೀರವರ್ಮನ ಮೇಲೆ ಎರಗಿದನು. ಕೃಷ್ಣಾರ್ಜುನ ಹನುಮಂತರನ್ನು ಸಂಬೋಧಿಸಿ ವೀರವರ್ಮನು ಹೇಳಿದನು—

"ನೀವು ಮೂವರೂ, ಮೂರು ಲೋಕದಲ್ಲಿಯೇ ಪರಾಕ್ರಮಿಗಳೆನಿಸಿ ದವರು. ನನ್ನೊಡನೆ ಸಾವಧಾನದಿಂದ ಯುದ್ಧ ಮಾಡುವಿರಾದರೆ ನಿಮ್ಮ ಶೌರ್ಯವನ್ನು ಪರೀಕ್ಷಿಸಬಹುದು."

ವೀರವರ್ಮನು ಹನುಮಂತನಿಗೆ ಮುಷ್ಟಿಯಿಂದ ತಿವಿದನು. ಅದರ ನೋವಿಗೆ ಆತನು ತೊಲಗಲು, ಶ್ರೀಕೃಷ್ಣನು ಅರಸನ ಎದೆಗೆ ತುಳಿದನು. ತುಳಿತದಿಂದ ಒಮ್ಮೆ ರಾಜನು ಮೂರ್ಛಿತನಾದರೂ ಒಡನೆ ಸೆಟೆದು ಎದ್ದು ನಿಂತು ನುಡಿದನು—

"ಎಲೈ ವೀರರೇ, ನೀವು ಮೂವರಿರುವಿರಿ; ನಾನು ಒಬ್ಬನೇ ಎಂದು ಆಟೋಪಪಬೇಡ. ಶ್ರೀಕೃಷ್ಣದರ್ಶನವಾಗುವ ತನಕ ನನಗೆ ಮರಣ ಸಂಭವವಿಲ್ಲ ವೆಂದು ಯಮಧರ್ಮನ ವರವಿದೆ. ಇಂದೀಗ ವಿಷ್ಣುಪಾದಸ್ಪರ್ಶವಾದ ಮೇಲೆ ಇನ್ನು ನನಗೆ ಮರಣವೆಲ್ಲಿಂದ?"

ಪುನಃ ತಮ್ಮ ರಥದ ಮುಂದೆ ನಿಂತು ಸೆಣಸಾಡುತ್ತಿರುವ ವೀರವರ್ಮ ನನ್ನು ಶ್ರೀಕೃಷ್ಣನು ನೋಡಿದನು. ಆತನ ಪೌರುಷವನ್ನು ಕಂಡು ಪ್ರೀತ ನಾದನು. ಭಕ್ತಿಗೆ ಕರುಣೆಗೊಂಡು ಸಂತುಷ್ಟನಾದನು.

"ಪಾರ್ಥ, ನಾನೂ ನೀನೂ ಇವನೊಡನೆ ಸಾವಿರ ವರ್ಷಗಳ ವರೆಗೆ ಹೋರಾಡಿದರೂ ಸಾಧ್ಯವಾಗದು. ಇವನು ಬಹಳ ಬಲಶಾಲಿಯು; ಶಸ್ತ್ರಾಸ್ತ್ರ ವಿಶಾರದನು. ನಮ್ಮ ವೀರರೆಲ್ಲರನ್ನೂ ಗೆದ್ದಿರುವನು. ಇವನ ಕೆಚ್ಚಿಗೆ ನಾನು ಮೆಚ್ಚಿರುವೆನು."

"ದೇವಾ, ನೀನು ಯಾರ ಕುರಿತು ಸಂತುಷ್ಟನಾಗಿರುವೆಯೋ ಆತನಿಗೆ ಲೋಕದಲ್ಲಿ ವಿಜಯವು ಸಿದ್ಧ; ಅವನೇ ಬಲಶಾಲಿಯೂ ಆಗುವನು. ಹಾಗಿರಲು, ಈತನು ನನ್ನ ಪೌರುಷಕ್ಕೆ ಸೋಲುವುದುಂಟೆ?"

ತನ್ನ ಕುರಿತು ಶ್ರೀಕೃಷ್ಣಾರ್ಜುನರು ಇಂತಹ ಮೆಚ್ಚುಗೆಯ ಮಾತನಾಡು ತ್ತಿರುವುದನ್ನು ವೀರವರ್ಮನು ಕೇಳಿ ಹರ್ಷಗೊಂಡನು. ಆತನ ಹೃದಯದಲ್ಲಿ ರೋಷವಿಂಗಿ ಸ್ನೇಹ ಸ್ಫುರಿಸಿತು. ಯುದ್ಧ ನಿಲ್ಲಿಸಿ ಬಂದು ಪಾರ್ಥನನ್ನು ಅಭಿ ವಂದಿಸಿದನು. ಕಿರೀಟಿಯನ್ನು ಕೊಂಡಾಡಿದನು !

"ಧನಂಜಯ, ಚರಾಚರವನ್ನೆಲ್ಲಾ ತನ್ನ ಬಾಹುಬಲದಿಂದ ಗೆಲ್ಲುವೆನೆಂಬ ಅಗ್ಗಳಿಕೆಯನ್ನು ಬಿಟ್ಟುಕೊಟ್ಟು, ಶ್ರೀಕೃಷ್ಣನು ಹೇಳಿದ ಮಾತಿಗೆ ಅನುಸರಿಸಿ, ನೀನು ಆಡಿದ ನುಡಿಯನ್ನು ಕೇಳಿ ನಾನು ಬಹಳ ಸಂತುಷ್ಟನಾದೆನು. ಇನ್ನು ನಿನ್ನೊಡನೆ ಹೋರಾಡುವ ಮನಸ್ಸಿಲ್ಲ."

ಧನುಸ್ಸನ್ನು ಕೆಳಗಿಟ್ಟು ವೀರವರ್ಮನು ಶ್ರೀಕೃಷ್ಣನ ಪಾದಗಳಿಗೆ ಎರಗಿದನು. ಆತನ ಶಿರವನ್ನು ಹರಿಯು ಹಿಡಿದೆತ್ತಿದನು. ಅರ್ಜುನನು ಅವನನ್ನು ಮನ್ನಿಸಿದನು. ಮಯೂರಧ್ವಜಾದಿಗಳೂ ಉಚಿತ ರೀತಿಯಿಂದ ಬಹುಮಾನಿಸಿದರು. ಮನೆಯಳಿ ಯನಾದ ಯಮಧರ್ಮನು ಬಂದು, ವೀರವರ್ಮನ ಆಗುಹೋಗಿನ ಭಾರವನ್ನು ಶ್ರೀಕೃಷ್ಣನ ವಶವೊಪ್ಪಿಸಿ ನಿಜನಗರಿಗೆ ತೆರಳಿದನು.

ವೀರವರ್ಮ ಮಹಾರಾಜನು ತನ್ನ ತನುದೇಶಕೋಶಾದಿಗಳೆಲ್ಲವನ್ನೂ ಶ್ರೀಕೃಷ್ಣಾರ್ಪಣಮಾಡಿ, ಭಕ್ತಿಯಿಂದ ಆತನನ್ನು ಉಪಚರಿಸಿ, ಅರ್ಜುನನನ್ನೂ,

ಸಮಸ್ತ ರಾಜರನ್ನೂ, ಚತುರಂಗಬಲವನ್ನೂ ಆರು ದಿನಗಳ ತನಕ ಷಡ್ರಸೋಪೇತವಾದ ಭೋಜನಗಳಿಂದಲೂ ಸಮುಚಿತ ಸತ್ಕಾರಗಳಿಂದಲೂ ಸಂತೋಷಗೊಳಿಸಿದನು. ಆ ಮೇಲೆ ಕುದುರೆಯ ಕಾವಲಿಗಾಗಿ ಅರ್ಜುನನೊಡನೆ ಬಲಸಮೇತ ಹೊರಟನು.

ಯಜ್ಞಾಶ್ವಗಳು ಸೌರಾಷ್ಟ್ರದೇಶದಿಂದ ಮುಂದಕ್ಕೆ ಸಾಗಿದುವು. ಮಾರ್ಗದಲ್ಲಿ ಭೀಕರಮಕರಸಮಾಕೀರ್ಣವಾದ ಮಹಾನದಿಯೊಂದು ಕಾಣಸಿಗಲು ಅದನ್ನು ನಾವಿಕರ ಮೂಲಕ ದಾಟಿ, ಸಮಗ್ರ ಸೇನಾಸಮೇತ ಅರ್ಜುನನು ಮುನ್ನಡೆದನು.

ಅಷ್ಟರಲ್ಲಿ ಶಿಶಿರರ್ತು ತಲೆದೋರಿತು. ಸುಡುವ ಸೂರ್ಯನು ಹಿಮಕರನಂತೆ ತಂಪಾದನು. ಬಿಸಿಲ ಬೇಗೆ ಬೆಳ್ದಿಂಗಳಂತಾಯಿತು. ತಾವರೆ ಹೂಗಳು ಮುದುಡಿದುವು. ಕೋಗಿಲೆಗಳ ಕಲರವವು ಕುಗ್ಗಿತು. ಸುಡುವ ಜ್ವಾಲೆ ಶೀತಳವಾಯಿತು. ಕೊರೆವ ಛಳಿ ಮೂರು ಲೋಕವನ್ನೂ ನಡುಗಿಸಿತು. ಕುದುರೆಗಳು ಮುಂದೆ ಸಾಗುತ್ತಿದ್ದುವು. ಬೆಂಗಾವಲಿನ ಪಡೆ ಹಿಂದೆ ಹೋಗುತ್ತಿತ್ತು.

೧೩

ಕೊರೆಯುವ ಮಾಗಿಯ ಚಳಿಗೂ ಯಜ್ಞಾಶ್ವವು ನಿಲ್ಲದೆ ಸಾಗಿತು. ಅರ್ಜುನನು ಸೇನಾಸಹಿತನಾಗಿ ಬಹಳದೇಶವನಪರ್ವತನದೀನದಗಳನ್ನು ದಾಟಿ. ಅದನ್ನು ಹಿಂಬಾಲಿಸಿ ಬರುತ್ತಿದ್ದನು. ಕುದುರೆಯು ಕಾಪಿನ ಭಟರ ಕಣ್ಣು ತಪ್ಪಿಸಿ ವಾಯುವೇಗದಿಂದ ಚಂದ್ರಹಾಸನು ಆಳುವ ಕುಂತಳ ನಗರದ ಕಡೆಗೆ ಧಾವಿಸಿತು. ಅಶ್ವವು ಅದೃಶ್ಯವಾಗಲು. ಬೆಂಗಾವಲಿನ ಭಟರು ಬಂದು ಅರ್ಜುನನಿಗೆ ತಿಳಿಸಿದರು. ಅರ್ಜುನನು ಶ್ರೀಕೃಷ್ಣನ ಮುಖನೋಡಿ ಚಿಂತಾಕ್ರಾಂತನಾದನು. ಅಷ್ಟರಲ್ಲಿ ಆಕಾಶದಿಂದ ಎರಡನೆಯ ಸೂರ್ಯನಂತೆ ತೇಜಸ್ವಿಯಾದ ತಪಸ್ವಿ ನಾರದನು ಇಳಿದು ಬಂದನು.

ಮಹರ್ಷಿಯನ್ನು ಶ್ರೀಕೃಷ್ಣನೇ ಮೊದಲಾದವರು ಸಂಭಾವಿಸಿದರು. ಲೋಕಸ್ಥಿತಿ ವಿಶಾರದನಾದ ನಾರದನೊಡನೆ ಅರ್ಜುನನು ವಿನಯಪೂರ್ವಕ ವಿನಂತಿಸಿಕೊಂಡನು.—

"ಮುನೀಶ್ವರನೇ, ನನ್ನ ಮಖತುರಗವು ಎಲ್ಲಿಗೋ ಕಣ್ಣುತಪ್ಪಿಸಿ ಹೋಗಿದೆ; ಈ ನೆಲದಲ್ಲಿ ಯಾವೆಡೆಯಲ್ಲಿ ಇರುವುದೆಂದು ಎಷ್ಟು ಹುಡುಕಾಡಿದರೂ ಅರಿಯ ಲೊಲ್ಲದು. ಇಲ್ಲಿ ಯಾರಾದರೂ ಬಲಶಾಲಿಗಳಿದ್ದಾರೆಯೆ? ಅವರು ಕಟ್ಟಿಹಾಕಿರ ಬಹುದೆ? ದಯಮಾಡಿ ತಿಳಿಸಬೇಕು."

"ಅರ್ಜುನಾ, ನಿನ್ನ ಕುದುರೆಯು ಕುಂತಳನಗರಕ್ಕೆ ಧಾವಿಸಿದೆ. ಅಲ್ಲಿಗ ಶೂರನಾದ ಚಂದ್ರಹಾಸನೆಂಬವನು ಅರಸನು; ಆತನು ಅದನ್ನು ಕಟ್ಟಿಹಾಕಿರು ವನು. ಹಿಂದಣ ಅರಸುಗಳ ಶೌರ್‍ಯವು ಈತನ ಹದಿನಾರನೆಯ ಒಂದು ಅಂಶ ದಷ್ಟಾಗದು. ಇವನು ಪರಮ ವೈಷ್ಣವನು. ಯುದ್ಧದಲ್ಲಿ ಈತನನ್ನು ಗೆಲ್ಲುವ ಶೂರನನ್ನು ಕಾಣೆನು. ಈತನ ಚರಿತ್ರವೂ ಬಹಳ ವಿಚಿತ್ರವಾದುದು."

"ಋಷಿವರ್‍ಯ, ಅಂತಹ ಪುಣ್ಯಪುರುಷನ ಚರಿತ್ರೆಯನ್ನು ದಯಮಾಡಿ ಆದ್ಯಂತದಿಂದ ನನಗೆ ವಿಸ್ತರಿಸಿ ತಿಳಿಸುವ ಕೃಪೆಮಾಡಬೇಕು."

"ಪಾರ್ಥ, ಇದು ಕಥೆಯನ್ನು ಕೇಳುವ ಸಮಯವೆ? ನಿನ್ನ ಕುದುರೆಯು ಬಂಧನಕ್ಕೊಳಗಾಗಿದೆ. ಹಸ್ತಿನಾವತಿಯಲ್ಲಿ ಯುಧಿಷ್ಠಿರನು ದೀಕ್ಷಿತನಾಗಿರುವನು; ಕುದುರೆಯನ್ನು ಬಿಡಿಸಿ, ಯಾಗದ ಮುಂದಣ ಕಾರ್‍ಯವನ್ನು ಕೈಕೊಳ್ಳು."

"ಮಹರ್ಷಿ, ಮನುಷ್ಯರ ಬಾಳುವೆ ನಶ್ವರವಲ್ಲವೆ? ವೈಷ್ಣವ ಕಥೆಯನ್ನು ಕೇಳದೆ ಮುಂದುವರಿಯಬಹುದೇ? ಭಗವಾನ್ ಶ್ರೀಕೃಷ್ಣನು ನನಗೆ ಗೀತಾಮೃತ ವನ್ನು ಉಭಯಬಲಮಧ್ಯದಲ್ಲಿ ತಿಳಿಸಲಿಲ್ಲವೆ?"

ಅರ್ಜುನನ ಮಾತು ನಾರದನಿಗೆ ಸರಿಯೆಂದು ತೋರಿತು; ಸಜ್ಜನನಾದ ಚಂದ್ರಹಾಸನ ಪುಣ್ಯಕಥಾಮೃತವನ್ನು ಅವನಿಗೆ ಈ ರೀತಿಯಾಗಿ ವಿವರಿಸಿದನು–

ಪಾರ್ಥ, ಹಾಗಾದರೆ ನಿನಗೆ ಇನ್ನು ಆ ಕಥೆಯನ್ನು ಹೇಳುತ್ತೇನೆ; ಗಮನ ವಿಟ್ಟು ಕೇಳು—

ಹಿಂದೆ, ಕೇರಳದೇಶದಲ್ಲಿ ಧರ್ಮಿಷ್ಠನೂ, ಗುಣಶಾಲಿಯೂ ಬಲಶಾಲಿಯೂ ಆದ ಮೇಧಾವಿಯೆಂಬ ಅರಸನಿದ್ದನು. ಅವನಿಗೆ ತನ್ನ ಪಟ್ಟದ ರಾಣಿಯಲ್ಲಿ ಬಹಳ ಭಾಗ್ಯಸಂಪನ್ನನಾಗಿ, ಎಡದ ಕಾಲಿಗೆ ಆರು ಬೆರಳುಳ್ಳವನಾಗಿ, ಹಗಲು ಹೊತ್ತಿನಲ್ಲಿ, ಮೂಲನಕ್ಷತ್ರದಲ್ಲಿ, ಅರಿಷ್ಟಾಂಶದಲ್ಲಿ ಒಬ್ಬ ಸುಕುಮಾರನು ಜನಿಸಿದನು.

ಪುತ್ರೋತ್ಸವವನ್ನು ಮಾಡಿ ಕೆಲವು ದಿನಗಳು ಸುಖವಾಗಿರಲು, ಆತನ ರಾಜ್ಯವನ್ನು ಶತ್ರುಗಳು ಬಂದು ಮುತ್ತಿಗೆ ಹಾಕಿದರು. ಕ್ಷತ್ರಿಯ ಧರ್ಮದಂತೆ ಅವರೊಡನೆ ಹೋರಾಡಿ ಮೇಧಾವಿಯು ಮಡಿದನು. ಪತಿವ್ರತೆಯಾದ ಆತನ

ಪತ್ನಿಯು ಪತಿಯ ಚಿತಾಗ್ನಿಗೆ ಬಿದ್ದು ಸಹಗಮನ ಮಾಡಿದಳು. ಶತ್ರುರಾಜರು ಕೇರಳ ದೇಶವನ್ನು ಸ್ವಾಧೀನಪಡಿಸಿ ಆಳತೊಡಗಿದರು.

ರಾಜಪುತ್ರನನ್ನು ಶತ್ರುಗಳ ದೃಷ್ಟಿಗೆ ಬೀಳಲೀಯದೆ, ದಾದಿಯೊಬ್ಬಳು ತೆಗೆದುಕೊಂಡು ಆ ನಗರದಿಂದ ಹೊರಹೊರಟಳು. ಮೆಲ್ಲಮೆಲ್ಲನೆ ಬಂದು ಕುಂತಳನಗರವನ್ನು ಪ್ರವೇಶಿಸಿದಳು. ಅಲ್ಲಿ ಆ ಮಗುವನ್ನು ಅತಿ ಮಮತೆ ಯಿಂದ ಸಾಕಿದಳು. ಶಿಶುವಿಗೆ ಬೇಕಾದುದೊಂದೂ ಇಲ್ಲವಾಗಲು ಮರುಗು ವಳು; ಪಟ್ಟಣದಲ್ಲಿ ತಿರುಗಾಡಿ ಸಾಕುವಳು; ಮಗುವಿನ ಕಷ್ಟವನ್ನು ನೋಡಿ ಅಳುವಳು; ಹಸುಳೆಯ ವಿನೋದಗಳನ್ನು ಕಂಡು ಮುದ್ದಿಸಿ ಹಿಗ್ಗುವಳು; ಎಳೆ ಕಂದನನ್ನು ನೋಡಿ ದಿನದಿನವೂ ದುಃಖಿತೆಯಾಗುವಳು; ಅತ್ತು ಬಿಸುಸುಯ್ಯು ಬೇಯುವಳು; ಮನಸ್ಸಿನಲ್ಲಿಯೇ ಇಂತು ಮರುಗುವಳು.

"ಅಯ್ಯೊ ಕಂದ, ಮಲಗುವರೆ ನಿನಗೆ ತೊಟ್ಟಿಲು ಇಲ್ಲವಲ್ಲಾ ! ನಿನ್ನನ್ನು ತೂಗುವವರಾದರೂ ಯಾರಿದ್ದಾರೆ? ನಿನಗೆ ಬಂಗಾರದ ಆಭರಣಗಳೂ ಇಲ್ಲ. ಇರಲು ಮನೆಯಾದರೂ ಉಂಟೆ? ಸ್ನಾನ ಮಾಡಿಸಲು ಬಿಸಿನೀರೆಲ್ಲಿದೆ? ಕುಡಿ ಯಲು ಹಾಲಾಗಲಿ, ಎಣ್ಣೆಬೆಣ್ಣೆಗಳಾಗಲಿ ಯಾವುವೂ ಇಲ್ಲ ! ಲಾಲಿಸಿ ಸಂತೋಷ ಪಡುವ ತಂದೆತಾಯ್ಗಳಾದರೂ ಇದ್ದಾರೆಯೆ? ರಾಜನಾದ ಕೇರಳಾಧೀಶ್ವರನು ಹಲವು ಹರಕೆಗಳನ್ನು ಹೊತ್ತು ಇಂತಹ ಕಷ್ಟವನ್ನು ಅನುಭವಿಸುವ ಸಲುವಾಗಿ ನಿನ್ನನ್ನು ಪಡೆದನೆ? ಅಕಟಾ ! ಈ ದುಃಖವನ್ನು ನೋಡುವ ನನ್ನ ಕಣ್ಣುಗಳೂ ಒಡೆಯಲಾರವಲ್ಲಾ !

"ಆಹಾ ! ಹೊಳೆವ ಹಲ್ಲು ಕಾಣಿಸುತ್ತದೆ; ಸುರಿವ ಜೊಲ್ಲು ಶೋಭಿಸು ತ್ತದೆ; ಮೆಲ್ಲಮೆಲ್ಲನೆ ಅಡಿಯಿಡುತ್ತದೆ; ತೊದಲು ಮಾತನಾಡುತ್ತದೆ. ಹೊಳೆ ಹೊಳೆಯುವ ಸೌಂದರ್ಯವನ್ನು ಹೊರಸೂಸುವ ಮುಗುಳ್ನಗೆಯಿಂದ ಮುಖ ಮೆರೆಯುತ್ತಿದೆ; ಕಣ್ಣುಗಳು ಹೊಳೆಯುತ್ತಿವೆ; ಮೃದುಕಪೋಲಗಳು ನುಣ್ಣನೆ ಶೋಭಿಸುತ್ತವೆ, ಹಣೆ ಚೆಲುವಾಗಿದೆ. ಮುಂಗುರುಳು ಜೋಲುತ್ತದೆ; ಅಂಬೆ ಗಾಲಿಕ್ಕುತ್ತದೆ; ಸುಳಿ ಹೊಕ್ಕುಳು ಬೆಳಗುತ್ತದೆ; ತುಟಿ ಕೆಂಪಾಗಿದೆ; ತೊಡೆ ಉರು ಟಾಗಿದೆ; ತೋಳು ಸುಂದರವಾಗಿರುವುದು. ಅಯ್ಯೋ ! ಮೈಯಲ್ಲಿ ದೂಳು ತುಂಬಿರುವುದು. ಅಕಟಾ ! ಈ ಸುಂದರ ಶಿಶುವನ್ನು ಎತ್ತಿ ನಲಿದಾಡಿಸುವವರು ಯಾರೂ ಇಲ್ಲವಲ್ಲಾ !

ಬಾಲಕನ ಲೀಲಾವಿನೋದಗಳನ್ನು ಕಂಡು ಒಮ್ಮೆ ಆಕೆ ಹಿಗ್ಗುವಳು; ಆರೈಕೆ ಸರಿಯಾಗಿಲ್ಲವಲ್ಲಾ ಎಂದು ಮಗುಳೊಮ್ಮೆ ಮರುಗುವಳು. ಇಂತು ನಡೆ

ನುಡಿಗಳನ್ನು ಕಲಿವ ವರೆಗೆ ಶಿಶುವನ್ನು ಅತೀ ಅಕ್ಕರೆಯಿಂದ ಸಾಕಿದಳು; ಆ ಮೇಲೆ ರೋಗಗ್ರಸ್ತಳಾಗಿ ಆ ದಾದಿಯೂ ಮರಣಹೊಂದಿದಳು. ಶಿಶು ನಿರಾಧಾರನಾಗಿ ಪಟ್ಟಣದ ಜನರ ಕರುಣೆಗೆ ಪಾತ್ರನಾದನು. ಚೆಲುವಿನ ಆ ಕಂದನು ಬೀದಿಯಲ್ಲಿ ಬಂದು ದಿಕ್ಕಿಲ್ಲದೆ ನಿಂತಿರಲು, ಕಂಡಕಂಡ ಹೆಂಗುಸರೆಲ್ಲಾ ಕರೆಕರೆದು ಎತ್ತಿಕೊಂಡು ಸವಿಯಾದ ಹಣ್ಣುಗಳನ್ನು ಕಜ್ಜಾಯಸಕ್ಕರೆಗಳನ್ನು ತಿನಗೊಡುವರು, ಮಗುವಿನ ತೊದಲ್ನುಡಿಗಳನ್ನು ಕೇಳಿ ಮುದ್ದಿಸುವರು: ಬೇಕಾದುದನ್ನೀಯುವರು; ಪ್ರೀತಿಯಿಂದ ಮಕ್ಕಳ ಜತೆಯಲ್ಲಿ, ಸ್ನಾನಮಾಡಿಸಿ, ಮಡಿತೊಡಿಸಿ ಮೃದುವಾದ ಹಾಸಿಗೆಯಲ್ಲಿ ಮಲಗಿಸುವರು. ಪರಪುಟ್ಟನಾಗಿ ಪಟ್ಟಣದ ಬೀದಿಗಳಲ್ಲಿ ತಿರುಗುತ್ತಿರುವ ಬಾಲಕನ ಸುಂದರ ರೂಪವನ್ನು ಕಂಡು ಮೋಹಗೊಂಡು. ನಗರದ ವಿಲಾಸಿನಿಯರು ತಮ್ಮ ತಮ್ಮ ಭವನಗಳಿಗೆ ಕರೆದುಕೊಂಡು ಹೋಗಿ ಪರಿಮಳ ಸುಗಂಧಗಳನ್ನು ಹಚ್ಚಿ, ಕತ್ತುರಿಯ ತಿಲಕವಿಟ್ಟು, ಸುವಾಸನೆಯ ಸುಮಗಳನ್ನು ಸೂಡಿ, ಕಪ್ಪುರವೀಳ್ಯವನ್ನು ಕೊಟ್ಟು, ಮಡಿಯುಡಿಸಿ ಅಲಂಕರಿಸಿ ಕಳುಹಿಸುತ್ತಿದ್ದರು.

ಆ ಬಾಲಕನು ಆಡುವ ಎಳೆಯ ಮಕ್ಕಳೊಡನೆ ಆಡುವನು: ನೋಡಲಿರುವ ಆಶ್ಚರ್ಯಗಳನ್ನು ನೋಡುವನು. ಇತರ ಮಕ್ಕಳ ಜತೆಯಲ್ಲಿ ಮನೆಮನೆಗಳಿಗೆ ಹೋಗಿ ಅಲ್ಲಿ ಊಟ ಮಾಡುವನು. ಎಲ್ಲರಿಗೂ ಮುದ್ದು ಮೋಹನನಾದನು. ಹಾಡುವವರ, ನೋಡುವವರ, ಸಾಧನೆಯನ್ನು ಮಾಡುವವರ ಜತೆಯಲ್ಲಿ ಆ ಪಟ್ಟಣದ ಬೀದಿಬೀದಿಗಳಲ್ಲಿ ಎಲ್ಲರೊಡನೆ ಸೇರಿ ಬೆಳೆದನು.

ಒಂದು ದಿನ ಆತನ ಕಣ್ಣುಗಳಿಗೆ ಸಣ್ಣ ಸಾಲಿಗ್ರಾಮದ ರಮಣೀಯ ಶಿಲೆಯೊಂದು ಗೋಚರಿಸಿತು. ಪ್ರೀತಿಯಿಂದ ಅದನ್ನು ಎತ್ತಿಕೊಂಡು. ಗೆಳೆಯರಿಗೆ ತೋರಿಸಿ, ಉರುಟಾದ ಈ ಕಲ್ಲು ಹೀಗೆ ಚಂದವಾಗಿರುವುದು ಸೋಜಿಗವೆಂದು ಹಿಡಿದು ಆಟವಾಡಿದನು. ಆಟ ಮುಗಿದೊಡನೆ. ಅದನ್ನು ಇಟ್ಟುಕೊಳ್ಳಲು ತನಗೆ ಮನೆಯಿಲ್ಲದುದರಿಂದ ತನ್ನ ಬಾಯಿಯಲ್ಲಿಯೇ ಇರಿಸಿಕೊಂಡನು. ಆ ದಿವ್ಯ ಸಾಲಿಗ್ರಾಮ ಶಿಲೆಯ ಪ್ರಭಾವದಿಂದಾಗಿ ಜತೆಯ ಮಕ್ಕಳೊಡನೆ ಗೋಳಿಯನ್ನಾಡುತ್ತಿರುವಾಗ, ಅದನ್ನೇ ಗೋಳಿಕಲ್ಲನ್ನಾಗಿ ಮಾಡಿ ಪ್ರತಿಯೊಂದು ಆಟದಲ್ಲಿಯೂ ಗೆಲ್ಲುವನು. ಗೆದ್ದು ಹಿರಿಹಿಗ್ಗುವನು. ಸಸ್ನೇಹದಿಂದ ಅವರೊಡನೆ ನಗುತ್ತಾ ವಿನೋದಗೊಂಡು, ಊಟಮಾಡುವ ಹೊತ್ತಿಗೆ ಮಾತ್ರ ತನ್ನ ಕೈಗೆ ತಂದುಕೊಂಡು, ಉಳಿದ ಹೊತ್ತಿನಲ್ಲೆಲ್ಲಾ ಬಾಯಲ್ಲೆ ಇರಿಸಿಕೊಳ್ಳುವನು.

ಈ ರೀತಿ. ಆ ಮಹಾಪಟ್ಟಣದಲ್ಲಿ ಬಾಲಕರೊಡನೆ ಆಡುತ್ತಿರುವ ಹಸುಳೆಗೆ ಐದು ವರ್ಷಗಳು ತುಂಬಿದುವು. ಆ ಸಮಯದಲ್ಲಿ ಆ ರಾಜ್ಯದಲ್ಲಿ ಪ್ರಬಲನಾಗಿದ್ದ ದುಷ್ಟಬುದ್ಧಿಯೆಂಬ ಕುಂತಳರಾಜನ ಮಂತ್ರಿಯು, ತನ್ನ ಮನೆಯಲ್ಲಿ ಬ್ರಾಹ್ಮಣಸಂತರ್ಪಣೆಯೊಂದನ್ನು ಮಾಡಿಸಿದನು. ಭೋಜನಾನಂತರ ಸತ್ಕಾರಗೊಂಡವರಾಗಿ ಬ್ರಾಹ್ಮಣರು ಮಂತ್ರಿಯನ್ನು ಹರಸುತ್ತಿದ್ದರು. ಅಷ್ಟರಲ್ಲಿ, ಅಲ್ಲಿ ಜತೆಯ ಹುಡುಗರೊಡನೆ ಆಡುತ್ತಿದ್ದ ಆ ಬಾಲಕನನ್ನು ಅವರು ನೋಡಿದರು. ಅವನಲ್ಲಿರುವ ರಾಜಲಕ್ಷಣಗಳನ್ನು ನೋಡಿನೋಡಿ ಬೆರಗಾದರು; ಬಹಳ ಸಂತೋಷಗೊಂಡರು.

"ಅಯ್ಯಾ, ಮಂತ್ರಿಯೇ ಅವನು ಯಾರ ಮಗನು? ಎಲ್ಲಿಂದ ಬಂದನು?" ಬ್ರಾಹ್ಮಣರು ಕುತೂಹಲದಿಂದ ದುಷ್ಟಬುದ್ಧಿಯನ್ನು ವಿಚಾರಿಸಿದರು. ಅವರ ಕುತೂಹಲವು ದುಷ್ಟಬುದ್ಧಿಗೆ ಅರ್ಥವಾಗಲಿಲ್ಲ. ಅವನು ನಗುತ್ತ ಹೇಳಿದನು—

"ಹೀಗೆ ದಿಕ್ಕಿಲ್ಲದ ಹುಡುಗರು ಈ ಪಟ್ಟಣದಲ್ಲಿ ಎಷ್ಟು ಮಂದಿ ಇಲ್ಲ. ಇವನು ಎಲ್ಲಿಯವನೋ, ಯಾರ ಮಗನೋ ತಿಳಿಯದು; ರಾಜಕಾರ್ಯದಲ್ಲಿ ಮಗ್ನರಾಗಿರುವ ನಮಗೆ ಇಂತಹ ಚಿಂತೆಗಳೆಲ್ಲ ಏತಕ್ಕೆ"

ಮಂತ್ರಿಯ ತಿರಸ್ಕಾರ ಭಾವನೆ ಸಮಂಜಸವಲ್ಲವೆಂದವರು ಬಗೆದರು—

"ಹೇಗೂ ಇರಲಿ. ಇಂತು ಸಲ್ಲಕ್ಷಣಗಳಿಂದ ಕೂಡಿದ ಈ ಸುಂದರ ಬಾಲಕನು ಮುಂದೆ, ಈ ಕುಂತಳಾಧೀಶ್ವರನು ಆಳುವ ರಾಜ್ಯಕ್ಕೆ ಅಧಿಪತಿಯಾಗುವನು. ಈತನನ್ನು ಇರಿಸಿಕೊಂಡು ರಕ್ಷಣೆಮಾಡಿಕೊ."

ದುಷ್ಟಬುದ್ಧಿಗೆ ವಜ್ರಾಘಾತವಾದಂತಾಯಿತು! ಈಗಲೇ, ಹಸುಳೆಯ ಕುತ್ತಿಗೆ ಹಿಸುಕಿ ಕೊಂದುಬಿಡಲೇ ಎನಿಸಿತು! ಆದರೂ ಮನದ ರೋಷವನ್ನು ಹೊರತೋರಿಸಲಿಲ್ಲ. ಕ್ರೂರವಾದ ಮೊಸಳೆಗಳಿಂದ ತುಂಬಿರುವ ಕೆರೆ ಮೇಲ್ಗಡೆಯಲ್ಲಿ ನಿರ್ಮಲಜಲದಿಂದ ಶೋಭಿಸುವ ಹಾಗೆ, ಮನಸ್ಸಿನಲ್ಲಿ ಅತಿ ಕಠೋರ ಭಾವನೆಗಳನ್ನು ಇಟ್ಟುಕೊಂಡಿದ್ದರೂ, ಹೊರಗೆ ವಿನಯವುಳ್ಳವನಾಗಿ, ರಾಜಲಕ್ಷಣಸಮನ್ವಿತವಾದ ಶಿಶುವನ್ನು ನೋಡಿ, ಬ್ರಾಹ್ಮಣರ ಮಾತಿಗೆ ಒಪ್ಪಿದವನಂತಿದ್ದು, ಅವರೆಲ್ಲರನ್ನೂ ಸತ್ಕರಿಸಿ ಮನೆಯಿಂದ ಕಳುಹಿಸಿಕೊಟ್ಟನು.

ದುರ್ಮಂತ್ರಿಯ ಕಠಿಣ ಮನೋಮಂದಿರದಲ್ಲಿ ಚಿಂತಾವಿಷಸಂತಾನಗಳುದ್ಭವಿಸಿದುವು,

"ಈ ಕುಂತಳ ರಾಜನಿಗೆ ಪುತ್ರಸಂತತಿಯಿಲ್ಲ. ರಾಜ್ಯವು ನನ್ನ ಏಕಾಧಿಪತ್ಯಕ್ಕೆ ಬಂದಿದೆ. ಮುಂದೆ ಈ ಪೋರನು ನಮ್ಮ ಪೊಡವಿಯನ್ನಾಳುವನಂತೆ!

ಅಯ್ಯೋ ! ಬ್ರಾಹ್ಮಣರ ಮಾತು ಸತ್ಯವಾದರೆ ಹೇಗೆ? ನನ್ನ ಮಕ್ಕಳಿಗೆ ಸಲ್ಲಬೇಕಾದ ಸಂಪತ್ತು ವ್ಯರ್ಥ ಕೈತಪ್ಪಿಹೋಗುವುದಲ್ಲಾ !"

ದುಷ್ಟಬುದ್ಧಿಯ ದುರ್ಮತಿಗೆ ದುಷ್ಕೃತ್ಯವೊಂದು ತಟ್ಟನೆ ಹೊಳೆಯಿತು. ಭಯಾಕಾರದ ಶರೀರವುಳ್ಳ ಚಂಡಾಲರನ್ನು ಕರೆಸಿ, ಯಾರಿಗೂ ತಿಳಿಯದಂತೆ ಅವರಿಗೆ ಕಟ್ಟಪ್ಪಣೆಯಿತ್ತನು—

"ಕಾಡಿನ ನಡುವೆ ಈ ಹುಡುಗನನ್ನು ಕಡಿದು ಕೊಂದುಹಾಕಿ ನನಗೆ ನೀವು ಏನಾದರೂ ಒಂದು ಕುರುಹನ್ನು ತಂದುಕೊಡತಕ್ಕದ್ದು !"

ಹಿರಣ್ಯಕಶಿಪುವಿನ ಆಜ್ಞೆಯಂತೆ ಕಾಳರಕ್ಕಸರು ಪ್ರಹ್ಲಾದನನ್ನು ಕೊಂಡೊಯ್ದ ಹಾಗೆ, ನಿರ್ದಯರಾಗಿ ಕೊಲೆಗಡುಕರು ಬಾಲಕನನ್ನು ಹಿಡಿದೆತ್ತಿ ಕೊಂಡೊಯ್ದರು ! ಪಾತಕಿಗಳ ಒಡಲಲ್ಲಿರುವ ಪರಮಾತ್ಮನಂತೆಯೂ, ಯಮದೂತರ ಎಳೆದಾಟದಲ್ಲಿ ಬಿದ್ದ ಅಜಾಮಿಳನಂತೆಯೂ, ಕಾಗೆಗಳ ಗುಂಪಿನಲ್ಲಿ ಸಿಕ್ಕಿದ ಕೋಗಿಲೆಯ ಮರಿಯಂತೆಯೂ, ಕಳೆಗುಂದಿ ಕತ್ತಲೆಯಲ್ಲಿರುವ ಶೀತಲಶಶಿಕಿರಣದಂತೆಯೂ, ಬಹಳ ಕೋಪಿಷ್ಠನಾದವನಲ್ಲಿರುವ ವಿವೇಕವಂತೆಯೂ ಕೊಲೆಗಡುಕರ ನಡುವೆ ಬಾಲಕನು ಅಂಜುತ್ತಾ ಅಳುತ್ತಾ ಸಂಕಟಗೊಂಡಿದ್ದನು.

ಚಂಡಾಲರು ಹೆಗಲ ಮೇಲೇರಿಸಿ ಒಯ್ಯುತ್ತಿರಲು, ಆತನು ಭಯದಿಂದ ಬೆದರಿದನು. ಬಾಯಲ್ಲಿ ಯಾವಾಗಲೂ ಇಟ್ಟುಕೊಂಡಿರುವ ದಿವ್ಯಸಾಲಿಗ್ರಾಮ ಶಿಲೆಯ ಮಹಿಮೆಯಿಂದಾಗಿ "ದೇವರೇ, ದೇವರೇ, ಕಾಪಾಡು !" ಎಂದು ಮೊರೆಯಿಟ್ಟನು.

ದೇವರ ನಾಮಸ್ಮರಣೆಯ ಪ್ರಭಾವವು ಎಂತಹುದೋ ! ಕಂದನ ಕರುಣಾಕ್ರಂದನದಿಂದ ಕಟುಕರ ಕಠಿಣಹೃದಯವೂ ಕರಗಿತು; ಹಸುಳೆಯನ್ನು ಹೊತ್ತುಕೊಂಡು ಬಂದು ಅವರು ಕಗ್ಗಾಡಿನ ನಡುವೆ ಇಳಿಸಿದರು; ಅಂತಹ ಪಶುಘಾತಕಿಗಳು ಕೂಡಾ ಮಗುವಿನ ಮುಖ ನೋಡಿ ಮರುಕಪಟ್ಟರು. ನಿಟ್ಟುಸಿರು ಬಿಟ್ಟು ನೊಂದುಕೊಂಡರು. ಶಿಶುವಧೆಗೆ ಅವರ ಹೃದಯವು ಅಳುಕಿತು. ಬಹಳ ಹೊತ್ತು ವಿಚಾರಿಸಿದರು. ಯೋಚಿಸುತ್ತಾ ನಿಂತು ನೋಡುತ್ತಿರಲು, ಬಾಲಕನ ಎಡದ ಕಾಲಲ್ಲಿ ಐದಲ್ಲದೆ ಇನ್ನೊಂದು ಬೆರಳಿರುವುದನ್ನು ಕಂಡು, ಅದನ್ನು ತುಂಡರಿಸಿ, ಒಡೆಯನಿಗೆ ಕುರುಹು ಕಾಣಿಸಲು ತಂದು ತೋರಿಸಿದರು. ಸಂತುಷ್ಟನಾದ ದುಷ್ಟಬುದ್ಧಿಯು ಅವರಿಗೆ ಬಹಳ ಬಹುಮಾನಗಳನ್ನಿತ್ತು ಸಂತೃಪ್ತನಾಗಿದ್ದನು.

ರಾಹುಮುಕ್ತ ಚಂದ್ರನಂತೆ ಬಾಲಕನು ಕಾಡಿನಲ್ಲಿ ನರಳುತ್ತಿದ್ದನು. ಎಡಗಾಲಲ್ಲಿ ನೆತ್ತರು ಬಸಿಯುತ್ತಿತ್ತು. ಅದರ ನೋವಿಗೆ 'ದೇವರೇ' ಎಂದು ಸಂಕಟ

ದಿಂದ ಕೂಗಿದನು. ಅವನ ಕಣ್ಣುಗಳಲ್ಲಿ ಬಾಷ್ಪ ಒಸರುತ್ತಿರುವುದನ್ನು ಕಂಡು, ಕಾನನವ ಮೃಗಪಕ್ಷಿಗಳೂ ಶೋಕದಿಂದ ನೊಂದವು. ತಮ್ಮ ತಮ್ಮ ಹಸಿವು ಬಾಯಾರಿಕೆಗಳನ್ನು ತೊರೆದು ಅವನ ಬಳಿ ಬಂದು ಉಪಚರಿಸುತ್ತಿದ್ದುವು. ಮುಖಕ್ಕೆ ಬಿಸಿಲು ಬೀಳದಂತೆ ನವಿಲುಗಳು ಗರಿಕೆದರಿ ನಿಂದುವು; ಹಂಸವು ರೆಕ್ಕೆಗಳಿಂದ ಬೀಸಣಿಗೆ ಹಾಕಿತು. ಸಾರಸವು ನೀರಲ್ಲಿ ಪಕ್ಕಗಳನ್ನು ಒದ್ದೆಮಾಡಿ ಬಂದು ತುಂತುರುಹನಿ ಸುರಿಸಿತು. ಮೃದುವಚನದಿಂದ ಗಿಳಿ ಉಪಚರಿಸಿತು. ತುಂಬಿಗಳು ಕರುಣೆಯಿಂದ ಬಾಲಕನ ರೋದನದೊಡನೆ ದನಿಗೂಡಿಸಿದುವು. ನರಳುತ್ತಿರುವ ಶಿಶುವಿನ ನಿರ್ಮಲ ಮುಖವನ್ನು ನೋಡುತ್ತಾ ಹುಲ್ಲೆಗಳು ಕಣ್ಣೀರು ಸುರಿಸಿದುವು. ಹತ್ತಿರ ಹೋಗಿ ಆತನ ಕಾಲಬೆರಳಿನ ರಕ್ತವನ್ನು ಕುಡಿ ನಾಲಿಗೆಯಿಂದ ನೆಕ್ಕಿ ಲೇಪ ಹಚ್ಚಿದುವು. ಕೋಗಿಲೆ ನೀಳ್ದನಿಯಿಂದ ಕೂಗಿತು; ಪಾರಿವಾಳವು ಕಲ್ಲನ್ನು ಕುಕ್ಕಿತು; ಗೂಗೆಗಳು ಕಂಗೆಟ್ಟುವು: ಬಕವು ಮೌನವಾಗಿತ್ತು. ಹಾವು ನಿರಾಹಾರದಿಂದಿತ್ತು. ತುಂಬಿಗಳು ಅತ್ತಿತ್ತ ಹಾರಿದುವು. ಆನೆ ಘೀಳಿಟ್ಟಿತು. ಶಿಶು ರೋದನದೊಡನೆ ಬನದೇವಿಯರೂ ರೋದಿಸಿದರು. ದಿಗಂಗನೆಯರು ಗೋಳಿಟ್ಟರು. ಅಡವಿಯ ಚರಾಚರಗಳೂ, ಜೀವಜಾಲಗಳೂ, ಮೊರೆಯಿಟ್ಟುವು. ಅಷ್ಟರಲ್ಲಿ ಅರಣ್ಯದ ಮಧ್ಯದಿಂದ ಒಂದು ಮಹಾ ಕೋಲಾಹಲದ ಘೋಷ ಕೇಳಿಸಿತು.

ಬೇಡರ ಪಡೆಯೊಂದು ಬೇಟೆಯಾಡುತ್ತಾ ಕಾಡನ್ನು ಸುತ್ತಿಮುತ್ತಿ ಬರುತ್ತಿತ್ತು. ಅಬ್ಬರದ ಬೊಬ್ಬೆಗಳು ಕೇಳಿಸಿದುವು. ಸೊಪ್ಪು ಸೊಪ್ಪುಗಳನ್ನೂ ಮೆಳೆ ಮೆಳೆಗಳನ್ನೂ ಸೋಸಿ. ತಪ್ಪತಪ್ಪದೆ ಮೃಗಗಳಿಗೆ ಬಾಣ ಹೊಡೆದು ಶಬರರು ಬೇಟೆಯಾಡುತ್ತಾ ಬಂದರು.

'ಇದು ಹಂದಿ ಕೆದರಿದ ನೆಲ. ಇದು ಕಾಡಾನೆ ಕದಡಿದ ಕೊಳ, ಇದು ಹುಲಿ ಅಗಿದ ಮೃಗದ ಮಿದುಳು, ಇದು ಕಾಡುಕೋಣ ಮೈತಿಕ್ಕಿದ ಮರ, ಇದು ಸಾರಂಗ ಇಕ್ಕಡಿಮಾಡಿದ ಹಾವು, ಇದು ಹುಲ್ಲೆಗಳ ಹಕ್ಕೆ, ಇದು ಹಕ್ಕಿಗಳ ಇಕ್ಕೆ' ಎನ್ನುತ್ತಾ ಕಿರಾತರು ಕಿರಿಚುತ್ತಿದ್ದರು.

ನಡೆ, ತಡೆ, ಹೊಡೆ, ಓಡಿ, ಓಡಿ. ತೊಡು, ಬಿಡು, ಇಡು ಎಂದು ಮುಂತಾಗಿ ಎಲ್ಲೆಲ್ಲೂ ಬೇಡರ ಬೊಬ್ಬೆ ಕೇಳಿಸಿತು. ಪೊದರಿನಿಂದ ಮೃಗಗಳನ್ನು ಸೋಸಿ ಹೊಡೆದರು. ಮರಗಳಿಂದ ಹಕ್ಕಿಗಳನ್ನು ಹಾರಿಸಿ ಬೀಳಿಸಿದರು. ಸಿಡುಗುಂಡು, ಬಡಿಗೋಲುಗಳಿಂದ, ಉರುಳು, ಬಲೆಗಳಿಂದ, ಬೊಬ್ಬೆಯ ಉಬ್ಬರದಿಂದ ಕಾಡಿನಲ್ಲಿ ಬೇಟೆಯಾಡಿದರು. ಹುಲಿ, ಕರಡಿ, ಆನೆ, ಸಿಂಹ, ಸಾರಂಗ,

ಹಂದಿ, ಮೊಲ, ಹುಲ್ಲೆ, ಕಾಡೆಮ್ಮೆ, ಚಮರಿ ಮುಂತಾದ ಮೃಗಗಳನ್ನೂ, ಕ್ರೌಂಚ, ನವಿಲು, ತಿತ್ತಿರಿ, ಪಾರಿವಾಳ ಮೊದಲಾದ ಹಕ್ಕಿಗಳನ್ನೂ ಬೇಟೆಯಾಡುತ್ತಾ ಬಂದರು.

ಒಂದು ಜಿಂಕೆಯು ಯಾರ ಗುರಿಗೂ ಸಿಕ್ಕದೆ ತಪ್ಪಿಸಿ ಓಡಿಹೋಗಿ ಬಿಟ್ಟಿತು! ಅದನ್ನು ಕುಳಿಂದಕನೆಂಬ ಆ ಬೇಡರ ಒಡೆಯನು ಬಿಲ್ಲುಹಿಡಿದು ಬೆನ್ನಟ್ಟುತ್ತಾ ಬಂದನು. ಆ ಕುಳಿಂದಕನು ಚಂದನಾವತಿಯೆಂಬ ಪುರವನ್ನಾಳುತ್ತಿದ್ದನು. ದುಷ್ಟಬುದ್ಧಿಯ ಅಪ್ಪಣೆಯಂತೆ ಆ ಕಾಡಿನ ಆಡಳಿತವೆಲ್ಲ ಆತನ ಸ್ವಾಧೀನ ವಾಗಿತ್ತು. ಅವನು ಹೀಗೆ ಕಿರಾತಪಡೆಯೊಡನೆ ಅಲ್ಲಿಗೆ ಬೇಟೆಗಾಗಿ ಬಂದಿದ್ದು ಜಿಂಕೆಯನ್ನು ಬೆನ್ನಟ್ಟುತ್ತಿದ್ದನು.

ಹರಿಣವನ್ನು ಬೆಂಬತ್ತಿ ಬರುತ್ತಿರಲು. ಹರಿಯನ್ನು ಜಪಿಸುತ್ತಿರುವ ಬಾಲಕ ನನ್ನು ಆತನು ಕಂಡನು. ಕುದುರೆಯನ್ನು ತಟ್ಟನೆ ನಿಲ್ಲಿಸಿದನು. ಪಾಪಕೃತ್ಯಕ್ಕೆ ತಾನು ಬಂದಿದ್ದರೂ. ತನಗೆ ಪುಣ್ಯವೇ ದೊರಕಿತೆಂದು, ನಿಧಿಯನ್ನು ಎಡವಿದ ಕಡುಬಡವನ ಹಾಗೆ ಹಿಗ್ಗಿದನು. ಕುದುರೆಯಿಂದ ಕೆಳಗೆ ಇಳಿದು ಬಾಲಕನ ಬಳಿ ಸಾರಿ ಆತನ ಮೈದಡವಿದನು; ಸೆಳೆದು ಆಲಂಗಿಸಿದನು. ಕಣ್ಣೀರನ್ನು ಒರೆಸಿ ದನು. ಚರ್ಮದ ಚೀಲದಲ್ಲಿ ತಾನು ತಂದಿದ್ದ ನೀರನ್ನು ತೆಗೆದು ಬಾಲಕನ ಕಾಲ ತುದಿಯಲ್ಲಿ ಬಸಿಯುತ್ತಿರುವ ನೆತ್ತರನ್ನು ತೊಳೆದನು. ಗದ್ಗದಿಸಿ ಕೂಗುತ್ತಿರುವ ಶಿಶುವನ್ನು ಸಂತೈಸಿದನು. ಭಯಪಡದಿರೆಂದು ತಿಳಿಸಿ ಕರುಣೆಯಿಂದ ಮಾತ ನಾಡಿಸಿದನು. ತನ್ನವರನ್ನು ಕುರಿತು ಹೀಗೆಂದನು—

"ಈ ಬಾಲಕನು ತನ್ನ ತಾಯ್ತಂದೆಗಳನ್ನಾಗಲಿ. ಒಡಹುಟ್ಟಿದವರನ್ನಾಗಲಿ ನೆನೆದು ಹಂಬಲಿಸದೆ, ದೇವರನ್ನೇ ಸ್ಮರಿಸುತ್ತಿರುವುದರಿಂದ ಈತನಿಗೆ ಶ್ರೀಹರಿಯೇ ಒಡೆಯನು. ಆದ್ದರಿಂದಲೇ ಈ ಘೋರಾರಣ್ಯದಲ್ಲಿ ಇಂತು ಬದುಕಿ ಉಳಿದಿರು. ವನು. ಎಲ್ಲರಿಗೂ ಮಕ್ಕಳನ್ನು ಕೊಡುವವನು ದೇವರಷ್ಟೆ? ನನಗೆ ಸಂತಾನವಿಲ್ಲ. ಇವನೇ ನನಗೆ ದೇವರು ಕೊಟ್ಟ ಮಗನು."

ಸಂತೋಷದಿಂದ ಹಿಗ್ಗಿದ ಕುಳಿಂದಕನು ಹುಡುಗನನ್ನು ಕುದುರೆಯ ಮೇಲಿರಿಸಿಕೊಂಡು ಚಂದನಾವತಿಗೆ ಮರಳಿದನು. ಬೇಟೆಯಾಡಿ ಸಿಕ್ಕಿದ ಮೃಗ ಗಳನ್ನೆಲ್ಲಾ ಉಳಿದವರಿಗೆ ಹಂಚಿದನು. ಬೇಡರನ್ನು ಅವರವರ ಮನೆಗೆ ಕಳುಹಿಸಿ. ಚಂದ್ರನಂತೆ ಶೋಭಿಸುವ ಶಿಶುವನ್ನು ತೆಗೆದುಕೊಂಡು ಪರಿವಾರ ಸಮೇತ ನಿಜ ನಗರಿಗೆ ಬಂದನು; ಈ ಶುಭವಾರ್ತೆಯನ್ನು. ದೂತರು ಮೊದಲಾಗಿ ಹೋಗಿ ನಗರದಲ್ಲಿ ಸಾರಿದರು. ಕುಳಿಂದಕನು ಅರಮನೆಯನ್ನು ಪ್ರವೇಶಿಸುತ್ತಿರಲು.

ಅವನ ಪತ್ನಿಯಾದ ಮೇಧಾವಿನಿ ಆತನನ್ನು ಇದಿರುಗೊಂಡು ಕಂದನನ್ನು ತೆಗೆದೆತ್ತಿಕೊಂಡಳು; ಬಿಗಿಯಪ್ಪಿಕೊಂಡಳು. "ಅಹಾ! ನನ್ನ ಬಂಜೆತನವು ಇಂದಿಗೆ ಹೋಯಿತು; ನಾನು ಪುತ್ರವತಿಯಾದೆನು. ನನ್ನ ಪುಣ್ಯವೃಕ್ಷವು ಫಲಿಸಿತು" ಎಂದು ಹಿರಿಹಿಗ್ಗಿದಳು.

ಚಂದನಾವತಿಯಲ್ಲಿ ಆನಂದೋತ್ಸವಗಳು ಜರಗಿದುವು; ದಾನಧರ್ಮಗಳು ನಡೆದುವು. ಬೇಡಿದವರಿಗೆ ಬೇಕುಬೇಕಾದನ್ನೆಲ್ಲಾ ಕುಳಿಂದಕನು ದಾನವಿತ್ತನು. ಕಂದನಿಗೆ ಜಾತಕರ್ಮಗಳನ್ನು ಮಾಡಿಸಿದನು. ಪುತ್ರನ ಉತ್ತರೋತ್ತರವನ್ನು ತಿಳಿದು, ವಿದ್ವಾಂಸರು, ನಿರ್ಮಲಮುಖದ ಸೌಂದರ್ಯದಿಂದ ಶೋಭಿಸುವ ಈತನು, ಚಂದ್ರನನ್ನು ನೋಡಿ ನಗುವನೆಂಬುದರಿಂದ, ಈತನಿಗೆ ಚಂದ್ರಹಾಸನೆನ್ನುವ ಹೆಸರು ಯೋಗ್ಯವೆಂದು ಹೇಳಿ ನಾಮಕರಣಮಾಡಿದರು. ಕತ್ತಲೆಯ ಮನೆಗೆ ರತ್ನಪ್ರದೀಪವಾದ ಹಾಗೆ, ಬತ್ತಿದ ಸರೋವರಕ್ಕೆ ಹೊಸ ನೀರು ಒದಗಿದ ಹಾಗೆ, ವಿಸ್ತಾರವಾದ ಕಾವ್ಯರಚನೆಗೆ ದೇವತಾಸ್ತುತಿ ಶೋಭಿಸಿದಂತೆ, ಸಂತಾನವಿಲ್ಲದ ಕುಳಿಂದಕನ ಬಾಳುವೆಗೆ ಚಂದ್ರಹಾಸನು ಉತ್ತಮಪುತ್ರನಾಗಿ ಉತ್ತರೋತ್ತರ ಕೀರ್ತಿಯುತನಾಗಿ ಚಂದನಾವತಿಯಲ್ಲಿ ಬಳೆಯುತ್ತಿದ್ದನು.

ಕುಳಿಂದಕನ ಭವನದಲ್ಲಿ ಚಂದ್ರಕಳೆಯನ್ನು ನಗುವಂತೆ ಚಂದ್ರಹಾಸನು ದಿನದಿನವೂ ಬಳೆಯುತ್ತಿರಲು, ಆ ಕುಳಿಂದಕನ ಪಟ್ಟಣದ ಸಿರಿಸಂಪತ್ತು ಹೆಚ್ಚಿತು. ಅಲ್ಲಿನ ಜನರೆಲ್ಲರೂ ನಿರ್ಮಲಗುಣಶೀಲವುಳ್ಳವರಾದರು. ಆ ರಾಜ್ಯದ ಆಕಳು ಕೊಡಹಾಲನ್ನು ಕೊಟ್ಟವು. ಉಳದೆ, ಬಿತ್ತದೆ, ಮಳೆ ಬಂದ ಮಾತ್ರದಿಂದ, ಬೆಳೆಗಳು ಆಗತೊಡಗಿದುವು. ಹೀಗೆ ಪುತ್ರಪ್ರಾಪ್ತಿಯಾದ ಮೇಲೆ ತಮ್ಮ ರಾಜ್ಯದ ಏಳಿಗೆಯಾಗುತ್ತಿರುವುದನ್ನು ಕಂಡು, ಕುಳಿಂದಕನೂ ಅವನ ರಾಣಿಯೂ, ಪೂರ್ವಜನ್ಮದ ಸುಕೃತಫಲದಿಂದ ತಮಗೀ ಬಾಲಕನು ದೊರಕಿದನೆಂದು ಕಣ್ಣಾಣೆಯುವಂತೆ ಆತನನ್ನು ನೋಡಿ ಕಾಪಾಡಿದರು. ಪುತ್ರವಾತ್ಸಲ್ಯದಿಂದ ಹಿರಿಹಿಗ್ಗುತ್ತಿದ್ದರು.

ಸರ್ವಲಕ್ಷಣಭರಿತನಾಗಿ ಶೋಭಿಸುವ ಚಂದ್ರಹಾಸನಿಗೆ ಅಕ್ಷರಾಭ್ಯಾಸ ಮಾಡಿಸಬೇಕೆಂದು ಕುಳಿಂದಕನು ಗುರುಗಳನ್ನು ನೇಮಿಸಿದನು. 'ಹರಿ' ಎಂಬ ಎರಡು ವರ್ಣಗಳನ್ನಲ್ಲದೆ ಆತನು ಬೇರಾವುದನ್ನೂ ಗುರುತಿಸಲಾರದಾದನು. ಗುರುಗಳು ಕುಳಿಂದಕನಿಗೆ ಈ ಸಂಗತಿಯನ್ನು ತಿಳಿಸಿದರು. ಅದನ್ನು ಕೇಳಿ ಕುಳಿಂದಕನು, ಇಂತೆಂದನು—

"ಈತನು ಏಕಾದಶಿಯಲ್ಲಿ ಉಪವಾಸ ಮಾಡುತ್ತಿರುವನು, ಇವನನ್ನು ಅನುಸರಿಸಿ ನಾವೂ ವ್ರತಾನುಷ್ಠಾನಮಾಡುತ್ತಿರುವೆವು. ಪರಮ ವಿಷ್ಣುಭಕ್ತನಾದ

ಈತನಿಂದ ನನಗೆ ಏಳಿಗೆಯಾಗುವುದು; ಇವನಲ್ಲದೆ ನನಗೆ ಬೇರೆ ಮಕ್ಕಳಿಲ್ಲ; ಈತನೇ ನನ್ನ ಜೀವವಾಗಿದ್ದಾನೆ. ಇವನಿಗೆ ಮುಂದೆ ಶಿಕ್ಷೆಕೊಡಬೇಡ."

ಅದು ಮೊದಲ್ಗೊಂಡು ಚಂದ್ರಹಾಸನು ತನ್ನಿಚ್ಛೆಯಂತೆ ವಿಷ್ಣುಭಕ್ತಿಯನ್ನು ಬಿಡದೆ ಮಾಡುತ್ತಾ, ತನ್ನ ಜತೆಯ ಹುಡುಗರೆಲ್ಲರಿಗೂ ಅದನ್ನು ಕಲಿಸುತ್ತಿದ್ದನು.

ಚಂದ್ರಹಾಸನಿಗೆ ಎಂಟನೆಯ ವರ್ಷವಾಯಿತು ಕುಳಿಂದಕನು ಉಪನಯನ ವನ್ನು ಮಾಡಿಸಿದನು. ಆ ಮೇಲೆ ಗುರುಮುಖದಿಂದ ವೇದವೇದಾಂಗ ಮೊದ ಲಾದುವುಗಳನ್ನು ಓದಿ ಬೇಕಾದ ಬಿಲ್ಲುವಿದ್ಯೆಗಳನ್ನು ಕಲಿತು ಆನೆ ಕುದುರೆಗಳ ಏರಾಟದಲ್ಲಿ ಸಮರ್ಥನಾದನು. ಮುಂದೆ ಹದಿನಾರು ವರ್ಷ ಪ್ರಾಯತುಂಬಲು. ಚತುರಂಗ ಬಲಸಮೇತ, ದಿಗ್ವಿಜಯಕ್ಕೆ ಹೊರಟು, ತನ್ನ ತಂದೆಗೆ ಮಲೆಯು ತ್ತಿರುವ ಮನ್ನೆಯರನ್ನು ಘಾತಿಸಿ. ರಾಜ್ಯದ ಗಡಿಯನ್ನು ವಿಸ್ತರಿಸಿದನು. ತನ್ನ ನಗರಕ್ಕೆ ಧನಧಾನ್ಯ ವಸ್ತುಕೋಶಗಳನ್ನು ಗೆದ್ದು ಹೊರಿಸಿ ತಂದನು. ಹೀಗೆ ವಿಜಯಸಂಭ್ರಮದಿಂದ ಬಂದ ಚಂದ್ರಹಾಸನನ್ನು ಕುಳಿಂದಕನು ಪತ್ನೀಪರಿ ವಾರ ಸಮೇತ ಸೊಡರ ಬೆಳಗಿನಿಂದಲೂ, ಮುತ್ತಿನ ಆರತಿಗಳಿಂದಲೂ. ಸಂಭ್ರಮೋಲ್ಲಾಸದಿಂದ ಇದಿರ್ಗೊಂಡನು. ಆ ಮೇಲೆ ಒಂದು ಮಂಗಳ ಮುಹೂರ್ತದಲ್ಲಿ ತನ್ನ ರಾಜ್ಯದ ಆಧಿಪತ್ಯವನ್ನು ಕುಳಿಂದಕನು ಮಗನಿಗೆ ಒಪ್ಪಿಸಿದನು.

ಚಂದ್ರಹಾಸನು ಧರ್ಮನೀತಿಯಿಂದ ರಾಜ್ಯಪಾಲನೆ ಮಾಡಿದನು. ದೇಶದ ಸಂಪತ್ತು ಹೆಚ್ಚಿತು. ಚಂದನಾವತಿಯ ಸೌಭಾಗ್ಯ ಅಭಿವರ್ಧಿಸಿತು. ಎಲ್ಲಾ ಜನರೂ ಆಚಾರಗುಣಶೀಲಗಳಿಂದ ದೇವಭಕ್ತರಾಗಿ ನಡೆದರು. ಏಕಾದಶಿಯ ವ್ರತವನ್ನು ಸರ್ವರೂ ಸಾಂಗವಾಗಿ ಆಚರಿಸಿದರು. ಪ್ರಹ್ಲಾದ. ಧ್ರುವ. ಬಲಿ. ವಿಭೀಷಣ, ರುಕ್ಮಾಂಗದರಂತೆ ಚಂದ್ರಹಾಸನು ಪರಮ ಭಾಗವತೋತ್ತಮನೆನಿಸಿ ದನು.

ಒಂದು ದಿನ ಮಗನನ್ನು ಪ್ರೀತಿಯಿಂದ ತನ್ನ ಬಳಿ ಕರೆದು ಕುಳಿಂದಕನು ತಿಳಿಸಿದನು—

"ಕಂದ, ಇಲ್ಲಿಗೆ ಆರುಯೋಜನದೂರದಲ್ಲಿ ಪ್ರಖ್ಯಾತವಾದ ಕುಂತಳ ರಾಜ್ಯ ವಿದೆ. ನಮ್ಮ ಈ ಭೂಮಿ ಆ ದೇಶದ ಅರಸನದ್ದು. ಆ ರಾಜನಿಗೆ ದುಷ್ಟ ಬುದ್ಧಿಯೆಂಬ ಮುಖ್ಯಮಂತ್ರಿಯಿರುವನು, ನಮ್ಮ ನಾಡಿನ ಉತ್ಪತ್ತಿಯ ಅಂಶದ ಕಂದಾಯವನ್ನು ಆತನಿಗೆ ನಾವು ಕೊಡಬೇಕು. ವರ್ಷಂಪ್ರತಿ ನಾವು ಅರಸನಿಗೆ ಸಲ್ಲಿಸುವ ಕಪ್ಪವನ್ನು ನೀನು ದುಷ್ಟಬುದ್ಧಿಗೆ ಕೊಟ್ಟು. ಅರಸನಿಗೂ. ರಾಣಿಗೂ.

ಪುರೋಹಿತನಾದ ಗಾಲವನಿಗೂ ಬೇರೆ ಬೇರೆ ಯೋಗ್ಯ ಕಾಣಿಕೆಗಳನ್ನು ಒಪ್ಪಿಸಿ ಬಾ."

ಪಿತೃವಾಕ್ಯವನ್ನು ಶಿರಸಾವಹಿಸಿ, ಚಂದ್ರಹಾಸನು ರಾಜನಿಗೂ, ರಾಣಿಗೂ, ಮಂತ್ರಿಗೂ, ಪುರೋಹಿತನಿಗೂ ಒಪ್ಪಿಸುವ ಸಲುವಾಗಿ ಬೇರೆ ಬೇರೆ ಗಂಟುಗಳನ್ನು ಕಟ್ಟಿಸಿ ನೂರಾರು ಒಂಟೆ, ಬಂಡಿ, ಆನೆ, ಕುದುರೆಗಳ ಮೇಲೆ ಹೇರಿಸಿ ಕಳುಹಿಸಿದನು. ಆಪ್ತರೊಡಗೂಡಿ ಕುಂತಳನಗರಕ್ಕೆ ಪ್ರಯಾಣ ಮಾಡಿದನು. ಚಂದ್ರಹಾಸನ ದೂತರು ನಾನಾ ವಸ್ತುಸಮೇತರಾಗಿ ಬಂದು ಕುಂತಳನಗರದ ಬಳಿಯ ಸರೋವರ ತೀರದಲ್ಲಿ ಮಿಂದು, ವಿಷ್ಣು ಪೂಜೆಮಾಡಿ, ಅಸ್ತಮಯ ಸಮಯದಲ್ಲಿ ಶುಚಿಯಾಗಿ ಪಟ್ಟಣವನ್ನು ಪ್ರವೇಶಿಸಿದರು. ಹಣೆಗೆ ಊರ್ಧ್ವ ಪುಂಡ್ರ ಹಾಕಿ, ಮೈಗೆ ಶುಭ್ರ ವಸ್ತ್ರವನ್ನುಟ್ಟು, ಕೊರಳಿಗೆ ತುಲಸಿಯ ದಂಡೆಯನ್ನು ತೊಟ್ಟು, ಹೊಳೆವ ಹಲ್ಲುಗಳುಳ್ಳ ಸ್ವಚ್ಛ ಶರೀರದ ಚಂದ್ರಹಾಸನ ಅನುಚರರನ್ನು ಕಂಡು, ದುಷ್ಟಬುದ್ಧಿ ಅಚ್ಚರಿಗೊಂಡು ಕಾಡಿನ ಬೇಡರಿಗೆ ಇಂತಹ ಶುದ್ಧಿಸ್ನಾನಗಳೇಕೆಂದು ವಿಚಾರಿಸಿದನು. ಕುಳಿಂದಕನು ಬದುಕಿರುವನೇ ಎಂದು ಪ್ರಶ್ನಿಸಿದನು—

"ಜೀಯಾ, ಪಾಪಕೋಟಿಯನ್ನು ಪರಿಹರಿಸುವ ಏಕಾದಶೀ ವ್ರತದ ಸಲುವಾಗಿ ನಾವು ಇಂದು ನಿರ್ಮಲಜಲಸ್ನಾನ ಮಾಡಿದೆವು. ದೊರೆಯಾದ ಕುಳಿಂದಕನು ಕುಶಲದಿಂದ ಇರುವನು. ಆತನ ಮಗನಾದ ಚಂದ್ರಹಾಸನು ರಾಜ್ಯವಾಳುತ್ತಿದ್ದಾನೆ. ಅವನ ಅಪ್ಪಣೆಯಂತೆ ದಶಮಿಯ ದಿನಗಳಲ್ಲಿ ಹರಿಪೂಜೆ ನಡೆಯುವುದು. ಚಂದ್ರಹಾಸನು ಹರಿಭಕ್ತನಾಗಿರುವನು. ದಿಗ್ವಿಜಯ ಮಾಡಿ, ಮಲೆತ ರಾಜರೊಡನೆ ಹೋರಾಡಿ. ಅವರಿಂದ ಕಪ್ಪವನ್ನು ಪಡೆದು ಕೊಂಡುಬಂದ ಈ ಸುವಸ್ತುಗಳನ್ನು ನಿನಗೆ ಒಪ್ಪಿಸಲು ಚಂದ್ರಹಾಸನು ಕಳುಹಿಸಿರುವನು."

ದೂತರು ಚಂದ್ರಹಾಸನ ಪತ್ರವನ್ನು ದುಷ್ಟಬುದ್ಧಿಯ ಕೈಗಿತ್ತರು. ದುಷ್ಟಬುದ್ಧಿಯ ಕುತೂಹಲವು ಇನ್ನಷ್ಟು ಕೆರಳಿತು !

"ಇದೇನು ಕೌತುಕವು? ನಿಮ್ಮ ಮಾತೇ ನನಗೆ ಅರ್ಥವಾಗಲೊಲ್ಲದು. ಕುಳಿಂದಕನಿಗೆ ಪುತ್ರೋತ್ಪತ್ತಿಯಾಗಿದೆಯೆ? ಅವನ ರಾಣಿ ಬಂಜೆಯಾಗಿರುವಳೆಂದು ನಾವು ಕೇಳಿದ್ದೆವಲ್ಲಾ !"

"ಒಡೆಯಾ. ನಾವು ಹುಸಿ ನುಡಿಯೆವು; ಕುಳಿಂದಕನು ಬೇಟೆಗೆ ಹೋಗಿರಲು. ಕಾನನ ಮಧ್ಯದಲ್ಲಿ ಅನಾಥವಾಗಿರುವ ಶಿಶುವೊಂದು ಅವನಿಗೆ ಲಭಿಸಿತು. ಆ ಬಾಲಕನನ್ನು ಆತನು ಎತ್ತಿಕೊಂಡು ಬಂದನು. ಪುತ್ರಸ್ನೇಹದಿಂದ ಮುದ್ದಿಸಿ ಪಾಲಿಸಿದನು. ಚಂದ್ರಹಾಸನೆಂಬ ಹೆಸರಿಟ್ಟು ಸಾಕಿದನು."

ದುಷ್ಟಬುದ್ಧಿ ತುಂಬಾ ವಿಸ್ಮಿತನಾದನು !

"ಅಯ್ಯೋ ! ಏನಿದು? ನಾನು ಘೋರಾರಣ್ಯದಲ್ಲಿ ಶಿಶುವನ್ನು ಕೊಂದು ಬರಬೇಕೆಂದು ಕಟ್ಟಪ್ಪಣೆ ಮಾಡಿದ್ದೆನು. ಆಹಾ ! ಚಂಡಾಲರು ಘಾತಿಸದೆ ಬಿಟ್ಟು ಬಂದಿರಬೇಕು."

ದುಷ್ಟಬುದ್ಧಿಯ ಅಂತರಂಗದಲ್ಲಿ ದ್ವೇಷಸರ್ಪವು ಪುನಃ ಹೆಡೆಯೆತ್ತಿತ್ತು. ಬಹಿರಂಗದಲ್ಲಿ ಕರುಣಾಳುಗಳಂತೆ ನಟಿಸಿದನು. ದೂತರನ್ನು ಮನ್ನಿಸಿ ಕಳುಹಿಸಿದನು. ಕಾಣಿಕೆಯಿತ್ತ ಅಗಣಿತ ವಸ್ತುಗಳನ್ನು ತನ್ನ ಭಂಡಾರದಲ್ಲಿ ಭದ್ರವಾಗಿರಿಸಿದನು. ಅಷ್ಟು ದೂರದಿಂದ ತನಗೆ ದ್ರವ್ಯರಾಶಿಯನ್ನು ಹೊತ್ತುತಂದವರು ಉಪವಾಸವಿರಬಾರದೆಂದು ಚರರಿಗೆ ಷಡ್ರಸ ಭೋಜನವನ್ನು ಏರ್ಪಡಿಸಲು ಅವರು ಒಲ್ಲೆವೆಂದರು. ದುಷ್ಟಬುದ್ಧಿಗೆ ಕೋಪ ಸಹಿಸಲಾರದಾಯಿತು.

"ಇಂದು ಕುಳಿಂದಕನು ಹಿಂದಿನ ಹಾಗಿಲ್ಲ; ಬಹಳ ಸೊಕ್ಕಿರುವನು; ಅವನ ದೆಸೆಯಿಂದ ಆತನ ಭೃತ್ಯರೂ ಹೀಗೆ ಉದ್ಧಟರಾಗಿ ವರ್ತಿಸುವರು; ಅವರೆಲ್ಲರನ್ನೂ ಬಿಗಿದು ಸೆರೆಮನೆ ಸೇರಿಸುವೆನು."

ಸಿಟ್ಟಿನಿಂದ ಸಿಡಿದು ನಿಂತ ಸಚಿವನನ್ನು ಚಂದ್ರಹಾಸನ ದೂತರು ಸಮಾಧಾನಪಡಿಸಿದರು—

"ಜೀಯ ! ಏಕಾದಶೀವ್ರತಭ್ರಷ್ಟರಾಗುವೆವೆಂಬ ಭಯದಿಂದ ಮಾತ್ರ ನಾವು ಇಂದು ಊಟಮಾಡುವುದಿಲ್ಲವೆಂದೆವಲ್ಲದೆ, ನಿನ್ನ ಮನೆಯ ಉಣಿಸು ಒಲ್ಲೆವೆಂದಲ್ಲ. ಸರ್ವಥಾ ಅನ್ಯಥಾ ಭಾವಿಸದಿರು."

ಮರುದಿನ ಅವರಿಗೆ ಭೋಜನವೇರ್ಪಟ್ಟಿತು. ಎಲ್ಲರೂ ಉಂಡು ತಿಂದು. ಸನ್ಮಾನಗಳನ್ನು ಪಡೆದು. ಸಂತೋಷದಿಂದ ಸಚಿವನನ್ನು ಬೀಳ್ಕೊಂಡು ಹಿಂತೆರಳಿದರು.

ದೂತರನ್ನು ಕಳುಹಿಸಿ ದುಷ್ಟಬುದ್ಧಿಯು ತನ್ನ ಅರಮನೆಗೆ ಬಂದನು. ತನ್ನ ಕುತಂತ್ರವು ಕೈಗೂಡುವ ಯೋಚನೆ ಮಾಡಿದನು. ಅರಸನನ್ನು ಬೀಳ್ಕೊಂಡನು. ತನ್ನ ರಾಜಕಾರ್ಯದ ಭಾರವನ್ನೆಲ್ಲಾ ಮಗನಾದ ಮದನನಿಗೆ ಒಪ್ಪಿಸಿ ಅರಮನೆಯಿಂದ ಹೊರಡುವ ಸಿದ್ಧತೆಗಳನ್ನು ಮಾಡಿದನು.

ಅಷ್ಟರಲ್ಲಿ ಆತನ ಪ್ರಾಪ್ತವಯಸ್ಕಳಾದ ಸುಪುತ್ರಿ ವಿಷಯೆಯೆಂಬುವವಳು ತಂದೆಯ ಬಳಿಗೆ ಬಂದಳು, ಮಗಳನ್ನು ಪ್ರೀತಿಯಿಂದ ಹತ್ತಿರ ಕರೆದು ಮಾತನಾಡಿಸಿದನು.

"ಅಪ್ಪಾ, ಉದ್ಯಾನದಲ್ಲಿ ನಾನು ನೀರೆರೆದು ಬೆಳೆಯಿಸಿದ ಚೂತಲತೆಯು ಹೂಬಿಟ್ಟಿದೆ; ಇನ್ನೂ ಅದಕ್ಕೆ ಉದ್ಯಾಪನೆ ಮಾಡಿಸದೆ ಇದ್ದೀಯಲ್ಲಾ! ಯಾವ ಘನವಾದ ರಾಜಕಾರ್ಯದ ನಿಮಿತ್ತ ಹೊರಟಿದ್ದೀಯೆ?"

ವಿಷಯೆ ತಲೆಬಾಗಿಸಿ ಹೇಳಿದಳು. ಮಗಳ ಮನಸ್ಸಿನ ಭಾವವನ್ನು ತಂದೆ ತಿಳಿದನು. ಪ್ರೀತಿಯಿಂದ ಮೈದಡವಿ ಮುದ್ದಿಸಿ ತನ್ನ ಮಗ ಮದನನನ್ನು ಕರೆದು, 'ಇವಳ ನೋಂಪಿಯನ್ನು ಮಾಡಿಸು' ಎಂದು ನೇಮಿಸಿ, ಮಗಳನ್ನು ಮನೆಗೆ ಕಳುಹಿಸಿ ಪರಿಜನಸಮೇತ ಚಂದನಾವತಿಯ ಕಡೆಗೆ ಪ್ರಯಾಣಮಾಡಿದನು.

ಎರಡು ದಿವಸಗಳ ಪ್ರಯಾಣದ ಮೇಲೆ ದುರ್ಮಂತ್ರಿಯಾದ ದುಷ್ಟಬುದ್ಧಿಯು ಚಂದನಾವತಿಯನ್ನು ತಲಪಿದನು. 'ಮೊದಲು ಕಾಡಾಗಿದ್ದ ಭೂಮಿಯೆಲ್ಲಾ ಈಗ ನಾಡಾಗಿ ಕಂಗೊಳಿಸುವುದನ್ನು ಕಂಡನು. ಮನಸ್ಸಿನಲ್ಲಿಯೇ ಕರುಬಿದನು. ಮಂತ್ರಿಯ ಆಗಮನವನ್ನರಿತು ಕುಳಿಂದಕನು ಚಂದ್ರಹಾಸ ಸಮೇತನಾಗಿ ಸಸಂಭ್ರಮದಿಂದ ಇದಿರ್ಗೊಂಡು ಸತ್ಕರಿಸಿದನು. ಚಂದ್ರಹಾಸನು ಕಾಣಿಕೆಗಳನ್ನಿತ್ತು ಕಾಣಿಸಿಕೊಂಡನು. ಕುಳಿಂದಕನು ಮಂತ್ರಿಯೊಡನೆ ಅರಿಕೆ ಮಾಡಿದನು—

ಜೀಯಾ, ಈ ಮುದ್ದುಕುವರನು ಪೂರ್ವಾರ್ಜಿತ ಪುಣ್ಯವಶದಿಂದ ನನಗೆ ಕಾಡಿನಲ್ಲಿ ದೊರಕಿದನು; ಇದುವರೆಗೆ ಈತನನ್ನು ಪಾಲಿಸಿರುವೆನು; ಮುಂದೆ ಈ ನನ್ನ ಕಂದನನ್ನು ನೀನು ಕೈಗೊಟ್ಟು ಕಾಪಾಡುವುದು."

ದುಷ್ಟಬುದ್ಧಿಯು ಚಂದ್ರಹಾಸನನ್ನು ನೋಡಿದನು; ವಿಸ್ಮಯಗೊಂಡನು. ಒಂದೆ ಮಾಡಿದ ತನ್ನ ಅಕೃತ್ಯವನ್ನು ಸ್ಮರಿಸಿಕೊಂಡನು. "ಅಯ್ಯೋ! ಚಂಡಾಲರು ವಂಚಿಸಿದರಲ್ಲಾ!" ಎಂದು ವ್ಯಥೆಪಟ್ಟನು; ಹೃದಯದಲ್ಲಿ ದ್ವೇಷಪಾವಾಗ್ನಿ ಉರಿಯುತ್ತಿತ್ತು. ಮುಖದಲ್ಲಿ ಮುಗುಳುನಗು ಸುರಿಯುತ್ತಿತ್ತು!

"ಅಯ್ಯಾ ಕುಳಿಂದಕನೇ, ನಿನ್ನ ಈ ಕುಮಾರನನ್ನು ಕಂಡು ನನಗೆ ಹಿಡಿಸಲಾರದ ಸಂತೋಷವಾಯಿತು."

ದುಷ್ಟಬುದ್ಧಿಯು ಚಂದ್ರಹಾಸನನ್ನು ಕೊಂಡಾಡಿದನು; ಮಧುರವಚನದಿಂದ ಮಾತನಾಡಿಸಿದನು; ಮನ್ನಣೆ ಮಾಡಿದನು. ಆಹಾ! ಅದು ಹಾವಿನ ಶರೀರದ ನಯವೋ? ಹೊಂಡವನ್ನು ಮುಚ್ಚಿಕೊಂಡಂತೆ ಕಾಣಿಸುವ ಹುಲ್ಲೋ! ಮೊಸಳೆ ಮನೆಮಾಡಿಕೊಂಡಿರುವ ಮಡುವಿನ ತಾವರೆಯೊ! ಬಾಳಿನ ಧಾರೆಗೆ ಲೇಪಿಸಿದ ಜೇನೊ! ಕಾಲಕೂಟ ಬೆರೆಸಿದ ಷಡ್ರಸಾನ್ನ ಭೋಜನವೊ! ದುಷ್ಟಬುದ್ಧಿಯ ಮುಗುಳುನಗು ಮತ್ತು ನಯನುಡಿ ಅವೆಲ್ಲವನ್ನು ಮೀರಿ ಮೆರೆಸಿತು!

"ಬ್ರಾಹ್ಮಣರ ವಚನ ಬರಿದಾಗದು; ಇವನು ರಾಜಲಕ್ಷಣಸಮನ್ವಿತನಾಗಿರುವನು; ಈತನನ್ನು ಕೊಲ್ಲದೆ ಇದ್ದರೆ ನಮ್ಮ ಭೂಮಿಗೆ ಅರಸನಾಗದೆ ಇರನು. ನನ್ನ ಮಕ್ಕಳಿಗೆ ರಾಜ್ಯಾಧಿಪತ್ಯ ದೊರಕುವುದೆಂತು? ಈತನು ಅಂಜುವ ಹಾಗಿಲ್ಲ. ಪರಾಕ್ರಮಿಯೂ ಆಗಿರುವನು. ಇವನಿಗೆ ವಿಷವುಣ್ಣಿಸಿ ಕೊಲ್ಲುವ ಉಪಾಯವನ್ನೇ ಮಾಡುವೆನು.'

—ಚಂದ್ರಹಾಸನನ್ನು ಕುಳ್ಳಿರಿಸಿಕೊಂಡು ಸಂತೋಷವನ್ನು ನಟಿಸುತ್ತಿದ್ದಂತೆ ಅಂತರಂಗದಲ್ಲಿಯೇ ಇಂತು ಚಿಂತಿಸಿದನು.

ಏಕಾಂತಕ್ಕೆ ಹೋಗಿ ಒಂದು ಲೇಖನವನ್ನು ಬರೆದನು. ಅದಕ್ಕೆ ತನ್ನ ಮುದ್ರೆಯನ್ನೊತ್ತಿ ಜೋಕೆಯಿಂದ ಸರಿಗೊಳಿಸಿದನು. ಚಂದ್ರಹಾಸನನ್ನು ಹತ್ತಿರಕ್ಕೆ ಕರೆದು ಮುದ್ರಾಂಕಿತಪತ್ರವನ್ನು ಆತನ ಕೈಗಿತ್ತು ಹೇಳಿದನು—

"ಚಂದ್ರಹಾಸ ! ಇದು ಗಹನರಾಜಕಾರ್ಯ ವಿಚಾರವಾಗಿದೆ. ನಾಲ್ಕು ಮಂದಿ ಸೇವಕರೊಡಗೂಡಿ ನೀನು ಈಗಲೇ ಹಯಾರೂಢನಾಗಿ ರಾಜಧಾನಿಗೆ ಹೊರಡು. ನನ್ನ ಮಗ ಮದನನಿಗೆ ಈ ಪತ್ರವನ್ನು ಯಾರಿಗೂ ತಿಳಿಯದಂತೆ ಕೊಡುವುದು. ನಾವು ಮಾಡುವ ಈ ಕಾರ್ಯದ ರಹಸ್ಯ ನಮ್ಮಿಬ್ಬರಿಗೆ ಮಾತ್ರ ತಿಳಿದಿರಲಿ."

ಏನೋ ಮಹತ್ವದ ರಾಜರಹಸ್ಯವಿದ್ದರೂ ತನ್ನನ್ನು ನಂಬಿ ಕಾಗದ ಕೊಟ್ಟಿರುವನೆಂದು ಚಂದ್ರಹಾಸನು ಸಂತೋಷಗೊಂಡನು. ಮಂತ್ರಿಗೆ ಮಣಿದು ಬೀಳ್ಕೊಂಡು, ಕುಳಿಂದಕನಿಗೆ ವಂದಿಸಿ ಹರಕೆ ಪಡೆದು, ಮಾತೆಯ ಬಳಿಗೆ ಹೋಗಿ ಪಾದಗಳಿಗೆ ಹಣೆಯಿಟ್ಟನು. ಮಗನನ್ನು ತಾಯಿ ಪ್ರೀತಿಯಿಂದ ಪಿಡಿವೆತ್ತಿದಳು. ಸೇಸೆತಳಿದು, ಆರತಿಯೆತ್ತಿ, ಹಣೆಗೆ ಕತ್ತುರಿಯ ಬೊಟ್ಟಿಟ್ಟು, ತಳಿಗೆ ತಾಂಬೂಲವನ್ನು ತೊಟ್ಟು ಹರಸಿ ಬೀಳ್ಕೊಟ್ಟಳು.

"ಮಗು, ನಿನಗೆ ಮಾರ್ಗದಲ್ಲಿ ಹೆಜ್ಜೆಹೆಜ್ಜೆಗೂ ಮಂಗಳವಾಗಲಿ: ನಿನ್ನನ್ನು ದೇವರು ಕಾಪಾಡಲಿ. ಅನುಕೂಲೆಯಾದ ಪತ್ನಿಯನ್ನೂ ಸಕಲ ಸಾಮ್ರಾಜ್ಯವನ್ನು ಸಂಪಾದಿಸು."

ಚಂದ್ರಹಾಸನು ಮಂಗಳಾಶೀರ್ವಾದಗಳನ್ನು ಪಡೆದು ತಾಯನ್ನು ಬೀಳ್ಕೊಂಡು ಕುಂತಳದೇಶಕ್ಕೆ ಹೊರಟನು. ಇದಿರಲ್ಲಿ ಅನೇಕ ಶುಭಶಕುನಗಳಾದುವು. ನೂತನ ವಧೂವರರನ್ನು ಕಂಡನು; ಇಬ್ಬರು ಬ್ರಾಹ್ಮಣರನ್ನು ಸಂದರ್ಶಿಸಿದನು. ಎಳಗರುವಿನೊಡನೆ ಬರುವ ದನವನ್ನು ನೋಡಿದನು. ಹೂಹಣ್ಣುಗಳನ್ನು ಹೊತ್ತುತಂದು ವನಪಾಲಕರು ಕಾಣಿಕೆಯಿತ್ತರು. ಇಂತು ಶುಭಶಕುನಸಂಭ್ರಮಾನ್ವಿತನಾಗಿ ಕುದುರೆಯೇರಿ ನಾಲ್ವರು ಸೇವಕರೊಡಗೂಡಿ ಚಂದ್ರ

ಹಾಸನು ಕುಂತಳರಾಜ್ಯದ ಹಾದಿಹಿಡಿದು ವೇಗವೇಗವಾಗಿ ಸಾಗಿ ಕುಂತಳ ನಗರದ ಬಹಿರುದ್ಯಾನ ಪ್ರದೇಶವನ್ನು ತಲಪಿದನು.

ಶೀತಸೌರಭ್ಯಮಾಂದ್ಯದಿಂದ ಕೂಡಿ ಮನೋಹರವಾದ ಮಾರುತ ಬೀಸಿತು. ಚಂದ್ರಹಾಸನಿಗೆ ಹಾದಿ ನಡೆದ ಆಯಾಸವು ಒಮ್ಮೆ ಪರಿಹಾರವಾಗಲು. ಕುದುರೆಯಿಂದಿಳಿದು ತಣ್ಣೆಳಲುಳ್ಳ ಮರದ ಬುಡಕ್ಕೆ ಅದನ್ನು ಕಟ್ಟಿಹಾಕಿ. ನೀರು ಕುಡಿಸಿ, ಎಳೆಹುಲ್ಲುಗಳನ್ನು ತರಿಸಿ ಅದರ ಮುಂದಿಟ್ಟು. ಅಲ್ಲಿ ಸೇವಕರನ್ನು ನಿಲ್ಲಿಸಿ ಚಂದ್ರಹಾಸನು ರಾಜೋಪವನವನ್ನು ಪ್ರವೇಶಿಸಿದನು. ಅಲ್ಲಿನ ಸುಂದರ ಸರೋವರದಲ್ಲಿ ಮಿಂದು, ಶುಚಿಯಾಗಿ, ತಾವರೆ ಮೊದಲಾದ ಹೂಗಳನ್ನು ಕೊಯ್ದು. ಹರಿಪೂಜೆಮಾಡಿ. ತಂದ ಬುತ್ತಿಯನ್ನು ಉಂಡು ವಿಶ್ರಾಂತಿಗಾಗಿ ಒಂದು ಮಾವಿನ ಮರದ ನೆಳಲಿಗೆ ಹೋಗಿ ಮೆತ್ತನೆ ಚಿಗುರುಗಳನ್ನು ಹಾಸಿ ಒರಗಿದನು. ಮಾರ್ಗಶ್ರಮದಿಂದ ಬಳಲಿದ ಚಂದ್ರಹಾಸನಿಗೆ ತಂಪಾದ ನೆಳಲಿನಲ್ಲಿ ಕಣ್ಣುಗಳಿಗೆ ಜೊಂಪು ಹತ್ತಿತು. ನಿದ್ರಾಲೋಲನಾಗಿ ಅಲ್ಲಿಯೇ ಮಲಗಿದನು.

ಇಂತು ಉದ್ಯಾನವಲ್ಲಿ ಚಂದ್ರಹಾಸನು ಸುಖನಿದ್ರೆಯಿಂದಿರುವ ಸಮಯದಲ್ಲಿ, ಕುಂತಳರಾಜನ ಮಗಳಾದ ಚಂಪಕಮಾಲಿನಿಯೆಂಬವಳು. ಮಂತ್ರಿಸುತೆಯಾದ ವಿಷಯೆಯೊಡನೆ ಸಖಿಯರೊಡಗೂಡಿ ಆ ಸುಂದರ ವಸಂತಕಾಲದಲ್ಲಿ, ಜಲಕ್ರೀಡೆಗಾಗಿ. ಅಲ್ಲಿಗೆ ಆಗಮಿಸಿದಳು. ಅವರೆಲ್ಲರೂ ವನವಿಹಾರ ಮಾಡಿ ಸರೋವರಕ್ಕಿಳಿದು ಜಲಕ್ರೀಡೆಯಾಡಿ ಮೈಗೆ ತಂಪಾಗಲು, ಕೊಳದಿಂದ ಹೊರಟು ತಡಿಗಡರಿ, ಮಡಿಬಟ್ಟೆಗಳನ್ನುಟ್ಟು. ಕೂದಲ ರಾಶಿಗೆ ದೂಪದ ಹೊಗೆಕೊಟ್ಟು. ಆಭರಣಗಳನ್ನು ತೊಟ್ಟು. ಹಣೆಗೆ ತಿಲಕವಿಟ್ಟು. ಅಡಿಗೆ ಅಲತಿಗೆಯನ್ನು ತಿಕ್ಕಿ, ಕಣ್ಣಿಗೆ ಅಂಜನವನ್ನು ಹಚ್ಚಿ. ಮುಡಿಗೆ ಹೂಗಳನ್ನು ಸೂಡಿ, ಕೆನ್ನೆಗೆ ಮಂಕರಪತ್ರವನ್ನು ಹಾಕಿ. ಮಧುಪಾನ ಗೈದು, ಕಪ್ಪುರ ವೀಳೆಯನ್ನು ಸ್ವೀಕರಿಸಿ ಸುಖಸಲ್ಲಾಪದಿಂದಿದ್ದರು.

ಚಂಪಕಮಾಲಿನಿಯು ಗೆಳತಿಯರೊಂದಿಗೆ ಸರಸಕೇಳಿಯಲ್ಲಿರಲು. ಹೂಕೊಯ್ಯುತ್ತಾ ಹೊರಟ ವಿಷಯೆಯು ಮಾವಿನ ಮರದ ನೆಳಲಿಗೆ ಬಂದಾಗ. ಅಲ್ಲಿ ತೋಳತಲೆಗಿಂಬಿನಿಂದ. ತಳಿರಹಾಸಿಗೆಯ ಮೇಲೆ. ಮೈಯನ್ನು ತಂಗಾಳಿಗೊಡ್ಡಿ. ಮಲಗಿ ನಿದ್ರಾಲೋಲನಾಗಿರುವ ಸುಂದರ ತರುಣನನ್ನು ಕಂಡು ಬೆರಗಾದಳು.

"ಅಶ್ವಿನೀದೇವತೆಗಳು ಒಬ್ಬರನ್ನೊಬ್ಬರು ಅಗಲಲಾರರಲ್ಲಾ ! ನಳಕೂಬರ ಜಯಂತರಾದರೂ ಇಲ್ಲಿಗೆ ಯಾಕೆ ಬರುತ್ತಾರೆ? ಸೂರ್ಯಚಂದ್ರರಾಗಿದ್ದರೆ ಉಷ್ಣಶೀತಕಿರಣಗಳಿರಬೇಕಾಗಿತ್ತಷ್ಟೆ? ಈ ತರುಣನು ದೇವಯಕ್ಷಕಿನ್ನರ ಸಿದ್ಧ

ಗರುಡಗಂಧರ್ವರಲ್ಲಿ ಯಾರಾದರೂ ಒಬ್ಬನಿರಬೇಕು; ಮನುಷ್ಯರಿಗೆ ಈ ಸೌಂದರ್ಯವೆಲ್ಲಿಂದ?"

ಚಂದ್ರಹಾಸನ ಶರೀರ ಸೌಂದರ್ಯವನ್ನು ನೋಡುತ್ತಾ ಹತ್ತಿರ ಹತ್ತಿರಕ್ಕೆ ಬಂದು ಪುನಃ ಪುನಃ ನೋಡಿದಳು.

ಎವೆಯಿಕ್ಕದೆ ಚಂದ್ರಹಾಸನನ್ನೇ ನೋಡುತ್ತಿದ್ದ ವಿಷಯೆಯ ಕಣ್ಣಿಗೆ ಆತನ ಸೆರಗಿನ ತುದಿಯಲ್ಲಿ ಕಟ್ಟಿಕೊಂಡಿರುವ ಪತ್ರವೊಂದು ಗೋಚರಿಸಿತು. ಕುತೂಹಲದಿಂದ ಅದನ್ನು ಮೆಲ್ಲನೆ ತೆಗೆದಳು. ಮುದ್ರೆಯನ್ನು ಓಸರಿಸಿ ಬಿಚ್ಚಿ ನೋಡಿದಳು. ತನ್ನ ತಂದೆಯ ಹಸ್ತಾಕ್ಷರವನ್ನು ಗುರುತಿಸಿ ಲವಲವಿಕೆಯಿಂದ ಹರ್ಷಪುಳಕಿತಳಾಗಿ ಪತ್ರವನ್ನು ಓದತೊಡಗಿದಳು.

"ಶ್ರೀಮತ್ಸಚಿವಶಿರೋಮಣಿ ದುಷ್ಟಬುದ್ಧಿಯು. ತನ್ನ ಮಗನಾದ ಮದನನಿಗೆ ಹರಸಿ ನಿರೂಪಿಸಿದ ಕಾರ್ಯವೇನೆಂದರೆ: ಈ ಚಂದ್ರಹಾಸನು ನಮಗೆ ಮಹಾಹಿತನು; ನಮ್ಮ ಸೀಮೆಗೆ ಅರಸಾಗುವನು; ಇದಕ್ಕೆ ಸಂಶಯವಿಲ್ಲ; ಈತನು ಸಾಮಾನ್ಯನಲ್ಲ. ನಮಗೆ ಮುಂದಕ್ಕೆ ಸರ್ವಥಾಮಿತ್ರನಾಗುವನು. ಹಾಗಾಗಿ, ನಿನ್ನ ಬಳಿಗೆ ಈತನನ್ನು ಕಳುಹಿಸಿರುವೆವು. ಇದನ್ನೆಲ್ಲಾ ತಿಳಿದುಕೊಂಡು. ಇವನು ಬಂದಕೂಡಲೇ ಹೊತ್ತು ಕಳೆಯದೆ, ಇವನ ಕುಲಶೀಲವಿತ್ತ ವಿದ್ಯಾವಯೋವಿಕ್ರಮಗಳನ್ನು ನೋಡುತ್ತಿರದೆ, 'ವಿಷವ' ಮೋಹಿಸುವಂತೆ ಕೊಡತಕ್ಕದ್ದು. ಇದರಿಂದ ನಮಗೆ ಉತ್ತರೋತ್ತರವಾಗುವುದು."

ಅಹಾ! ವಿಧಿಲಿಖಿತವನ್ನು ಉಲ್ಲಂಘಿಸುವವರುಂಟೆ? ಈತನು ನಮಗೆ ಮಹಾ ಅಹಿತನೆಂದೂ. ಸರ್ವಥಾ ಅಮಿತ್ರನೆಂದೂ. ಈತನು ಅಲ್ಲಿಗೆ ಬಂದ ಕೂಡಲೇ ವಿಷವ ಕೊಟ್ಟು ಕೊಂದುಬಿಡಬೇಕೆಂದೂ ಬರೆದ ದುಷ್ಟಬುದ್ಧಿಯ ದುರ್ಬುದ್ಧಿಯನ್ನು ಗ್ರಹಿಸಲಾರದೆ. ವಿಷಯೆಯು ಅದಕ್ಕೆ ಮತ್ತೊಂದು ಅಭಿಪ್ರಾಯವನ್ನು ಮಾಡಿದಳು:

"ಈತನು ತಮಗೆ ಮಹಾಹಿತನೆಂದೂ. ತಮ್ಮ ಭೂಮಿಗೆ ಈತನು ಅರಸನಾಗುವನೆಂದೂ, ಕುಲಶೀಲವಿದ್ಯೆಗಳನ್ನು ಈತನಲ್ಲಿ ಹುಡುಕಬೇಕಾಗಿಲ್ಲವೆಂದೂ. ಮುಂದಕ್ಕೆ ಈತನು ನಮಗೆ ಸರ್ವಥಾ ಮಿತ್ರನಾಗುವನೆಂದೂ. ಇವನಿಗೆ 'ವಿಷಯೆ' ಮೋಹಿಸುವಂತೆ ಕೊಡುವುದೆಂದೂ ಅಣ್ಣನಿಗೆ ತಂದೆಯು ಬರೆಸಿ ಕಳುಹಿಸಿದ ಪತ್ರವಿದು; ಅಕ್ಷರಸ್ಖಾಲಿತ್ಯದ ದೋಷದಿಂದಾಗಿ ತಪ್ಪು ಬಿದ್ದಿರಬೇಕು."

—ಹೀಗೆಂದು ಆಕೆ ಭಾವಿಸಿದಳು.

"ನನ್ನ ಮನಸ್ಸಿಗೂ ಈತನು ಒಪ್ಪಿಗೆಯಾಗಿರುವನು. ಹಾಗಾಗಿ ಈ ವರ್ಣಪಲ್ಲಟವ ದೋಷವನ್ನು ತಿದ್ದದಿದ್ದರೆ ಮಂಗಳಕಾರ್ಯವು ಕೆಟ್ಟುಹೋಗ ಬಹುದು."

—ಎಂದು ವಿಷಯೆ ಯೋಚಿಸಿ ಹತ್ತಿರದ ಮಾವಿನಮರದ ಮಯಣ ವನ್ನು ತೆಗೆದು ಕಿರುಬೆರಳ ಉಗುರಿನ ಕೊನೆಯಿಂದ, ತಪ್ಪಿರುವ ಲಿಪಿಯಲ್ಲಿ 'ವ' ಕಾರವನ್ನು ತೊಡೆದು, ಅಲ್ಲಿಗೆ ಒಪ್ಪುವಂತೆ 'ಯೆ'ಕಾರವನ್ನು ತಿದ್ದಿ ಬರೆದು ಮೊದಲಿದ್ದ ಹಾಗೆ ಮುದ್ರೆಯನ್ನು ಸರಿಗೊಳಿಸಿ, ಆತನ ವಸ್ತ್ರದ ಸೆರಗಿನ ತುದಿಗೆ ಕಟ್ಟಿ ಹಿಂದಿನಂತೆ ಇರಿಸಿದಳು; ಕಾಲಸಪ್ಪಳವಾಗದ ಹಾಗೆ ವಿಷಯೆ ಅಲ್ಲಿಂದ ಮೆಲ್ಲಮೆಲ್ಲನೆ ಕಾಲ್ತೆಗೆದಳು. ತಿರುತಿರುಗಿ ನೋಡುತ್ತಾ ಮುಂದೆ ಹೋದಳು. ಹೋಗಿ ಸರಸಕೇಳಿಯಲ್ಲಿರುವ ಸಖಿಯರ ಕೂಟದಲ್ಲಿ ಕೂಡಿಕೊಂಡಳು. ಎಲ್ಲರೂ ಅಲ್ಲಿಂದ ಅವರವರ ಮನೆಗಳಿಗೆ ಮರಳಿದರು.

ಮನೆಗೆ ಮರಳಿ ಬಂದರೂ, ವಿಷಯೆಗೆ ಚಂದ್ರಹಾಸನ ವಿಷಯವನ್ನು ಮರೆಯಲು ಆಗಲಿಲ್ಲ. ಆಕೆಗೆ ಗಳಿಗೆ ಯುಗವಾಯಿತು. ಮಾಳಿಗೆಯ ಮೇಲೆ ನಿಂತು ಚಂದ್ರಹಾಸನು ಬರುವ ಮಾರ್ಗವನ್ನೇ ಇದಿರು ನೋಡುತ್ತಿದ್ದಳು. 'ತಂದೆಯ ಅಪ್ಪಣೆಯನ್ನು ಅಣ್ಣನು ಪಾಲಿಸುವಂತೆ ಕರುಣೆ ತೋರಿಸು ತಾಯೇ' ಎಂದು ದೇವಿ ಪಾರ್ವತಿಯನ್ನು ಭಕ್ತಿಭರಿತೆಯಾಗಿ ಬೇಡಿಕೊಂಡಳು.

ಹೊತ್ತು ನೆತ್ತಿಯಿಂದಿಳಿಯಲು, ಚಂದ್ರಹಾಸನು ನಿದ್ರೆಯನ್ನು ತ್ಯಜಿಸಿ ಮುಖ ತೊಳೆದು. ಮುಕ್ಕಳಿಸಿ. ಕರ್ಪೂರವೀಳೆಯ ಹಾಕಿ, ಕುದುರೆಯೇರಿ, ಸಂಗಡಿಗರೊಡನೆ ಕುಂತಳನಗರದ ಮಾರ್ಗವಾಗಿ ಬರುತ್ತಿದ್ದನು. ಈ ಸಲ್ಲಕ್ಷಣ ಸುಶೋಭಿಯಾದ ಸುಂದರತರುಣನನ್ನು ಕಂಡು ಪುರಜನರು ಇವನು ಯಾವನೋ ಮಹಾಪುರುಷನು ಎಂದು ನೋಡುತ್ತಿದ್ದರು. ಶುಭಶಕುನಗಳನ್ನು ಕಾಣುತ್ತಾ ಚಂದ್ರಹಾಸನು ಮುನ್ನಡೆಯುತ್ತಿದ್ದನು.

ಆ ನಗರದ ಅರಸನಾದ ಕುಂತಳೇಶ್ವರನು, ಪುರೋಹಿತ ಗಾಲವನ ಸದುಪದೇಶಗಳನ್ನು ಕೇಳುತ್ತಾ, ನಿರ್ಮಲದೈವಭಕ್ತಿಭಾವದಿಂದ ಕಾಲ ಕಳೆಯು ತ್ತಿದ್ದನು. ದುಷ್ಟಬುದ್ಧಿಗೆ ರಾಜ್ಯದ ಆಡಳಿತದ ಭಾರವನ್ನು ಒಪ್ಪಿಸಿದ್ದನು. ದುಷ್ಟಬುದ್ಧಿಯು ಚಂದನಾವತಿಗೆ ಹೊರಟುಹೋದ ಬಳಿಕ ಆತನ ಮಗ ಮದನನು ರಾಜ್ಯಭಾರದ ಧುರಂಧರತೆ ವಹಿಸಿದ್ದನು. ಓಲಗದಲ್ಲಿದ್ದ ಮದನನ ಆಸ್ಥಾನಮಂಟಪದ ಹೊರಗೆ ಚಂದ್ರಹಾಸನು ಕುದುರೆಯಿಂದಿಳಿದು. ತಾನು ಬಂದಿರುವ ಸುದ್ದಿಯನ್ನು ದ್ವಾರಪಾಲಕರಿಗೆ ತಿಳಿಸಲು. ಅವರು ಒಬ್ಬರೊಡ

ನೊಬ್ಬರು ಹೇಳುತ್ತಾ ಕೊನೆಗೆ, ಏಳನೆಯ ದ್ವಾರದ ವಿವೇಕನೆಂಬವನು ಮದನನಿಗೆ ಚಂದ್ರಹಾಸನ ಬರವನ್ನು ಅರುಹಿದನು. ಸುವರ್ಣಪೀಠದಿಂದ ಇಳಿದು ಬಂದು ಮದನನು ಚಂದ್ರಹಾಸನನ್ನು ಇದಿರ್ಗೊಂಡು ಪ್ರೀತಿಯಿಂದ ಆಲಂಗಿಸಿ, ಕೈಹಿಡಿದು ಸಭೆಗೆ ಕರೆದುಕೊಂಡು ಹೋಗಿ ಸತ್ಕಾರಮಾಡಿ ಕುಶಲವಾರ್ತೆಗಳನ್ನು ಕೇಳಿದನು—

"ಅಯ್ಯೊ, ನಿನ್ನ ದರ್ಶನವು ಅಪೂರ್ವವಾಗಿದೆ: ಇತ್ತ ದಯಮಾಡಿಸಲು ಕಾರಣವೇನೋ ತಿಳಿಯಲಿಲ್ಲವಲ್ಲಾ."

"ಮಹಾನುಭಾವನೇ, ನಿನ್ನ ತಂದೆಯು ನನ್ನನ್ನು ನಿನ್ನಲ್ಲಿಗೆ ಬಹಳ ರಹಸ್ಯವಾದ ಕಾರ್ಯದ ನಿಮಿತ್ತ ಒಪ್ಪಿಸಿ ಕಳುಹಿಸಲು ನಾನು ಬಂದಿರುವೆನು. ಇಗೋ, ಪಿತನ ಗುರುತಿನ ಮುದ್ರೆಯ ಓಲೆ ಇಲ್ಲಿದೆ."

ಚಂದ್ರಹಾಸನು ಮದನನ ಕೈಗೆ ಮುದ್ರಾಂಕಿತ ಪತ್ರವನ್ನಿತ್ತನು. ಅಲ್ಲಿ ಇದ್ದವರನ್ನು ಎಲ್ಲರನ್ನೂ ಸಭೆಯಲ್ಲಿಯೇ ಇರಹೇಳಿ, ಗದ್ದುಗೆಯಲ್ಲಿ ಚಂದ್ರಹಾಸನನ್ನು ಕುಳ್ಳಿರಿಸಿ. ಅಮಲನೆಂಬ ತನ್ನ ತಮ್ಮನೊಡನೆ ಮದನನು ಏಕಾಂತ ಭವನಕ್ಕೆ ಹೋಗಿ, ಅಲ್ಲಿ ಮುದ್ರೆಯನ್ನು ಒಡೆದು ಪತ್ರವನ್ನು ಓದಿದನು. ಅದರಲ್ಲಿ ತಿದ್ದಿದ ಅಕ್ಷರವನ್ನು ತಿಳಿಯದೆ ನಿಜದ ಬರಹವೆಂದೇ ಭಾವಿಸಿ ಸಂತೋಷಸಾಗರದಲ್ಲಿ ತೇಲಾಡಿದನು.

"ಆಹಾ! ತಂದೆಯು ನನಗೆ ಬರೆದು ತಿಳಿಸಿದ ಈ ವಿಚಾರವು ಎಷ್ಟು ಯೋಗ್ಯವಾದುದು. ನಿಜವಾಗಿಯೂ ನನಗೆ ಇವನು ಮಹಾಹಿತನಲ್ಲವೆ? ಈ ಸೀಮೆಗೆ ಇವನೇ ಅರಸನಾಗುವನು; ನಮಗೆ ಸರ್ವಥಾ ಮಿತ್ರನಾಗುವನು. ಇದೆಲ್ಲಾ ನಿಶ್ಚಯವೇ, ಕುಲಾಚಾರಸಂಗತಿಗಳನ್ನು ನಾವು ಯಾಕೆ ವಿಚಾರಿಸಬೇಕು? 'ವಿಷಯೆ' ಮೋಹಿಸುವಂತೆ ಮದುವೆಮಾಡಿಸುವೆನು. ಇದಕ್ಕೆ ತಡಮಾಡಕೂಡದು. ತಂಗಿಗೆ ಈತನು ಯೋಗ್ಯ ವರನೂ ಆಗಿರುವನು. ತಂದೆಯ ಅಪ್ಪಣೆಯೂ ಆಗಿದೆ. ನನ್ನ ಮನಸ್ಸಿಗೂ ಹಿತವೆನಿಸಿದೆ: ಈತನು ಹರಿಭಕ್ತಿ ಪರಾಯಣನೂ ಆಗಿದ್ದಾನೆ. ಇನ್ನು ಸಂಶಯವೇಕೆ? ಇವನಿಗೆ ನನ್ನ ಮುದ್ದು ತಂಗಿಯನ್ನು ಮದುವೆಮಾಡಿಸಿ ಬಹುಮಾನಿಸುವೆನು."

ಮದನನು ಜೋಯಿಸರನ್ನು ಬರಮಾಡಿಸಿದನು. ಅವರು ಯೋಗ್ಯವಾದ ರಾಶಿಕೂಟವನ್ನೂ, ನಿರ್ಮಲವಾದ ಲಗ್ನವನ್ನೂ ಗುಣಿಸಿ ಹೇಳಿದರು. ಮದನನು ಪಟ್ಟಣವಲ್ಲಿ ಒಸಗೆಯನ್ನು ಮಾಡಿಸಿದನು. ಗುಡಿ ತೋರಣಗಳು ಆಕಾಶವೆತ್ತರವೇರಿದುವು; ಬೇಕಾದ ಮಂಗಳವಸ್ತುಗಳು ಸಂಗ್ರಹವಾದುವು. ಮಣಿಮಯ

ವಾದ ವೇದಿಯನ್ನು ರಚಿಸಿ ವಿವಾಹಮಂಟಪವು ಸಿದ್ಧವಾಯಿತು. ಪುರೋಹಿತರು ವಿವಾಹೋಚಿತಕ್ರಿಯೆಗಳನ್ನು ನೆರವೇರಿಸಿದರು. ಮುತ್ತೈದೆಯರು ಮಜ್ಜನ ಮಂಡನಗಳನ್ನು ಮಾಡಿಸಿದರು. ಹಣೆಗೆ ಬಾಸಿಗವನ್ನು ಕಟ್ಟಿದರು. ಮದುವಳಿಗ ನಾಗಿ ಚಂದ್ರಹಾಸನು ಮೆರೆದನು. ವಿಷಯೆಗೆ ಶೋಭನಸ್ನಾನ ಮಾಡಿಸಿದರು. ವಿವಿಧಾಭರಣಗಳನ್ನು ತೊಡಿಸಿದರು. ಸುಗಂಧಪುಷ್ಪಗಳನ್ನು ಸೂಡಿದರು. ಕೈಸೊಡರುಗಳ ಸಾಲಿನಿಂದ, ಹಾಡುವ ಹೆಂಗಳೆಯರ ಗಡಣದಿಂದ, ಕಳಸಕನ್ನಡಿ ಹಿಡಿವ ಕನ್ನೆಯರಿಂದ. ನಾನಾ ವಸ್ತುಗಳ ವಿಸ್ತರಣದಿಂದ ಒಸಗೆಯ ವಾದ್ಯ ನಿನಾದದಿಂದ, ವಿವಾಹ ಮಂಟಪಕ್ಕೆ ವಧೂವರರನ್ನು ದಂಡಿಗೆಯಲ್ಲಿ ಕರೆತಂದರು.

ಮದನನು, ಸುಮುಹೂರ್ತವು ಸಮೀಪಿಸಲು ತೆರೆತೆಗೆಸಿ ಹಿರಿಯರ ಹರಕೆ ಪಡೆದು ತನ್ನ ತಂಗಿಯನ್ನು ಚಂದ್ರಹಾಸನ ಕೈಗೆ ಧಾರೆಯೆರೆದಿತ್ತನು. ನವಪರಿಮಳ ಪೂರ್ಣವಾದ ಮಂದಾರಮಾಲೆಯನ್ನು ವಿಷಯೆ ಚಂದ್ರಹಾಸನ ಕೊರಳಿಗೆ ಹಾಕಿದಳು. ಬ್ರಾಹ್ಮಣರು ಅಗ್ನಿಹೋತ್ರವನ್ನು ಉಚ್ಚರಿಸುತ್ತಿರಲು ಚಂದ್ರ ಹಾಸನು ವಿಷಯೆಯನ್ನು ಅಗ್ನಿಸಾಕ್ಷಿಯಾಗಿ ಕೈಹಿಡಿದನು. ಮನ್ಮಥರತಿಯರ ವಿವಾಹವಂತೆ ಆ ದಂಪತಿಗಳ ಮದುವೆ ನೆರವೇರಿತು. ಮದನನು ಮದುಮಗ ನಿಗೆ ಅನೇಕ ಬಳುವಳಿಗಳನ್ನಿತ್ತನು. ಪುರೋಹಿತ, ಬಂಧುಮಿತ್ರರಿಗೆ, ಕವಿ, ಗಮಕಿ, ನಟ, ವಿದೂಷಕ, ವಂದಿ, ಗಾಯಕರಿಗೆ. ಆಹ್ವಾನಿತರಾದ ಸಕಲರಿಗೂ ಮೃಷ್ಟಾನ್ನಭೋಜನದ ದಾನದಕ್ಷಿಣೆಗಳ ಸರ್ವ ಸತ್ಕಾರಗಳೂ ನಡೆದುವು. ಭಂಡಾರದ ಅಖಿಲದ್ರವ್ಯರಾಶಿಯೂ ತೃಣ ಸಮಾನವೆಂದು ಬಗೆದು ಮದನನು ತನ್ನ ತಂಗಿಯ ವಿವಾಹವನ್ನು ಬಹಳ ಸಂಭ್ರಮದಿಂದ ನೆರವೇರಿಸಿದನು.

ಅತ್ತ, ಚಂದನಾವತಿಯಲ್ಲಿ, ಚಂದ್ರಹಾಸನನ್ನು ಕುಂತಳದೇಶಕ್ಕೆ ಕಳುಹಿಸಿ ಕೊಟ್ಟ ಮೇಲೆ ದುಷ್ಟಬುದ್ಧಿಯು ತನ್ನ ದುಷ್ಕೃತ್ಯಗಳನ್ನು ಪ್ರಾರಂಭಿಸಿದನು. ಕುಳಿಂದಕನನ್ನು ಜರೆದು, ಬೈದು, ಭಂಗಿಸಿ, ಆತನ ಸಮಸ್ತ ಕೋಶವನ್ನು ಕೈವಶ ಮಾಡಿಕೊಂಡು, ಅವನ ಕಾಲಿಗೆ ಸಂಕಲೆ ಬಿಗಿಸಿ, ಸೆರೆಮನೆಗೆ ದೂಡಿಸಿದನು. ನಾಡನ್ನು ನೋಡಿಕೊಂಡಿರೆಂದು ಈತನ ಕೈಗೆ ಕೊಟ್ಟರೆ, ತನ್ನನ್ನು ಮರೆತು, ಸೊಕ್ಕಿ, ತನಗೊಬ್ಬ ಮಗನನ್ನು ಸಹ ಮಾಡಿಕೊಂಡು, ಮಕ್ಕಳಾಟಿಕೆಯಿಂದ ಊರಲ್ಲೆಲ್ಲಾ ಕೆರೆ, ತೋಟಗಳನ್ನು ಮಾಡಿಸಿ, ದ್ರವ್ಯವನ್ನೆಲ್ಲಾ ಹಾಳುಗೈದನೆಂದು ಆತನ ಮೇಲೆ ವಿಷಕಾರಿದನು. ಅಲ್ಲಿಂದ ಅನುಚರರೊಡನೆ ಕುಂತಳನಗರಿಗೆ ಬೇಗಬೇಗನೆ ಬಂದನು.

ಚಂದ್ರಹಾಸನನ್ನು, ಮಗನು, ವಿಷಹಾಕಿ ಕೊಲ್ಲುವನೋ? ಜಡ ಬುದ್ಧಿಯಿಂದ ಮರೆತುಬಿಡುವನೋ? ಎಂಬ ಸಂದೇಹಸಾವಿರದೊಡನೆ ಚಂದನಾವತಿಯಿಂದ ಕುಂತಳನಗರಕ್ಕಾಗಿ ಹೊರಟು, ನಿಂತಲ್ಲಿ ನಿಲ್ಲದೆ ಬರುತ್ತಿರಲು, ದಾರಿಯಲ್ಲಿ ಒಂದು ಹಾವು ಅಡ್ಡಹಾದು ಹೇಳಿತು—

'ದುಷ್ಟಬುದ್ಧಿಯೇ, ಇದುವರೆಗೂ ನಿನ್ನ ಮನೆಯಲ್ಲಿ ದ್ರವ್ಯರಾಶಿಯನ್ನು ಕಾದುಕೊಂಡಿದ್ದೆನು; ಅದು ನಿನ್ನ ಮಗನಿಂದ ವ್ಯಯವಾಗಲು ಅಲ್ಲಿಂದ ಬಂದೆನು' ಎಂದು ಮನುಷ್ಯಭಾಷೆಯಲ್ಲಿ ಹೇಳಿ ಬಿಲವನ್ನು ಹೊಕ್ಕಿತು. ಇದನ್ನು ಕೇಳಿ ದುಷ್ಟಬುದ್ಧಿಯ ದುಮ್ಮಾನ ಹೆಚ್ಚಿತು. ನಗರವನ್ನು ಸಮೀಪಿಸುತ್ತಿದ್ದಂತೆ, ಮೊಳಗುತ್ತಿದ್ದ ಮಂಗಳವಾದ್ಯಘೋಷವು ಆತನಿಗೆ ಕರ್ಣಕರ್ಕಶವಾಗಿ ಕೇಳಿಸಿತು. ದಾರಿಯಲ್ಲಿ ಕಂಡವರೊಡನೆ, ನಗರದಲ್ಲಿ ಇದೇನು ಉತ್ಸವವೆಂದು ಕೇಳಲು, ಅವರು, ನಿನ್ನ ಮಗ ಮದನನು, ತನ್ನ ತಂಗಿಯನ್ನು ಚಂದ್ರಹಾಸನಿಗೆ ಮದುವೆ ಮಾಡಿಸಿದ ಒಸಗೆಯಿದೆಂದರು.

ಹರಿತವಾದ ಖಡ್ಗವನ್ನು ಆತನ ಕಿವಿಗೆ ಇಳಿಸಿದಂತಾಯಿತು; ಕಣ್ಣುಗಳು ಕೆಂಪಡರಿದುವು. ತನ್ನ ಅಪ್ಪಣೆಯನ್ನು ಮಗನು ಮೀರಿ ನಡೆದನೇ ಎಂದು ಹಲ್ಲು ಕಡಿಯುತ್ತಾ ಗುಡುಗುಡುಸಿ ಬರುತ್ತಿರಲು, ಮದನನು ಸಂತೋಷದಿಂದ ಬಂದು ದುಷ್ಟಬುದ್ಧಿಯ ಪಾದಗಳಿಗೆರಗಿದನು. ಆತನನ್ನು ಬೈದು, ತನ್ನ ನಿವಾಸದ ಕಡೆಗೆ ನಡೆದು, ದಂಡಿಗೆಯಿಂದಿಳಿದು, ಮಗನನ್ನು ಕರೆದು ಜರೆದನು. ಮದುಮಕ್ಕಳನ್ನೂ, ಆ ಮಹಾ ವೈಭವದ ಮದುವೆಯನ್ನೂ ಆ ದಾನಧರ್ಮಗಳನ್ನೂ, ಹೊಗಳುತ್ತಿರುವ ಸೇವಕರನ್ನೂ, ಬಂಧುಗಳನ್ನೂ, ಬ್ರಾಹ್ಮಣರನ್ನೂ, ಪುರೋಹಿತರನ್ನೂ, ಚಂದ್ರಹಾಸನು ವಿಷಯೆಗೆ ತಕ್ಕ ವರನೆಂದು ಹೇಳುವ ಹೆಂಗಸರನ್ನು, ಎಲ್ಲರನ್ನೂ ಶತಸಾವಿರ ಶಪಿಸಿದನು. ದಂಪತಿಗಳು ಅಂಜಲಿಬದ್ಧರಾಗಿ ಬಂದು ನಮಸ್ಕರಿಸಲು, ಗಿಳಿಮರಿಗಳನ್ನು ನೋಡುವ ಬೆಕ್ಕಿನಂತೆ, ಅವರನ್ನು ವಿಷತುಂಬಿದ ಮನಸ್ಸಿನಿಂದ ನೋಡಿದನು. ಮದನನನ್ನು ಕರೆದು ಜರೆದು ಹೇಳಿದನು—

"ಎಲೈ ಮೂಢ, ನಿನಗೆ ರಹಸ್ಯವಾಗಿ ಪತ್ರ ಬರೆದು ತಿಳಿಸಿದ್ದರೂ ಘನವಾದ ಕಾರ್ಯವನ್ನು ಹೀಗೆ ಹಾಳುಮಾಡಿ ನನಗೆ ಹೃದಯಶೂಲನಾಗಿದ್ದೀಯೆ! ಸಾಮ್ರಾಜ್ಯ ಸಿಂಹಾಸನವನ್ನು ನಿನಗೆ ಒದಗಿಸಬೇಕೆಂದು ನಾನು ಹಂಚಿಕೆಹೂಡಿರಲು ನೀನದನ್ನು ಕಳೆದುಕೊಂಡಿ. ಪಾಪಿ! ನಾನು ಸಂಪಾದಿಸಿಟ್ಟ ದ್ರವ್ಯವನ್ನೆಲ್ಲಾ ಹಾಳುಮಾಡಿದಿಯಲ್ಲಾ! ಇನ್ನು ನಿನಗೆ ವನವಾಸವೇ ಗತಿ. ನನ್ನ ಮುಂದೆ ಇರಬೇಡ. ಹೋಗಾಚೆ."

ಕೋಪೋದ್ರೇಕವಶನಾದ ತಂದೆಯ ನಿಷ್ಠುರೋಕ್ತಿಯನ್ನು ಕೇಳಿ ಮದನನು ಬೆರಗಾದನು—

"ಜೀಯ, ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ನಿರ್ವಹಿಸಿದ್ದೇನಲ್ಲದೆ ನಾನು ಅತಿಕ್ರಮಿಸಿ ಮಾಡಿದ್ದೇನಿದೆ? ಪಿತೃವಾಕ್ಯ ಪಾಲನೆಗಾಗಿ ಶ್ರೀರಾಮನೂ ಹೀಗೆ ಅರಣ್ಯವಾಸಮಾಡಿಲ್ಲವೆ? ತಂದೆಯ ಮಾತಿನಂತೆ ತಂಗಿಯ ವಿವಾಹ ಮಾಡಿಸಿದಕ್ಕಾಗಿ ನನಗೆ ವನವಾಸವಾದರೆ ನಾನು ಅದಕ್ಕೆ ಬೇಸರಿಸು ವೆನೆ?"

ದುಷ್ಟಬುದ್ಧಿಗೆ ಏನೋ ಮೋಸ ನಡೆದಿರಬೇಕೆಂದು ಸಂಶಯ ತಲೆದೋ ರಿತು. ಮಗನನ್ನು ಶಪಿಸುತ್ತಾ, ತಾನು ಬರೆದು ಕಳುಹಿಸಿದ ಪತ್ರವನ್ನು ತರಿಸಿ ಓದಿನೋಡಿದನು. ಪತ್ರದ ಒಕ್ಕಣೆ ವ್ಯತ್ಯಾಸವಾಗಿರುವುದನ್ನು ಕಂಡು ಮಗನಲ್ಲಿ ತಪ್ಪಿಲ್ಲವೆಂದು ತಿಳಿದು ತನ್ನ ದುರ್ವಿಧಿಗಾಗಿ ದುಃಖಿಸಿದನು. ವಿಷವ ಮೋಹಿಸು ವಂತೆ ಬರೆದ ಪತ್ರವು ವಿಷಯೆ ಮೋಹಿಸುವಂತೆ ಎಂದಾದುದು ವಿಧಿಲಿಖಿತವೋ. ತನ್ನ ತಪ್ಪೋ. ಚಂದ್ರಹಾಸನ ಕಪಟವೋ. ಬರೆದವನ ದೋಷವೋ – ಏನಾಗಿರ ಬಹುದೆಂದು ಹಲವು ಬಗೆಯಾಗಿ ಚಿಂತಿಸಿದನು.

ಕೊನೆಗೆ ದುಷ್ಟಬುದ್ಧಿಯು ಇನ್ನೊಂದು ದುಷ್ಕೃತ್ಯವನ್ನು ಬಗೆದನು. ಚಂದ್ರಹಾಸನನ್ನು ವಧಿಸದಿದ್ದರೆ ತನ್ನ ಸಂತತಿಗೆ ಈ ಭೂಮಿಯ ಒಡತನವು ತಪ್ಪಿಹೋಗುವುದೆಂದು ಚಿಂತಿಸಿ, ಶತ್ರುವಾದವನ ಕೈಹಿಡಿದ ಮಗಳು ವಿಧವೆಯಾ ದರೂ ದೋಷವಿಲ್ಲವೆಂದು ಬಗೆದು. ಅಂತರಂಗದ ಈ ವಿಷಮ ಯೋಜನೆಯನ್ನು ಯಾರಿಗೂ ತಿಳಿಯಪಡಿಸದೆ, ಬಹಿರಂಗದಲ್ಲಿ ದಂಪತಿಗಳಿಬ್ಬರನ್ನೂ ಸವಿಮಾತಿ ನಿಂದ ಸಂತೈಸಿ. ಸಂತೋಷವನ್ನು ತೋರ್ಪಡಿಸಿ. ಅಳಿಯನನ್ನು ಕರೆದು ಹೀಗೆ ಹೇಳಿದನು—

"ವೀರನಾದ ಚಂದ್ರಹಾಸನೇ, ಇದುವರೆಗೂ ನಮಗೆ ನೀನು ದೂರದವ ನಾಗಿದ್ದಿ. ಮಗಳ ಕೈಹಿಡಿದ ನಂತರ ಹತ್ತಿರದ ಬಂಧುವಾಗಿರುವಿಯಷ್ಟೆ. ಮದುವೆಯಾದ ನಾಲ್ಕನೆಯ ದಿನದಲ್ಲಿ. ಮದುಮಗನಾದವನು. ಸೂರ್ಯಾಸ್ತ ಸಮಯ ಒಬ್ಬನೇ ಹೋಗಿ ಚಂಡಿಯ ಪೂಜೆಯನ್ನು ಮಾಡಿ ಬರುವುದು ನಮ್ಮ ವಂಶದ ಪದ್ಧತಿ. ನೀನು ಅದನ್ನು ಪೂರೈಸಿ ಬಾ."

ದೇವಿಯ ಆರಾಧನೆಗೆಂದು ಮಾವನ ಮಾತಿನಂತೆ ಚಂದ್ರಹಾಸನು ಸಕಲ ಪೂಜಾಸಾಮಗ್ರಿಗಳನ್ನು ಸಿದ್ಧತೆಗೊಳಿಸಿದನು. ಅಷ್ಟರಲ್ಲಿ ದುಷ್ಟಬುದ್ಧಿಯು ಅತಿ ರಹಸ್ಯವಾಗಿ ಚಂಡಾಲರನ್ನು ಕರೆಸಿ ಆಜ್ಞೆಯಿತ್ತನು—

"ಎಲೈ ಚಂಡಾಲರೆ. ನೀವು ಅಂದಿನ ಹಾಗೆ ಮೋಸಮಾಡದಿರಿ. ಈ ದಿನ ಚಂಡಿಕಾಲಯಕ್ಕೆ ಅಸ್ತಮಾನ ಸಮಯದಲ್ಲಿ ಓರ್ವನು ಬರಲಿರುವನು. ಅಲ್ಲಿ ಅಡಗಿಕೊಂಡಿದ್ದು ಆತನನ್ನು ಕೊಂದುಬಿಡಬೇಕು; ಎಚ್ಚರವಿರಲಿ."

ಅಂತೆಗೆಯ್ವೆವೆಂದು ಚಂಡಾಲರು ಒಪ್ಪಿದರು. ದುರ್ಮಂತ್ರಿ ತನ್ನ ದುಷ್ಕೃತ್ಯಕ್ಕಾಗಿ ಹಿಗ್ಗಿದನು. ಅಷ್ಟರಲ್ಲಿ, ಕುಂತಳೇಶ್ವರನು ತನ್ನ ಶರೀರದ ನೆರಳಲ್ಲಿ ಶಿರವಿಲ್ಲದಿರುವುದನ್ನು ಕಂಡು ಗಾಲವನ ಮಾತಿನಿಂದ ಮೃತ್ಯುಸನ್ನಿಹಿತವಾಯಿತೆಂದು ತಿಳಿದು. ರೋಗಕ್ಕೆ ತುತ್ತಾಗಬಾರದೆಂದು. ಹಾವು ಹೆರೆಯನ್ನು ಕಳಚುವ ಹಾಗೆ. ಸಕಲ ಸೌಭಾಗ್ಯವನ್ನೂ ತ್ಯಜಿಸಿ ಯೋಗಸಿದ್ಧಿಯನ್ನು ಪಡೆಯಲು ವನವಾಸಕ್ಕೆ ತೆರಳುವ ಮನಸ್ಸುಮಾಡಿದನು. ತಾನು ವನವಾಸಕ್ಕೆ ಹೋಗುವ ಮುನ್ನ. ಪುತ್ರ ಸಂತಾನವಿಲ್ಲದಿರುವುದರಿಂದ ಈ ಭೂಮಿಯನ್ನೂ ಪ್ರಾಪ್ತವಯಸ್ಕಳಾದ ಪುತ್ರಿ ಚಂಪಕಮಾಲಿನಿಯನ್ನು ಯಾರ ಕೈಗೆ ಒಪ್ಪಿಸುವುದೆಂದು ಪುರೋಹಿತನನ್ನು ಪ್ರಶ್ನಿಸಲು. ಆತನು ಸಾಮ್ರಾಜ್ಯಸಹಿತವಾಗಿ ಮಗಳನ್ನು ಚಂದ್ರಹಾಸನಿಗೆ ಒಪ್ಪಿಸುವುದೆಂದೆನ್ನಲು ಅಂತೆ ಮಾಡುವುದೆಂದು ನಿಶ್ಚಯಿಸಿ ಬಳಿಯಲ್ಲಿದ್ದ ಮದನನನ್ನು ಕರೆದು, ಕೂಡಲೇ ಚಂದ್ರಹಾಸನನ್ನು ತನ್ನಲ್ಲಿಗೆ ಕರೆದು ತರಬೇಕೆಂದೂ ಆತನೊಡನೆ ಮಹತ್ವದ ಕೆಲಸವೊಂದಿದೆಯೆಂದೂ ತಿಳಿಸಲು ಮದನನು ಕುದುರೆಯ ಬೆನ್ನೇರಿ ವೇಗವಾಗಿ ಸಾಗಿ, ಸೂರ್ಯಾಸ್ತಮಾನಕಾಲದಲ್ಲಿ ಪೂಜಾದ್ರವ್ಯಗಳನ್ನು ಹಿಡಿದುಕೊಂಡು ಚಂಡಿಕಾಲಯಕ್ಕೆ ಹೊರಟುನಿಂತಿದ್ದ ಚಂದ್ರಹಾಸನನ್ನು ಸಂಧಿಸಿದನು.

"ಇದೆಲ್ಲಿಗೆ ಹೊರಟಿದ್ದೀಯೋ?"

—ಮದನನು ಚಂದ್ರಹಾಸನೊಡನೆ ಕೇಳಿದನು.

"ನಿನ್ನ ತಂದೆಯ ಮಾತಿನಂತೆ ಚಂಡಿಕಾಲಯಕ್ಕೆ ಪೂಜೆಗೆ ಹೋಗಬೇಕಾಗಿದೆ.

—ಚಂದ್ರಹಾಸನು ಉತ್ತರವಿತ್ತನು.

ಮದನನು ಕುದುರೆಯಿಂದ ತಟ್ಟನೆ ಕೆಳಗಿಳಿದನು,

"ತಂದೆಯ ಕಟ್ಟಳೆಯ ಪೂಜೆಯನ್ನು ನಾನು ಮಾಡಿಬರುತ್ತೇನೆ. ಏನೋ ಒಂದು ಮಹತ್ವದ ಕಾರ್ಯವಿದೆ. ಕುಂತಳೇಶ್ವರನು ನಿನ್ನನ್ನು ಕೂಡಲೇ ಬರಹೇಳಿದ್ದಾನೆ, ನೀನು ಬೇಗನೆ ಅಲ್ಲಿಗೆ ಹೋಗು."

ಚಂದ್ರಹಾಸನ ಕೈಯಿಂದ ಪೂಂದಳಿಗೆಯನ್ನು ಮದನನು ತೆಗೆದುಕೊಂಡನು. ಚಂದ್ರಹಾಸನು ಕುದುರೆಯೇರಿ ಕುಂತಳೇಶ್ವರನಲ್ಲಿಗೆ ವೇಗವಾಗಿ ಸಾಗಿದನು. ಏಕಾಂಗಿಯಾಗಿಯೇ ಹೋಗಬೇಕಾದುದು ಕುಲವ್ರತವೆಂದು ತಂದೆ ವಿಧಿಸಿದಂತೆ

ಮದನನು ಸೇವಕರನ್ನೆಲ್ಲಾ ಕಳುಹಿಸಿ ಏಕಾಕಿಯಾಗಿ ಚಂಡಿಕಾಲಯದತ್ತ ನಡೆದನು. ದಾರಿಯಲ್ಲಿ ಅಪಶಕುನಗಳಾದುವು. ಚಂದ್ರಹಾಸನಿಗೆ ದೇವರು ಕೆಟ್ಟದ್ದನ್ನುಂಟು ಮಾಡದಿರಲೆಂದು ಪ್ರಾರ್ಥಿಸುತ್ತಾ ಮದನನು ಚಂಡಿಕಾಲಯಕ್ಕಾಗಿ ಬಂದನು. ದುರ್ಜನರ ಹೃದಯದಲ್ಲಿರುವ ವಿವೇಕವನ್ನು ಬಳಸಿದ ಅರಿಷಡ್ವರ್ಗಗಳಂತೆ ದುರ್ವರ್ತರಣವನ್ನು ತಿಳಿಯದೆ ದೇವಿಯ ಗುಡಿಯ ಒಳಹೋಗುವ ಮದನನನ್ನು ದುಷ್ಟಬುದ್ಧಿಯ ಆಜ್ಞೆಯ ಪ್ರಕಾರ ಚಂಡಾಲರು ಒರೆಯುಗಿದ ಖಡ್ಗಗಳಿಂದ ಕೆಲಬಲದಲ್ಲಿ ನಿಂತು ಇರಿದುಕೊಂದರು! ದೇವರ ನಾಮಸ್ಮರಣೆಮಾಡುತ್ತಾ ಮದನನು ಭೂಮಿಗೆ ಉರುಳಿದನು!

ಚಂದ್ರಹಾಸನು ತ್ವರಿತದಿಂದ ಬಂದು ಕುಂತಳೇಶ್ವರನನ್ನು ಕಂಡನು. ಆತನಿಗೆ ಅರಸನು ಭೂಮಿಯನ್ನಿತ್ತು, ಸಾಮ್ರಾಜ್ಯಪಟ್ಟವನ್ನು ಕಟ್ಟಿ, ಗಾಂಧರ್ವ ವಿಧಿಯಿಂದ ಪುತ್ರಿ ಚಂಪಕಮಾಲಿನಿಯನ್ನು ಮದುವೆಮಾಡಿಕೊಟ್ಟು ತಾನು ಯೋಗಸ್ವೀಕಾರಮಾಡಿ ವನವಾಸಕ್ಕೆ ತೆರಳಿದನು. ಪಟ್ಟದ ಒಡೆತನ ಬಂದುದು ಸಕಲ ಪ್ರಜೆಗಳಿಗೂ ತಿಳಿಯಲೆಂದು ಚಂದ್ರಹಾಸನು ರಾಜಕುಮಾರಿಯೊಡಗೂಡಿ, ಆನೆಯ ಮೇಲೆ ಅಂಬಾರಿಯಲ್ಲಿ ಆಸೀನನಾಗಿ, ಪುರದ ಪ್ರಧಾನವೀಥಿಗಳಲ್ಲಿ ಸಂಭ್ರಮೋಲ್ಲಾಸದಿಂದ ಮೆರವಣಿಗೆ ಹೊರಡಲು, ವಂದಿ ಮಾಗಧರು ಹೊಗಳಿದರು; ವಿವಿಧ ವಾದ್ಯಘೋಷಗಳು ಮೊಳಗಿದುವು. ದುಷ್ಟಬುದ್ಧಿಯ ಕಿವಿಗೂ ಈ ಸುದ್ದಿ ಮುಟ್ಟಿತು. ಪುನಃ ಆತನ ಹೃದಯಕುಹರವನ್ನು ಭೀತಿಯ ಕತ್ತಲು ಮುತ್ತಿತು. ದೈವದ ಆಟವನ್ನು ನೋಡಿ ಬೆರಗಾದನು. 'ಗಾಲವನ ಅಭಿಮತದಿಂದ ಕುಂತಳೇಶ್ವರನು ಕುಳಿಂದಕನ ಮಗನಿಗೆ ಪಟ್ಟವನ್ನು ಒಪ್ಪಿಸಿದನೇ? ಮೂಢನಾದ ಮದನನು ಅಲ್ಲಿದ್ದು ಸುಮ್ಮನಿದ್ದಾನಲ್ಲಾ' ಎಂದು ಮಗನ ಮೇಲೆ ಸಿಟ್ಟುಗೊಂಡನು. ಅಷ್ಟರಲ್ಲಿ ಚಂದ್ರಹಾಸನು ಮಾಲಿನಿಯೊಡಗೂಡಿ ಅಂಬಾರಿಯಿಂದ ಇಳಿದು ಬಂದು ಮಾವನ ಅಡಿಗಳಿಗೆರಗಿದನು. ಮಂತ್ರಿಯ ಸಿಟ್ಟು ನೆತ್ತಿಗೇರಿತು.

"ಮೂರ್ಖ, ಮಂಡಾಚಾರ ಬಿಡಕೂಡದು, ಚಂಡಿಕಾಪೂಜೆ ಮಾಡಿ ಬಾ ಎಂದು ಕಳುಹಿಸಿದರೆ ನೀನು ಮಾಡಿದುದೇನು?"

"ಮಾವ, ಕೋಪಿಸದಿರು, ನಾನು ನಿನ್ನ ಅಪ್ಪಣೆಯಂತೆ ಹೊರಟುಹೋಗುತ್ತಿದ್ದೆನು. ಆಗ ನಿನ್ನ ಮಗ ಮದನನು ಕುಂತಳೇಶ್ವರನ ಆಜ್ಞೆಯನ್ನು ನನಗೆ ಬಂದು ತಿಳಿಸಿದನು. ಪೂಜೆಯನ್ನು ನೆರವೇರಿಸಲು ಏಕಾಂಗಿಯಾಗಿ ಆತನೇ ಚಂಡಿಕಾಲಯಕ್ಕೆ ಹೊರಟನು. ನಾನು ಇತ್ತ ಬಂದೆನು."

ದುಷ್ಟಬುದ್ಧಿಗೆ ಸಿಡಿಲು ಬಡಿದಂತಾಯಿತು! ಅಳಿಯನನ್ನು ಕಳುಹಿಸಿ ಕೊಟ್ಟು ಕೃತದುಷ್ಕೃತ ಪಶ್ಚಾತ್ತಾಪದಿಂದ ಪರಿತಪಿಸಿದನು.

"ಅಯ್ಯೋ! ನಾನೆಂತಹ ಪಾಪಿಯು. ನಾನು ಮಾಡಿದ ಉಪಾಯದಿಂದ ನನಗೇ ಅಪಾಯ ಬಂದೊದಗಿತಲ್ಲಾ! ದೀಪವನ್ನು ಕೆಡಿಸುವ ಪತಂಗದಂತೆ ಪರ ಹಿಂಸೆ ಮಾಡಿದವನು ಬದುಕುವುದುಂಟೆ? ಅಕಟಾ! ಕೆಟ್ಟೆನಲ್ಲಾ."

ಹಣೆ ಹಣೆ ಬಡಿದುಕೊಂಡನು. ಯಾರೂ ತಿಳಿಯದಂತೆ ನಡುರಾತ್ರಿಯಲ್ಲಿ ಮನೆಯಿಂದ ಹೊರಟನು. ದಾರಿ ಕಾಣದಿರಲು ಏರಿ ಇಳಿದು. ಎದ್ದು ಬಿದ್ದು ಕಲ್ಲುಮುಳ್ಳುಗಳನ್ನು ಗಣಿಸದೆ. ಹಳ್ಳತಿಟ್ಟುಗಳನ್ನು ಎಣಿಸದೆ. ತಲೆಯನ್ನು ಕೆದರಿ ಕೊಂಡು ಮೊರೆಯಿಡುತ್ತಾ ಕೋಟೆಯನ್ನು ಹತ್ತಿ. ಕಂದಕವನ್ನು ದಾಟಿ, ಆ ಕಗ್ಗತ್ತಲೆಯಲ್ಲಿ ಒಬ್ಬನೇ ಪಿಶಾಚಿಯಂತೆ ನಗರದ ಬಹಿರುದ್ಯಾನದಲ್ಲಿರುವ ಚಂಡಿಕಾಲಯದ ಕಡೆಗೆ ನಡೆದನು. ಹರಿದ ಹೂವಿನ ಮಾಲೆಗಳಿಂದಲೂ. ಬಣ್ಣದ ಬಣ್ಣದ ಬಲಿಗಳಿಂದಲೂ, ಭಸ್ಮವಾದ ಶರೀರಗಳಿಂದಲೂ. ಬೇಯು ತ್ತಿರುವ ಹೆಣಗಳಿಂದಲೂ. ಎಲುಬಿನ ರಾಶಿಗಳಿಂದಲೂ. ನರಿಗೂಬೆ-ಭೂತ ಬೇತಾಳಗಳ ಕರ್ಕಶ ಧ್ವನಿಗಳಿಂದಲೂ ಕೂಡಿದ ಅರಣ್ಯಮಧ್ಯದ ಸುಡುಗಾಡನ್ನು ದಾಟಿ ದುಷ್ಟಬುದ್ಧಿಯು ಮುನ್ನಡೆಯುತ್ತಿದ್ದನು. ತಂಡೋಪತಂಡವಾಗಿ ಪಿಶಾಚಿಗಳ ಮಧ್ಯದಲ್ಲಿ ದೊಡ್ಡ ಮರುಳನಂತೆ ತಲೆಕೆದರಿಕೊಂಡು ಬರುವ ದುಷ್ಟ ಬುದ್ಧಿಯನ್ನು ಕಂಡು ಅಲ್ಲಿನ ಪಿಶಾಚಿಗಳು ಹೇಳಿದುವು—

"ನಾವು ಬಹಳ ಪಾಪಮಾಡಿದವರಾದರೂ ಇವನಂತಹ ಪಾಪಿಗಳು ನಮ್ಮ ಗುಂಪಿನಲ್ಲಿ ಯಾವನೊಬ್ಬನೂ ಇಲ್ಲ. ಹಿರಣ್ಯಕಶಿಪುವನ್ನು ಸೀಳಿದ ಉಗ್ರ ನರಸಿಂಹ ಮೂರ್ತಿಯ ನಾಮಸ್ಮರಣೆಗಲ್ಲದೆ ಈತನು ಯಾವುದಕ್ಕೂ ಬೆದರನು."

ಪುತ್ರಶೋಕದಿಂದ ಸಂತಪ್ತಹೃದಯನಾದ ದುಷ್ಟಬುದ್ಧಿಯು ಭೀಕರ ಪಿಶಾಚಿ ಪರಿವಾರವನ್ನು ಲಕ್ಷ್ಯಮಾಡದೆ ಸುಡುತ್ತಿರುವ ಶವದ ಚಿತೆಯಲ್ಲಿ ಉರಿಯುತ್ತಿರುವ ಕೊಳ್ಳಿಯೊಂದನ್ನು ಕೈಗೆ ತೆಗೆದುಕೊಂಡು ಕಾಳಿಕಾಲಯವನ್ನು ಹೊಕ್ಕನು. ಕೆದರಿದ ಕೇಶಪಾಶಗಳಿಂದಲೂ ಕಟ್ಟಿಗೆಯಂತಾದ ಕೈಕಾಲುಗಳಿಂದಲೂ. ಅನೇಕ ಆಯುಧಗಳ ಇರಿತದಿಂದ ಬಸಿವ ನೆತ್ತರ ದೇಹದಿಂದಲೂ. ತನ್ನ ಮಹತ್ವಾಕಾಂಕ್ಷೆ ಮುರಿದುಬಿದ್ದ ಹಾಗೆ. ಕುಲದ ಕಲ್ಪವೃಕ್ಷವು ಕೆಡೆದಂತೆ. ಸೌಭಾಗ್ಯಪ್ರಾಸಾದವು ಕುಸಿದಂತೆ, ಧರಾಶಾಯಿಯಾಗಿ ಬಿದ್ದ ಮೋಹದ ಸುಕುಮಾರನನ್ನು ಕಂಡನು; ಕೈಯ್ಯ ಕಾಷ್ಠವನ್ನು ಎಸೆದನು: ಮಗನ ಮೈಯ

ಗಾಯಗಳನ್ನು ತಡವಿದನು; ಆಲಿಂಗಿಸಿದನು. ಮೃತದೇಹವನ್ನು ಎತ್ತಿ ತೊಡೆಯ ಮೇಲೆ ಕುಳ್ಳಿರಿಸಿಕೊಂಡನು. ಮುಖಕ್ಕೆ ಮುಖವಿಟ್ಟು ಚುಂಬಿಸಿದನು.

"ಮಗೂ, ಇಗೋ. ನಿನ್ನ ತಂದೆ. ನಾನು ಬಂದಿರುವೆನಲ್ಲಾ ! ಮಾತನಾಡ ಬಾರನೇ ಕಂದ? ಕುಂತಳಾಧೀಶ್ವರನು ನಿನಗೆ ಏನು ಹೇಳಿದನೋ? ಮಾತನಾಡದೆ ಏಕೆ ಸುಮ್ಮನಿದ್ದೀಯೇ? ನಿನ್ನ ಇಷ್ಟಾರ್ಥವೆಲ್ಲವನ್ನೂ ನೆರವೇರಿಸು; ತಂಗಿಯನ್ನು ಚಂದ್ರಹಾಸನಿಗೆ ಮದುವೆ ಮಾಡಿಕೊಡು; ದಾನಧರ್ಮಗಳನ್ನು ಬೇಕಾದಷ್ಟು ಮಾಡು; ನಿನ್ನನ್ನು ಬೈದೆನೆಂದು ಸಿಟ್ಟಾಗಬೇಡ ಕಂದ. ನಾನು ವೈಷ್ಣವದ್ರೋಹಿ ಯಾಗಿ ಇಂತಹ ಕಷ್ಟಕ್ಕೆ ಗುರಿಯಾದುದು ಸರಿಯೆ; ನೀನು ದೈವಭಕ್ತನಲ್ಲವೆ? ನಿನಗೆ ಇಂತಹ ದುರ್ಮರಣವಾಗಬಹುದೆ? ಸೂರ್ಯಾದಿ ನವಗ್ರಹಗಳೂ ನಿನಗೆ ಶುಭದಾಯಕವಾಗಿದ್ದುವಲ್ಲವೆ? ತಂದೆಯಾದ ನಾನೇ ಮೃತ್ಯುವಾದೆನೇ?"

ದುಷ್ಟಬುದ್ಧಿಯು ಪುತ್ರಶೋಕದಿಂದ ಮೊರೆಯಿಟ್ಟನು. ಕಣ್ಣೀರಿನಿಂದ ಸುತನ ಮೃತದೇಹದ ನೆತ್ತರನ್ನು ತೊಳೆದನು. ತನ್ನಿಂದಾಗಿ ಕುಲವರ್ಧನನಾದ ಪುತ್ರನು ಮಡಿದ ಮೇಲೆ ತಾನು ಬದುಕಿ ಫಲವೇನೆಂದು ಎಡಬಲದ ಕಂಬಗಳಿಗೆ ತಲೆಯನ್ನು ದಡದಡನೆ ಬಡಿದನು. ಕುಂಬಳಕಾಯಿಯಂತೆ ಆತನ ತಲೆಯ ಚಿಪ್ಪು ಹಾರಿತು; ನೆತ್ತರು ಕಾರಿತು. ದುಷ್ಟಬುದ್ಧಿಯು ಭೂಮಿಗೆ ಒರಗಿದನು. ನಂದಿದ ಸೊಡರುಗಳಂತೆ ಪಿತಾಪುತ್ರರಿಬ್ಬರೂ ಅಲ್ಲಿ ಬಿದ್ದಿದ್ದರು.

ಬೆಳಗಾಗುವ ತನಕ ಈ ಸುದ್ದಿ ಯಾರಿಗೂ ತಿಳಿಯದು. ಮೃತದೇಹ ಗಳೆರಡೂ ಅಂತೆಯೇ ಅಲ್ಲಿ ಬಿದ್ದಿದ್ದುವು. ಸೂರ್ಯೋದಯಾನಂತರ ದೇವಾ ಲಯದ ಅರ್ಚಕನು ಬಂದು ಪೂಜಾದ್ರವ್ಯಗಳನ್ನು ಹಿಡಿದುಕೊಂಡು ಒಳ ಹೊಗಲು. ಮಡಿದು ಬಿದ್ದಿರುವ ತಂದೆಮಕ್ಕಳ ದುಸ್ಥಿತಿಯನ್ನು ಕಂಡು ದುಃಖಿಸಿದನು.

"ಕುಂತಳೇಶ್ವರನು, ಪಟ್ಟವನ್ನೂ ಪುತ್ರಿಯನ್ನೂ ಚಂದ್ರಹಾಸನಿಗೊಪ್ಪಿಸಿ ವನವಾಸಕ್ಕೆ ನಿನ್ನೆ ತಾನೆ ಹೋಗಿರುವನು; ಪಟ್ಟಣದಲ್ಲಿ ಅಪರಿಮಿತ ಆನಂದೋತ್ಸವ ನಡೆಯಿತು. ಇಂತಹ ಸಂದರ್ಭದಲ್ಲಿ ಮಂತ್ರಿಗೂ ಮಂತ್ರಿಸುತನಿಗೂ ಈ ರೀತಿಯ ಕೆಡುಕನ್ನು ಯಾರು ಬಗೆದರೋ."

—ಎಂದು ಕಳವಳಪಡುತ್ತಾ ಅರಮನೆಗೆ ಧಾವಿಸಿ ಬಂದು ಸುದ್ದಿ ಯನ್ನು ಚಂದ್ರಹಾಸನಿಗೆ ತಿಳಿಸಿದನು.

ಈ ದುರ್ವಾರ್ತೆಯನ್ನು ಕೇಳಿ ದುಃಖಿಗೊಂಡು ಚಂದ್ರಹಾಸನು ಪರಿವಾರ ಸಮೇತ ಪಾದಚಾರಿಯಾಗಿ ಚಂಡಿಕಾಲಯಕ್ಕೆ ಬಂದು ಸತ್ತುಬಿದ್ದಿರುವ ಮಾವ

ಮೈದುನರನ್ನು ಕಂಡು ನೊಂದನು. ಕಾಳಿಯ ಕರಾಳ ಮೂರ್ತಿಯನ್ನು ನೋಡಿದನು.

"ತಾಯೆ, ನನ್ನ ಭಾಗ್ಯವನ್ನು ಭಂಗಗೊಳಿಸಿದಿಯೆ? ನನ್ನಲ್ಲಿ ಯಾವ ಅಪರಾಧವನ್ನು ಕಂಡಿದ್ದಿ? ಆಗಲಿ, ನಿನ್ನನ್ನು ಮೆಚ್ಚಿಸಿ ಇವರ ಜೀವವನ್ನು ಪಡೆವೆನು. ಆದಾಗದಿದ್ದಲ್ಲಿ ನನಗೂ ಇವರದೇ ಗತಿಯಾಗಲಿ."

ಮೊರೆಯಿಡುತ್ತಿರುವ ಬಂಧುಬಾಂಧವರನ್ನು ಚಂದ್ರಹಾಸನು ಸಂತೈಸಿದನು. ಧೃಡ ನಿರ್ಧಾರದಿಂದ ದೇವಿಯ ವಿಗ್ರಹದ ಮುಂದೆ ಅಗ್ನಿಕುಂಡವನ್ನು ತಯಾರಿಸಿದನು. ಚಂಡಿಗೆ ಬಲಿದೀಪ ಮುಂತಾದ ಪೂಜೆಗಳನ್ನು ಮಾಡಿದನು. ಘೃತ ಪಾಯಸ ಆಜ್ಯತಿಲಗಳನ್ನು ಹೋಮಿಸಿದನು. ಚಂದ್ರಹಾಸನು ಹರಿತವಾದ ಖಡ್ಗವನ್ನು ಕೈಗೆ ತೆಗೆದುಕೊಂಡನು. ತನ್ನ ದೇಹದ ಮಾಂಸವನ್ನು ಕೊಯಿ ಕೊಯಿದು ಹೋಮಿಸಿದನು ! ಪೂರ್ಣಾಹುತಿಗಾಗಿ ಖಡ್ಗವನ್ನು ತಲೆಗೆ ಎತ್ತಿದನು–

"ಕಾಳಿ, ನೀನು ಅಖಿಲ ಶಕ್ತಿರೂಪಗಳನ್ನು ತಾಳಿರುವೆ. ಶಿವನೊಡನೆ ಸೇರಿರುವೆ. ನನ್ನೀ ಶರೀರವು ದೇವರಿಗೆ ಅರ್ಪಿತವಾಗಲಿ."

ಖಡ್ಗದಿಂದ ತಲೆಯನ್ನು ತುಂಡರಿಸಲು ಸಿದ್ಧನಾದನು.

ಚಂಡಿಯು ಶಿಲಾಪೀಠದಿಂದ ಥಟ್ಟನೆ ಎದ್ದು ಬಂದಳು. ಚಂದ್ರಹಾಸನ ಕೈಯ ಬಾಳನ್ನು ತಡೆದುಹಿಡಿದಳು—

"ಮಗನೆ ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೆ ವ್ಯಥೆ ಬೇಡ: ಈ ಮಂತ್ರಿಯು, ಮಾಡಿದ ದುಷ್ಕೃತ್ಯ ಪಾಪದಿಂದಾಗಿ ಮಡಿವನು. ಆತನ ಮಗನು ನಿನಗಾಗಿ ಜೀವ ಅರ್ಪಿಸಿದ್ದಾನೆ. ಉಭಯವರಗಳನ್ನು ಬೇಡು. ಕೊಡುವೆನು."

ಚಂದ್ರಹಾಸನು ದೇವಿಯ ಪಾದಗಳಲ್ಲಿ ತಲೆಯಿಟ್ಟನು—

"ಮಾತೆ, ಪ್ರತಿಜನ್ಮದಲ್ಲಿಯೂ ನನಗೆ ಧೃಡವಾದ ಹರಿಭಕ್ತಿಯುಂಟಾಗುವಂತೆ ಕರುಣಿಸು; ಮಡಿದ ಮಂತ್ರಿಯೂ, ಆತನ ಪುತ್ರನೂ ಬದುಕುವಂತೆ ದಯೆತೋರಿಸು."

ದೇವಿ ಚಂದ್ರಹಾಸನ ಮೈದಡವಿದಳು; ಆತನ ಶರೀರದ ಗಾಯ ಮಾಸಿ ಹೋಯಿತು. ಚಂಡಿಯ ವರಪ್ರಸಾದದಿಂದ ದುಷ್ಟಬುದ್ಧಿಯೂ ಮದನನೂ ಜೀವಿಸಿದರು. ಎಲ್ಲರೂ ಸಂತೋಷಪಟ್ಟರು. ಚಂಡಿಯನ್ನು ಕೊಂಡಾಡಿದರು. ಸಕಲರೂ ಸಂಭ್ರಮದಿಂದ ನಗರ ಪ್ರವೇಶ ಮಾಡಿದರು.

ಅತ್ತ ಚಂದನಾವತಿಯಲ್ಲಿ ಕಷ್ಟಕ್ಕೀಡಾದ ಕುಳಿಂದಕನು ಮಗನಿಗೇನಾಯಿತೋ ಎಂದು ಕಳವಳಿಸುತ್ತಿದ್ದನು. ಚಂದ್ರಹಾಸನು ಆತನ ವ್ಯಥೆಯನ್ನು ಬಿಡಿಸಿ

ಕುಂತಳರಾಜ್ಯಕ್ಕೆ ಬರಮಾಡಿಸಿ ಸಂತೈಸಿದನು. ಆ ಮೇಲೆ ಸರ್ವಬಂಧುಬಾಂಧವರೊಡನೆ, ಪರಿವಾರ ಪ್ರಜೆಗಳೊಡನೆ, ಆತನು ಸುಖದಿಂದ ಬಹುಕಾಲ ರಾಜ್ಯವಾಳಿದನು. ಅವನಿಗೆ ವಿಷಯೆಯಲ್ಲಿ ಮಕರಧ್ವಜನೆಂಬವನೂ, ಮಾಲಿನಿಯಲ್ಲಿ ಪದ್ಮಾಕ್ಷನೆಂಬವನೂ, ಅಪ್ರತಿಮ ಪ್ರತಾಪಶಾಲಿಗಳಾದ ಇಬ್ಬರು ಪುತ್ರರು ಜನಿಸಿದರು. ಚಂದ್ರಹಾಸನಿಗೆ ಸರಿದೊರೆಯು ದೊರೆ ಇದುವರೆಗೂ ಭೂಮಂಡಲದಲ್ಲಿ ಹುಟ್ಟಿದವರಲ್ಲಿ ಯಾವನೊಬ್ಬನೂ ಇಲ್ಲ.

—ದೇವಮುನಿಯಾದ ನಾರದನು ಇಂತು ಈ ಪುಣ್ಯಕಥೆಯನ್ನು ಅರ್ಜುನನಿಗೆ ತಿಳಿಸಿ, ದೇವಲೋಕಕ್ಕೆ ತೆರಳಿದನು. ಹರಿಭಕ್ತನ ಸಚ್ಚರಿತ್ರ ಶ್ರವಣದಿಂದ ಅರ್ಜುನನು ಅಪರಿಮಿತ ಸಂತೋಷಗೊಂಡನು.

೧೪

ಪರಮಭಾಗವತಶಿರೋಮಣಿಯೆನಿಸಿದ ಚಂದ್ರಹಾಸನ ಸತ್ಕಥಾಮೃತವನ್ನು ಕೇಳಿ ಆನಂದಭರಿತನಾಗಿ ಅರ್ಜುನನು ಕುಂತಳನಗರಾಭಿಮುಖವಾಗಿ ಕುದುರೆಯನ್ನು ಹುಡುಕುತ್ತಾ ಮುಂದೊತ್ತಿದನು. ಅರ್ಜುನನ ಯಜ್ಞಾಶ್ವವು ಪುರದ ಬಹಿರುದ್ಯಾನದಲ್ಲಿ ತನ್ನಿಚ್ಛೆಯಂತೆ ತಿರುಗುತ್ತಿರಲು, ರಾಜಪುತ್ರರಾದ ಪದ್ಮಾಕ್ಷಮಕರಧ್ವಜರು ಅದನ್ನು ತಡೆದು ಹಣೆಯಪಟ್ಟದ ಲಿಖಿತವನ್ನು ಓದಿ ಸಿಟ್ಟುಗೊಂಡು, ಬಿಗಿದುತಂದು ತಂದೆಗೆ ಒಪ್ಪಿಸಿ—

"ತಾತ! ಇದು ಅರ್ಜುನನ ಯಜ್ಞಾಶ್ವವು, ಭೂಮಂಡಲವನ್ನೆಲ್ಲಾ ಸಂಚರಿಸಿ ನಮ್ಮ ರಾಜ್ಯಕ್ಕೆ ಕಾಲಿಟ್ಟಿದೆ; ಇದನ್ನು ನಾವು ಕಟ್ಟಿರುವೆವು; ಈ ತುರಗವನ್ನು ಬಿಡಿಸಿಕೊಳ್ಳುವವರನ್ನು ಯುದ್ಧಭೂಮಿಯಲ್ಲಿ ಇದಿರಿಸುವೆವು."

ಪುತ್ರರ ವೀರವಾಕ್ಯವನ್ನು ಕೇಳಿ ಚಂದ್ರಹಾಸನು ಸಂತುಷ್ಟನಾದನು—"ಮಕ್ಕಳಿರ, ನಾನು ಯಾವಾತನನ್ನು ಬಾಲ್ಯಾರಭ್ಯ ಸ್ಮರಿಸುತ್ತಿದ್ದೇನೋ. ಅವನೇ ಇಂದು ನಮ್ಮಲ್ಲಿಗೆ ಅರ್ಜುನನೊಡಗೂಡಿ ಬಂದಿರುವನು; ನಮಗೆ ಕೃಷ್ಣದರ್ಶನವಾದರೆ ಅದೇ ಪುಣ್ಯ ಸಾಕು; ಬೇರೆ ಯಾವ ತರದ ಚಿಂತೆಯಾದರೂ ಏಕೆ? ಪುಣ್ಯಯಜ್ಞಕ್ಕಾಗಿ ತಿರುಗುತ್ತಿರುವ ಕುದುರೆಯನ್ನು ಕಟ್ಟಿಹಾಕಿ ಏನು ಪುರುಷಾರ್ಥವಿದೆ? ಭೂಮಿಯಲ್ಲಿ ಧರ್ಮಪುತ್ರನು ಸಾಕ್ಷಾತ್ ಧರ್ಮದ ಆಕೃತಿಯೆನಿಸಿ

ದ್ದಾನೆ. ಅಂತಹ ಪುಣ್ಯಾತ್ಮನ ಕುದುರೆಯನ್ನು ತಡೆಯುವುದೇ? ಹತ್ತುವರೆ ತಿಂಗಳ ತನಕ ಈ ಕುದುರೆಯನ್ನು ಅವರು ರಕ್ಷಿಸಿಕೊಂಡು ಬಂದಿರುವರು; ಇನ್ನು ಕೇವಲ ಮೂರು ಪಕ್ಷಗಳ ಅವಧಿಯುಂಟು; ಅದು ದಾಟಿ ಹೋದರೆ ಪುಣ್ಯ ಯಾಗಕ್ಕೆ ತೊಡಕಾಗುವುದು; ಆದ್ದರಿಂದ ನೀವೇ ಈ ಕುದುರೆಯ ರಕ್ಷಣೆ ಮಾಡಿ ಒಪ್ಪಿಸಿರಿ. ಇದರಿಂದ ನಮಗೆ ಸುಕೃತ ಉಂಟಾಗುವುದು."

ಚಂದ್ರಹಾಸನು ಮಕ್ಕಳನ್ನು ಸಮಾಧಾನಪಡಿಸಿ ಯಜ್ಞಾಶ್ವವನ್ನು ಅರ್ಜುನನಿಗೆ ಒಪ್ಪಿಸುವಂತೆಯೂ, ಅಶ್ವರಕ್ಷಣೆಗೆ ಹೊರಡುವಂತೆಯೂ ಹೇಳಿ ಕಳುಹಿಸಿಕೊಟ್ಟನು; ಶ್ರೀಕೃಷ್ಣದರ್ಶನಲೋಲುಪನಾಗಿ ಸೇನಾಸಮೂಹಸಹಿತನಾಗಿ ನಗರದ ಹೊರವಲಯದಲ್ಲಿ ಬಂದು ಸಿದ್ಧನಾದನು. ಶ್ರೀಕೃಷ್ಣನು, ಅರ್ಜುನನಿಗೆ ಸಾರಥಿಯಾಗಿ ಶಂಖಚಕ್ರಗಧಾಪದ್ಮಧಾರಿಯಾಗಿ ಚಂದ್ರಹಾಸನ ಸಮ್ಮುಖಕ್ಕೆ ರಥವನ್ನು ಹಾರಿಸಿದನು.

ಚಂದ್ರಹಾಸನಿಗೆ ಈ ದಿವ್ಯ ದರ್ಶನದಿಂದ ಉಂಟಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಪುಳಕಿತ ಶರೀರನಾಗಿ ರಥದಿಂದಿಳಿದು ಬಂದು ಶ್ರೀಕೃಷ್ಣನ ಅಡಿದಾವರೆಗಳಿಗೆರಗಿದನು. ಭಯಭರಿತಭಕ್ತಿಭಾವದಿಂದ ಬಹುವಿಧವಾಗಿ ಭಜಿಸಿದನು. ಶ್ರೀಕೃಷ್ಣನು ಆತನನ್ನು ಅಪ್ಪಿಕೊಂಡನು. ಆ ಹರಿಭಕ್ತನನ್ನು ಅರ್ಜುನನೂ ಆಲಿಂಗಿಸಿದನು. ಧರ್ಮಜನ ಯಾಗಕ್ಕೆ ಭಂಗಬರಬಾರದೆಂದೂ, ತನ್ನ ಮಕ್ಕಳನ್ನು ಅಶ್ವರಕ್ಷಣೆಗಾಗಿ ಕಳುಹಿಸಿರುವ ಸಮಾಚಾರವನ್ನು ಚಂದ್ರಹಾಸನು ತಿಳಿಸಿದನು. ಅಷ್ಟರಲ್ಲಿ ಚಂದ್ರಹಾಸನ ಪುತ್ರರಿಬ್ಬರೂ ಬಂದು, ಯಜ್ಞಾಶ್ವವನ್ನೊಪ್ಪಿಸಿ ಶ್ರೀಕೃಷ್ಣನ ಪುಣ್ಯಪಾದಗಳಿಗೆರಗಿದರು. ಹೀಗೆ ಚಂದ್ರಹಾಸನಿಗೂ ಅರ್ಜುನನಿಗೂ ಪರಮಸುಖವಾಯಿತು.

ಕುಂತಳರಾಜ್ಯದ ಪ್ರಜೆಗಳೆಲ್ಲರೂ ಶ್ರೀಕೃಷ್ಣದರ್ಶನದಿಂದ ಧನ್ಯರಾದರು. ಚಂದ್ರಹಾಸನು ತನ್ನ ರಾಜ್ಯವನ್ನು ಸರ್ವಸ್ವವನ್ನೂ ಶ್ರೀಕೃಷ್ಣಾರ್ಪಣಮಾಡಿ ಹೊರಟನು. ಅರ್ಜುನನ ಒಪ್ಪಿಗೆಯಂತೆ ಶ್ರೀಕೃಷ್ಣನು ಮಕರಧ್ವಜನಿಗೆ ಆ ರಾಜ್ಯಪಟ್ಟವನ್ನು ಪುನಃ ಕಟ್ಟಿ ಅಲ್ಲಿನ ಉತ್ತಮ ವಸ್ತುಗಳನ್ನು ಹಸ್ತಿನಾವತಿಗೆ ಕಳುಹಿಸಿ ಮೂರು ದಿನಗಳ ವರೆಗೆ ಚಂದ್ರಹಾಸನ ಸತ್ಕಾರಗಳನ್ನು ಸ್ವೀಕರಿಸಿದನು. ಆ ಮೇಲೆ ಯಜ್ಞಾಶ್ವಗಳು ಅಲ್ಲಿಂದ ಮುಂದಿನ ದೇಶಗಳ ಕಡೆಗೆ ಸಾಗಿದುವು. ಬೆಂಗಾವಲಿನ ಪಡೆಯು ಅವರ ಹಿಂದೆ ಹೋಯಿತು.

ಸೇನಾಸಾಗರಸಮೇತ ಅರ್ಜುನನು ಯಜ್ಞಾಶ್ವವನ್ನು ಹಿಂಬಾಲಿಸಿ ಹೊರಟಿರಲು, ನಾನಾ ದೇಶಗಳನ್ನು ಸುತ್ತಾಡಿದರೂ. ಕುದುರೆಗಳನ್ನು ಯಾರೂ ತಡೆ

ಯದೆ ಕಪ್ಪಕಾಣಿಕೆಗಳನ್ನಿತ್ತು. ಕೈಮುಗಿದರು. ಹೀಗೆ ಸಾಗಿದ ಕುದುರೆಯು ಬಡಗು ಕಡಲತಡಿಗೆ ಬಂದಿರಲು, ಮುಂದೆ ಸಾಗಲು ನೆಲವಿಲ್ಲದೆ ಪಾಂಡವರ ಮಖತುರಗವು ಕಡಲನ್ನು ಹೊಕ್ಕು ಮುಂದಡಿಯಿಡುತ್ತಿರಲು, ಅರ್ಜುನನು ಕಂಗಾಲಾದನು. ಶ್ರೀಕೃಷ್ಣನು. ಸರ್ವ ಸೇನೆಯನ್ನೂ ಅಲ್ಲಿಯೇ ನಿಲ್ಲಿಸಿ, ಅರ್ಜುನ-ಮಯೂರಧ್ವಜ-ಪ್ರದ್ಯುಮ್ನ–ಬಭ್ರುವಾಹನ–ಹಂಸಧ್ವಜರೊಡಗೂಡಿ ಸಮುದ್ರವನ್ನು ಹೊಕ್ಕನು. ಕುದುರೆಯು ಬಹುವೇಗದಿಂದ ಹೋಗಿ ಕುರವಕ ವೆಂಬ ಆಶ್ರಮದ ಬಳಿ ಬಂದು ನಿಂತಿತು. ಅರ್ಜುನಾದಿಗಳೂ ಅದನ್ನು ಹಿಂಬಾ ಲಿಸಿ ಬಂದು, ಅಲ್ಲಿ ಬಕಬಾಲ್ಭ್ಯ ಋಷಿಯನ್ನು ಸಂದರ್ಶಿಸಿದರು.

ಆ ಋಷಿಯು ನಿಶ್ಚಲ ಧ್ಯಾನಯೋಗದಲ್ಲಿದ್ದನು. ಕೈಯಲ್ಲಿ ಒಂದು ಅಲದ ಎಲೆಯನ್ನು ಎತ್ತಿ ಹಿಡಿದು ತಲೆಗೆ ನೆರಳಾಗುವಂತೆ ಮಾಡಿಕೊಂಡಿದ್ದನು. ಅರ್ಜುನಾದಿಗಳು ರಥದಿಂದಿಳಿದು. ಧ್ಯಾನಮುದ್ರೆಯನ್ನು ತೊರೆದ ಮುನಿಯ ಪಾದಗಳಿಗೆರಗಿದರು. ಶ್ರೀಕೃಷ್ಣನು ನಶ್ವರದೇಹದ ಮಾನವರೊಡಗೂಡಿ ಇಲ್ಲಿಗೆ ಬಂದ ಕಾರಣ. ತನಗಿನ್ನು ಸುಖವಿಲ್ಲವೆಂದೂ. ಅಲ್ಪಾಯುಷ್ಯವುಳ್ಳವನಾಗುವೆ ನೆಂದೂ ಮುನಿ ಚಿಂತಿಸಿದನು. ಅರ್ಜುನನು ಆಶ್ಚರ್ಯದಿಂದ ಮುನಿಯೊಡನೆ ಅರಿಕೆ ಮಾಡಿದನು—

"ಮುನಿಯೇ. ನಿಮ್ಮ ಮೊಳಕಾಲುಗಳ ಮೇಲೆ ಕಿಂಶುಕ ವೃಕ್ಷಗಳು ಬೆಳೆದು. ಅವರಲ್ಲಿ ಹಕ್ಕಿಗಳು ಗೂಡುಕಟ್ಟಿಕೊಂಡಿವೆ; ಮೃಗಗಳು ತಮ್ಮ ಒಡಲನ್ನು ನಿಮ್ಮ ಶರೀರಕ್ಕೆ ತಿಕ್ಕಿ ತೀಟೆಯನ್ನು ತೀರಿಸುತ್ತಿವೆ; ನಿಮ್ಮ ಸುತ್ತು ಹುತ್ತ ಬೆಳೆದಿದೆ. ಬಳಿಯಲ್ಲಿ ಹಾವುಗಳು ಹೆಡೆಯಾಡಿಸುತ್ತಿವೆ. ಇರುವುದಕ್ಕೆ ಒಂದು ಎಲೆಮನೆಯನ್ನು ಸಹ ನೀವು ಮಾಡಿಕೊಂಡಿಲ್ಲ. ವಟಪತ್ರವನ್ನು ಕೈಯಲ್ಲಿ ಹಿಡಿದುಕೊಂಡಿರುವಿರಿ. ಇದರ ರಹಸ್ಯವೇನೆಂದು ದಯಮಾಡಿ ತಿಳಿಸುವಿರಾ?"

"ವತ್ಸ ಅರ್ಜುನ, ಲೋಕದಲ್ಲಿ ಸಂಸಾರವೆಂಬುದು ದುಃಖಭಾಜನವು. ಸಂಸಾರಿಯಾದವನಿಗೆ ಕೃತ್ಯಾಕೃತ್ಯ ವಿವೇಚನೆ ಇರಲಾರದು; ಮತ್ತೆ ಆತನಿಗೆ ಮೋಕ್ಷ ದೊರೆಯುವುದು ಉಂಟೆ? ಕನಸಿನ ಸುಖಕ್ಕೆ ಸೋತು ಅಧೋಗತಿ ಗಿಳಿಯುವನು. ಜನನಮರಣಗಳು ಆತನನ್ನು ಬಿಡವು. ಹಾಗಾಗಿ ಮಡದಿ ಮಕ್ಕಳ ಮೋಹವನ್ನು ತೊರೆದು, ಸರ್ವಸಂಗತ್ಯಾಗಮಾಡಿ ಪರ್ಣಕುಟೀರವನ್ನು ಕೂಡಾ ಕಟ್ಟದೆ ದೇವರ ಧ್ಯಾನದಲ್ಲಿರುವೆನು. ಬಹುಬೇಗನೆ ನಾಶವಾಗುವ ಈ ದೇಹಕ್ಕೆ ಏನು ಬೇಕಾಗಿದೆ? ಹಾಗಾಗಿ ನಾನು ತಲೆಗೆ ತರಗೆಲೆ ಹಿಡಿದು ಹೊತ್ತು ಕಳೆಯುತ್ತಿರುವೆನು."

"ಮಹಾಮುನಿಯೆ, ಇಂತು ಹಿಂದೆ ಎಷ್ಟು ಕಾಲವನ್ನು ನೀವು ಕಳೆದಿರಿ? ಈ ವಟಪತ್ರವನ್ನು ಶಿರದ ಮೇಲೆ ಎಷ್ಟು ದಿನಗಳಿಂದ ಹಿಡಿದುಕೊಂಡಿರುವಿರಿ?"

"ಅರ್ಜುನ, ನಾನು ಮಾರ್ಕಾಂಡೇಯರೋಮಂಶಾದಿಗಳಿಗಿಂತಲೂ ಹಿಂದಿನವನು. ನನ್ನ ಅರಿವಿನ ಮೇಲೆ ಇಪ್ಪತ್ತು ಬ್ರಹ್ಮರು ಸತ್ಯಲೋಕವನ್ನು ಆಳಿ ಹೋದರು. ಸಕಲ ಸೃಷ್ಟಿಯೂ, ಜಲಮಯವಾದೀಲೋಕವು, ಬ್ರಹ್ಮರು ಅವಸಾನ ಹೊಂದಿದ ಮೇಲೆ ಯಾವುದೂ ಸತ್ಯವಲ್ಲವೆಂದು ತಿಳಿದು ನಾನು ಯಾರೂ ಇಲ್ಲದ ಇಲ್ಲಿಗೆ ಬಂದು ಧ್ಯಾನಮಗ್ನನಾಗಿರುವೆನು. ಅನೇಕ ಸಲ ಪ್ರಳಯವಾದಾಗ, ಒಂದು ವಟವೃಕ್ಷವು ಬಹು ಶಾಖೆಗಳಿಂದ ಚಿಗುರುವುದು. ಆ ಮರದ ಒಂದು ಎಲೆಯ ಮೇಲೆ ಮಲಗಿಕೊಂಡು ತನ್ನ ಕೋಮಲವಾದ ಕಮಲದ ಉಂಗುಷ್ಠವನ್ನು ಬಾಯಲ್ಲಿಟ್ಟುಕೊಂಡು ನಗುತ್ತಾ ವಿನೋದದಿಂದ ಆಡುತ್ತಿರುವ ಒಬ್ಬ ಬಾಲನನ್ನು ಕಂಡೆನು. ಆತನು ನನ್ನೊಡನೆ ಮಾತನಾಡವೆ. ನನ್ನನ್ನು ನೋಡದೆ, ಏನೆಂದು ವಿಚಾರಿಸದೆ ದೂರ ಸರಿಯುತ್ತಿದ್ದಾನೆ. ಇಂದು ನಿಮ್ಮನ್ನು ಕೂಡಿಕೊಂಡು ಬಂದು ಆ ಪರಮಾತ್ಮನು ದರ್ಶನವಿತ್ತಿರುವನು. ಇನ್ನು ನನಗೆ ಇವನೇ ಆಶ್ರಯನು. ಈ ಸ್ವಾಮಿಯ ದಿವ್ಯಸ್ವರೂಪದ ಸಂಪೂರ್ಣದರ್ಶನವಾಗುವ ವರೆಗೆ ನಾನೀತನನ್ನು ಬಿಡಲಾರೆನು."

ಬಕದಾಲ್ಭ್ಯಋಷಿಯು ಎದ್ದು ಬಂದು ಶ್ರೀಕೃಷ್ಣನನ್ನು ಆನಂದದಿಂದ ಅಪ್ಪಿಕೊಂಡನು.

"ಮಹರ್ಷಿ, ಇಪ್ಪತ್ತು ಜನ ಬ್ರಹ್ಮರನ್ನು ಕಂಡ ನೀವೇ ಮಹಾತ್ಮರು. ನಿಮಗಿಂತ ಶ್ರೇಷ್ಠರು ಯಾರಿರುವರು? ನಿಮ್ಮ ಸಂದರ್ಶನದಿಂದ ಯುಧಿಷ್ಠಿರನ ಯಾಗವು ಸಫಲವಾಯಿತು."

ಅರ್ಜುನನು ಬಕದಾಲ್ಭ್ಯನನ್ನು ಕೊಂಡಾಡಿದನು. ಅರ್ಜುನನ ಪ್ರಶಂಸೆಯನ್ನು ಕೇಳಿದರೂ ಮುನಿಯು ಅಹಂಕಾರ ವರ್ಜಿತನಾಗಿ. ಯಾರೂ ಲೋಕದಲ್ಲಿ ಗರ್ವಮಾಡಬಾರದೆಂದೂ, ಹಿಂದೆ ಗರ್ವಿತರಾದ ಚತುರ್ಮುಖ. ಅಷ್ಟಮುಖ, ಷೋಡಶಮುಖ ಮುಂತಾದ ಹಲವು ಬ್ರಹ್ಮರನ್ನು ಸುಂಟರು ಗಾಳಿ ಮೇಲಮೇಲಕ್ಕೆ ಎತ್ತಿಕೊಂಡೊಯ್ದು. ಕೊನೆಗೆ ಸಹಸ್ರಮುಖ ಬ್ರಹ್ಮನಲ್ಲಿ ಹೋಗಿ ಅವರು ನಿಗರ್ವಿಗಳಾದ ಕಥೆಯನ್ನು ತಿಳಿಸಿದನು. ಆ ಸಹಸ್ರಮುಖದ ಬ್ರಹ್ಮನೇ ಈ ಶ್ರೀಕೃಷ್ಣನೆಂದೂ ಹೇಳಿದನು. ಆ ಮೇಲೆ ಶ್ರೀಕೃಷ್ಣನು, ಬಕದಾಲ್ಭ್ಯನನ್ನು ಯುಧಿಷ್ಠಿರನ ಯಾಗಕ್ಕೆ ಬರುವಂತೆ ಒಡಂಬಡಿಸಲು. ಆತನನ್ನು ಪಲ್ಲಕಿಯಲ್ಲಿ ಕುಳ್ಳಿರಿಸಿ ಯಜ್ಞಾಶ್ವದ ಒಡನೆ ಎಲ್ಲರೂ ಕಡಲ ತಡಿಗೆ ಬಂದರು.

ಅಲ್ಲಿಂದ ಮುಂದೆ ಹೋದ ಯಜ್ಞಾಶ್ವಗಳು ಸಿಂಧು ದೇಶವನ್ನು ಪ್ರವೇಶಿಸಿದುವು. ತಂದೆಯನ್ನು ಕೊಂದ ಅರ್ಜುನನು ಬಂದನೆಂಬ ಸುದ್ದಿ ಕೇಳಿ ಬಾಲಕನಾಗಿದ್ದ ದುಶ್ಶಲೆಯ ಸೂನು ಮೂರ್ಛೆಗೊಂಡನು. ಮಗನು ಮೂರ್ಛೆಗೊಂಡನೆಂಬ ವಾರ್ತೆ ಕೇಳಿ ದುಶ್ಶಲೆ ದುಃಖಿತಳಾಗಿ ಅಂತಃಪುರದಿಂದ ಹೊರಟು, ಎಲ್ಲಿ ಅರ್ಜುನ ಶ್ರೀಕೃಷ್ಣರಿದ್ದಾರೋ ಅಲ್ಲಿಗಾಗಿ ಬಂದು, ಶ್ರೀಕೃಷ್ಣನೊಡನೆ ಮೊರೆಯಿಟ್ಟಳು—

"ಜಗದೊಡೆಯ, ಹೆಂಗುಸಿನ ಮೊರೆಯನ್ನು ಲಾಲಿಸು; ಅರ್ಜುನನು ನನ್ನ ಪತಿಯನ್ನು ಹಗೆ ಸಾಧಿಸಿ ಭಾರತ ಯುದ್ಧದಲ್ಲಿ ಕೊಂದಿರುವನು, ನನಗೆ ಈಗ ಒಂದು ಶಿಶು ಇದೆ. ಅದು ಅರ್ಜುನನ ಸುದ್ದಿ ಕೇಳಿ ಸ್ಮೃತಿಯಿಲ್ಲದೆ ಬಿದ್ದಿದೆ; ನನ್ನ ಮನಸ್ಸು ಕಳವಳಗೊಂಡಿರುವುದು. ಕರುಣಾಳು, ನೀನೇ ನಮ್ಮನ್ನು ಕಾಯಬೇಕು."

ದುಶ್ಶಲೆಯ ಕರುಣಾಕ್ರಂದವನ್ನು ಕೇಳಿ ಅರ್ಜುನನಿಗೆ ಸಹಿಸಲಾರದ ಸಂತಾಪವುಂಟಾಯಿತು. ರಥದಿಂದ ಇಳಿದು ಬಂದವನೇ ಆಕೆಗೆ ವಂದಿಸಿದನು—

"ತಾಯೇ. ಹಗೆ ಬಗೆದು ನಾನು ನಿನಗೆ ಮಾಡಿದ ಅನ್ಯಾಯವನ್ನು ಮರೆತು ಬಿಡು. ನಿನ್ನ ಮಗನನ್ನು ಸರ್ವಥಾ ನೋಯಿಸೆನು. ಆತನಿಗೆ ಸಿಂಧು ಸಾಮ್ರಾಜ್ಯವನ್ನೂ, ಅದನ್ನು ಆಳಿಕೊಂಡು ಬರಲು ಬೇಕಾದ ಅಗಣಿತ ಚತುರಂಗ ಬಲವನ್ನೂ ಕೊಡುವೆನು: ನಿನ್ನ ಬಂಧುವಾದ ಯುಧಿಷ್ಠಿರನ ಪುಣ್ಯ ಯಾಗಕ್ಕೆ ಆತನನ್ನು ಕರೆದುಕೊಂಡು ಹೋಗುವೆನು."

ಅರ್ಜುನನ ಅಕ್ಕರೆಯ ಮಾತಿನಿಂದ ದುಶ್ಶಲೆಯ ಹೃದಯವೇದನೆ ಒಮ್ಮೆಗೆ ಇಕ್ಕಿಬಂತು; ಕಣ್ಣೀರು ಕೋಡಿ ಹರಿಯಿತು. ದುಃಖವಿಮ್ಮಡಿಸಿತು. ಶ್ರೀಕೃಷ್ಣನ ಪಾದತಲಗಳಲ್ಲಿ ಆಕೆ ಹೊರಳಾಡಿ ಹೇಳಿದಳು—

"ದೇವ. ಪ್ರಾಣಿಗಳ ಹೃದಯದಲ್ಲಿ ನೀನೇ ಮನೆಮಾಡಿಕೊಂಡಿದ್ದು ಅವರ ದುಃಖವನ್ನೆಲ್ಲಾ ಹೋಗಲಾಡಿಸುತ್ತೀಯೆಂಬುದನ್ನು. ದ್ರೌಪದಿಯ ಮಾನವನ್ನು ಕಾಪಾಡಿ ಜಗತ್ತಿಗೆ ತೋರಿಸಿರುವೆ; ಸ್ಮರಿಸಿದ ಮಾತ್ರಕ್ಕೆ ಸಕಲ ಸುಖಗಳನ್ನು ನೀನು ಕೊಡುವಲ್ಲೆ; ನಿನ್ನ ಈ ಕಲ್ಯಾಣಮೂರ್ತಿಯ ದರ್ಶನದಿಂದ ನಾನು ಕೃತಾರ್ಥಳು. ಕೃಷ್ಣಾ, ನನ್ನನ್ನು ಕಾಪಾಡು. ಅರ್ಜುನನು ತನ್ನ ಒಡಹುಟ್ಟಿದವಳೆಂದು ನನ್ನನ್ನು ಹೇಗೆ ಕರೆಯುವನು ? ವಿಧವೆಯಾದವಳು ಪುಣ್ಯಯಜ್ಞಕ್ಕೆ ಬರಬಹುದೇ ? ಚತುರಂಗಬಲಗಳನ್ನಿತ್ತರೆ ಅದನ್ನು ಆಳುವವರು ಯಾರು ? ಸಮರ್ಥರಾದ ಪತಿಪುತ್ರರು ನನಗೆ ಇಲ್ಲವಲ್ಲಾ ! ಇದ್ದ ಈ ಓರ್ವ ಹಸುಳೆಯನ್ನು ನೀನೇ ಕಾಪಾಡಬೇಕು."

ದುಶ್ಶಲೆಯ ದುಗುಡವನ್ನು ಸಂತೈಸಿ, ಅರ್ಜುನನೊಡನೆ ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದನು. ತನ್ನ ಮುದ್ದು ಕುವರನನ್ನು ತಂದು ಆಕೆ ಶ್ರೀಕೃಷ್ಣನ ಕೈಯಲ್ಲಿ ಕೊಟ್ಟಳು. ಶ್ರೀಕೃಷ್ಣನು ಆತನನ್ನು ಹರಸಿದನು. ಮೈದಡವಿ ಮುದ್ದಾಡಿದನು. ಊರಲ್ಲಿ ನೃತ್ಯಗೀತೋತ್ಸವಗಳಾದುವು.

ಒಡಹುಟ್ಟಿದವಳಿಗೆ ತನ್ನಿಂದಾದ ಅನ್ಯಾಯದ ಕೊರಗು, ಅರ್ಜುನ ಹೃದಯವನ್ನು ಕೊರೆಯುತ್ತಿತ್ತು. ಮರುಕದಿಂದ ಕಣ್ಣೀರು ತುಂಬಿ ಹೇಳಿದನು—

“ತಾಯೆ. ನಾನು ಬಗೆದ ಶತಾಪರಾಧಗಳನ್ನೂ ಮರೆತುಬಿಡು; ಮಗನನ್ನು ಕೂಡಿಕೊಂಡು ಅರಸನ ಅಧ್ವರಕ್ಕೆ ದಯಮಾಡಿಸು; ನಿನ್ನ ವಿಷಯವನ್ನೇ ನೆನೆನೆನೆದು ಮರುಗುತ್ತಿರುವ ಮಾತೆಯನ್ನೂ. ದ್ರೌಪದಿಯನ್ನೂ ಕಂಡು ಮಾತನಾಡಲು ನೀನು ಬರಬೇಡವೆ ?”

ದುಶ್ಶಲೆ ಸಮಾಧಾನಪಟ್ಟುಕೊಂಡಳು. ಅರ್ಜುನನ ಆರಿಕೆಯನ್ನೂ ಅಲ್ಲಗಳೆಯಲಾರದಾದಳು. ಮಗನೊಡಗೂಡಿ ಹಸ್ತಿನಾವತಿಗೆ ಹೊರಟಳು. ದುಶ್ಶಲೆಯೊಳಗೂಡಿ. ಸಮಸ್ತಸೇನಾಸಮೂಹದೊಡನೆ ಅರ್ಜುನನು ಹಸ್ತಿನಾವತಿಗೆ ಬಂದನು. ಒಂದು ಯೋಜನ ದೂರದಲ್ಲಿ ಸೇನೆಯನ್ನು ನಿಲಹೇಳಿ ವರ್ಷ ತುಂಬಿ ತಂದು ಅರ್ಜುನನಿಗೆ ತಿಳಿಸಿ ಶ್ರೀಕೃಷ್ಣನು ಯಜ್ಞಾಶ್ವವನ್ನು ಕಟ್ಟಿಸಿದನು.

೧೫

ಶ್ರೀಕೃಷ್ಣನು ಹಸ್ತಿನಾವತಿಗೆ ಯೋಜನದೂರದಲ್ಲಿ ಭೂಪಾಲಕರನ್ನೆಲ್ಲಾ ನಿಲ್ಲಿಸಿದನು. ಬೇರೆ ಬೇರೆಯಾಗಿ ಅವರ ಪಡೆಗಳನ್ನು ಪಂಕ್ತಿಗೊಳಿಸಿದನು. ಪ್ರತಿಯೊಂದು ಪಂಕ್ತಿಯವರು ಪ್ರತ್ಯೇಕ ಪ್ರತ್ಯೇಕವಾಗಿ ಗಂಧಮಾಲ್ಯಾಭರಣ. ದ್ರವ್ಯಸಹಿತವಾಗಿ ಬರಬೇಕೆಂದು ನಿಯಮಿಸಿದನು. ಅದರಂತೆ ಅವರೆಲ್ಲರೂ ಧರ್ಮಪುತ್ರನನ್ನು ಕಾಣಬೇಕೆಂಬ ಲವಲವಿಕೆಯಿಂದ ಹೊರಟರು. ದೇವಗಂಗಾ ನದಿಯ ತೀರದ ಪುಣ್ಯಕ್ಷೇತ್ರದಲ್ಲಿ ವಿಸ್ತಾರವಾದ ಮಣಿಖಚಿತಮಂಟಪದಲ್ಲಿ ಮುನಿಗಡಣದೊಡನೆ, ಯಮನಿಯಮಗಳಿಂದ ಶರೀರದಂಡನೆಮಾಡಿ ಶ್ರೇಷ್ಠ ದೀಕ್ಷಾಬದ್ಧನಾಗಿ ಸಾಧ್ವಿಯರ ಸಮೂಹದಿಂದ ಶೋಭಿಸುತ್ತಿದ್ದು. ಪತ್ನೀಸಮೇತನಾಗಿರುವ ಯುಧಿಷ್ಠಿರನನ್ನು ಅವರು ಕಂಡರು. ಶ್ರೀಕೃಷ್ಣನು ಭೀಮನನ್ನು

'ಜಾಣರಂ ತಲೆದೂಗಿಸದೆ ನುಡಿದೊಡಾಪದ
ಕ್ಕೊಣೆಯುಂಬಹುದೆಂದು, ಸರಸೋಕ್ತಿಯಿಂದೆ ಗೀ
ರ್ವಾಣ ಪುರನಿಲಯ ಲಕ್ಷ್ಮೀವರಂ, ತಾನೆಸಂಗೀತ ಸುಕಲಾನಿಪುಣನು;
ವೀಣೆಯಿಂ ಗಾನಮಂನುಡಿಸುವಂದದೊಳೆನ್ನ
ವಾಣಿಯಿಂ ಕವಿತೆಯಂ ಪೇಳಿಸಿದನೆಂದರಿದು,
............ಕಿವಿದೆರೆದು ಕೇಳ್ವುದುಸುಜನರು'

ಎಂದು ಹೇಳಿ, ತಾನು ಕೇವಲ ಒಂದು ವೀಣೆ; ಭಗವಂತನು ವೈಣಿಕನಾಗಿ, ಈ ಬರಿಯ ವೀಣೆಯಿಂದಾವೈಣಿಕನು ಗಾನವನ್ನು ನುಡಿಸುವಂತೆ ತನ್ನಿಂದ ಕವಿತೆಯನ್ನು ಹೇಳಿಸಿದ್ದಾನೆ—ಎಂಬೀ ನುಡಿ ಎಂತಹ ಸೊಗಸಾದ ಮಾತು; ಎಷ್ಟು ವಿನಯಪೂರ್ವಕವಾದ ಕವಿವಚನ !

ಎಷ್ಟೆಂದರೂ ಈ ಲೋಕ ಮಿಶ್ರಮನೋಧರ್ಮವುಳ್ಳದ್ದು; ಇಲ್ಲಿ ಒಳ್ಳೆಯವರಿದ್ದಂತೆ ಕೆಟ್ಟವರೂ ಇರುತ್ತಾರೆ. ಸುಮನಸರಿಗೆ ತನ್ನ ಕಾವ್ಯವು ಚಂದ್ರನಂತೆ ಇಷ್ಟವಾಗುವುದು; ಚಂದ್ರನನ್ನಾದರೂ ದೂಷಿಸುವ ಚೋರರು ವಿರಹಿಗಳೂ ಇದ್ದಾರಷ್ಟೆ ! ತನ್ನ ಕಾವ್ಯವನ್ನು ದೂರುವವರು ಚೋರ ವಿರಹಿಗಳ ಸಾಲಿಗೆ ಸೇರುತ್ತಾರೆ ಎಂದು ಲಕ್ಷ್ಮೀಶನು ದುರ್ಜನರನ್ನು ದೂರವಿರಿಸುತ್ತಾನೆ. ಬಳಿಕ, ಅವನು ಹಿಂದಿನ ಕವಿಗಳ ಪರಂಪರೆಯಿಂದಲೇ ತಾನೂ ಕಾವ್ಯವನ್ನು ರಚಿಸಿದೆನೆಂದು ಪೂರ್ವಿಕರನ್ನು ಸ್ಮರಿಸುವನು.

'ಮೊಗಮಾವ ಲೀಲೆಯಿಂದೆಸೆವುದಾ ಭಾವಮಂ
ಮುಗುಳೆ ತೋರುವುದಲ್ಲದನ್ಯಪ್ರಕಾರದಿಂ
ಸೊಗಯಿಪುದೆ ರನ್ನಗನ್ನಡಿ ಧರೆಯೊಳಾರಾಜಿಸುವ ಕನ್ನಡದ ನುಡಿಗಳ
ಬಗೆಯರಿದರಾವ ಲಕ್ಷಣದಿಂದೆ ಮುನ್ನ ಕ
ಬ್ಬಗಳನುಸುರಿದರದೇ ಲಕ್ಷ್ಯವಲ್ಲದೆ ಪೆರತೆ
ನಗೆ ಸಲ್ಲದದರಿಂದೆ ಪೂರ್ವಸತ್ಕವಿಗಳ್ಗೆ ನಮಿಸಿ ನಾ ಕೃತಿವೇಳ್ವೆನು'

—ಎಂದು ಹೇಳಿ ಹಿಂದಿನ ಕವಿಗಳನ್ನು ಕೊಂಡಾಡುತ್ತಾನೆ.

ಲಕ್ಷ್ಮೀಶ ಕವಿಯು ಈ ಕಾವ್ಯದಲ್ಲಿ ದೇಶಕಾಲವಿಚಾರಗಳನ್ನು ಸ್ಪಷ್ಟವಾಗಿ ತಿಳಿಸದಿದ್ದರೂ, ತನ್ನ ಕುಲ, ಗೋತ್ರ, ಪಿತೃ, ಬಿರುದಾವಳಿ ಮುಂತಾದುವುಗಳನ್ನು ಹೇಳಿರುವನು.

'ವಿದ್ವತ್ಸಭಾವಲಯಮರಿಯೆ ವಿರಚಿಸಿದಂ ಭ
ರದ್ವಾಜಗೋತ್ರಭವನಣ್ಣಮಾಂಕನ ಸುತಂ,

ಸದ್ವಿನುತಕರ್ಣಾಟಕವಿಚೂತವನಚೈತ್ರ ಲಕ್ಷ್ಮೀಶನೆಂಬೊರ್ವನು;
ಹೃದ್ವನಜದೊಳ್ದೇವ ಪುರದ ಲಕ್ಷ್ಮೀಶನ ಪ
ದದ್ವಯುವನಾವಗಂ ಧ್ಯಾನಿಸುವರಡಿಗಳಂ
ಸದ್ವಿನಯದಿಂ ಭಜಿಪ ಬಲ್ಪಿಂದೆ ವಿಮಲ
ಜೈಮಿನಿ ಭಾರತದ ಕಥೆಯನು.

ತಾನು ಬರೆದ ಷಟ್ಪದೀ ಛಂದಸ್ಸಿನ ರೂಪದ ಸತ್ಕೃತಿಯು ವಿದ್ವಜ್ಜ ಮೆಚ್ಚುಗೆಗೆ ಪಾತ್ರವಾಗುವುದೆಂಬ ಸಾರ್ಥಕವಾದ ಆತ್ಮವಿಶ್ವಾಸವೂ ಇದ್ದಂತೆ ತೋರುವುದು:

'ವರವರ್ಣದಿಂದೆ ಶೋಭಿತವಾಗಿ, ರೂಪ ವಿ
ಸ್ತರದಿಂದೆ ಚೆಲ್ವಾಗಿ, ಮಧುರತರ ನವರಸೋ
ದರಭರಿತದಿಂದೆ ವಿಲಸಿತವಾಗಿ, ಸುಮನೋನುರಾಗದಿಂ
ಪ್ರಚುರವಾಗಿ
ನಿರುತ ಮಂಜುಳ ಶಬ್ದದಿಂದೆ ಕಿವಿಗಿಂಪಾಗಿ,
ಚರಿಸುವ ಸುಲಲಿತಷಟ್ಪದಿಗಳೆಡೆವಿಡದೆ ಝೇಂ
ಕರಿಸದಿರ್ಪುವೆ ಬಂದು ನೆರೆದ ವಿದ್ವತ್ಸಭಾ ನೀರೇರುಹಾಕರದೊಳು'

ಮಂಜುಳ ಶಬ್ದದಿಂದ ಕಿವಿಗಿಂಪಾಗಿ ಕೇಳುವ ಲಕ್ಷ್ಮೀಶ ಕವಿಯ ಷಟ್ಪ ಗಳ ಝೇಂಕಾರವು ಕನ್ನಡನಾಡಿನಲ್ಲೆಲ್ಲಾ ಇಂದು ನಿತ್ಯನೂತನವಾಗಿ ನಿನದಿಸುತ್ತಿ ಈ ಮೃದುಮಧುರ ನಿನಾದ ರಸಿಕರ ಕರ್ಣರಸಾಯನವಾಗಿದೆ; ಆಪ್ಯಾಯ ವಾಗಿದೆ. ದೇವಪುರನಿಲಯ ಲಕ್ಷ್ಮೀರಮಣ ಸ್ವಾಮಿಯ ದಯೆಯಿಂದಲ ಭುವನದ ಭಾಗ್ಯದಿಂದಲೂ ಮುಂದೆ ಆಚಂದ್ರಾರ್ಕತಾರ ಈ ಝೇಂಕ ಕೇಳಿಸುತ್ತಿರಲಿ ಎಂದು ನಾವು ಆಶಿಸುತ್ತೇವೆ.

